ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಿಧಾನ ಪರಿಷತ್ ಪ್ರಮಾಣ ಸ್ವೀಕಾರ

ವಿಧಾನ ಪರಿಷತ್ ನೂತನ ಸದಸ್ಯರಾಗಿ ಆಯ್ಕೆಯಾಗಿರುವ ಕಾಂಗ್ರೆಸ್ ಪಕ್ಷದ ಬಿ.ಕೆ. ಹರಿಪ್ರಸಾದ್, ಪಿ.ವಿ.ಮೋಹನ್, ಶಿವಣ್ಣ ಮಳವಳ್ಳಿ, ತಿಪ್ಪಣ್ಣಪ್ಪ ಕಮಕನೂರ್ ಹಾಗೂ ವಿನಯ್ ಕಾರ್ತಿಕ್, ಬಿಜೆಪಿಯ ಕೌಟಿಲ್ಯ ರಘು ಹಾಗೂ ಲಿಂಗರಾಜ ಪಾಟೀಲ್ ಅವರು ಗುರುವಾರ ಬೆಂಗಳೂರಿನ ವಿಧಾನಸೌಧದಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಸಿಎಂ ಶಿವಕುಮಾರ್, ಡಿಸಿಎಂ ಪರಮೇಶ್ವರ್, ಬಸವರಾಜ ಹೊರಟ್ಟಿ, ಲಮಾಣಿ ಇದ್ದರು.

ಸೊಂಪಾದ ಪುಟಗಳು

ಧ್ಯಾನವೆಂದರೆ ರುಚಿಗೆ ತಕ್ಕಷ್ಟು ಉಪ್ಪು!
ಶಿಶಿರಕಾಲ
ಶಿಶಿರ್ ಹೆಗಡೆ 6

ಈ ಅಮೂಲ್ಯ ವಿಟಮಿನ್‌ನ ಮೂಲ ನಮ್ಮ ದೇಶ!
ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ಸಂತೋಷವು ನಮ್ಮೊಳಗಿದ್ದರೆ ಚಿಕ್ಕದಾಗಿ ಕಾಣಬಹುದು. ಆದರೆ, ಅದನ್ನು ಇತರರೊಂದಿಗೆ ಹಂಚಿಕೊಂಡಾಗ ಮಾತ್ರ ಅದರ ನಿಜವಾದ ವಿಸ್ತಾರ ಮತ್ತು ಅಮೂಲ್ಯವಾದ ಮೌಲ್ಯ ನಮಗೆ ಅರಿವಾಗುತ್ತದೆ. ಹಂಚಿಕೊಳ್ಳುವುದರಿಂದಲೇ ಸಂತೋಷವು ಜಗತ್ತಿನ ಅತ್ಯಂತ ದೊಡ್ಡ ಮತ್ತು ಸುಂದರ ಭಾವನೆಯಾಗಿ ಮಾರ್ಪಡುತ್ತದೆ.

ವಕ್ರತುಂಡೋಕ್ತಿ

ಹೊಸದಾಗಿ ಮದುವೆಯಾದ ಗಂಡಸು ಅಡುಗೆಮನೆಯಲ್ಲಿ ಯುದ್ಧಗೆದ್ದ ಸೈನಿಕನಂತೆ ನಿಂತಿರುತ್ತಾನೆ, ಕೈಯಲ್ಲಿ ಸೌಟು ಹಿಡಿದು.

ಚಂಪತ್ ಕಾರು ಚಾಲಕನೇ ಹಣ ಲೂಟಿ ಸೂತ್ರಧಾರ

ಲಖನೌ: ರಾಮಮಂದಿರ ದೇಣಿಗೆ ಕಳ್ಳತನ ಪ್ರಕರಣದಲ್ಲಿ ತನ್ನ ಕಾರು ಚಾಲಕ ಟಿನ್ನು ಯಾದವ್ ಪ್ರಮುಖ ಪಾತ್ರಧಾರಿ ಎಂದು ಪೊಲೀಸರ ವಿಚಾರಣೆಯಲ್ಲಿ ಶ್ರೀರಾಮಮಂದಿರ ತೀರ್ಥ ಕ್ಷೇತ್ರ ಟ್ರಸ್ಟ್ ಮಾಜಿ ಕಾರ್ಯದರ್ಶಿ ಚಂಪತ್ ರಾಯ್ ಗಂಭೀರ ಆರೋಪ ಮಾಡಿದ್ದಾರೆ. ರಾಮಶಂಕರ್ ಯಾದವ್ ಅಲಿಯಾಸ್ ಟಿನ್ನು ಯಾದವ್ ಪೊಲೀಸರಿಗೆ ಸಿಕ್ಕಿ ಬೀಳುವ ಮೊದಲು, ಪ್ರಕರಣ ಸಂಬಂಧ ಸಮಾಜವಾದಿ ನಾಯಕರೊಬ್ಬರಿಗೆ ಮಾಹಿತಿ ಸೋರಿಕೆ ಮಾಡಿದ್ದ ಎಂದು ಮೂಲಗಳು ತಿಳಿಸಿವೆ.

ಜುಲೈ 20ರೊಳಗೆ ನೀಟ್ ಫಲಿತಾಂಶ

ದೆಹಲಿ: ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಜುಲೈ 20ರ ಒಳಗಾಗಿ ಮರು-ನೀಟ್ ಯುಜಿ ಫಲಿತಾಂಶಗಳನ್ನು ಅಧಿಕೃತವಾಗಿ ಪ್ರಕಟಿಸುವುದಾಗಿ ಪ್ರಕಟಿಸಿದೆ. ಈ ಕುರಿತು ಮಾಹಿತಿ ನೀಡಿರುವ ಸಂಸ್ಥೆಯ ಹಿರಿಯ ಅಧಿಕಾರಿಯೊಬ್ಬರು, ಫಲಿತಾಂಶ ವಿಳಂಬದಿಂದ ವೈದ್ಯಕೀಯ ಶೈಕ್ಷಣಿಕ ವರ್ಷದ ಮೇಲೆ ಯಾವುದೇ ನಕಾರಾತ್ಮಕ ಪರಿಣಾಮ ಬೀರುವುದಿಲ್ಲ ಎಂದು ಭರವಸೆ ನೀಡಿದ್ದಾರೆ. ಮೇ 3ರಂದು ನಡೆದಿದ್ದ ಮೂಲ ಪರೀಕ್ಷೆಯು ಪ್ರಶ್ನೆಪತ್ರಿಕೆ ಸೋರಿಕೆಯಿಂದ ರದ್ದಾಗಿತ್ತು. ಜೂನ್ 21ರಂದು ಮರುಪರೀಕ್ಷೆ ಆಯೋಜಿಸಲಾಗಿತ್ತು.

ಫನ್‌ತರಂಗ
- ರಘುಪತಿ ಶೃಂಗೇರಿ -

ರಾಜ್ಯ ವನ್ಯ ಜೀವಿ ಮಂಡಳಿ ಸ್ಥಾಯಿ ಸಮಿತಿ ಸಭೆಯಲ್ಲಿ ಮಹತ್ವದ ಚರ್ಚೆ. ಸುದ್ದಿ

ಬೆಂಗಳೂರು ಹೊರವಲಯದ ತಾವರೆಕೆರೆಯ ಮಾದಪಟ್ಟಣದ ಕಲ್ಲು ಕ್ವಾರಿಯಲ್ಲಿ ದುರಂತ

ಬಂಡೆ ಬಿದ್ದ ರಭಸಕ್ಕೆ ದೇಹಗಳು ಛಿದ್ರ ಕಾವೇರಿ ಕ್ರಷರ್ ಮಾಲೀಕರ ವಿರುದ್ಧ ಎಫ್‌ಐಆರ್

ಐವರಿಗೆ ಐಸಿಯುನಲ್ಲಿ ಚಿಕಿತ್ಸೆ ಸಾವಿನ ಸಂಖ್ಯೆ ಏರುವ ನಿರೀಕ್ಷೆ ನಿರ್ಲಕ್ಷ್ಯವೇ ಕಾರಣ?

ಕ್ವಾರಿ ಬಂಡೆ ಉರುಳಿ 7 ಬಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗುರುವಾರ ಬೆಳ್ಳಂಬೆಳಗ್ಗೆಯೇ ಕರ್ನಾಟಕದ ಜನತೆಗೆ ಆಘಾತಕಾರಿ ಸುದ್ದಿಯೊಂದು ಕಾದಿತ್ತು. ಬೆಂಗಳೂರು ದಕ್ಷಿಣ ತಾಲೂಕಿನ, ತಾವರೆಕೆರೆ ಸಮೀಪದ ಹಳ್ಳಿಯೊಂದರ ಕಲ್ಲು ಕ್ವಾರಿಯಲ್ಲಿ ಬಂಡೆ ಉರುಳಿಬಿದ್ದಿದ್ದರಿಂದ ಏಳು ಕಾರ್ಮಿಕರು ದುರ್ಮರಣಕ್ಕೊಳಗಾಗಿದ್ದಾರೆ. ಸಾವಿನ ಸಂಖ್ಯೆ ಏರುವ ಸಾಧ್ಯತೆಯಿದೆ. ಯಾದಗಿರಿ ಜಿಲ್ಲೆಯ ಶಹಾಪುರ್ ತಾಲೂಕು ನಡಿಯಾಳ್ ಗ್ರಾಮದ ರಾಮ್ ನಾಯಕ್(46), ಬಿಹಾರ ರಾಜ್ಯದ ಭುವನೇಶ್ವರ್ ಸಿಂಗ್ (37), ಧರ್ಮೇಶ್ ಸಿಂಗ್ (28), ರಾಜೇಶ್ ಪ್ರಸಾದ್ (28), ರಾಮ್ ಅವತಾರ್ ಸಿಂಗ್ (30), ಸತ್ಯನಾರಾಯಣ ಗೌಂಡ್ (32), ಮಧ್ಯಪ್ರದೇಶದ ಶಿವರಾಜ್ ಸಿಂಗ್ (22) ಮೃತಪಟ್ಟವರು. ಉಳಿದಂತೆ ಗಂಭೀರವಾಗಿ ಗಾಯಗೊಂಡಿರುವ ಚೋಟು, ಗುಲಾಬ್ ಸಿಂಗ್, ಆನಂದ್, ನೋಹರ್ ಸಿಂಗ್, ಮತ್ತೋರ್ವ ಐಸಿಯುನಲ್ಲಿದ್ದಾರೆ.

ಆನಂದಸ್ವಾಮಿ ಎಂಬುವವರಿಗೆ ಸೇರಿದ ಕಾವೇರಿ ಕ್ರಷರ್‌ನಲ್ಲಿ ಬೆಳಗ್ಗೆ 7ರ ಆಸುಪಾಸು ಈ ಘಟನೆ ಸಂಭವಿಸಿದೆ. ತಾವರೆಕೆರೆಯ ಮಾದಪಟ್ಟಣದ ಹುಲುವೇನಹಳ್ಳಿ ಗ್ರಾಮದ ವ್ಯಾಪ್ತಿಯ ಸುಮಾರು 3.20 ಎಕರೆ ಪ್ರದೇಶದಲ್ಲಿ ಈ ಕಲ್ಲು ಗಣಿಗಾರಿಕೆ ನಡೆಯುತ್ತಿತ್ತು. 30 ವರ್ಷಕ್ಕೆ ಕ್ವಾರಿಯನ್ನು ಗುತ್ತಿಗೆ ಆಧಾರದಲ್ಲಿ ಕಲ್ಲುಗಣಿಗಾರಿಕೆ ಪರವಾನಗಿ ಪಡೆದು ಗಣಿಗಾರಿಕೆ ನಡೆಸಲಾಗುತ್ತಿತ್ತು. ಘಟನೆ ನಡೆದ ತಕ್ಷಣ ತಾವರೆಕೆರೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರಾಥಮಿಕ ತನಿಖೆಯ ಪ್ರಕಾರ, ಅಪಘಾತ ಸಂಭವಿಸಿದ ವೇಳೆ ಕಲ್ಲುಗಣಿಯಲ್ಲಿ 15ರಿಂದ 20 ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಸುಮಾರು 100 ಅಡಿ ಎತ್ತರದಲ್ಲಿ ಹಿಟಾಚಿ ಯಂತ್ರದ ಮೂಲಕ ಹೊಸ ಕ್ರಷರ್ ಅಳವಡಿಕೆಗೆ ಸ್ಥಳವನ್ನು ತೆರವುಗೊಳಿಸುವ ಕಾರ್ಯ ನಡೆಯುತ್ತಿತ್ತು. ಈ ವೇಳೆ ಕೆಳಭಾಗದಲ್ಲಿಯೂ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದರು. ಹಿಟಾಚಿ ಯಂತ್ರದ ಚಾಲಕ ಕೆಳಗೆ ಕಾರ್ಮಿಕರು ಇರುವುದನ್ನು ಗಮನಿಸದೆ ಕಾರ್ಯಾಚರಣೆ ನಡೆಸಿದ್ದರಿಂದ ಬಂಡೆ ಕಲ್ಲು ಜಾರಿ ಬಿದ್ದು ಈ ದುರಂತ ಸಂಭವಿಸಿದೆ.

ಈ ಕುರಿತು ಕೇಂದ್ರ ಐಜಿಪಿ ಗಿರೀಶ್ ಅವರು ಮಾತನಾಡಿದ್ದು, ಬೆಳಗ್ಗೆ 7 ಗಂಟೆ ಸಮಯಕ್ಕೆ ಅವಘಡ ನಡೆದಿದೆ. ಎರಡು ಕ್ರಷರ್ ಇದೆ, ಎರಡು ಕ್ರಷರ್‌ಗಳಲ್ಲಿ ಕೆಲಸ ನಡೆಯುತ್ತ ಇತ್ತು, ಅಲ್ಲಿ 16 ಜನರು ಕೆಲಸ ಮಾಡುತ್ತಿದ್ದರು. → 4

ಎಲ್ಲಿ ನಡೆದಿದ್ದು?

- ಬೆಂಗಳೂರು ಹೊರವಲಯದ ತಾವರೆಕೆರೆ ಸಮೀಪದ ಮಾದಪಟ್ಟಣದ ಹುಲುವೇನಹಳ್ಳಿ. ಒಟ್ಟು 3.20 ಎಕರೆ ಜಾಗ.

ಹೇಗಾಯ್ತು?

- ಅಪಘಾತ ಸಂಭವಿಸಿದ ವೇಳೆ ಕಲ್ಲು ಗಣಿಯಲ್ಲಿ 15ರಿಂದ 20 ಕಾರ್ಮಿಕರಿಂದ ಕೆಲಸ
- ಸುಮಾರು 100 ಅಡಿ ಎತ್ತರದಲ್ಲಿ ಹಿಟಾಚಿ ಯಂತ್ರದ ಮೂಲಕ ಹೊಸ ಕ್ರಷರ್ ಅಳವಡಿಕೆಗೆ ಸ್ಥಳ ತೆರವು ಕಾರ್ಯದಲ್ಲಿ ಮಗ್ನ
- ಈ ವೇಳೆ ಕೆಳಭಾಗದಲ್ಲಿಯೂ ಕಾರ್ಮಿಕರಿಂದ ಕೆಲಸ. ಹಿಟಾಚಿ ಚಾಲಕ ಕೆಳಗೆ ಕಾರ್ಮಿಕರು ಇರುವುದನ್ನು ಗಮನಿಸದೆ ಕಾರ್ಯಾಚರಣೆ ನಡೆಸಿದ್ದರಿಂದ ಬಂಡೆ ಕಲ್ಲು ಜಾರಿ ಬಿದ್ದು ದುರಂತ



ಕಾರ್ಮಿಕರ ಸಾವಿನ ಘಟನೆ ಅತೀವ ನೋವುಂಟು ಮಾಡಿದೆ. ರಾಜ್ಯ ಸರಕಾರ ನೊಂದ ಕುಟುಂಬ ಕುಟುಂಬಗಳಿಗೆ ತಕ್ಷಣವೇ ಸೂಕ್ತ ಪರಿಹಾರ ನೀಡಬೇಕು. ಕ್ವಾರಿಗಳಲ್ಲಿ ಕಟ್ಟುನಿಟ್ಟಿನ ಸುರಕ್ಷತಾ ನಿಯಮ ಜಾರಿಗೆ ತೀವ್ರ ನಿಗಾ ಇರಿಸುವಂತೆ ಆದೇಶಿಸಬೇಕು.
-ಎಚ್.ಡಿ.ಕೆ, ಕೇಂದ್ರ ಸಚಿವ

ಕಾರ್ಮಿಕರ ಸುರಕ್ಷತೆಯನ್ನು ಕಾಪಾಡುವುದು ಕ್ವಾರಿ ಮಾಲೀಕರ ಕರ್ತವ್ಯವಾಗಿದ್ದು, ನಿಯಮ ಉಲ್ಲಂಘಿಸಿದವರ ವಿರುದ್ಧ ಸರಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ.
-ಡಾ.ಜಿ.ಪರಮೇಶ್ವರ್, ಉಪಮುಖ್ಯಮಂತ್ರಿ

ಚಿತ್ರ: ಸುಧಾಕರ್ ದೇವರಾಜ್

ಬಂಡೆ ಕುಸಿದು ಸಾವನ್ನಪ್ಪಿದ ಏಳು ಮಂದಿಯ ಪಾರ್ಥಿವ ಶರೀರ ಇರಿಸಿರುವ ಹಾಗೂ ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿರುವ ಆರ್ ಆರ್ ಆಸ್ಪತ್ರೆಗೆ ಸಿಎಂ ಡಿ.ಕೆ.ಶಿವಕುಮಾರ್ ಭೇಟಿ ನೀಡಿ ಸಾಂತ್ವನ ಹೇಳಿದರು.

ಅಣೆಕಟ್ಟುಗಳೆಲ್ಲ ಖಾಲಿಯಾಗಿವೆ, ಅದನ್ನು ನಂಬಿ ಬೆಳೆ ಹಾಕಬೇಡಿ
ಸಚಿವ ಸಂಪುಟ ಸಭೆ ಬಳಿಕ ಬರ ಸ್ಥಿತಿಯ ಮಾಹಿತಿ ನೀಡಿದ ಡಿಕೆಶಿ

ದೇಶಕ್ಕೇ ಬರ ಭೀತಿ! ಅಣೆಕಟ್ಟು ಖಾಲಿ: ಡಿಕೆ

ವಿಶ್ವವಾಣಿ ಸುದ್ದಿಮನೆ, ಬೆಂಗಳೂರು

ದೇಶದಲ್ಲಿ ಪ್ರಸಕ್ತ ವರ್ಷ ಭೀಕರ ಬರಗಾಲ ಎದುರಾಗುವ ಮುನ್ಸೂಚನೆಯನ್ನು ಕೇಂದ್ರವೇ ನೀಡಿದೆ. ರಾಜ್ಯದ ಬಹುತೇಕ ಅಣೆಕಟ್ಟುಗಳಲ್ಲಿನ ಒಳಹರಿವು ಶೂನ್ಯಕ್ಕೆ ತಲುಪಿದೆ. ಹೀಗಾಗಿ ರೈತರು ಅಣೆಕಟ್ಟು ನೀರು ನಂಬಿಕೊಂಡು ಬೆಳೆ ಹಾಕಬೇಡಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರೈತರಿಗೆ ಸುಳಿವು ನೀಡಿದ್ದಾರೆ. ಈ ಮೂಲಕ ರಾಜ್ಯದಲ್ಲಿ ಬರ ಪರಿಸ್ಥಿತಿಯ ಸುಳಿವನ್ನು ನೀಡಿದ್ದಾರೆ. ವಿಧಾನಸೌಧದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಬರ ಪರಿಸ್ಥಿತಿ ಗಂಭೀರವಾಗುತ್ತಿದ್ದು, ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ನಾರಾಯಣಪುರ, ವಾಣಿ ವಿಲಾಸ ಅಣೆಕಟ್ಟುಗಳ ಒಳಹರಿವಿನ ಪ್ರಮಾಣ ಶೂನ್ಯ ವಾಗಿದೆ. ಕಾವೇರಿ ಪಾತ್ರದಲ್ಲಿ ಮಳೆಪ್ರಮಾಣ ಕುಸಿದಿದೆ. ಕಳೆದ ವರ್ಷ ಈ ಸಮಯದಲ್ಲಿ ಹೇಮಾ ವತಿಯಲ್ಲಿ 80 ಅಡಿ ನೀರು ಇತ್ತು, ಈ ವರ್ಷ 40 ಅಡಿಗೆ ಕುಸಿದಿದೆ. → 4

ಸಿಎಂ ಹೇಳಿದ್ದೇನು?

- ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ನಾರಾಯಣಪುರ, ವಾಣಿ ವಿಲಾಸ ಅಣೆಕಟ್ಟುಗಳ ಒಳಹರಿವಿನ ಪ್ರಮಾಣ ಶೂನ್ಯ
- ಕಾವೇರಿ ಪಾತ್ರದಲ್ಲಿ ಮಳೆಪ್ರಮಾಣ ಕುಸಿತ. ಕಳೆದ ವರ್ಷ ಈ ಸಮಯದಲ್ಲಿ ಹೇಮಾವತಿಯಲ್ಲಿ 80 ಅಡಿ ನೀರು ಇತ್ತು, ಈ ವರ್ಷ 40 ಅಡಿಗೆ ಕುಸಿದಿದೆ.
- ಕೆಆರ್‌ಎಸ್‌ನಲ್ಲಿ 100 ಅಡಿ ಇದ್ದ ನೀರಿನ ಪ್ರಮಾಣ ಈಗ 22 ಅಡಿಯಷ್ಟಿದೆ, ಕಬಿನಿಯಲ್ಲಿ 79 ಅಡಿ ಇತ್ತು, ಈಗ 26 ಅಡಿಯಷ್ಟಿದೆ. ಒಳಹರಿವು ಶೇ.20 ಕಡಿಮೆ
- ನೀರು ಬಿಡುವ ವಿಚಾರದಲ್ಲಿ ರೈತರು ಒತ್ತಡ ಹಾಕಬೇಡಿ. ಮುಂದಿನ ದಿನಗಳಲ್ಲಿ ಮಳೆಯನ್ನು ಗಮನದಲ್ಲಿಟ್ಟುಕೊಂಡು ಬೆಳೆಗಳನ್ನು ಹಾಕಿ.

ಈ ವರ್ಷ ಮುಂಗಾರು ಅಧಿವೇಶನ ಕರೆಯಬೇಕಾಗಿತ್ತು. ಸದ್ಯಕ್ಕೆ ಎಸ್‌ಐಆರ್ ನಡೆಯುತ್ತಿರುವ ಹಿನ್ನೆಲೆಯಲ್ಲಿ ಪ್ರಕ್ರಿಯೆ ಮುಗಿಯುವವರೆಗೂ ಕಾಯಲು ತೀರ್ಮಾನಿಸ ಲಾಗಿದೆ. ಎಲ್ಲ ಶಾಸಕರು ತಮ್ಮ ಕ್ಷೇತ್ರದ ಮತದಾರರ ರಕ್ಷಣೆ ಮಾಡಿಕೊಳ್ಳಬೇಕಾಗಿದೆ. ಅವರಿಗೆ ತೊಂದರೆ ಆಗುವುದು ಬೇಡ ಎಂದು ತೀರ್ಮಾನಿಸಿದ್ದು, ಆಗಸ್ಟ್ 5ರ ನಂತರ ಅಧಿವೇಶನದ ದಿನಾಂಕ ನಿಗದಿ ಮಾಡಲಾಗುವುದು.
-ಡಿ.ಕೆ.ಶಿವಕುಮಾರ್, ಸಿಎಂ

ಶಾಸಕ ಸುರೇಶ್ ಕುಮಾರ್ 300 ಕೋ. ರು. ಹಗರಣ: ಲೋಕಾಯುಕ್ತಕ್ಕೆ ದೂರು

ಬೆಂಗಳೂರು: ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಅನುದಾನ ಹಾಗೂ ಬಿಬಿಎಂಪಿಯಿಂದ ಕೈಗೊಳ್ಳಲಾದ ವಿವಿಧ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳಲ್ಲಿ ಭಾರಿ ಅಕ್ರಮ ಎಸಗಲಾಗಿದೆ ಎಂದು ಆರೋಪಿಸಿ ಶಾಸಕ ಎಸ್.ಸುರೇಶ್ ಕುಮಾರ್ ವಿರುದ್ಧ ವಕೀಲ ಸೂರ್ಯ ಮುಕುಂದರಾಜ್ ಅವರು ಲೋಕಾಯುಕ್ತಕ್ಕೆ ದಾಖಲೆ ಸಮೇತ ದೂರು ಸಲ್ಲಿಸಿದ್ದಾರೆ. ಜಿಎಸ್‌ಟಿ ಹಾಗೂ ಇಲಾಖೆಯ ಇತರೆ ವೆಚ್ಚಗಳೂ ಸೇರಿದರೆ ಈ ಒಟ್ಟು ಹಗರಣದ ಮೊತ್ತ 300 ಕೋಟಿ ರು. ಮೀರುತ್ತದೆ. ಸಾರ್ವಜನಿಕ ಹಿತಾಸಕ್ತಿ ಹಾಗೂ ಸಾರ್ವಜನಿಕ ಹಣದ ಸಂರಕ್ಷಣೆಯ ದೃಷ್ಟಿಯಿಂದ ಲೋಕಾಯುಕ್ತರು ಈ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಲಾಗಿದೆ.

52 ಕ್ರಿಮಿನಲ್ ಪ್ರಕರಣ ಹಿಂಪಡೆದಿದ ಸರಕಾರದ ಕ್ರಮಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 52 ಗಂಭೀರ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆದು ರಾಜ್ಯ ಸರಕಾರ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ. ವಕೀಲ ಗಿರೀಶ್ ಭಾರದ್ವಾಜ್ ಅವರು ಸಲ್ಲಿಸಿದ್ದ ಪಿಐಎಲ್ ವಿಚಾರಣೆ ನಡೆಸಿದ ನ್ಯಾಯಪೀಠ, ರಾಜ್ಯ ಸರಕಾರಕ್ಕೆ ನೋಟಿಸ್ ಜಾರಿ ಮಾಡಿ ವಿಚಾರಣೆ ಮುಂದೂಡಿದೆ. 2025ರಲ್ಲಿ ಇದೇ ನ್ಯಾಯಾಲಯ ಹೊರಡಿಸಿರುವ ಆದೇಶಕ್ಕೆ ವಿರುದ್ಧವಾದ ನಿರ್ಧಾರವನ್ನು ಸರಕಾರ ತೆಗೆದುಕೊಂಡಿದೆ ಎಂದು ಅರ್ಜಿದಾರರು ವಾದಿಸಿದ್ದಾರೆ.

ಜು.20ರ ಸಂಸತ್ ಅಧಿವೇಶನದಲ್ಲಿ ಮಸೂದೆ ಮಂಡನೆಗೆ ಕೇಂದ್ರ ಸಿದ್ಧತೆ?
ಕಾನೂನಿನ ದುರ್ಬಳಕೆ ಸಾಧ್ಯತೆಯೇ ಜಾಸ್ತಿ: ಕಾಂಗ್ರೆಸ್, ಡಿಎಂಕೆ ವಿರೋಧ

30 ದಿನ ಸೆರೆಯಲ್ಲಿದ್ದರೆ ಪಿಎಂ, ಸಿಎಂ ಪದಚ್ಯುತಿ

ದೆಹಲಿ: ಸಂಸತ್ತಿನ ಮುಂದಿನ ಮುಂಗಾರು ಅಧಿವೇಶನದಲ್ಲಿ ಅತ್ಯಂತ ತೀವ್ರ ವಿವಾದಾತ್ಮಕವಾದ ಸಂವಿಧಾನ ತಿದ್ದುಪಡಿ ಮಸೂದೆ ಮಂಡನೆಯಾಗುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ. ಸಂವಿಧಾನದ 130ನೇ ತಿದ್ದುಪಡಿ ಮಸೂದೆಯನ್ನು ಮಂಡಿಸುವ ಮೂಲಕ, ಗಂಭೀರ ಪ್ರಕರಣಗಳಲ್ಲಿ ಪ್ರಧಾನಿ, ಮುಖ್ಯ ಮಂತ್ರಿ, ಸಚಿವರು 30 ದಿನ ಬಂಧನದಲ್ಲಿದ್ದರೆ ತನ್ನಿಂತಾನೇ ಹುದ್ದೆ ಕಳೆದುಕೊಳ್ಳಲಿದ್ದಾರೆ ಎಂಬ ಕಾನೂನು ತರಲು ಮೋದಿ ನೇತೃತ್ವದ ಕೇಂದ್ರ ಸರಕಾರ ಸಿದ್ಧವಾಗಿದೆ.

ಅಧಿಕಾರ ಸ್ಥಾನದಲ್ಲಿರುವವರು ಹೊಣೆಗಾರಿಕೆಯಿಂದ ವರ್ತಿಸುವಂತೆ ಮಾಡಲು ಈ ಕಾನೂನನ್ನು ಜಾರಿ ಮಾಡಲು ಮುಂದಾಗಿರುವುದಾಗಿ ಕೇಂದ್ರ ಸರಕಾರಿ ಮೂಲಗಳು ಹೇಳಿಕೊಂಡಿವೆ. ರಾಜಕೀಯ ಕಾರಣಗಳನ್ನಿಟ್ಟುಕೊಂಡು ಈ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳುವ ಅವಕಾಶವಿದೆ ಎಂದು ಹೇಳಿ ವಿಪಕ್ಷಗಳು ಮಸೂದೆ ಯನ್ನು ವಿರೋಧಿಸಲು ಸಿದ್ಧವಾಗಿವೆ. ಹೀಗಾಗಿ ಮುಂದಿನ ಸಂಸತ್ ಅಧಿವೇಶನ ತೀವ್ರ ಜಟಾ ಪಟಿಗೆ ವೇದಿಕೆಯಾಗುವ ಸಾಧ್ಯತೆಯಿದೆ.

ಹಿನ್ನೆಲೆಯೇನು?: ವಿವಾದಾತ್ಮಕ 130ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆಯನ್ನು ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಜುಲೈ 17ರಂದು ತನ್ನ ವರದಿ ಅಂಗೀಕರಿಸುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ. → 4

ಏನಿದು ಮಸೂದೆ?

- ಸಂವಿಧಾನದ 130ನೇ ತಿದ್ದುಪಡಿ ಮಸೂದೆ. ಯಾವುದೇ ಗಂಭೀರ ಪ್ರಕರಣಗಳಲ್ಲಿ ಪ್ರಧಾನಿ, ಮುಖ್ಯಮಂತ್ರಿ, ಸಚಿವರು 30 ದಿನ ಬಂಧನದಲ್ಲಿದ್ದರೆ ಸ್ಥಾನ ಖೋತಾ
- ರಾಜಕೀಯ ಕಾರಣಗಳಿಗೆ ದುರ್ಬಳಕೆಯಾಗದಂತೆ ಮಸೂದೆ ರಚನೆ. ಜಾಮೀನು ಪಡೆಯಲೂ ಅವಕಾಶ. ರಾಷ್ಟ್ರಪತಿ, ರಾಜ್ಯಪಾಲರಿಗೆ ಕ್ರಮಕೈಗೊಳ್ಳುವ ಅವಕಾಶ

ಸರಕಾರದ ವಾದ?

- ಪ್ರಮುಖ ಸಾಂವಿಧಾನಿಕ ಹುದ್ದೆಗಳಲ್ಲಿರುವವರು ಹೊಣೆಗಾರಿಕೆಯಿಂದ ವರ್ತಿಸಲು ಈ ನಿಯಮ
- ಬೇಕಾಬಿಟ್ಟಿ ಬಂಧನ ಸಾಧ್ಯವಿಲ್ಲ, ಗಂಭೀರ ಪ್ರಕರಣಗಳಿಗೆ ಮಾತ್ರ ಆದ್ಯತೆ, ದುರುಪಯೋಗಕ್ಕೆ ತಡೆ

ಪ್ರತಿಪಕ್ಷಗಳ ವಾದ?

- ನ್ಯಾಯಾಲಯದಲ್ಲಿ ವಿಚಾರಣೆ ಪೂರ್ಣಗೊಳ್ಳುವ ಮುನ್ನವೇ ವ್ಯಕ್ತಿಯನ್ನು ಅನರ್ಹಗೊಳಿಸುವುದು ತಪ್ಪು
- ಅಪರಾಧ ಸಾಬೀತಾಗುವವರೆಗೆ ವ್ಯಕ್ತಿ ನಿರಪರಾಧಿ ಎಂಬ ಸಾಂವಿಧಾನಾತ್ಮಕ ಮೂಲ ತತ್ತ್ವಕ್ಕೆ ನಿಯಮ ವಿರುದ್ಧ

ಅನಿವಾಸಿ ಭಾರತೀಯರಿಂದ ಸರಕಾರಕ್ಕೆ ಒತ್ತಡ | ಇತ್ತೀಚೆಗೆ ಎನ್‌ಆರ್‌ಐ ಇಲಾಖೆ ಘೋಷಿಸಿದ್ದ ಡಿಕೆ

ಆರತಿ ಕೃಷ್ಣಗೆ ಅನಿವಾಸಿ ಸಚಿವೆ ಪಟ್ಟ ನೀಡಿ

ವಿಶ್ವವಾಣಿ ವಿಶೇಷ ಬೆಂಗಳೂರು

ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅಧಿಕಾರ ವಹಿಸಿ ಕೊಂಡು ಶುಕ್ರವಾರಕ್ಕೆ ಒಂದು ತಿಂಗಳು ಭರ್ತಿಯಾಗಲಿದೆ. ಸಂಪುಟ ವಿಸ್ತರಣೆ ಕುರಿತು ಹೈಕಮಾಂಡ್ ಸ್ಪಷ್ಟನೆ ನೀಡದಿ ದ್ದರೂ, ರಾಜ್ಯ ಕಾಂಗ್ರೆಸ್‌ನಲ್ಲಿ ಒತ್ತಡ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಈ ನಡುವೆ ರಾಜ್ಯ ಸಚಿವ ಸಂಪುಟಕ್ಕೆ ಆರತಿ ಕೃಷ್ಣರನ್ನು ಅನಿವಾಸ ಭಾರತೀಯರ ಇಲಾಖೆ ಸಚಿವೆಯನ್ನಾಗಿ ನೇಮಿಸಬೇಕೆಂಬ ಒತ್ತಡ ಅನಿವಾಸಿ ಭಾರತೀಯರಿಂದ ಶುರುವಾಗಿದೆ.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ನಡೆದ ಸಚಿವ ಸಂಪುಟ ಸಭೆಯಲ್ಲಿ, ಅನಿವಾಸಿ ಭಾರತೀಯರಿಗಾಗಿಯೇ ಪ್ರತ್ಯೇಕ ಸಚಿವಾಲಯ ಆರಂಭಿಸುವುದಾಗಿ ಘೋಷಿಸಿದ್ದರು. ಈ ಇಲಾಖೆ ಎನ್‌ಆರ್‌ಐ ಹಾಗೂ ರಾಜ್ಯ ಸರಕಾರದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ ಎನ್ನುವ ಮಾತುಗಳನ್ನು ಹೇಳಿದ್ದರು. → 4

ಕನ್ನಡದ ಕಂಪು ವಿಶ್ವಾದ್ಯಂತ ಹರಡುತ್ತಿದೆ. ಅದಕ್ಕೆ ಸಚಿವಾಲಯದ ಬೆಂಬಲವೂ ಸಿಗಲಿ. ಕರ್ನಾಟಕಕ್ಕೆ ಜಾಗತಿಕ ಹೂಡಿಕೆ ಮತ್ತು ಅವಕಾಶಗಳನ್ನು ತರುವ ಸೇತುವೆಯಾಗಿ ಎನ್‌ಆರ್‌ಐ ಸಚಿವಾಲಯ ಕಾರ್ಯನಿರ್ವಹಿಸಲಿ. ಅನಿವಾಸಿ ಕನ್ನಡಿಗರ ಸಚಿವಾಲಯ ಶೀಘ್ರದಲ್ಲಿ ಸ್ಥಾಪನೆಯಾಗಲಿ. ಈ ಹಿಂದೆ ಎನ್‌ಆರ್‌ಐ ಫೋರಂ ಅನ್ನು ಯಶಸ್ವಿಯಾಗಿ ನಿಭಾಯಿಸಿದ ಅನುಭವಿ ರುವ ಡಾ. ಆರತಿ ಕೃಷ್ಣ ಅವರಿಗೆ ಮುಂದಾಳತ್ವ ನೀಡಿ.
-ಡಾ.ಅಬ್ದುಲ್ ಶಕೀಲ್, ಅನಿವಾಸಿ ಭಾರತೀಯ

ಉತ್ತಮ ಒಡನಾಟ

ವಿಧಾನಪರಿಷತ್ ಸದಸ್ಯೆಯಾಗಿರುವ ಆರತಿ ಕೃಷ್ಣ ಅವರು ಈ ಹಿಂದೆ ಎನ್‌ಆರ್‌ಐ ಫೋರಂನ ಉಪಾಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿದ್ದರು. ಈ ವೇಳೆ ವಿದೇಶದಲ್ಲಿರುವ ಎನ್‌ಆರ್‌ಐಗಳು ಅನುಭವಿಸುವ ಸಮಸ್ಯೆಗಳು, ಕೆಲಸ ಅರಸಿ ಹೋಗಿರುವ ಅನೇಕ ಕನ್ನಡಿಗರಿಗೆ ವಿದೇಶದಲ್ಲಿ ಸಮಸ್ಯೆಯಾದಾಗ ರಾಯಭಾರ ಕಚೇರಿಯೊಂದಿಗೆ ಮಾತನಾಡಿ, ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಹಲವು ಕಾರ್ಯಗಳನ್ನು ಮಾಡಿದ್ದಾರೆ. ಕರೋನಾ ಸಮಯದಲ್ಲಿಯೂ ವಿದೇಶದಲ್ಲಿ ಅತಂತ್ರವಾಗಿದ್ದ ಕನ್ನಡಿಗರನ್ನು ಕರ್ನಾಟಕಕ್ಕೆ ಕರೆತರಲು ಪ್ರಮುಖ ಪಾತ್ರವನ್ನು ವಹಿಸಿದ್ದರು.

ಜಪಾನ್‌ನಿಂದ ಭಾರತದಲ್ಲಿ 1 ಲಕ್ಷ ಕೋಟಿ ರು. ಹೂಡಿಕೆ

120 ಒಪ್ಪಂದಕ್ಕೆ ಮೋದಿ-ತಕಾಯ್ಚಿ ಸಹಿ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಗುರುವಾರ ದೆಹಲಿಯ ಹೈದರಾಬಾದ್ ಹೌಸ್‌ನಲ್ಲಿ ಜಪಾನ್ ಪ್ರಧಾನಿ ಸನಾಯಿ ತಕಾಯ್ಚಿ ಅವರೊಂದಿಗೆ ಮಹತ್ವದ ದ್ವಿಪಕ್ಷೀಯ ಮಾತುಕತೆ ನಡೆಸಿ, 120 ಒಪ್ಪಂದಗಳಿಗೆ ಸಹಿ ಹಾಕಿದರು. ಭಾರತ ಮತ್ತು ಜಪಾನ್ ನಡುವಿನ 16ನೇ ವಾರ್ಷಿಕ ದ್ವಿಪಕ್ಷೀಯ ಶೃಂಗಸಭೆಯಲ್ಲಿ, ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಪಾಲುದಾರಿಕೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಐತಿಹಾಸಿಕ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದರು.

ಈ ಒಪ್ಪಂದಗಳು ಭಾರತಕ್ಕೆ ಸುಮಾರು 10 ಶತಕೋಟಿ ಡಾಲರ್ (95,330 ಕೋಟಿ ರು.) ಹೂಡಿಕೆಯನ್ನು ತರಲಿವೆ. ಇದರೊಂದಿಗೆ ಹಣಕಾಸು ಸೇವಾಸಂಸ್ಥೆಗಳ ನಡುವಿನ ಒಪ್ಪಂದವು ಬಂಡವಾಳ ಹೂಡಿಕೆ ಹರಿವನ್ನು ಮತ್ತಷ್ಟು ಸುಗಮಗೊಳಿಸುತ್ತದೆ. ಜಪಾನ್‌ನಿಂದ ಭಾರತಕ್ಕೆ ಮುಂದಿನ ದಶಕದಲ್ಲಿ ಸುಮಾರು 5.92 ಲಕ್ಷ ಕೋಟಿ ರು. ಹೂಡಿಕೆ ಹರಿದುಬರುವ ನಿರೀಕ್ಷೆಯಿದೆ.

ಎಐ, ರಕ್ಷಣಾ ವಲಯಕ್ಕೆ ಆದ್ಯತೆ: ಒಪ್ಪಂದದಲ್ಲಿ ರಕ್ಷಣಾ ಕೇತ್ರಕ್ಕೆ ಆದ್ಯತೆ ನೀಡಲಾಗಿದೆ. ಕೃತಕ ಬುದ್ಧಿಮತ್ತೆಗೆ ಭಾರೀ ಉತ್ತೇಜನ ಸಿಗುವ ನಿರೀಕ್ಷೆಯಿದೆ.

ಸಮಾಚಾರ ಸಣ್ಣದಲ್ಲ

ಜುಲೈ ತಿಂಗಳ ಕರೆಂಟ್ ಬಿಲ್ ಬರಲ್ಲ: ಬೆಸ್ಕಾಂ

ಬೆಂಗಳೂರು: ಗೃಹಜ್ಯೋತಿ ಪರಿಷ್ಕರಣೆ ರಾಜ್ಯ ಸರಕಾ ರ ಮುಂದಾಗುತ್ತಿದ್ದಂತೆ, ಜುಲೈ ತಿಂಗಳ ವಿದ್ಯುತ್ ಬಿಲ್ ವಿಷಯದಲ್ಲಿದ್ದ ಗೊಂದಲಗಳಿಗೆ ಬೆಸ್ಕಾಂ ತೆರೆ ಎಳೆದಿದೆ. ಈ ಬಗ್ಗೆ ಪ್ರಕಟಣೆ ಹೊರಡಿಸಿರುವ ಬೆಸ್ಕಾಂ, ಗೃಹ ಜ್ಯೋತಿ ಯೋಜ ನೆಯ ಫಲಾನುಭವಿಗಳ ಮನೆ- ಮನೆ ಪರಿಶೀ ಲನಾ ಕಾರ್ಯಕ್ಕೆ ಬೆಸ್ಕಾಂ ಮೀಟರ್ ರೀಡರ್‌ಗಳನ್ನು ನಿಯೋಜಿಸಲಾಗಿದೆ. ಆದ್ದ ರಿಂದ ಜುಲೈ ತಿಂಗಳಲ್ಲಿ ನಿಯಮಿತ ಮೀಟರ್ ರೀಡಿಂಗ್ ಇರುವುದಿಲ್ಲ ಎಂದು ಬೆಸ್ಕಾಂ ತಿಳಿಸಿದೆ. ಮೀಟರ್ ರೀಡಿಂಗ್ ಬದಲಾಗಿ, ಗ್ರಾಹಕ ರಿಗೆ ಜುಲೈ ತಿಂಗಳಲ್ಲಿ ಸರಾಸರಿ ಬಿಲ್ ನೀಡಲಾಗುತ್ತದೆ. ಅಂದರೆ ಕಳೆದ 3 ತಿಂಗಳ ನಿಮ್ಮ ಸರಾಸರಿ ವಿದ್ಯುತ್ ಬಳಕೆಯ ಆಧಾರದ ಮೇಲೆ ಜುಲೈ ತಿಂಗಳ ಬಿಲ್ ಅನ್ನು ಸಿದ್ಧಪಡಿಸಲಾಗುತ್ತದೆ. ಈ ಹೊಸ ನಿಯಮವು ಎಚ್.ಟಿ ಗ್ರಾಹಕರು, 40 ಎಚ್.ಪಿ ಮತ್ತು ಅದಕ್ಕಿಂತ ಹೆಚ್ಚಿನ ಲೋಡ್ ಹೊಂದಿರುವ ಎಲ್.ಟಿ ಗ್ರಾಹಕರು, ಸೋಲಾರ್ ರೂಫ್ಟಾಪ್ ಗ್ರಾಹಕರು ಹಾಗೂ ತಾತ್ಕಾಲಿಕ ವಿದ್ಯುತ್ ಸಂಪರ್ಕ ಹೊಂದಿರುವವರಿಗೆ ಅನ್ವಯಿಸುವುದಿಲ್ಲ. ಈ ಗ್ರಾಹಕರಿಗೆ ಎಂದಿನಂತೆ ನಿಯಮಿತವಾಗಿ ಮೀಟರ್ ರೀಡಿಂಗ್ ಮಾಡಿ ಬಿಲ್ ನೀಡಲಾಗುವುದು ಎಂದು ಬೆಸ್ಕಾಂ ಹೇಳಿದೆ.

ಐಟಿ ಕಂಪನಿಯೊಂದರ ಡೇ ಕೇರ್‌ನಲ್ಲಿ ಆಯಾಗಳಿಂದ ಅಮಾನವೀಯ ಕೃತ್ಯ | ಮಕ್ಕಳನ್ನು ವಾಷಿಂಗ್ ಮಷಿನ್‌ನಲ್ಲಿ ಹಾಕಿ, ಬಾಯಿಗೆ ಟಾಯ್ಲೆಟ್ ಪೈಪ್ ತುರುಕಿ ಮಾನಸಿಕ, ದೈಹಿಕ ಹಿಂಸೆ | ಮಹಿಳೆಯರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು

ಪುಟ್ಟ ಮಕ್ಕಳ ಮೇಲೆ ಕೀಚಕ ಕೃತ್ಯ

ಬೆಂಗಳೂರು: ಐಟಿ ಕಂಪನಿಯೊಂದರ ಡೇ-ಕೇರ್‌ನಲ್ಲಿ (ಬೇಬಿ ಕೇರ್ ಸೆಂಟರ್) ಪುಟ್ಟ ಕಂದಮ್ಮಗಳನ್ನು ಆರೈಕೆ ಮಾಡಬೇಕಿದ್ದ ಆಯಾಗಳೇ ಅವರ ಮೇಲೆ ಪೈಶಾಚಿಕ ಕೃತ್ಯ ಎಸಗಿದ ಅಮಾನವೀಯ ಮತ್ತು ಶಾಕಿಂಗ್ ಘಟನೆ ಬೆಳಕಿಗೆ ಬಂದಿದೆ.

ಅಳುವ ಮಕ್ಕಳನ್ನು ಬಟ್ಟೆ ತೊಳೆಯುವ ವಾಷಿಂಗ್ ಮಷಿನ್ ಒಳಗೆ ಹಾಕಿ, ಟಾಯ್ಲೆಟ್ ಜೆಟ್ ಸ್ಪ್ರೇ ಪೈಪ್‌ನಿಂದ ಬಾಯಲ್ಲಿ ನೀರು ಬಿಟ್ಟಿದ್ದಾರೆ. ಜತೆಗೆ ಅದೇ ಟಾಯ್ಲೆಟ್ ಒಳಗೆ ಕೂಡಿ ಹಾಕಿ ಅಳದಂತೆ ಬೆದರಿಸಿದ್ದಾರೆ. ಇದರ ವಿಡಿಯೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದ್ದು, ಘಟನೆ ಕುರಿತಂತೆ ಮಹಿಳೆಯರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ. ಜತೆಗೆ ಡೇ-ಕೇರ್ ಅನ್ನು ಬಂದ್ ಮಾಡಲಾಗಿದೆ.

ನಗರದ ಕ್ಯಾಪ್‌ಜೆಮಿನಿ ಟೆಕ್ನಾಲಜಿ ಸರ್ವೀಸಸ್ ಇಂಡಿಯಾ ಲಿಮಿಟೆಡ್ ಕ್ಯಾಂಪಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಡೇ ಕೇರ್ ಕೇಂದ್ರದಲ್ಲಿ ಮಕ್ಕಳ ಮೇಲೆ ದೌರ್ಜನ್ಯ ನಡೆದಿದೆ. ಅಲ್ಲಿನ ಮಹಿಳಾ ಆರೈಕೆದಾರರು ಮಕ್ಕಳ ಮೇಲೆ ದೈಹಿಕ ಹಲ್ಲೆ, ಬೆದರಿಕೆ ಮತ್ತು ಅಮಾನವೀಯ ಕೃತ್ಯಗಳನ್ನು ಎಸಗಿದ್ದಾರೆ. ಮಕ್ಕಳ ಮೇಲಿನ ದೌರ್ಜನ್ಯದ ವಿಡಿಯೋಗಳು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ತಿಲಕೇಶ್ ಕುಮಾರ್ ಅವರ ವಾಟ್ಸ್‌ಆ್ಯಪ್‌ಗೆ ಬಂದಿವೆ. ಇದನ್ನು ಕಂಡ ಅವರು ಜೂನ್ 29 ರಂದು ಎಚ್‌ಎಎಲ್ ಪೊಲೀಸ್

ಠಾಣೆಯಲ್ಲಿ ದೂರು ನೀಡಿದ್ದಾರೆ. ಈ ಬಗ್ಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೂ ಪ್ರತ್ಯೇಕ ದೂರು ನೀಡಿದ್ದಾರೆ.

ದೂರಿನ ಪ್ರಕಾರ, ಜೂನ್ 25 ರಂದು ಕ್ಯಾಪ್‌ಜೆಮಿನಿಯ ಬ್ರೂಕ್‌ಶೀಲ್ಡ್ ಕ್ಯಾಂಪಸ್‌ನೊಳಗೆ ಇರುವ ಡೇಕೇರ್‌ನಲ್ಲಿ 2 ರಿಂದ 3 ವರ್ಷದೊಳಗಿನ ಮಕ್ಕಳ ಮೇಲೆ ದೌರ್ಜನ್ಯ ನಡೆದಿದ್ದು ಗೊತ್ತಾಗಿದೆ. ಅಲ್ಲಿನ ಮಹಿಳಾ ಆರೈಕೆದಾರರಾದ ಮಂಜುಳಾ, ವಿಜಯಲಕ್ಷ್ಮಿ, ಭವಾನಿ, ಸಿಂಧು ಮತ್ತು ಬಿಂದು ಎಂಬುವರ ಮೇಲೆ ದೂರು ದಾಖಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

- ಕ್ಯಾಪ್‌ಜೆಮಿನಿಯ ಬ್ರೂಕ್‌ಶೀಲ್ಡ್ ಕ್ಯಾಂಪಸ್‌ನೊಳಗೆ ಕೃತ್ಯ
- ಮಹಿಳಾ ಆರೈಕೆದಾರರಾದ ಮಂಜುಳಾ, ವಿಜಯಲಕ್ಷ್ಮಿ,
- ಭವಾನಿ, ಸಿಂಧು ಮತ್ತು ಬಿಂದು ಎಂಬುವರ ಮೇಲೆ ದೂರು

ಮಕ್ಕಳನ್ನು ವಾಷಿಂಗ್ ಮಷಿನ್‌ನಲ್ಲಿ ಹಾಕಿದರು

ದೂರಿನ ಪ್ರಕಾರ, ಅಳುವ ಮಕ್ಕಳನ್ನು ರಮಿಸುವ ಬದಲು ಮಹಿಳಾ ಆಯಾಗಳು ಅವರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿದ್ದಾರೆ. ಬಟ್ಟೆ ತೊಳೆಯುವ ವಾಷಿಂಗ್ ಮಷಿನ್‌ಗಳ ಒಳಗೆ ಕೂರಲು ಒತ್ತಾಯಿಸಲಾಗಿದೆ. ಕೆಲವು ಮಕ್ಕಳನ್ನು ಚಿಕ್ಕದಾದ ನೀರು ತುಂಬಿದ ಬಕೆಟ್‌ಗಳಲ್ಲಿ ಬಲವಂತವಾಗಿ ಕೂರಿಸಲಾಗಿದೆ. ಇನ್ನು ಕೆಲವು ಮಕ್ಕಳನ್ನು ಟಾಯ್ಲೆಟ್ ಒಳಗೆ ಲಾಕ್ ಮಾಡಲಾಗಿದೆ. ಈ ವೇಳೆ ಮಕ್ಕಳು ಹೆದರಿ ಮತ್ತಷ್ಟು ಅತ್ತಾಗ ಅವರ ಬಾಯಿಗೆ ಟಾಯ್ಲೆಟ್ ಜೆಟ್ ಸ್ಪ್ರೇಗಳಿಂದ ನೀರು ಬಿಟ್ಟಿದ್ದಾರೆ. ಈ ಎಲ್ಲಾ ಅಮಾನವೀಯ ಕೃತ್ಯಗಳು ವಿಡಿಯೋದಲ್ಲಿ ಸೆರೆಯಾಗಿವೆ.

ಡೇ-ಕೇರ್ ಕೇಂದ್ರಗಳಲ್ಲಿ ಸುರಕ್ಷತೆಗಾಗಿ ವಿಶೇಷ ತಂಡ ರಚಿಸಲು ಮನವಿ

ಬೆಂಗಳೂರು: ಬೆಂಗಳೂರಿನ ಎಚ್‌ಎಎಲ್ ಪ್ರದೇಶದಲ್ಲಿರುವ ಖಾಸಗಿ ಸಂಸ್ಥೆಯ ಆವರಣದಲ್ಲಿನ ಡೇ-ಕೇರ್ ಕೇಂದ್ರದಲ್ಲಿ ಮಕ್ಕಳ ಮೇಲೆ ನಡೆದಿರುವ ಎನ್ನಲಾದ ಅಮಾನವೀಯ ಕಿರುಕುಳ ಪ್ರಕರಣದ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಡೇ-ಕೇರ್ ಕೇಂದ್ರಗಳ ಸುರಕ್ಷತೆ, ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಯ ಸಮಗ್ರ ಪರಿಶೀಲನೆ ನಡೆಸಲು ವಿಶೇಷ ತಂಡ ರಚಿಸುವಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಕಟಪೂರ್ವ ಅಧ್ಯಕ್ಷ ಶಶಿಧರ್ ಕೋಸಂಬೆ ಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರದ ಮೂಲಕ ಮನವಿ ಮಾಡಿದ್ದಾರೆ.

ಡೇ-ಕೇರ್ ಕೇಂದ್ರದಲ್ಲಿ ಪುಟ್ಟ ಮಕ್ಕಳನ್ನು ಬಳಸಿಕೊಂಡು ಅಮಾನವೀಯ ಕೃತ್ಯಗಳು ನಡೆದಿರುವ ಆರೋಪಗಳು ಪೋಷಕರಲ್ಲಿ ತೀವ್ರ ಆತಂಕ ಮೂಡಿಸಿವೆ. ಇಂತಹ ಸಂದರ್ಭದಲ್ಲಿ ಮಕ್ಕಳ ಶಿಕ್ಷಣ, ಆರೋಗ್ಯ, ಸುರಕ್ಷತೆ ಮತ್ತು ಮೂಲಭೂತ ಹಕ್ಕುಗಳ ರಕ್ಷಣೆ ಸರಕಾರದ ಆದ್ಯತೆಯಾಗಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ರಾಜ್ಯ ಮಕ್ಕಳ ರಕ್ಷಣಾ ನೀತಿ-2015 ಹಾಗೂ ತಿದ್ದುಪಡಿ-2023 ಸಮರ್ಪಕವಾಗಿ ಜಾರಿಯಲ್ಲಿದೆಯೇ ಎಂಬುದರ ಬಗ್ಗೆಯೂ ತನಿಖೆ ನಡೆಸಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ವಾಲಿದ ಬೃಹತ್ ಕಟ್ಟಡ ಒಳಗೆ ಸಿಲುಕಿದ್ದವರ ರಕ್ಷಣೆ

ಬೆಂಗಳೂರು: ನಗರದ ಕಾಟನ್‌ಪೇಟೆಯಲ್ಲಿ ಬೃಹತ್ ಕಟ್ಟಡವೊಂದು ಒಂದು ಬದಿ ವಾಲಿದ್ದು, ಅದರಲ್ಲಿ ಸಿಲುಕಿದ್ದವರು ಹಾಗೂ ಕಟ್ಟಡದ ಸುತ್ತಮುತ್ತಲಿನ ನಿವಾಸಿಗಳು ಆತಂಕಕ್ಕೆ ಒಳಗಾಗಿದ್ದರು.

ವಾಲಿದ ಕಟ್ಟಡದ ಒಳಗೆ ಸಿಲುಕಿದ್ದ ಇಬ್ಬರನ್ನು ಅಗ್ನಿಶಾಮಕ ಸಿಬ್ಬಂದಿ ಹಾಗೂ ಪೊಲೀಸರು ರಕ್ಷಿಸಿದ್ದಾರೆ. ಕಟ್ಟಡದಲ್ಲಿ ಖಾಸಗಿ ಕ್ಲಿನಿಕ್ ನಡೆಸಲಾಗುತ್ತಿತ್ತು ಎಂದು ತಿಳಿದುಬಂದಿದೆ. ಕಟ್ಟಡ ವಾಲಿ, ರಸ್ತೆಗೆ ಕುಸಿದಿದ್ದರಿಂದ ಅಲ್ಲೇ ನಿಲ್ಲಿಸಿದ್ದ ಆಟೋವೊಂದು ಜಖಂ ಆಗಿದೆ. ಸ್ಥಳದಲ್ಲಿ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಪರಿಶೀಲನೆ ನಡೆಸಿದ್ದಾರೆ. 50 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದ ಈ ಮನೆಯನ್ನು ಸ್ಥಳದಲ್ಲೇ ಜಿಬಿಎ ಅಧಿಕಾರಿಗಳು, ಪೊಲೀಸರು ಮೊಕ್ಕಾಂ ಹೂಡಿ 2 ಜೆಸಿಬಿ ಮೂಲಕ ಕಟ್ಟಡ ತೆರವು ಮಾಡಿಸಿದ್ದಾರೆ.

ನಗರದ ಕಾಟನ್‌ಪೇಟೆಯಲ್ಲಿ ಕಟ್ಟಡವೊಂದು ವಾಲಿರುವುದು.

ಶಾಸಕ ಎಸ್.ಸುರೇಶ್ ಕುಮಾರ್ ವಿರುದ್ಧ ವಕೀಲ ಸೂರ್ಯ ಮುಕುಂದರಾಜ್ ಲೋಕಾಯುಕ್ತಕ್ಕೆ ದೂರು

ರಾಜಾಜಿನಗರ ಕ್ಷೇತ್ರದಲ್ಲಿ 300 ಕೋಟಿ ರು. ಹಗರಣ ಆರೋಪ

ಬೆಂಗಳೂರು: ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಅನುದಾನ ಹಾಗೂ ಬಿಬಿಎಂಪಿಯಿಂದ ಕೈಗೊಳ್ಳಲಾದ ವಿವಿಧ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳಲ್ಲಿ ಭಾರಿ ಅಕ್ರಮ ಎಸಗಲಾಗಿದೆ ಎಂದು ಆರೋಪಿಸಿ ಶಾಸಕ ಎಸ್.ಸುರೇಶ್ ಕುಮಾರ್ ವಿರುದ್ಧ ವಕೀಲ ಸೂರ್ಯ ಮುಕುಂದರಾಜ್ ಅವರು ಲೋಕಾಯುಕ್ತಕ್ಕೆ ದಾಖಲೆ ಸಮೇತ ದೂರು ಸಲ್ಲಿಸಿದ್ದಾರೆ.

ದೂರು ಸಲ್ಲಿಸಿದ ನಂತರ ಲೋಕಾಯುಕ್ತ ಕಚೇರಿ ಮುಂದೆ ಸುದ್ದಿಗಾರರ ಜತೆ ಮಾತನಾಡಿದ ಅವರು, ಶಾಸಕರು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು, ನಿಯಮಗಳನ್ನು ಗಾಳಿಗೆ ತೂರಿ, ತಮಗೆ ಬೇಕಾದ ಬೇನಾಮಿ ಗುತ್ತಿಗೆದಾರರಿಗೆ ಲಾಭ ಮಾಡಿಕೊಟ್ಟಿದ್ದಾರೆ. ಈ ಮೂಲಕ ಸರಕಾರಿ ಖಜಾನೆಗೆ ಭಾರಿ ಆರ್ಥಿಕ ನಷ್ಟ ಉಂಟುಮಾಡಿದ್ದಾರೆ. ಜಿಎಸ್‌ಟಿ ಹಾಗೂ ಇಲಾಖೆಯ ಇತರೆ ವೆಚ್ಚಗಳೂ ಸೇರಿದರೆ ಈ ಒಟ್ಟು ಹಗರಣದ ಮೊತ್ತ 300 ಕೋಟಿ ರು. ಮೀರುತ್ತದೆ. ಸಾರ್ವಜನಿಕ ಹಿತಾಸಕ್ತಿ ಹಾಗೂ ಸಾರ್ವಜನಿಕ ಹಣದ ಸಂರಕ್ಷಣೆಯ ದೃಷ್ಟಿಯಿಂದ ಲೋಕಾಯುಕ್ತರು ಈ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಶಾಸಕ ಸುರೇಶ್ ಕುಮಾರ್ ಹಾಗೂ ಅವರಿಗೆ ಸಹಕರಿಸಿದ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ತಡೆ ಕಾಯಿದೆಯಡಿ ಸಮಗ್ರ ತನಿಖೆ ನಡೆಸಿ, ಕಾನೂನು ರೀತ್ಯಾ ಕಠಿಣ ಶಿಕ್ಷೆ ಜರುಗಿಸಬೇಕು ಎಂದು ಒತ್ತಾಯಿಸಿದರು.

ಎಲ್1 ಗುತ್ತಿಗೆದಾರರನ್ನು ತಪ್ಪಿಸಿ 14 ಕೋಟಿ ರು.ನಷ್ಟ: 2020 ರ 72.25 ಕೋಟಿ ಮೊತ್ತದ ರಸ್ತೆ ಮತ್ತು ಚರಂಡಿ ಕಾಮಗಾರಿಗಳ ಟೆಂಡರ್‌ನಲ್ಲಿ ಅತ್ಯಂತ ಕಡಿಮೆ ಬಿಡ್ ಮಾಡಿದ್ದ ಅರ್ಹ ಗುತ್ತಿಗೆದಾರರನ್ನು ತಪ್ಪಿಸಲು ಶಾಸಕರು ಅಧಿಕಾರಿಗಳ ಮೇಲೆ ದೂರವಾಣಿ ಮೂಲಕ ಒತ್ತಡ ಹೇರಿದ್ದಾರೆ. ಬಿಬಿಎಂಪಿಯ ಟಿವಿಸಿಸಿ ಮುಖ್ಯ ಅಭಿಯಂತರರ ಕಚೇರಿ ಟಿಪ್ಪಣಿಯಲ್ಲೇ ಶಾಸಕರ ಈ ದಬ್ಬಾಳಿಕೆ ದಾಖಲಾಗಿದೆ. ತದನಂತರ ಎಲ್2 ಬಿಡ್‌ದಾರರು ನಿರಾಕರಿಸಿದಾಗ, ತಮ್ಮ ಬೇನಾಮಿಗಳಿಗೆ ಲಾಭ

ಲೋಕಾಯುಕ್ತಕ್ಕೆ ದೂರು ನೀಡಿದ ವಕೀಲ ಮುಂಕುಂದ ರಾಜ್.

ಮಾಡಲು 53 ಕೋಟಿಯ ಕಾಮಗಾರಿಯನ್ನು 67 ಕೋಟಿಗೆ ಏರಿಸಿ, ಸರಕಾರಕ್ಕೆ ನೇರವಾಗಿ 14 ಕೋಟಿ ನಷ್ಟ ಉಂಟುಮಾಡಿದ್ದಾರೆ. ಭಾಷಾನಗರದ ರಸ್ತೆ ಡಾಂಬರೀಕರಣದ 60 ಲಕ್ಷ ಮೊತ್ತದ ಟೆಂಡರ್‌ನ ಹಣಕಾಸು ಬಿಡ್ ಅನ್ನು ಕಳೆದ 4 ವರ್ಷಗಳಿಂದ ತೆರೆಯದೆ ತಡೆಹಿಡಿಯಲಾಗಿದೆ. ನಾಗರಿಕರ ಮೂಲಸೌಕರ್ಯಕ್ಕೆ ಮೀಸಲಿದ್ದ ಈ ಹಣವನ್ನು ನಿಯಮಬಾಹಿರವಾಗಿ ವರ್ಗಾಯಿಸಿ ಪಾರ್ಕ್‌ಗಳ

ಟೆಂಡರ್‌ಗಳಲ್ಲಿ ನಿಯಮ ಉಲ್ಲಂಘನೆ

ಸಿಎಂ ಇನ್ಫ್ರಾಸ್ಟ್ರಕ್ಚರ್ ಗ್ರಾಂಟ್ಸ್ ಅಡಿಯ ಪ್ಯಾಕೇಜ್‌ಗಳಲ್ಲಿ (ಒಟ್ಟು 33.97 ಕೋಟಿ) ಸಾಮಾನ್ಯ ರಸ್ತೆ ಕಾಮಗಾರಿಗಳ ಟೆಂಡರ್‌ನಲ್ಲಿ ಉದ್ದೇಶಪೂರ್ವಕವಾಗಿ ಟೆನ್ಸಿಲ್ ರೂಫಿಂಗ್ ಮತ್ತು ಎಫ್.ಆರ್.ಪಿ ಕವರ್ಸ್ ನಂತಹ ವಿಶೇಷ ತಾಂತ್ರಿಕ ವಸ್ತುಗಳನ್ನು ಸೇರಿಸಿ, ತಮಗೆ ಬೇಕಾದ ನಿರ್ದಿಷ್ಟ ಗುತ್ತಿಗೆದಾರರಿಗೆ ಮಾತ್ರ ಟೆಂಡರ್ ಸಿಗುವಂತೆ ಟೈಲರ್ ಮಾಡ್ ಷರತ್ತುಗಳನ್ನು ವಿಧಿಸಲಾಗಿದೆ. 2022-23 ನೇ ಸಾಲಿನ 150 ಕೋಟಿ ಮೊತ್ತದ ಬೃಹತ್ ಕಾಮಗಾರಿಗಳು ಹಾಗೂ 2025-26 ನೇ ಸಾಲಿನ 10 ಕೋಟಿ ಮತ್ತು 9 ಕೋಟಿ ವೆಚ್ಚದ ಸರಣಿ ಟೆಂಡರ್‌ಗಳಲ್ಲೂ ನಿಯಮಾವಳಿಗಳನ್ನು ಗಾಳಿಗೆ ತೂರಿ ಮುಕ್ತ ಸ್ಪರ್ಧೆಯನ್ನು ನಿರ್ಬಂಧಿಸಿ, ಏಕೈಕ ಬಿಡ್‌ದಾರರಿಗೆ ಅನುಕೂಲ ಮಾಡಿಕೊಡಲಾಗಿದೆ.

ಸೌಂದರ್ಯೀಕರಣಕ್ಕೆ ಬಳಸಲಾಗುತ್ತಿದ್ದು, ಕ್ಷೇತ್ರದ ರಸ್ತೆಗಳು ಗುಂಡಿಮಯವಾಗಲು ಶಾಸಕರ ತಪ್ಪು ನಿರ್ಧಾರಗಳೇ ಕಾರಣ ಎಂದರು.

ಯಂತ್ರೋಪಕರಣಗಳ ಷರತ್ತು ಡಿಲೀಟ್: ಟೆಂಡರ್‌ನಲ್ಲಿ ಭಾಗವಹಿಸುವ ಮುನ್ನ ಸೈಟ್ ವಿಸಿಟ್ ಮಾಡಿ ರಿಜಿಸ್ಟರ್‌ನಲ್ಲಿ ಸಹಿ ಮಾಡಬೇಕೆಂಬ ಕಡ್ಡಾಯ ನಿಯಮ ತರಲಾಗಿದೆ. ಇದು ಯಾರು ಬಿಡ್ ಮಾಡುತ್ತಿದ್ದಾರೆ ಎಂದು ಮೊದಲೇ ತಿಳಿದು ಬೇರೆಯವರನ್ನು ಹೊರದಬ್ಬುವ ತಂತ್ರವಾಗಿದೆ. ಅಷ್ಟೇ ಅಲ್ಲದೆ, ತಮ್ಮ ಬೇನಾಮಿಗಳ ಬಳಿ ಯಂತ್ರೋಪಕರಣಗಳು ಇಲ್ಲದ ಕಾರಣ 1 ಕೋಟಿಗೂ ಹೆಚ್ಚಿನ ಟೆಂಡರ್‌ಗಳಲ್ಲಿ ಇರಬೇಕಾದ ಕಡ್ಡಾಯ ಯಂತ್ರೋಪಕರಣಗಳ ನಿಯಮವನ್ನೇ ಡಿಲೀಟ್ ಮಾಡಲಾಗಿದೆ ಎಂದು ಸೂರ್ಯ ಮುಕುಂದ್ ರಾಜ್ ಲೋಕಾಯುಕ್ತರಿಗೆ ಸಲ್ಲಿಸಿರುವ ದೂರಿನಲ್ಲಿ ವಿವರಿಸಿದ್ದಾರೆ.

AMBIT Finvest AMBIT

ಆಂಬಿಟ್ ಫಿನ್‌ವೆಸ್ಟ್ ಪ್ರೈವೇಟ್ ಲಿಮಿಟೆಡ್

CIN: U65999MH2006PTC163257

ನೊಂದಾಯಿತ ಕಚೇರಿ: ಆಂಬಿಟ್ ಹೌಸ್, 449, ಸೇನಾಪತಿ ಬಾಪಟ್ ಮಾರ್ಗ, ಲೋಯರ್ ಪರೇಲ್, ಮುಂಬೈ - 400013

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:

ರಾಮನಗರ ಜಿಲ್ಲೆ, ಚನ್ನಪಟ್ಟಣ ಟೌನ್, ಕುವೆಂಪುನಗರ, ಬಿ.ಎಂ. ಮುಖ್ಯ ರಸ್ತೆ, 7ನೇ ಕ್ರಾಸ್, 1ನೇ ಮಹಡಿಯಲ್ಲಿರುವ ರತ್ನ ಕಾಂಪ್ಲೆಕ್ಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಖಾ ಕಚೇರಿಯನ್ನು ದಿನಾಂಕ 6 ಅಕ್ಟೋಬರ್ 2026 ರಿಂದ ಜಾರಿಗೆ ಬರುವಂತೆ ಸ್ಥಳಾಂತರಿಸಲಾಗುವುದು.

ಭವಿಷ್ಯದ ಎಲ್ಲಾ ಪತ್ರವ್ಯವಹಾರಗಳನ್ನು ಈ ಕೆಳಗಿನ ವಿಳಾಸ ಮತ್ತು ಸಂಪರ್ಕ ಸಂಖ್ಯೆಯ ಮೂಲಕ ಕಂಪನಿಯ ಶಾಖಾ ಕಚೇರಿಗೆ ಕಳುಹಿಸಿಕೊಡಬೇಕಾಗಿ ವಿನಂತಿ:

ಆಂಬಿಟ್ ಫಿನ್‌ವೆಸ್ಟ್ ಪ್ರೈವೇಟ್ ಲಿಮಿಟೆಡ್
ನಂ.2228 ಚೌಡೇಶ್ವರಿ ಕಾಂಪ್ಲೆಕ್ಸ್, 2ನೇ ಮಹಡಿ, ಶಾಪ್ ನಂ. 21, ಜಿಯೋ (JIO) ಪೆಟ್ರೋಲ್ ಬಂಕ್ ಪಕ್ಕದಲ್ಲಿ - 562160
ಇಮೇಲ್ ಐಡಿ: customercare@ambit.co • **ಸಂಪರ್ಕ ಸಂಖ್ಯೆ:** +91 91159 98000

ಸ್ಥಳ: ಕರ್ನಾಟಕ
ದಿನಾಂಕ: 02-07-2026

ಸಹಿ/-
ಪರವಾಗಿ,
ಆಂಬಿಟ್ ಫಿನ್‌ವೆಸ್ಟ್ ಪ್ರೈವೇಟ್ ಲಿಮಿಟೆಡ್

Counsel for Decree Holder
IN THE XI SMALL CAUSES COURT AT CHENNAI
E.P. No. 652 of 2025
Madanlal (Deceased),
3. Praveen Kumar, & 8 others
...Decree Holders
Vs.
D. Jugraj Bafna (Deceased)
3. Omprakash Bafna & 5 others
...Judgment Debtor
To,
R-5, Leeela Devi,
W.O.C, Road, Rajaji Nagar I Block,
Bangalore-580 086, Karnataka
Please take notice that in the above matter, the Hon'ble Court was pleased to order notice to Judgment Debtor by way of paper publication in any Kannada daily newspaper having circulation in Bangalore, Karnataka, in respect of the next hearing date 08.07.2026. Kindly appear in this Hon'ble court on 08. 07.2026 at 10.15 AM in the forenoon, failing which further orders will be passed in your absence, setting you Ex parte.
Sd/-
M/s. Shah & shah
Partner

IN THE COURT OF THE HON'BLE XXVII ADDITIONAL CITY CIVIL AND SESSIONS JUDGE, AT BENGALURU (CCH-9)
O.S. No. 6586 OF 2024
BETWEEN : State Bank of India, Retail Assets Central Processing Centre (RACPC), Branch Code 18994 At Sy No.5/1, "Prestige Star" Next to Mother Dairy, Yelahanka, Bengaluru - 560064 Rept., by its Chief Manager, Mr. Amrendra **PLAINTIFF**
AND : Mrs. SUHASINI PHANIRAJ. **DEFENDANT**
Notice to the Defendant under Order V Rule 20(1-A) of CPC:
To : Mrs. Suhasini Paniraj, Flat No.303, 3rd Floor, Tower-H2, Provident Welworth City, Marasandra, Doddaballapura Road, Bengaluru Rural -561203.
The plaintiff has instituted the above suit against you for the recovery of a total Sum of Rs.2,14,152/- (Rupees Two Lakh Fourteen Thousand One Hundred and Fifty Two Only) as on 03.09.2024 along with Court costs and interest thereontill its realization. Therefore, you are hereby summoned to appear before this Hon'ble Court either in person or through a duly instructed advocate on **15/09/2026 at 11.A.M.** to answer the claim of the plaintiff. On your failure to appear before the Hon'ble Court on the aforesaid date the case will be decided EXPARTE.
Given under my hand and seal of the court on 29/06/2026, Bengaluru.
By Order of the Court
Sd/- Senior Sheristedar
City Civil Court, Bangalore
Advocate for Plaintiff Mr. G.M. RUDRASWAMY,
Office at No.27, Akshya Complex, 2nd Cross, First Floor, Nagappa Street, Palace Guttahalli, Bengaluru - 560 003. Phone : 99868 33635

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ: 297/2026
ಅರ್ಜಿದಾರರು: 1. ಶ್ರೀ. ಕೆಂಪೇಗೌಡ ಬಿನ್ ಲೇಟ್, ಹೊಂಬಾಳೇಗೌಡ, 78 ವರ್ಷ, 2. ಶ್ರೀ. ಚಿಕ್ಕಪುಟ್ಟೇಗೌಡ ಬಿನ್ ಲೇಟ್. ಹೊಂಬಾಳೇಗೌಡ, 53 ವರ್ಷ, ಇಬ್ಬರ ವಾಸ : ಭದ್ರೇಗೌಡನದೊಡ್ಡಿ ಗ್ರಾಮ, ದೊಡ್ಡಕಲ್ಲಬಾಳು ದಾಖ್ಲೆ, ಕೊಟ್ಟಗಾಳು ಪೋ॥, ಹಾರೋಹಳ್ಳಿ ಹೋಬಳಿ ಮತ್ತು ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
V/S
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು, ಭದ್ರೇಗೌಡನದೊಡ್ಡಿ ಗ್ರಾಮ, ದೊಡ್ಡಕಲ್ಲಬಾಳು ದಾಖ್ಲೆ, ಹಾರೋಹಳ್ಳಿ ಹೋಬಳಿ ಮತ್ತು ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ತಾಯಿ ರವರಾದ "ದಿವಂಗತ, ಶ್ರೀಮತಿ.ಪುಟ್ಟೀರಮ್ಮ ಕೋಂ ಹೊಂಬಾಳೇಗೌಡ, ರವರು ಭದ್ರೇಗೌಡನದೊಡ್ಡಿ ಗ್ರಾಮ, ಕೊಟ್ಟಗಾಳು ಅಂಚೆ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, (ರಾಮನಗರ) ಬೆಂಗಳೂರು ದಕ್ಷಿಣ ಜಿಲ್ಲೆ ಯಲ್ಲಿ ದಿನಾಂಕ : 08/06/2016 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರ ನೀಡಲು ಎದುರುದಾರ-ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣದ ಬಗ್ಗೆ ಯಾರಿಗಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 17/07/2026 ರ ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.
2026 ನೇ ಇಸವಿ ಜೂನ್ 30ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಶಿವಾನಂದ. ವಿ. ಇ, ವಕೀಲರು
ಕನಕಪುರ ಟೌನ್
ಸ್ಥಳ : ಕನಕಪುರ, ದಿನಾಂಕ: 30-06-2026

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ರಾಮನಗರ
ಸಿ.ಮಿಸ್ ನಂಬರ್ :361/2026
ಅರ್ಜಿದಾರರು: ಮಂಜುನಾಥ ರಾವ್ ಎನ್ ಎಸ್ ಬಿನ್ ಲೇಟ್ ಸಿಂಗ್ರಯ್ಯ, ವಯಸ್ಸು 59 ವರ್ಷ, #86, ಬಿ.ಎಂ. ಮುಖ್ಯ ರಸ್ತೆ, ಕೆ. ಜನತಾ ಕಾಲೋನಿ ಬಿಡದಿ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
ವಿರುದ್ಧ
ಪ್ರತಿ ಅರ್ಜಿದಾರರು: ಮಾನ್ಯ ಆಯುಕ್ತರು ಜನನ ಮತ್ತು ಮರಣ ನೊಂದಾಣಾಧಿಕಾರಿಗಳು ಬಿಡದಿ ಪುರಸಭೆ, ಬಿಡದಿ
ಪತ್ರಿಕಾ ಪ್ರಕಟಣೆಗಾಗಿ
ಈ ಪ್ರಕರಣದ ಅರ್ಜಿದಾರರ ತಂದೆಯಾದ ಶ್ರೀ ಸಿಂಗಯ್ಯ ಬಿನ್ ಲೇಟ್ ಚಲುವಯ್ಯ ರವರು ದಿನಾಂಕ: 25-07-1996 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೆಂಚನಕುಪ್ಪೆ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಅವರ ಮರಣ ಸಮರ್ಥನಾ ಪತ್ರ ಕೋರಿ ಅರ್ಜಿದಾರರುಗಳು ಈ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಈ ಬಗ್ಗೆ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಈ ಪ್ರಕರಣ ವಿಚಾರಣೆಗೆ ಇರುತ್ತದೆ. ಆದ ಕಾರಣ ಹಿತಾಸಕ್ತಿಯುಳ್ಳವರು ಯಾರಾದರೂ ಇದ್ದಲ್ಲಿ ದಿನಾಂಕ: 27/07/2026 ರಂದು ಬೆಳಿಗ್ಗೆ 11:00 ಗಂಟೆಗೆ ಸರಿಯಾಗಿ ಮೇಲ್ಕಂಡ ಘನ ನ್ಯಾಯಾಲಯದ ಮುಂದೆ ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಪ್ರತಿಸಂರಕ್ಷಣಾವಾದ ದಾಖಲಿಸತಕ್ಕದ್ದು, ತಪ್ಪಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಏಕಪಕ್ಷಿಯ ಆದೇಶ ಹೊರಡಿಸಿ, ಅರ್ಜಿದಾರರ ಹಕ್ಕುದಾವೆಗೆ ಅಂತಹವರ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಮಾನ್ಯ ನ್ಯಾಯಾಲಯ ಪ್ರಕರಣವನ್ನು ಇತ್ಯರ್ಥ-ಪಡಿಸಲು ಮುಂದುವರೆಯುತ್ತದೆ ಎಂದು ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ
ಅರ್ಜಿದಾರರ ಪರ ವಕೀಲರು
ಸುಹಾಸ್, ವಕೀಲರು, ರಾಮನಗರ
ದಿನಾಂಕ: 30/06/2026

ನಾದಿನಿ ವಿರುದ್ಧ ವರದಕ್ಷಿಣೆ ಕಿರುಕುಳ ಆರೋಪ: ಪ್ರಕರಣ ರದ್ದು

ಬೆಂಗಳೂರು: ವಿದೇಶದಲ್ಲಿ ನೆಲೆಸಿರುವ ಮಹಿಳೆ(ನಾದಿನಿ) ಫೋನ್ ಕರೆಗಳ ಮೂಲಕ ವರದಕ್ಷಿಣೆ ಕಿರುಕುಳ ನೀಡುತ್ತಿರುವ ಆರೋಪದಲ್ಲಿ ಪ್ರಕರಣ ದಾಖಲಿಸುವುದು ಕಾನೂನಿನ ದುರುಪಯೋಗವಾಗಲಿದೆ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಲಕ್ಸೆಂಬರ್ಗ್‌ನಲ್ಲಿ ನೆಲೆಸಿರುವ ನಾದಿನಿಯ ವಿರುದ್ಧ ದಾಖಲಿಸಿರುವ ಪ್ರಕರಣ ರದ್ದುಪಡಿಸಿ ಆದೇಶಿಸಿದೆ.



ತನ್ನ ವಿರುದ್ಧದ ಪ್ರಕರಣ ರದ್ದುಕೋರಿ ಲಕ್ಸೆಂಬರ್ಗ್‌ನಲ್ಲಿ ನೆಲೆಸಿರುವ ಬೆಂಗಳೂರು ಮೂಲದ ಎನ್. ವಿದ್ಯಾಶ್ರೀ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಅಲ್ಲದೇ, ನಿಖರವಾದ ಪುರಾವೆಗಳಿಲ್ಲದೇ ಕೇವಲ ಸಾಮಾನ್ಯ ಆರೋಪಗಳ ಆಧಾರದ ಮೇಲೆ ಕ್ರಿಮಿನಲ್ ಮೊಕದ್ದಮೆ ಮುಂದುವರಿಸಲು ಸಾಧ್ಯವಿಲ್ಲ. ನಾದಿನಿಯು 2017ರಲ್ಲೇ ವಿವಾಹವಾಗಿ ಲಕ್ಸೆಂಬರ್ಗ್‌ನಲ್ಲಿ ನೆಲೆಸಿದ್ದಾರೆ. ಕೇವಲ ಫೋನ್ ಕರೆಗಳ ಮೂಲಕ ಪ್ರಚೋದನೆ ನೀಡುತ್ತಿದ್ದರು ಎಂಬುದು ಐಪಿಸಿ ಸೆಕ್ಷನ್ 498ಎ ಅಡಿ ಅಪರಾಧವಾಗುವುದಿಲ್ಲ. ಇಂತಹ ಆರೋಪಗಳನ್ನು ಒಪ್ಪಿಕೊಂಡರೆ, ಸಂಬಂಧಿಕರು ಸೊಸೆಗೆ ಮಾಡುವ ಪ್ರತಿಯೊಂದು ದೂರವಾಣಿ ಸಂಭಾಷಣೆಯನ್ನೂ ಕ್ರಿಮಿನಲ್ ಅಪರಾಧ ಎಂದು ಬಿಂಬಿಸುವ ಅಪಾಯ ಇರುತ್ತದೆ.

ಪ್ರಕರಣದ ಹಿನ್ನೆಲೆ

ಅರ್ಜಿಯಲ್ಲಿ ಎರಡನೇ ಪ್ರತಿವಾದಿಯಾಗಿರುವ ದೂರುದಾರ ಮಹಿಳೆ ಲಾವಣ್ಯ ಎಂಬುವವರು ರಾಕೇಶ್ ಎಂಬುವವರನ್ನು 2022ರ ಜುಲೈ 23ರಂದು ವಿವಾಹವಾಗಿದ್ದರು. ವಿವಾಹದ ಒಂದು ವರ್ಷದ ನಂತರ ದಂಪತಿ ನಡುವೆ ಭಿನ್ನಾಭಿಪ್ರಾಯ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಲಾವಣ್ಯ ಅವರು ಪತಿ, ಅತ್ತೆ, ಮಾವ ಹಾಗೂ ಲಕ್ಸೆಂಬರ್ಗ್‌ನಲ್ಲಿ ವಾಸವಾಗಿರುವ ನಾದಿನಿ ವಿದ್ಯಾಶ್ರೀ (ಅರ್ಜಿದಾರರು) ವಿರುದ್ಧ ವರದಕ್ಷಿಣೆ ಕಿರುಕುಳ, ಬಲವಂತದ ಗರ್ಭಪಾತ ಹಾಗೂ ಜೀವಬೆದರಿಕೆ ಆರೋಪದಡಿ ದೂರು ದಾಖಲಿಸಿದ್ದರು.

ಅಲ್ಲದೇ, ಅರ್ಜಿದಾರರ ವಿರುದ್ಧದ ಆರೋಪಗಳಲ್ಲಿ ಐಪಿಸಿ ಸೆಕ್ಷನ್ 498ಎ (ವರದಕ್ಷಿಣೆ ಕಿರುಕುಳ), 312 (ಗರ್ಭಪಾತ), 504 (ಉದ್ದೇಶಪೂರ್ವಕವಾಗಿ ಅವಮಾನಿಸಿ ಶಾಂತಿ ಭಂಗ) ಮತ್ತು 506 (ಕ್ರಿಮಿನಲ್ ಬೆದರಿಕೆ)ರ ಅಡಿ ಯಾವುದೇ ಪ್ರಾಥಮಿಕ ಅಂಶಗಳು ಕಂಡುಬಂದಿಲ್ಲ. ಆದ್ದರಿಂದ, ತನಿಖೆ ಮುಂದುವರಿಸಲು ಅನುಮತಿ ನೀಡುವುದು ಕಾನೂನು ಪ್ರಕ್ರಿಯೆಯ ದುರುಪಯೋಗವಾಗಲಿದೆ. ಆದ್ದರಿಂದ, ಅರ್ಜಿದಾರರ ವಿರುದ್ಧ ವಿಚಾರಣಾ ನ್ಯಾಯಾಲಯದಲ್ಲಿ ನಡೆಯುತ್ತಿರುವ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಲಾಗುತ್ತಿದೆ. ಆದರೆ, ಇತರ ಆರೋಪಿಗಳ ವಿರುದ್ಧ ತನಿಖೆ ಮುಂದುವರಿಯಲಿದೆ ಎಂದು ಪೀಠ ತಿಳಿಸಿದೆ.

ಲೈಂಗಿಕ ದೌರ್ಜನ್ಯ ಕೇಸ್ ರದ್ದತಿಗೆ ನಕಾರ

ಬೆಂಗಳೂರು: ಖಾಸಗಿ ಸಂಸ್ಥೆಯ ಮಾಲೀಕನೊಬ್ಬ ತನ್ನ ಬಳಿ ಉದ್ಯೋಗಕ್ಕಿದ್ದ ಮಹಿಳೆಯ ಮೇಲೆ ಎಸಗಿದ್ದ ಎನ್ನಲಾದ ಲೈಂಗಿಕ ದೌರ್ಜನ್ಯದ ಅಶ್ಲೀಲ ವಿಡಿಯೊಗಳನ್ನು ಸಂತ್ರಸ್ತೆಯ ಕುಟುಂಬದವರಿಗೆ ರವಾನಿಸಿದ ಆರೋಪ ಎದುರಿಸುತ್ತಿರುವ ಮಹಿಳೆಯ (ಮಾಲೀಕನ ಪತ್ನಿ) ವಿರುದ್ಧದ ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಬೆಂಗಳೂರಿನ ರಾಜಾಜಿನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ಮತ್ತದಕ್ಕೆ ಸಂಬಂಧಿಸಿದ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆ ರದ್ದು ಕೋರಿ ಯಲಹಂಕದ ಜಯಂತಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ವಜಾಗೊಳಿಸಿದೆ. ಅಶ್ಲೀಲ ದೃಶ್ಯಗಳನ್ನು ಇತರರಿಗೆ ರವಾನಿಸುವ ಅಥವಾ ಪ್ರಸಾರ ಮಾಡುವ ಕೃತ್ಯವು ಐಟಿ ಕಾಯಿದೆಯ ಸೆಕ್ಷನ್ 67ಎ ಅಡಿಯಲ್ಲಿ ಅಪರಾಧವಾಗುತ್ತದೆ ಎಂದಿರುವ ಪೀಠ, ಪ್ರಕರಣದಲ್ಲಿ ಮೊದಲನೇ ಆರೋಪಿಯಿಂದ (ಅರ್ಜಿದಾರೆಯ ಪತಿ) ದೌರ್ಜನ್ಯಕ್ಕೊಳಗಾಗಿರುವ ಸಂತ್ರಸ್ತೆಯ ವಿಡಿಯೊ ಹಂಚಿರುವ ಆರೋಪ ಎದುರಿಸುತ್ತಿರುವ ಅರ್ಜಿದಾರೆ (2ನೇ ಆರೋಪಿ) ಐಟಿ ಕಾಯಿದೆಯ ಸೆಕ್ಷನ್ 67 ಮತ್ತು 67ಎ ಅಡಿಯಲ್ಲಿ ವಿಚಾರಣೆ ಎದುರಿಸಲೇಬೇಕು ಎಂದು ಆದೇಶದಲ್ಲಿ ಅಭಿಪ್ರಾಯಪಟ್ಟಿದೆ.

ಎಲೆಕ್ಟ್ರಾನಿಕ್ ರೂಪದಲ್ಲಿ ಅಶ್ಲೀಲ ವಿಷಯಗಳನ್ನು ಪ್ರಕಟಿಸುವುದು ಅಥವಾ ರವಾನಿಸುವುದನ್ನು ತಡೆಗಟ್ಟುವುದು ಐಟಿ ಕಾಯಿದೆಯ ಸೆಕ್ಷನ್ 67ರ ಉದ್ದೇಶವಾಗಿದೆ. ಸ್ಪಷ್ಟ ಲೈಂಗಿಕ ಅಂಶಗಳನ್ನು ಹೊಂದಿದ ಎಂಬ ಪದವನ್ನು ಕೇವಲ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವ ದೃಶ್ಯಗಳಿಗೆ ಮಾತ್ರ ಸೀಮಿತಗೊಳಿಸಲು ಸಾಧ್ಯವಿಲ್ಲ. ಎಲೆಕ್ಟ್ರಾನಿಕ್ ರೂಪದಲ್ಲಿ ಅಶ್ಲೀಲ ವಿಷಯಗಳನ್ನು ರವಾನಿಸುವ ಅಥವಾ ಪ್ರಸಾರ ಮಾಡುವ ಮೂಲಕ ಮಹಿಳೆಯರು, ಮಕ್ಕಳು ಅಥವಾ ಯಾವುದೇ ವ್ಯಕ್ತಿಯ ಶೋಷಣೆ ತಡೆಯುವುದು ಕಾಯಿದೆಯ ಆಶಯವಾಗಿದೆ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಶೇ.12.5ರಷ್ಟು ಹೆಚ್ಚಳ, ಜುಲೈ 1ರಿಂದಲೇ ಜಾರಿಗೆ ಬರುವಂತೆ ಆದೇಶ

ರಾಜ್ಯ ಸಾರಿಗೆ ನೌಕರರ ವೇತನ ಹೆಚ್ಚಳ

ಬೆಂಗಳೂರು: ರಾಜ್ಯ ಸರಕಾರ ಸಾರಿಗೆ ನೌಕರರಿಗೆ ಸಿಹಿ ಸುದ್ದಿ ನೀಡಿದ್ದು, ಕೊನೆಗೂ ವೇತನ ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ.

ಈ ತಿಂಗಳಿನಿಂದಲೇ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯೂಕೆಆರ್‌ಟಿಸಿ, ಕೆಕೆಆರ್‌ಟಿಸಿ ಸಿಬ್ಬಂದಿಯ ಮೂಲ ವೇತನವನ್ನು ಶೇ.12.5 ರಷ್ಟು ಹೆಚ್ಚಿಸಿದ್ದು, 2025ರ ಮಾರ್ಚ್ 31ರ ಮೂಲ ವೇತನದ ಮೇಲೆ ಅನ್ವಯವಾಗಲಿದೆ. 2026ರ ಜುಲೈ 1ರ ವೇತನದಲ್ಲಿ ಜಾರಿಗೆ ಬರುವಂತೆ ಆದೇಶಿಸಿದೆ. ಇದು 1.05 ಲಕ್ಷ ಸಿಬ್ಬಂದಿಗೆ ಅನುಕೂಲವಾಗಲಿದ್ದು, ಇದರಿಂದ ಸರಕಾರಕ್ಕೆ ತಿಂಗಳಿಗೆ ಹೆಚ್ಚುವರಿಯಾಗಿ 72.80 ಕೋಟಿ ರೂಪಾಯಿ ಹೊರೆಯಾಗಲಿದೆ. ರಾಜ್ಯದ ಸಾರಿಗೆ ನಿಗಮಗಳಲ್ಲಿ ಒಟ್ಟು ಸುಮಾರು 1.05 ಲಕ್ಷ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ವೇತನ ಹೆಚ್ಚಳದಿಂದ ಅವರೆಲ್ಲರಿಗೂ ಪ್ರಯೋಜನವಾಗಲಿದೆ. ಚಾಲಕರು, ಕಾರ್ಯನಿರ್ವಾಹಕರು ಮತ್ತು ಆಡಳಿತಾಧಿಕಾರಿಗಳು ಸೇರಿದಂತೆ ಎಲ್ಲಾ ವಿಭಾಗದ ನೌಕರರು ಈ ವೇತನ ಪರಿಷ್ಕರಣೆಯ ವ್ಯಾಪ್ತಿಗೆ ಒಳಪಡುತ್ತಾರೆ.

ಈಗಾಗಲೇ ನೌಕರರಿಗೆ ಪಾವತಿಸಬೇಕಾಗಿದ್ದ ಹಳೆಯ ವೇತನದ ಹಿಂಬಾಕಿ ಮೊತ್ತದ ಮೊದಲ ಕಂತಿನ ಹಣವನ್ನು ಸರಕಾರವು ಬಿಡುಗಡೆ ಮಾಡಿದೆ. ಉಳಿದ ಹಿಂಬಾಕಿ ಮೊತ್ತವನ್ನು ಮುಂದಿನ ಕೆಲವೇ ತಿಂಗಳುಗಳಲ್ಲಿ ಹಂತ ಹಂತವಾಗಿ ಪಾವತಿಸಲಾಗುವುದು ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಜುಲೈ ತಿಂಗಳ ವೇತನದಲ್ಲಿ ಪರಿಷ್ಕೃತ ವೇತನ ಜಾರಿಗೆ ಬರುವಂತೆ ಪಾವತಿಸಲು ಸರ್ಕಾರವು ಆದೇಶ ಹೊರಡಿಸಿದ್ದು, ಈ ತಿಂಗಳಿಂದ ನೌಕರರ ಖಾತೆಗಳಿಗೆ ಪರಿಷ್ಕೃತ ವೇತನ ಜಮೆಯಾಗಲಿದೆ.

ಮುಷ್ಕರಕ್ಕೆ ಮಣಿದು ಆದೇಶ

ಸಾರಿಗೆ ಕಾರ್ಮಿಕರು ಕಳೆದ ಹಲವು ತಿಂಗಳುಗಳಿಂದ ವೇತನ ಹೆಚ್ಚಳಕ್ಕಾಗಿ ಹೋರಾಟ ನಡೆಸುತ್ತಿದ್ದರು. ವಿವಿಧ ಸಾರಿಗೆ ಸಂಘಗಳು ಮತ್ತು ಒಕ್ಕೂಟಗಳು ಸರಕಾರದ ಮೇಲೆ ಒತ್ತಡ ಹೇರಲು ಮುಷ್ಕರಗ ನಡೆಸಿದ್ದವು. ಅಂತಿಮವಾಗಿ ಸರಕಾರವು ಅವರ ಬೇಡಿಕೆಗೆ ಮಣಿದು, ಈ ಐತಿಹಾಸಿಕ ವೇತನ ಪರಿಷ್ಕರಣೆಗೆ ಅನುಮೋದನೆ ನೀಡಿದೆ. ರಾಮಲಿಂಗಾರೆಡ್ಡಿ ಅವರು ಈ ಹಿಂದೆ ಸಿದ್ದರಾಮಯ್ಯ ಸರಕಾರದ ಅವಧಿಯಲ್ಲಿ ಸಾರಿಗೆ ಸಚಿವರಾಗಿದ್ದಾಗ ನೌಕರರ ವೇತನ ಹೆಚ್ಚಳಕ್ಕೆ ಆದೇಶಿಸಿದ್ದರು.

52 ಕ್ರಿಮಿನಲ್ ಪ್ರಕರಣ ಹಿಂಪಡೆದಿದ್ದ ಸರಕಾರದ ಕ್ರಮಕ್ಕೆ ತಡೆ

ಗೃಹ ಇಲಾಖೆ, ರಾಜ್ಯ ಸರಕಾರಕ್ಕೆ ಹೈಕೋರ್ಟ್‌ನಿಂದ ನೋಟಿಸ್ ಜಾರಿ | ಸೆ.28ಕ್ಕೆ ವಿಚಾರಣೆ ಮುಂದೂಡಿಕೆ

ಬೆಂಗಳೂರು: ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 52 ಗಂಭೀರ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯುವ ಕುರಿತಂತೆ ರಾಜ್ಯ ಸರಕಾರ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ವಕೀಲ ಗಿರೀಶ್ ಭಾರದ್ವಾಜ್ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ನ್ಯಾಯಪೀಠ ಸರಕಾರದ ಆದೇಶಕ್ಕೆ ತಡೆ ನೀಡಿದೆ. ಪ್ರಕರಣ ಸಂಬಂಧ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರಕಾರಕ್ಕೆ ನೋಟಿಸ್ ಜಾರಿ ಮಾಡಿ ವಿಚಾರಣೆ ಮುಂದೂಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಮೂವರು ಹಿರಿಯ ಸಚಿವರ ಶಿಫಾರಸಿನ ಆಧಾರದಲ್ಲಿ ರಾಜ್ಯದ ವಿವಿಧ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಪ್ರಾಸಿಕ್ಯೂಷನ್ ಹಿಂಪಡೆದಿದೆ. ಈ ಸಂಬಂಧ 2025ರಲ್ಲಿ ಇದೇ ನ್ಯಾಯಾಲಯ ಹೊರಡಿಸಿರುವ ಆದೇಶಕ್ಕೆ ವಿರುದ್ಧವಾದ ನಿರ್ಧಾರವನ್ನು ಸರಕಾರ ತೆಗೆದುಕೊಂಡಿದೆ. ಆದ್ದರಿಂದ ಸರಕಾರದ ನಿರ್ಧಾರಕ್ಕೆ ತಡೆ ನೀಡಬೇಕು ಎಂದು ಪೀಠಕ್ಕೆ ವಿವರಿಸಿದರು. ಸರಕಾರದ ಪರ ವಕೀಲರು, ಸ್ವಲ್ಪ ಕಾಲಾವಕಾಶ ನೀಡಿದರೆ ಅರ್ಜಿಗೆ

ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಪೀಠ, ಆಕ್ಷೇಪಣೆ ಸಲ್ಲಿಸಲು ಸರಕಾರಕ್ಕೆ ಸಮಯ ನೀಡಲಾಗುವುದು. ಅಲ್ಲಿಯವರೆಗೆ ಸರಕಾರದ ಆದೇಶಕ್ಕೆ ತಡೆ ನೀಡಲಾಗುವುದು ಎಂದು ತಿಳಿಸಿತು. ಅಲ್ಲದೆ, ಗೃಹ ಇಲಾಖೆ ಮತ್ತು ಅಭಿಯೋಗ ಮತ್ತು ಸರಕಾರಿ ವ್ಯಾಜ್ಯಗಳ ಇಲಾಖೆಗೆ ನೋಟಿಸ್ ಜಾರಿ ಮಾಡಿ ವಿಚಾರಣೆಯನ್ನು ಸೆ.28ಕ್ಕೆ ಮುಂದೂಡಿತು.

ಪ್ರಕರಣದ ಹಿನ್ನೆಲೆ

2026ರ ಮೇ 21ರಂದು ನಡೆದ ರಾಜ್ಯ ಸಂಪುಟ ಸಭೆಯಲ್ಲಿ 52 ಪ್ರಕರಣಗಳನ್ನು ಹಿಂಪಡೆಯುವ ಪ್ರಸ್ತಾವನೆಗೆ ಅನುಮೋದನೆ ನೀಡಿತ್ತು. ಅದರಂತೆ ಮೇ 27 ರಂದು ಗೃಹ ಇಲಾಖೆ ಪ್ರಕರಣಗಳನ್ನು ಹಿಂಪಡೆಯುವಂತೆ ಸರಕಾರಿ ಅಭಿಯೋಜಕರಿಗೆ ನಿರ್ದೇಶನ ನೀಡಿ ಆದೇಶ ಹೊರಡಿಸಿತ್ತು. ಈ ಆದೇಶ ಹಾಗೂ ಸಚಿವ ಸಂಪುಟದ ತೀರ್ಮಾನ ರದ್ದುಗೊಳಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ. ಅಲ್ಲದೆ, ಕಲಬುರಗಿ ಜಿಲ್ಲೆಯ ಆಳಂದ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕೋಮು ಗಲಭೆ, ಕಾನೂನು ಬಾಹಿರ ಕೂಟ, ಸಾರ್ವಜನಿಕ ಆಸ್ತಿಪಾಸ್ತಿ ಹಾನಿ, ಕೊಲೆ ಯತ್ನ ಹಾಗೂ ಹಿಜಾಬ್ ಪ್ರತಿಭಟನೆಗೆ ಸಂಬಂಧಿಸಿದ ಗಂಭೀರ ಪ್ರಕರಣಗಳಲ್ಲಿನ ಆರೋಪಿಗಳನ್ನು 'ಅಪರಾಧಿಗಳಲ್ಲ' ಎಂದು ಬಿಂಬಿಸಿ, ಆಗಿನ ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಗೃಹ ಸಚಿವರಿಗೆ ಪತ್ರ ಬರೆದಿದ್ದರು. ದರ್ಗಾ ಹಜರತ್ ಲಾಡ್ಲೆ ಮಶೇಖ್ ಅನ್ಸಾರಿ ಸಮಿತಿಯ ಮನವಿಯ ಮೇರೆಗೆ ಖಾದರ್ ಅವರು ಈ ಶಿಫಾರಸು ಮಾಡಿದ್ದರು. ಈ ಮೂಲಕ ಕಾರ್ಯಾಂಗದ ಮೇಲೆ ರಾಜಕೀಯ ಪ್ರಭಾವ ಬೀರಿ ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡಲಾಗಿದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಒಳಮೀಸಲು ಸಂಬಂಧ ಕೆಇಎಯಿಂದ ಪತ್ರ

ಬೆಂಗಳೂರು: ಎಂಜಿನಿಯರಿಂಗ್, ಕೃಷಿ ವಿಜ್ಞಾನ, ವೆಟರಿನರಿ, ನರ್ಸಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸುಗಳ ಪ್ರವೇಶಾತಿಗೆ ಪರಿಶಿಷ್ಟ ಜಾತಿಯ ಒಳಮೀಸಲಾತಿ ಅಡಿಯಲ್ಲಿ ಸೀಟು ಕೋರಿರುವ ಅಭ್ಯರ್ಥಿಗಳ ಹಿತದೃಷ್ಟಿಯಿಂದ, ಒಳಮೀಸಲಾತಿ ನಮೂದಿತ ಜಾತಿ ಪ್ರಮಾಣಪತ್ರ ತ್ವರಿತವಾಗಿ ವಿತರಿಸುವಂತೆ ಸಂಬಂಧಿತ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಕಂದಾಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಅವರಿಗೆ ಪತ್ರ ಬರೆದು, ಪ್ರಮಾಣಪತ್ರ ವಿತರಣೆಯಲ್ಲಿ ಆಗುತ್ತಿರುವ ವಿಳಂಬವು ಅಭ್ಯರ್ಥಿಗಳ ಪ್ರವೇಶ ಪ್ರಕ್ರಿಯೆಗೆ ತೊಂದರೆ ಉಂಟುಮಾಡುತ್ತಿರುವುದನ್ನು ಗಮನಕ್ಕೆ ತಂದಿದ್ದಾರೆ. ಕೆಇಎ ಈಗಾಗಲೇ ಒಳಮೀಸಲಾತಿಯಡಿ ಸೀಟು ಕೋರಿರುವ ಅಭ್ಯರ್ಥಿಗಳು ಜುಲೈ 8ರೊಳಗೆ ಒಳಮೀಸಲಾತಿ ಮುದ್ರಿತ ಜಾತಿ ಪ್ರಮಾಣಪತ್ರದ ಆರ್‌ಡಿ ಸಂಖ್ಯೆ ಆನ್‌ಲೈನ್‌ನಲ್ಲಿ ನಮೂದಿಸಿ, ಪರಿಶೀಲನಾ ಸ್ಲಿಪ್ ಡೌನ್‌ಲೋಡ್ ಮಾಡಿಕೊಂಡ ಬಳಿಕವೇ ಕಾಲೇಜು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಸೂಚಿಸಿದೆ. ಆದರೆ ಹಲವು ಅಭ್ಯರ್ಥಿಗಳಿಗೆ ನಿಗದಿತ ಅವಧಿಯಲ್ಲಿ ಪ್ರಮಾಣಪತ್ರ ದೊರೆಯದ ಕಾರಣ ಪ್ರವೇಶ ಪ್ರಕ್ರಿಯೆಯಲ್ಲಿ ಗೊಂದಲ ಉಂಟಾಗುತ್ತಿದೆ. ಹಾಗಾಗಿ ತ್ವರಿತ ಒಳಮೀಸಲು ಪತ್ರ ನೀಡಲು ತಿಳಿಸಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ ಎಂದರು.

ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಪ್ರವೇಶ ವಿಸ್ತರಣೆ

ಬೆಂಗಳೂರು: ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಪ್ರವೇಶಕ್ಕೆ ಅರ್ಜಿ ಅವಧಿ ಜು.10ರವರೆಗೆ ವಿಸ್ತರಣೆ ಮಾಡಲಾಗಿದೆ. ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ನಡೆಸುತ್ತಿರುವ ಆರು ತಿಂಗಳ ಅವಧಿಯ ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿ ಕೋರ್ಸ್ ಅರ್ಜಿ ಸಲ್ಲಿಸುವ ಅವಧಿ ಜುಲೈ 10 ರವರೆಗೆ ವಿಸ್ತರಿಸಲಾಗಿದೆ. ಈ ತರಬೇತಿ ಕಾರ್ಯಕ್ರಮಕ್ಕೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಗಳ ಖಾಸಗಿ ಅಭ್ಯರ್ಥಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿಗಳು ಹಾಗೂ ವಿವಿಧ ಸಹಕಾರ ಸಂಘಗಳು ಮತ್ತು ಬ್ಯಾಂಕ್‌ಗಳ ಉದ್ಯೋಗಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ. ತರಬೇತಿಗೆ ಪ್ರವೇಶ ಪಡೆಯಲು ಕನಿಷ್ಠ ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು. ಖಾಸಗಿ ಅಭ್ಯರ್ಥಿಗಳಿಗೂ ಪ್ರವೇಶ ಅವಕಾಶ ಕಲ್ಪಿಸಲಾಗಿದೆ. ತರಬೇತಿಗೆ ಆಯ್ಕೆಯಾಗುವ ಎಲ್ಲ ಅಭ್ಯರ್ಥಿಗಳಿಗೆ ಮಾಸಿಕ ಶಿಷ್ಯವೇತನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 080-35541407, 90362 59781 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ಮುಖ್ಯಸ್ಥೆ ಶೈಲಾ ಬಿ.ವಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

50 ಕೋಟಿ ಹೂಡಿಕೆಯ ಸಹಭಾಗಿತ್ವ

ಬೆಂಗಳೂರು: ಸಂತಾನ ಫರ್ಟಿಲಿಟಿ ಮ್ಯಾಗ್ನೆಟ್ ಆಸ್ಪತ್ರೆಗಳ ಸಹೋಗದಲ್ಲಿ ಕಾರ್ಯತಂತ್ರದ ಸಹಭಾಗಿತ್ವ ಘೋಷಿಸಿದೆ. ಈ ಸಹಭಾಗಿತ್ವವು ಸಂಸ್ಥೆಯ ಬೆಳವಣಿಗೆಯ ಹೊಸ ಅಧ್ಯಾಯಕ್ಕೆ ನಾಂದಿ ಹಾಡಲಿದ್ದು, 50 ಕೋಟಿ ಹೂಡಿಕೆಯ ಮೂಲಕ ಬೆಂಗಳೂರಿ ನಾದ್ಯಂತ 8 ಕೇಂದ್ರಗಳ ಜಾಲವನ್ನು ನಿರ್ಮಿಸುವ ಉದ್ದೇಶ ಹೊಂದಿದೆ. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಡಾ. ಕಾಮಿನಿ ರಾವ್ ಅವರ ವೈದ್ಯಕೀಯ ಪರಂಪರೆಯ ಮೇಲೆ ಸ್ಥಾಪಿತವಾದ ಸಂತಾನ ಫರ್ಟಿಲಿಟಿ, ವೈಯಕ್ತಿಕ ಅಗತ್ಯಗಳಿಗೆ ಅನುಗುಣವಾದ, ವೈಜ್ಞಾನಿಕ ಸಾಕ್ಷ್ಯಾಧಾರಿತ ಚಿಕಿತ್ಸೆ ಹಾಗೂ ಉತ್ತಮ ಚಿಕಿತ್ಸಾ ಫಲಿತಾಂಶಗಳನ್ನು ಆದ್ಯತೆಯನ್ನಾಗಿ ಮಾಡಿಕೊಂಡು ಸಂತಾನೋತ್ಪತ್ತಿ ಆರೈಕೆಗೆ ಹೊಸ ದಿಕ್ಕು ನೀಡುವ ಗುರಿ ಹೊಂದಿದೆ. ಆಸ್ಪತ್ರೆ ಸಂಸ್ಥಾಪಕಿ ಹಾಗೂ ಅಧ್ಯಕ್ಷೆ ಡಾ. ಕಾಮಿನಿ ರಾವ್ ಅವರು ಮಾತನಾಡಿ, ಇದುವರೆಗೆ 'ಲವತ್ತತೆ ಚಿಕಿತ್ಸೆಯ ಯಶಸ್ಸನ್ನು ಎಷ್ಟು ಐವಿಎಫ್ ಚಿಕಿತ್ಸೆಗಳು ನಡೆದಿವೆ ಎಂಬುದರ ಆಧಾರದ ಮೇಲೆ ಅಳೆಯಲಾಗುತ್ತಿತ್ತು. ಆದರೆ ನಿಜವಾದ ಯಶಸ್ಸು ಉತ್ತಮ ವೈದ್ಯಕೀಯ ನಿರ್ಧಾರ, ವೈಜ್ಞಾನಿಕ ನಿಖರತೆ ಮತ್ತು ರೋಗಿ-ಕೇಂದ್ರಿತ ಆರೈಕೆಯಲ್ಲಿದೆ. ಈ ಸಹಭಾಗಿತ್ವದ ಮೂಲಕ ವಿಜ್ಞಾನ, ನೈತಿಕತೆ ಮತ್ತು ಮಾನವೀಯತೆ ಒಂದಾಗಿ ಕಾರ್ಯನಿರ್ವಹಿಸುವ ಚಿಕಿತ್ಸಾ ಮಾದರಿಯನ್ನು ವಿಸ್ತರಿಸಲು ಸಾಧ್ಯವಾಗುತ್ತಿದೆ. ಮ್ಯಾಗ್ನೆಟ್ ಹಾಸ್ಪಿಟಲ್ಸ್‌ನ ಸಮಗ್ರ ಆರೋಗ್ಯ ಸೇವಾ ವ್ಯವಸ್ಥೆಯು ನಮ್ಮ ದೃಷ್ಟಿಕೋನವನ್ನು ಇನ್ನಷ್ಟು ವಿಸ್ತರಿಸಿ, ಹೆಚ್ಚಿನ ರೋಗಿಗಳಿಗೆ ಗುಣಮಟ್ಟದ, ಸಮಾನ ಪ್ರಮಾಣದ ಚಿಕಿತ್ಸಾ ಫಲಿತಾಂಶಗಳನ್ನು ಒದಗಿಸಲು ನೆರವಾಗಲಿದೆ ಎಂದರು.

ವಿರಾಮ
ಪ್ರತಿ ಭಾನುವಾರ

{ ಎಸ್.ಟಿ.ಸೋಮಶೇಖರ್ } ಶಾಸಕ

ಹಿಂದೆ ಬಂಡೆ ಓನರ್‌ಗಳ ಕರೆದು ಸಭೆ ಲೀಗಲ್ ಆಗಿ ಬ್ಲ್ಯಾಸ್ಟ್ ಮಾಡಿ ಅಂತ ಹೇಳಿದ್ದೆ. ಗರ್ಭಿಣಿ ಚಿರತೆ ಸತ್ತಾಗಲೇ ನಾನು ವಿಷಯ ಪ್ರಸ್ತಾಪ ಮಾಡಿದ್ದೆ. ಕೂಡಲೇ ಕ್ವಾರಿ ಮಾಲೀಕನ ಬಂಧನ ಮಾಡಬೇಕು. ಪ್ರಬಲವಾಗಿದ್ದಾರೆ, ಕೇಸ್ ಮುಚ್ಚಿ ಹಾಕಿ ಬಿಡ್ತಾರೆ. ಹೀಗಾಗಿ ಸೂಕ್ತ ಕ್ರಮ ಆಗಬೇಕು. ಸತ್ತವರ ಕುಟುಂಬಗಳಿಗೆ ನ್ಯಾಯ ಕೊಡಿಸಬೇಕು.



ಜುಲೈ 10ರಿಂದ ಅನಾಥ ವಾಹನಗಳ ವಿರುದ್ಧ ಅಭಿಯಾನ | 15 ರ ನಂತರ ಬೃಹತ್ ಕಟ್ಟಡ ತ್ಯಾಜ್ಯ ಹಾಗೂ ಗಿಡಗಂಟಿಗಳ ತೆರವು ಕಾರ್ಯಾಚರಣೆ

ಬೀದಿ ಬದಿ ವ್ಯಾಪಾರಿಗಳನ್ನು ಸ್ಥಳಾಂತರಿಸುತ್ತಿದ್ದೇವೆ: ಕೃಷ್ಣ ಬೈರೇಗೌಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರಿನಲ್ಲಿ ಪಾದಚಾರಿ ಮಾರ್ಗಗಳನ್ನು ಸಾರ್ವಜನಿಕರಿಗೆ ಸುರಕ್ಷಿತ ಹಾಗೂ ಸುಗಮವಾಗಿ ಲಭ್ಯವಾಗುವಂತೆ ಮಾಡಲು ಕೈಗೊಂಡಿರುವ ಒತ್ತುವರಿ ತೆರವು ಕಾರ್ಯಾಚರಣೆಯ ಭಾಗವಾಗಿ ಬೀದಿ ಬದಿ ವ್ಯಾಪಾರಿಗಳನ್ನು ಸಂಪೂರ್ಣವಾಗಿ ತೆರವುಗೊಳಿಸುವುದಿಲ್ಲ, ಬದಲಾಗಿ ಪ್ರಮುಖ ಆರ್ಟಿರಿಯಲ್ ಹಾಗೂ ಸಬ್ ಆರ್ಟಿರಿಯಲ್ ರಸ್ತೆಗಳಿಂದ ವಾರ್ಡ್ ರಸ್ತೆಗಳಿಗೆ ಸ್ಥಳಾಂತರಿಸಲಾಗುತ್ತಿದೆ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಜಿಬಿಎ ವ್ಯಾಪ್ತಿಯ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ಕುರಿತು ಅಧಿಕಾರಿಗಳೊಂದಿಗೆ ನಡೆದ ವರ್ಚುವಲ್ ಸಭೆಯಲ್ಲಿ ಮಾತನಾಡಿದ ಅವರು, ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸಿರುವ ಬೀದಿ ಬದಿ ವ್ಯಾಪಾರಿಗಳಷ್ಟೇ ಅಲ್ಲದೆ, ಅನಾಥ ವಾಹನಗಳು, ಅಕ್ರಮ ಪಾರ್ಕಿಂಗ್, ವಿವಿಧ ಅಡೆತಡೆಗಳು ಹಾಗೂ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾಗಿರುವ ಎಲ್ಲ ರೀತಿಯ ಅತಿಕ್ರಮಣಗಳನ್ನು ಹಂತ ಹಂತವಾಗಿ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಾರ್ವಜನಿಕರಿಂದ ಈ ಕಾರ್ಯಾಚರಣೆಗೆ ಉತ್ತಮ ಸ್ಪಂದನೆ ದೊರೆತಿರುವುದನ್ನು ಉಲ್ಲೇಖಿಸಿದ ಸಚಿವರು, ಪ್ರಮುಖ ರಸ್ತೆಗಳನ್ನು ಹೊರತುಪಡಿಸಿ ಉಳಿದ ವಾರ್ಡ್ ರಸ್ತೆಗಳಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಬೀದಿ ಬದಿ ವ್ಯಾಪಾರಿಗಳು ವ್ಯಾಪಾರ ನಡೆಸಲು ಅವಕಾಶ ಕಲ್ಪಿಸುವ ಬಗ್ಗೆ ಸಮರ್ಪಕ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸರಕಾರದ ಉದ್ದೇಶ ಯಾರ ಜೀವನೋಪಾಯಕ್ಕೂ ಧಕ್ಕೆ ತರುವುದು ಅಲ್ಲ, ಆದರೆ ಪಾದಚಾರಿಗಳ ಸುರಕ್ಷತೆ ಕಾಪಾಡುವುದು ಎಂದರು.

ಒತ್ತುವರಿ ತೆರವಾದ ಸ್ಥಳಗಳಲ್ಲಿ ತಕ್ಷಣ ಅಭಿವೃದ್ಧಿ: ಪಾದಚಾರಿ ಮಾರ್ಗಗಳಿಂದ ಒತ್ತುವರಿ ತೆರವುಗೊಳಿಸಿದ ಕೂಡಲೇ ಅಭಿವೃದ್ಧಿ ಕಾಮಗಾರಿ ಆರಂಭಿಸಬೇಕು. ಉತ್ತಮ ಗುಣಮಟ್ಟದ ಪಾದಚಾರಿ ಮಾರ್ಗ ನಿರ್ಮಿಸಿ, ನಾಗರಿಕರಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು. ಜತೆಗೆ ಇತರ ರಸ್ತೆಗಳಲ್ಲಿ ಒತ್ತುವರಿ ತೆರವು ಕಾರ್ಯವೂ ನಿರಂತರವಾಗಿ ಸಾಗಬೇಕು. ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲೂ ಒತ್ತುವರಿ ತೆರವು ಪೂರ್ಣಗೊಂಡ ನಂತರ ಸ್ಥಳೀಯ ನಿವಾಸಿಗಳೊಂದಿಗೆ ಅಭಿವೃದ್ಧಿಪಡಿಸಿದ ಪಾದಚಾರಿ ಮಾರ್ಗಗಳ ಪರಿಶೀಲನೆ ನಡೆಸಿ, ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ನಗರದ ವಿವಿಧ ಭಾಗಗಳಲ್ಲಿ ಬೃಹತ್ ಕಟ್ಟಡ ತ್ಯಾಜ್ಯ ಹಾಗೂ ಗಿಡಗಂಟಿಗಳ ತೆರವು ಕಾರ್ಯಾಚರಣೆ ಜುಲೈ 15ರ ನಂತರ ಆರಂಭಿಸಲು ಯೋಜನೆ ರೂಪಿಸಲಾಗುತ್ತಿದೆ. ಈ ಕಾರ್ಯ ನಗರ ಪಾಲಿಕೆ, ಮೆಟ್ರೋ ಹಾಗೂ ರೈಲ್ವೆ ಇಲಾಖೆಗಳ ಸಹಯೋಗದಲ್ಲಿ ನಡೆಸಿ ನಗರವನ್ನು ಮತ್ತಷ್ಟು ಸ್ವಚ್ಛ ಮತ್ತು ಸುಂದರಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಮನೆಗಳು ಹಾಗೂ ವಾಣಿಜ್ಯ ಕಟ್ಟಡಗಳ ಮುಂಭಾಗದಲ್ಲಿ ವಾಹನಗಳ ಪ್ರವೇಶಕ್ಕಾಗಿ ಪಾದಚಾರಿ ಮಾರ್ಗಗಳ ಮೇಲೆಯೇ ನಿರ್ಮಿಸಿರುವ ರ‍್ಯಾಂಪ್‌ಗಳು ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟುಮಾಡುತ್ತಿವೆ. ಆದ್ದರಿಂದ ಮುಂದಿನ ಹಂತದಲ್ಲಿ ಇಂತಹ ಅಕ್ರಮ ರ‍್ಯಾಂಪ್‌ಗಳನ್ನು ತೆರವುಗೊಳಿಸುವ ವಿಶೇಷ ಕಾರ್ಯಾಚರಣೆ ಕೈಗೊಳ್ಳುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ವಿವಿಧ ನಗರ ಪಾಲಿಕೆಗಳ ಆಯುಕ್ತರು, ಮುಖ್ಯ ಅಭಿಯಂತರರು ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಾರ್ವಜನಿಕರ ಸಹಕಾರಕ್ಕೆ ಮನವಿ

ಬೆಂಗಳೂರಿನ ಜನರ ಬಹುವರ್ಷಗಳ ಬೇಡಿಕೆ ಹಾಗೂ ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗಗಳಿಂದ ಒತ್ತುವರಿ ತೆರವುಗೊಳಿಸಲಾಗುತ್ತಿದೆ. ನಗರದ ಎಲ್ಲ ರಸ್ತೆಗಳಲ್ಲಿ ಅಲ್ಲ, ಕೇವಲ ಶೇ.20ರಷ್ಟು ಪ್ರಮುಖ ರಸ್ತೆಗಳಲ್ಲಿ ಮಾತ್ರ ಈ ಕಾರ್ಯಾಚರಣೆ ನಡೆಯುತ್ತಿದ್ದು, ಉಳಿದ ಶೇ.80ರಷ್ಟು ರಸ್ತೆಗಳಲ್ಲಿ ವ್ಯಾಪಾರ ನಡೆಸಲು ಅವಕಾಶವಿದೆ. ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸಿರುವ ಕಟ್ಟಡ ಮಾಲೀಕರು ಹಾಗೂ ವ್ಯಾಪಾರಿಗಳು ಸ್ವಯಂಪ್ರೇರಿತವಾಗಿ ಅತಿಕ್ರಮಣ ತೆರವುಗೊಳಿಸಿ ಸಾರ್ವಜನಿಕರಿಗೆ ಸುರಕ್ಷಿತ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ಮನವಿ ಮಾಡಿದರು.



ಪಾದಚಾರಿ ಮಾರ್ಗ ಬಳಸಲು ಸಾಧ್ಯವಾಗದೆ ಪ್ರತಿವರ್ಷ ನೂರಾರು ಜನರು ಅಪಘಾತಗಳಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಈ ದುರ್ಘಟನೆ ತಡೆಯಲು ಸುರಕ್ಷಿತ ಪಾದಚಾರಿ ಮಾರ್ಗ ನಿರ್ಮಾಣ ಸರಕಾರದ ಆದ್ಯತೆಯಾಗಿದ್ದು, ಬೆಂಗಳೂರನ್ನು ಸುಂದರ, ಸುರಕ್ಷಿತ ಮತ್ತು ವ್ಯವಸ್ಥಿತ ನಗರವನ್ನಾಗಿ ರೂಪಿಸಲು ಸಾರ್ವಜನಿಕರು ಸಹಕರಿಸಬೇಕು.

-ಕೃಷ್ಣ ಬೈರೇಗೌಡ, ಬೆಂಗಳೂರು ಅಭಿವೃದ್ಧಿ ಸಚಿವ

ಜುಲೈ 10ರಿಂದ ಅನಾಥ ವಾಹನಗಳ ವಿರುದ್ಧ ಅಭಿಯಾನ

ನಗರದ ರಸ್ತೆ ಬದಿಗಳಲ್ಲಿ ದೀರ್ಘಕಾಲದಿಂದ ನಿಂತಿರುವ ಅನಾಥ ವಾಹನಗಳನ್ನು ತೆರವುಗೊಳಿಸುವ ವಿಶೇಷ ಕಾರ್ಯಾಚರಣೆ ಜುಲೈ 10ರಿಂದ ಆರಂಭಿಸಲಾಗುವುದು. ನಗರ ಪಾಲಿಕೆ ಹಾಗೂ ಸಂಚಾರಿ ಪೊಲೀಸರ ಸಮನ್ವಯದಲ್ಲಿ ಕಾರ್ಯಯೋಜನೆ ರೂಪಿಸಿ ಈ ಅಭಿಯಾನ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಗುರುವಾರ ಚುನಾವಣಾ ಗಣತಿಗೆ ಸಂಬಂಧಿಸಿದ ಮೂರು ಪ್ರಮುಖ ನಮೂನೆಗಳನ್ನು ಭರ್ತಿ ಮಾಡಿ ನಿಯೋಜಿತ ಬೂತ್ ಮಟ್ಟದ ಅಧಿಕಾರಿಗಳಿಗೆ ಅಧಿಕೃತವಾಗಿ ಸಲ್ಲಿಸಿದರು.

ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಯವರ ನೇತೃತ್ವದ ನಿಯೋಗ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರನ್ನು ಕುಮಾರಪಾರ್ಕ್ ಸರಕಾರಿ ಅತಿಥಿ ಗೃಹದಲ್ಲಿ ಗುರುವಾರ ಭೇಟಿ ಮಾಡಿ, ಭೋವಿ ಸಮಾಜದ ಅಭಿವೃದ್ಧಿ ವಿಚಾರಗಳ ಬಗ್ಗೆ ಚರ್ಚಿಸಿತು. ನಿಯೋಗದಲ್ಲಿ ಮಾಜಿ ಸಚಿವ ಶಿವರಾಜ ತಂಗಡಗಿ, ಅರವಿಂದ ಲಿಂಬಾವಳಿ, ಪಾವಗಡ ಶಾಸಕ ವೆಂಕಟೇಶ, ಪುಲಕೇಶಿ ನಗರ ಶಾಸಕ ಎ.ಸಿ. ಶ್ರೀನಿವಾಸ, ಭೋವಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಬೈಯಪ್ಪ, ಶಾಂತಕುಮಾರ, ಶಿವಮೊಗ್ಗ ರವಿಕುಮಾರ ಸೇರಿ ಹಲವರಿದ್ದರು.

10.40 ಕಿ.ಮೀ ಫುಟ್‌ಪಾತ್ ಒತ್ತುವರಿ ತೆರವು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪಾದಚಾರಿಗಳಿಗೆ ಸುರಕ್ಷಿತ ಹಾಗೂ ಅಡೆತಡೆಯಿಲ್ಲದ ಸಂಚಾರ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಬೆಂಗಳೂರು ಅಭಿವೃದ್ಧಿ ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡರ ನಿರ್ದೇಶನದಂತೆ ನಗರದ ವಿವಿಧ ವಲಯಗಳಲ್ಲಿ ಗುರುವಾರವೂ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರಿಯಿತು.

ಉತ್ತರ, ದಕ್ಷಿಣ, ಪೂರ್ವ, ಕೇಂದ್ರ, ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಏಕಕಾಲಕ್ಕೆ ಕಾರ್ಯಾಚರಣೆ ನಡೆಸಿ, ಅನಧಿಕೃತವಾಗಿ ನಿರ್ಮಿಸಿದ್ದ ಅಂಗಡಿಗಳು, ಮೆಟ್ಟಿಲುಗಳು, ಶೆಡ್‌ಗಳು ಹಾಗೂ ಇತರೆ ಅತಿಕ್ರಮಣಗಳನ್ನು ತೆರವುಗೊಳಿಸಲಾಯಿತು.

ಪಾಲಿಕೆವಾರು ತೆರವು ಕಾರ್ಯಚರಣೆ: ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಎರಡನೇ ದಿನದ ಕಾರ್ಯಾಚರಣೆಯಲ್ಲಿ ಒಟ್ಟು 10.40 ಕಿಲೋಮೀಟರ್ ಉದ್ದದ ಪಾದಚಾರಿ ಮಾರ್ಗ ಒತ್ತುವರಿಯಿಂದ ಮುಕ್ತಗೊಳಿಸಲಾಯಿತು. ಈ ವೇಳೆ 39 ಬೀದಿಬದಿ ಅಂಗಡಿಗಳು ಹಾಗೂ 104 ಫುಟ್‌ಪಾತ್ ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ. ಕಾರ್ಯಾಚರಣೆಗೆ 127 ಸಿಬ್ಬಂದಿ, 30 ಟ್ರ್ಯಾಕ್ಟರ್‌ಗಳು, ಜೆಸಿಬಿ ಹಾಗೂ ಕ್ರೇನ್ ಬಳಸಿಕೊಳ್ಳಲಾಯಿತು.

ಜಯನಗರ 11ನೇ ಮುಖ್ಯರಸ್ತೆ, 30ನೇ ಅಡ್ಡರಸ್ತೆ, ಜೆ.ಪಿ.ನಗರ, ಬನ್ನೇರುಘಟ್ಟ ಮುಖ್ಯ ರಸ್ತೆ, ಪದ್ಮನಾಭನಗರ, ಬೊಮ್ಮನಹಳ್ಳಿ, ಎಚ್‌ಎಸ್‌ಆರ್ ಲೇಔಟ್, ಕೋರಮಂಗಲ, ಬಿಟಿಎಂ ಲೇಔಟ್, ಸರ್ಜಾಪುರ ಹಾಗೂ ಕೂಡ್ಲು ಮುಖ್ಯರಸ್ತೆ ಸೇರಿದಂತೆ ಹಲವು ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಿ ಪಾದಚಾರಿ ಮಾರ್ಗ ಮುಕ್ತಗೊಳಿಸಲಾಗಿದೆ ಎಂದು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ. ಎನ್. ರಮೇಶ್ ತಿಳಿಸಿದರು.

ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ವಲಯ-1 ಹಾಗೂ ವಲಯ- 2ರಲ್ಲೂ ಕಾರ್ಯಾಚರಣೆ ನಡೆಸಿ 12.7 ಕಿಲೋಮೀಟರ್ ಪಾದಚಾರಿ ಮಾರ್ಗ ಒತ್ತುವರಿ ಮಾಡಲಾಯಿತು. ಸಹಕಾರನಗರ, ಕೊಡಿ ಗೇಹಳ್ಳಿ, ವಿದ್ಯಾರಣ್ಯಪುರ, ಪುಲಿಕೇಶಿನಗರ, ದಿನ್ನೂರು ರಸ್ತೆ, ಎಚ್‌ಎಸ್‌ಆರ್ ಲೇಔಟ್, ಹೆಬ್ಬಾಳದ ಗಂಗಾನಗರ, ದಾಸರಹಳ್ಳಿ, ಹೆಸರಘಟ್ಟ ಮುಖ್ಯರಸ್ತೆ, ಬ್ಯಾಟರಾಯನಪುರ, ರಾಚೇನಹಳ್ಳಿ ಹಾಗೂ ಥಣಸಂದ್ರ ಸೇರಿದಂತೆ ಹಲವು ಪ್ರದೇಶಗಳಲ್ಲಿ ಫುಟ್‌ಫಾತ್ ಅತಿಕ್ರಮಣ ತೆರವುಗೊಳಿಸಿದರು.

ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ವೈಟ್ ಫೀಲ್ಡ್ ವಿಭಾಗದಲ್ಲಿ ವರ್ತೂರು ಕೋಡಿ, ಹೂಡಿ ಮೇಲ್ಸೇತುವೆಯಿಂದ ಅಯ್ಯಪ್ಪನಗರ ಮುಖ್ಯರಸ್ತೆ ಹಾಗೂ ಹೊರ ವರ್ತುಲ ರಸ್ತೆಯ ಬೆಳ್ಳಂದೂರು-ಮರಾಠಹಳ್ಳಿ ವಿಭಾಗದಲ್ಲೂ ಪಾದಚಾರಿ ಮಾರ್ಗಗಳನ್ನು ಒತ್ತುವರಿಯಿಂದ ಮುಕ್ತಗೊಳಿಸಲಾಯಿತು.

ಕೇಂದ್ರ ನಗರ ಪಾಲಿಕೆಯು ನಗರದಲ್ಲಿ ಪಾದಚಾರಿಗಳ ಸುರಕ್ಷಿತ ಸಂಚಾರಕ್ಕೆ ಅಡ್ಡಿಯಾಗಿದ್ದ ಒತ್ತುವರಿಗಳನ್ನು ತೆರವುಗೊಳಿಸುವ ಉದ್ದೇಶದಿಂದ ಗುರುವಾರ ನಗರದ ಆರು ವಿಭಾಗಗಳ 11 ಪ್ರಮುಖ ರಸ್ತೆಗಳಲ್ಲಿ ಒಟ್ಟು 8.55 ಕಿಲೋಮೀಟರ್ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮಿಷನ್ ರಸ್ತೆ, ಕಾರ್ಪೊರೇಷನ್ ವೃತ್ತ, ಇಂದಿರಾನಗರ 100 ಅಡಿ ರಸ್ತೆ, ಹಳೆ ಮದ್ರಾಸ್ ರಸ್ತೆ, ಅಶೋಕ ಪಿಲ್ಲರ್ ರಸ್ತೆ ಹಾಗೂ ಚಾಮರಾಜಪೇಟೆ 4ನೇ ಮುಖ್ಯರಸ್ತೆ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗ ಅತಿಕ್ರಮಿಸಿದ್ದ ಅಂಗಡಿಗಳು, ತಳ್ಳುಗಾಡಿಗಳು, ಜಾಹೀರಾತು ಫಲಕಗಳು ಮತ್ತು ತಾತ್ಕಾಲಿಕ ಶೆಡ್ ತೆರವುಗೊಳಿಸಲಾಯಿತು.

ಸರಕಾರ ಪಾದಚಾರಿಗಳ ಅನುಕೂಲಕ್ಕಾಗಿ ಫುಟ್‌ಫಾತ್‌ಗಳನ್ನು ತೆರವುಗೊಳಿಸುವ ಉದ್ದೇಶ ಹೊಂದಿರುವುದನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಸಾರ್ವಜನಿಕರಿಗೆ ತೊಂದರೆಯಾಗಬಾರದು ಎಂಬುದೂ ನಮ್ಮ ಆಶಯವೇ ಆಗಿದೆ. ಆದರೆ ಯಾವುದೇ ಪರ್ಯಾಯ ವ್ಯವಸ್ಥೆ ಕಲ್ಪಿಸದೆ, ಏಕಾಏಕಿ ತೆರವುಗೊಳಿಸುವುದು ನಮ್ಮಂತಹ ಸಾವಿರಾರು ಬಡ ವ್ಯಾಪಾರಿಗಳ ಜೀವನ ಸಂಕಷ್ಟಕ್ಕೆ ತಳ್ಳುತ್ತದೆ.

-ರಾಚಮ್ಮ, ವ್ಯಾಪಾರಿ

ನಾನು ಕಳೆದ 15 ವರ್ಷಗಳಿಂದ ಇದೇ ಸ್ಥಳದಲ್ಲಿ ಸಣ್ಣ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇನೆ. ಪ್ರತಿದಿನ ಬೆಳಿಗ್ಗೆಯಿಂದ ರಾತ್ರಿ ತನಕ ದುಡಿದು ಬರುವ ಆದಾಯವೇ ನಮ್ಮ ಕುಟುಂಬದ ಏಕೈಕ ಜೀವನಾಧಾರ. ಈ ವ್ಯಾಪಾರದಿಂದಲೇ ಮನೆಯ ಬಾಡಿಗೆ, ಮಕ್ಕಳ ಶಿಕ್ಷಣ, ದಿನನಿತ್ಯದ ಆಹಾರ, ವಿದ್ಯುತ್ ಬಿಲ್ ಸೇರಿದಂತೆ ಎಲ್ಲ ಖರ್ಚುಗಳನ್ನು ನಿಭಾಯಿಸುತ್ತಿದ್ದೇವೆ. ಈ ತೆರವು ಕಾರ್ಯ ನಮ್ಮ ಜೀವನವನ್ನು ಬೀದಿಗೆ ತಳ್ಳಿದೆ.

-ರಮೇಶ್, ಹಣ್ಣು ವ್ಯಾಪಾರಿ

ಬಿ.ಕೆ.ಶ್ರೀನಿವಾಸ್ ಜೀವನಯಾನ ಪುಸ್ತಕ ಬಿಡುಗಡೆ

ಬೆಂಗಳೂರು: ನಗರದ ಗಾಂಧಿ ಭವನದಲ್ಲಿ ನಿರ್ಮಾಪಕ ಬಿ.ಕೆ.ಶ್ರೀನಿವಾಸ್ ಅವರ ಸಿನಿಮಾ, ವ್ಯಾಪಾರ, ಹೋರಾಟ, ಅಜೇಯ ಮನೋಬಲದ ಯಶೋಗಾಥೆಯನ್ನೊಳಗೊಂಡ ಬಿ.ಕೆ.ಶ್ರೀನಿವಾಸ ಒಂದು ಅಸಾಮಾನ್ಯ ಜೀವನಯಾನ ಪುಸ್ತಕವನ್ನು ನೊಣವಿನಕೆರೆ ಕಾಡು ಸಿದ್ದೇಶ್ವರ ಮಠದ ಶ್ರೀಕರಿವೃಷಭ ದೇಶಿಕೇಂದ್ರ, ಶಿವಯೋಗೀಶ್ವರ ಸ್ವಾಮಿಜಿ ಲೋಕಾರ್ಪಣೆಗೊಳಿಸಿದರು.

ಈ ಕುರಿತು ಬಿ.ಕೆ.ಶ್ರೀನಿವಾಸ್ ಮಾತನಾಡಿ, ಗುಡಿಸಲಿನಲ್ಲಿ ಹುಟ್ಟಿದ ನಾನು ಓದಿದ್ದು 9 ನೇ ತರಗತಿ. ಸಿನಿಮಾ ಮೇಲೆ ತುಂಬಾ ಹುಚ್ಚಿತ್ತು ಗಳಿಸಿದ್ದನ್ನು ಅದರಲ್ಲೇ ಸ್ವಲ್ಪ ಕಳೆದುಕೊಂಡೆ. ನೊಣವಿನಕೆರೆ ಕಾಡು ಸಿದ್ದೇಶ್ವರ ಮಠದ ಗುರುಗಳು ನನ್ನನ್ನು ಆಶೀರ್ವದಿಸಲು ಬಂದಿದ್ದಾರೆ. ಆರು ವರ್ಷಗಳ ಹಿಂದೆ ನನ್ನ ಹಾಗೂ ಗುರುಗಳ ಭೇಟಿಯಾಗಿತ್ತು ಎಂದು ತಾವು ಜೀವನದಲ್ಲಿ ಬೆಳೆದುಬಂದ ಹಾದಿ ಸ್ಮರಿಸಿದರು.

ಸಾ.ರಾ.ಗೋವಿಂದು ಮಾತನಾಡಿ, ಶ್ರೀನಿವಾಸ್ ಅವರು ತಾವು ಬೆಳೆದುಬಂದ ದಾರಿ ಹೇಳಿಕೊಂಡಿದ್ದಾರೆ. ನಾನು ಹತ್ತು ಸಾವಿರ ರಾಜಕುಮಾರ್ ಅಭಿಮಾನಿಗಳ ಸಂಘ ಮಾಡಿದ್ದೆ. ಸುರ್ವೆ ಅವರ ಜತೆ ಸೇರಿ ಇವರೂ ಅಭಿಮಾನಿಗಳ ಸಂಘ ಮಾಡಿದ್ದರು. ಅಲ್ಲಿಗೆ ನಾನು ಕೂಡ ಹೋಗಿದ್ದೆ. ಅವರ ಚಟುವಟಿಕೆ ನೋಡಿದಾಗಲೇ ಹೇಳಿದ್ದೆ. ಬೆಂಕೋಶ್ರೀ ಮುಂದೆ ದೊಡ್ಡ ವ್ಯಕ್ತಿಯಾಗಿ ಬೆಳೆಯುತ್ತಾರೆ ಅಂತ. ಅವರು ನನ್ನ ಮಗನನ್ನು ಮೊದಲಬಾರಿಗೆ ಹೀರೋ ಮಾಡಿದ್ದರು. ಆದರೆ ಅವರನ್ನು ಚಿತ್ರರಂಗ ಕೈ ಹಿಡಿಯಲಿಲ್ಲ. ಆದರೆ ಅವರು ತಮ್ಮ ನೋವನ್ನು ಎಲ್ಲೂ ಹೇಳಿಕೊಳ್ಳಲಿಲ್ಲ ಎಂದರು. ಕಾರ್ಯಕ್ರಮದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾಜಿ ಅಧ್ಯಕ್ಷ ಕೆ.ವಿ.ಚಂದ್ರಶೇಖರ್, ಕಲಾವಿದೆ ಜಾಹ್ನವಿ ಸೇರಿದಂತೆ ಇನ್ನಿತರರು ಇದ್ದರು.

ಕಾರ್ಯಕ್ರಮವನ್ನು ನೊಣವಿನಕೆರೆ ಕಾಡು ಸಿದ್ದೇಶ್ವರ ಮಠದ ಶ್ರೀಕರಿವೃಷಭ ದೇಶಿಕೇಂದ್ರ, ಶಿವಯೋಗೀಶ್ವರ ಸ್ವಾಮೀಜಿ ಲೋಕಾರ್ಪಣೆಗೊಳಿಸಿದರು. ಈ ವೇಳೆ ಪತ್ರಕರ್ತ ಜೋಗಿ, ಬಿ.ಕೆ.ಶ್ರೀನಿವಾಸ್, ಸಾ.ರಾ.ಗೋವಿಂದು ಸೇರಿದಂತೆ ಇನ್ನಿತರರು ಇದ್ದರು.

ಬೆಂಕೋಶ್ರೀ ಅವರ ಸಿನಿಮಾಗಳನ್ನು ನೋಡಿ, ಅದರ ಬಗ್ಗೆ ಬರೆದಿದ್ದೇವೆ. ಅವರ ಹಾಲು ಶ್ರೀನಿವಾಸ ಅಲ್ಲ, ಆಲ್ ಶ್ರೀನಿವಾಸ, ಒಳ್ಳೆಯ ಸಿನಿಮಾ ಮಾಡುವುದು ಅವರ ಫ್ಯಾಷನ್ ಆಗಿತ್ತು. ಅವರ ಸಾಧನೆ ದೊಡ್ಡದು.

-ಜೋಗಿ ಪತ್ರಕರ್ತ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ ಅವರನ್ನು ಕಾಂಗ್ರೆಸ್ ಮುಖಂಡರಾದ ಬಿ.ವಿ ಜಯರಾಮು ಅ ವರು ಜನುಮದಿನದ ಪ್ರಯುಕ್ತ ಕಚೇರಿಗೆ ಭೇಟಿ ನೀಡಿ ಶುಭ ಕೋರಿದರು. ಈ ವೇಳೆ ಕಾಂಗ್ರೆಸ್ ಹಿಂದುಳಿದ ವರ್ಗಗಳ ಪ್ರಧಾನ ಕಾರ್ಯದರ್ಶಿಗಳಾದ ಲಕ್ಷ್ಮಿಪತಿ ಹಾಗೂ ಶಿವರಾಜ್ ಸೇರಿದಂತೆ ಇನ್ನಿತರರು ಇದ್ದರು.

ರಿಯಲ್ ಎಸ್ಟೇಟ್ ರಾಜಕಾರಣದ ಭಾಗವಲ್ಲ

ಬೆಂಗಳೂರು: ದುರಂತ ನಡೆದ ಕ್ರಷರ್ ಕ್ವಾರಿ ಯಾರದೇ ಆದರೂ ಕ್ರಮ ಜರುಗಿಸಬೇಕು ಎಂದು ವಿಧಾನಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲೂಕಿನ ಮಾದಪಟ್ಟಣದ ಕ್ರಷರ್ ಕ್ವಾರಿ ದುರಂತದಲ್ಲಿ ಗಾಯಗೊಂಡು ಕೆಂಗೇರಿಯ ಆರ್.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಾರ್ಮಿಕರನ್ನು ಭೇಟಿ ಮಾಡಿದ ಆರೋಗ್ಯ ವಿಚಾರಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ರಾಜಕಾರಣ ಮಾಡುವುದು ಗಣಿಗಾರಿಕೆಗಾಗಿ ಅಲ್ಲ. ರಿಯಲ್ ಎಸ್ಟೇಟ್, ಗಣಿಗಾರಿಕೆ ರಾಜಕಾರಣದ ಭಾಗವಲ್ಲ. ಜನರ ಸಮಸ್ಯೆಗೆ ಸ್ಪಂದಿಸಿ ಕೆಲಸ ಮಾಡುವುದು ರಾಜಕಾರಣದ ಭಾಗ ಎಂದರು. ವಿವಿಧ ಗಲಭೆ ಪ್ರಕರಣಹಿಂಪಡೆಯುವ ಸರಕಾರದ ನಿರ್ಧಾರಕ್ಕೆ ಕೋರ್ಟ್ ತಡೆ ನೀಡಿದ್ದು, ಸ್ವಾಗತಾರ್ಹ ಎಂದರು.

ವಿಬಿಜಿ ರಾಮ್ ಜಿ ಜಾರಿ ಆದೇಶ: ಈಶ್ವರ ಖಂಡ್ರೆ

ಬೆಂಗಳೂರು: ಮನ್ರೇಗಾದ ಬದಲಾದ ರೂಪ ವಿಬಿಜಿ ರಾಮ್ ಜಿಯ ಬಗ್ಗೆ ಆಕ್ಷೇಪಣೆಯೊಂದಿಗೆ ರಾಜ್ಯ ಸರಕಾರ ಜೂ.1ರಿಂಲೇ ಜಾರಿಗೆ ತಂದಿದ್ದು, ಆದೇಶ ಹೊರಬೀಳಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದ್ದಾರೆ.

ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಇಂದು ಸಚಿವ ಸಂಪುಟ ಸಭೆಯಲ್ಲಿ ವಿಬಿಜಿ ರಾಮ್ ಜಿಗೆ ರಾಜ್ಯದ ಪಾಲು ಭರಿಸುವ ಬಗ್ಗೆ ಚರ್ಚಿಸಿದ್ದು, ಇದರಿಂದ ಆರ್ಥಿಕ ಹೊರೆ ಬೀಳಲಿದೆ. ಆದರೂ ಬಡವರ, ದಲಿತರ, ವಂಚಿತರ, ರೈತರ, ಮಹಿಳೆಯರ ಹಿತ ಕಾಯಲು ಯೋಜನೆ ಜಾರಿಗೆ ನಿರ್ಧರಿಸಿದ್ದು, ಬಹುತೇಕ ಗುರುವಾರ ಅಧಿಸೂಚನೆ ಹೊರ ಬೀಳಲಿದೆ ಎಂದರು.

ರಾಜ್ಯ ಸರ್ಕಾರದ ಮೇಲೆ ವಿಬಿಜಿ ರಾಮ್ ಜೀಯಿಂದ 6 ಪಟ್ಟು ಹೆಚ್ಚಿನ ಹೊರೆ ಬೀಳುತ್ತದೆ. ಈ ಹಿಂದೆ ಮಹಾತ್ಮಾಗಾಂಧೀ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಯಲ್ಲಿದ್ದ 20 ವರ್ಷಗಳಲ್ಲಿ 90:10ರ ಅನುಪಾತದಲ್ಲಿ ಯೋಜನೆ ಜಾರಿಯಲ್ಲಿತ್ತು. ಮನ್ರೇಗಾಗೆ ವೆಚ್ಚವಾಗಿರುವ ಒಟ್ಟು 61 ಸಾವಿರ ಕೋಟಿ ರು.ಗಳ ಪೈಕಿ ಕೇಂದ್ರ ಸರಕಾರ 56 ಸಾವಿರ ಕೋಟಿಗೂ ಅಧಿಕ ಹಣ ಭರಿಸಿತ್ತು. ರಾಜ್ಯ ಸರಕಾರ 4800 ಕೋಟಿ ರು. ಮಾತ್ರ ವೆಚ್ಚ ಮಾಡಿತ್ತು ಎಂದರು.

ಕೇಂದ್ರ ಸರಕಾರ ಈ ವರ್ಷ ರಾಜ್ಯಕ್ಕೆ ವಿಬಿಜಿ ರಾಮ್ ಜಿ ಅಡಿ 5709 ಕೋಟಿ ರು. ಹಂಚಿಕೆ ಮಾಡಿದೆ. ರಾಜ್ಯ ಸರಕಾರ ಒಂದೇ ವರ್ಷದಲ್ಲಿ 3806 ಕೋಟಿ ವೆಚ್ಚ ಮಾಡಬೇಕಾಗಿ ಬಂದಿದೆ ಇದು ದೊಡ್ಡ ಹೊರೆಯಾಗಿದೆ. ಹೀಗಾಗಿ 90:10 ಅನುಪಾತವನ್ನೇ ಮುಂದುವರಿಸಲು ಕೇಂದ್ರಕ್ಕೆ ಒತ್ತಾಯಿಸಲಾಗಿದೆ. ಇದರ ಜೊತೆಗೆ ಸುಗ್ಗಿಯ ಕಾಲದಲ್ಲಿ ಕೇಂದ್ರ ಸರಕಾರ ವಿಬಿಜಿ ರಾಮ್ ಜಿ ಅಡಿ 60 ದಿನಗಳ ಬಿಡುವು ನೀಡಿದೆ. ಜುಲೈ 1ರಿಂದ ಯೋಜನೆ ಜಾರಿಯಾಗಿದೆ. ಈ 2 ತಿಂಗಳ ಬಿಡುವಿನ ಅವಧಿ ತೆಗೆದರೆ, ಉಳಿಯುವುದು 9 ತಿಂಗಳು. ಈ ಅವಧಿಯಲ್ಲಿ ಯಾವುದೇ ರಾಜ್ಯ ತನ್ನ ಪಾಲಿನ ಶೇ.40ರಷ್ಟು ಹಣ ಭರಿಸಲು ಸಾಧ್ಯವಾಗದಿದ್ದರೆ ಕೇಂದ್ರದ ಪಾಲು ಬರುವುದಿಲ್ಲ. ಇದು ಯೋಜನೆ ಮೂಲ ಉದ್ದೇಶವನ್ನೇ ನಾಶ ಮಾಡುತ್ತದೆ ಎಂದರು.

ಶಿವರಾಜ್ ಸಿಂಗ್ ಚವ್ಹಾಣ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಎಲ್ಲ ವಿಚಾರಗಳನ್ನೂ ಪ್ರಸ್ತಾಪಿಸಿದ್ದೇನೆ. ಜತೆಗೆ ಎಲ್ಲ ರಾಜ್ಯಗಳಿಗೆ ತಮ್ಮ ಆಯ್ಕೆಯಂತೆ ಕಾಮಗಾರಿಗಳನ್ನು ನಡೆಸಲು ಅವಕಾಶ ನೀಡಬೇಕು ಎಂಬುದು ರಾಜ್ಯದ ನಿಲುವಾಗಿದೆ.

-ಈಶ್ವರ್ ಖಂಡ್ರೆ, ಸಚಿವ

ನೀರು ಪೂರೈಕೆಗೆ ಹಣದ ಕೊರತೆ ಇಲ್ಲ

ಬೆಂಗಳೂರು: ಎಲ್ ನಿ ನೋ ಪ್ರಭಾವದಿಂದ ರಾಜ್ಯದಲ್ಲಿ ಮಳೆಯ ಕೊರತೆ ಆಗಿದ್ದು, ಗ್ರಾಮಗಳಲ್ಲಿ ನೀರಿನ ಸಮಸ್ಯೆ ಎದುರಾಗದಂತೆ ಮುಂಗಡವಾಗಿ 117 ಕೋಟಿ ರು. ಬಿಡುಗಡೆ ಮಾಡಲಾಗಿದೆ, ನೀರು ಪೂರೈಕೆಗೆ ಹಣದ ಕೊರತೆ ಇಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈಗಾಗಲೇ ಸುಮಾರು 85 ಕೋಟಿ ರೂಪಾಯಿಗಳಿಗೆ ಕ್ರಿಯಾ ಯೋಜನೆ ರೂಪಿಸಲಾಗಿದೆ. 30 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ನೀರಿನ ಸಮಸ್ಯೆ ಇರುವ ಗ್ರಾಮಗಳಲ್ಲಿ ಕುಡಿಯುವ ನೀರು ಪೂರೈಕೆಗೆ ತೊಂದರೆ ಆಗದಂತೆ ಕ್ರಮ ವಹಿಸಲಾಗಿದೆ ಎಂದರು. ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾದರೆ 24 ಗಂಟೆಗಳ ಒಳಗಾಗಿ ಪರಿಹರಿಸುವಂತೆ ಸೂಚಿಸಲಾಗಿದೆ. ಖಾಸಗಿ ತೆರೆದ ಬಾವಿ, ಬೋರ್‌ವೆಲ್ ಗಳಿಂದ ನೀರು ಪಡೆದು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದೆ. ತೀರಾ ಅಗತ್ಯಬಿದ್ದ ಸಂದರ್ಭದಲ್ಲಿ ಮಾತ್ರ ಕೊಳವೆ ಬಾವಿ ಕೊರೆಸಲಾಗುತ್ತಿದೆ. ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿಯುತ್ತಿದೆ. ಕಳೆದ 2-3 ದಿನದಿಂದ ಮಳೆ ಆಗುತ್ತಿದ್ದು, ಕೆಲವು ಜಲಾಶಯಗಳಿಗೆ ನೀರು ಬರುತ್ತಿದೆ. ಈ ಸಂಕಷ್ಟದ ಸಮಯದಲ್ಲಿ ಜೀವಜಲವನ್ನು ಹಿತಮಿತವಾಗಿ ಜನರು ಬಳಸಬೇಕು ಎಂದರು.

ಹೊಸಕೆರೆಹಳ್ಳಿ, ಹಲಗೇವಡೇರಹಳ್ಳಿ ಕೆರೆಗಳ

ಸಮಗ್ರ ಅಭಿವೃದ್ಧಿಗೆ ಯೋಜನೆ

ಬೆಂಗಳೂರು: ರಾಜರಾಜೇಶ್ವರಿನಗರ ವ್ಯಾಪ್ತಿಯ ಹೊಸಕೆರೆಹಳ್ಳಿ ಹಾಗೂ ಹಲಗೇವಡೇರಹಳ್ಳಿ ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಿ ಶೀಘ್ರದಲ್ಲಿ ಅಂದಾಜು ಪಟ್ಟಿ ಸಲ್ಲಿಸುವಂತೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ. ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಗುರುವಾರ ಎರಡೂ ಕೆರೆಗಳ ಸ್ಥಳ ಪರಿಶೀಲನೆ ನಡೆಸಿದ ಅವರು, ಸ್ಥಳೀಯ ನಿವಾಸಿಗಳು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ಕೆರೆಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಸಂಬಂಧಿಸಿದಂತೆ ಮಹತ್ವದ ನಿರ್ದೇಶನ ನೀಡಿದರು. ಹೊಸಕೆರೆಹಳ್ಳಿ ಕೆರೆ ಅಭಿವೃದ್ಧಿಗೆ 2025ರಲ್ಲೇ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅನುಮೋದನೆ ನೀಡಿರುವುದನ್ನು ಉಲ್ಲೇಖಿಸಿದ ಆಯುಕ್ತರು, ಕೆರೆಯ ಹೂಳೆತ್ತುವಿಕೆ, ಸುತ್ತಲಿನ ಹಾಳಾಗಿರುವ ಬೇಲಿಯ ದುರಸ್ತಿ ಹಾಗೂ ಸಮಗ್ರ ಅಭಿವೃದ್ಧಿ ಕಾಮಗಾರಿ ತ್ವರಿತವಾಗಿ ಕೈಗೊಳ್ಳುವಂತೆ ಸೂಚಿಸಿದರು. ಕೆರೆ ಹೂಳೆತ್ತುವುದರಿಂದ ಅಂತರ್ಜಲ ಮಟ್ಟ ಹೆಚ್ಚಾಗಿ ಸುತ್ತಮುತ್ತಲಿನ ಕೊಳವೆಬಾವಿಗಳಲ್ಲಿ ನೀರಿನ ಲಭ್ಯತೆ ಸುಧಾರಿಸುವ ಸಾಧ್ಯತೆ ಇದೆ ಎಂದರು.

ಕೆರೆಯ ಸುತ್ತ ಸುಸಜ್ಜಿತ ಪಾದಚಾರಿ ಮಾರ್ಗ ನಿರ್ಮಿಸಿ, ಕಸ ಎಸೆಯುವುದು ಸೇರಿದಂತೆ ಅನಪೇಕ್ಷಿತ ಚಟುವಟಿಕೆ ತಡೆಯಲು ಮಾರ್ಷಲ್‌ಗಳು ಹಾಗೂ ಹೋಮ್‌ಗಾರ್ಡ್‌ಗಳನ್ನು ನಿಯೋಜಿಸಬೇಕು. ಜತೆಗೆ ಉತ್ತಮ ಗುಣಮಟ್ಟದ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ ನಿರಂತರ ಕಣ್ಗಾವಲು ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಿದರು. ಹಲಗೇವಡೇರಹಳ್ಳಿ ಕೆರೆಯಲ್ಲಿ ಜಲಮಂಡಳಿಯ ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್‌ನಿಂದ ಹರಿಸಲಾಗುತ್ತಿರುವ ನೀರಿನಿಂದ ಕೆರೆ ಕಲುಷಿತಗೊಂಡು ದುರ್ವಾಸನೆ ಉಂಟಾಗುತ್ತಿದೆ ಎಂಬ ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ, ಪ್ರತಿ 15 ದಿನಗಳಿಗೊಮ್ಮೆ ಕೆರೆಯ ನೀರಿನ ಗುಣಮಟ್ಟ ಪರೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಬೆಂಗಳೂರು ಜಲಮಂಡಳಿಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಪರಿಶೀಲನಾ ಸಂದರ್ಭದಲ್ಲಿ ಮುಖ್ಯ ಅಭಿಯಂತರೆ ಸ್ವಯಂಪ್ರಭಾ, ಕಾರ್ಯಪಾಲಕ ಅಭಿಯಂತರೆ ಗೀತಾ ಎಲ್. ಹಾಗೂ ವಿವಿಧ ವಿಭಾಗಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
CHIKKABALLAPURA URBAN DEVELOPMENT AUTHORITY.
ಸಿಟ್ರಸ್ ಸಿಟಿ ಮೇಡೋಸ್, 4ನೇ ಸೆಕ್ಟರ್, ತುಮಕಲಹಳ್ಳಿ ಗ್ರಾಮ, ಚಿಕ್ಕಬಳ್ಳಾಪುರ–562103. Sitrus City Meadows, 4th Sector, Tumakalahalli Village, B.B.Road, Chikkaballapur-562 103. Email ID:cuda.cbpur@gmail.com ದೂರವಾಣಿ ಸಂಖ್ಯೆ:08156–274501.

ಸಂ:ಚಿ.ನ.ಅ.ಪ್ರಾ/ಟೆಂಡರ್/03&5/2025–26/511 ದಿನಾಂಕ: 23.06.2026

ಇ–ಟೆಂಡರ್‌ಗಳ ಆಹ್ವಾನ
(For Lake Works –As per standard Bid Document KW 2 in two cover system.)

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ **(1)** Improvement of Park in front of Stadium, Ward No-21, Chikkaballapur (ಟೆಂಡರ್ ಇಟ್ಟ ಮೊತ್ತ ರೂ.20,70,628/–) ಮತ್ತು Improvement of Park at Thimmakka Layout & Pathi Hospital, beside KSRTC Depot, Chikkaballapur (ಟೆಂಡರ್ ಇಟ್ಟ ಮೊತ್ತ ರೂ.21,13,318/–) ಕಾಮಗಾರಿಗೆ ಆಯುಕ್ತರು, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ ಇವರಿಂದ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ **http://kppp.karnataka.gov.in** ನಿಂದ ಡೌನ್ ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **http://kppp.karnataka.gov.in** ನಲ್ಲಿ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು. ಗುತ್ತಿಗೆದಾರರು (1) ಟೆಂಡರ್‌ನ ಪೂರ್ವಭಾವಿ ಸಭೆ ದಿನಾಂಕ: **30.06.2026 ಬೆಳಿಗ್ಗೆ 12:00 ಘಂಟೆಗೆ** (2) ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 08.07.2026 ಸಂಜೆ 05:30 ಘಂಟೆಗೆ** (3) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 10.07.2026 12:00 ಘಂಟೆಗೆ** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ:17.07.2026 04:00 ಘಂಟೆಗೆ** ಅಥವಾ ಮುಂದೆ ಸೂಚಿಸಿದ ದಿನದಂದು. ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಆಯುಕ್ತರು,
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:122/ಕೆಎಸ್ಎಂ.ಸಿ.ಎ/2026–27

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)
ಪ್ರಧಾನ ಕಚೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು–560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **22.07.2026 ರಂದು ಬೆಳಿಗ್ಗೆ 10.30**ಕ್ಕೆ ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ **www.janabank.com** ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ–ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	45488730020141	ಮೊಹಮ್ಮದ್ ನವೀದ್ ಆಲಿ	34.1
2	45488730022720	ರಮೇಶ್ ನಾಯಕ್	11.6
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1–4–380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು–584101.		
3	31128730040264	ಸೆಲ್ವನ್ ಎಸ್	3.6
4	31128160006998	ರಾಮ್ ನಾಯ್ಕ್	68.9
5	31128160006821	ಮನೋಜ್ ನಾಯ್ಕ್	31.9
6	31128730040301	ದಿಲೀಪ್ ನಾಯ್ಕ್ ರುಪ್ಲ ನಾಯ್ಕ	7.2
7	31128730040314	ಇಂದ್ರಮ್ಮ ಟಿ	2.3
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #3365/6ಎ ಮತ್ತು 6ಬಿ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ ಶಾಮನೂರು ರಸ್ತೆ, ದಾವಣಗೆರೆ–577004.		
8	33638730063042	ಕನಕ	23.9
9	33648730035515	ಶಾರದ ಎನ್‌ಆರ್	6
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 558, ನೆಲ ಮಹಡಿ, ಬಿಡಿಎ, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ/ ಸ್ಯಾಟಲೈಟ್ ಟೌನ್, ವಿದ್ಯಾ ಗಣಪತಿ ದೇವಾಲಯ ಎದುರು, ಜನಲಕ್ಷ್ಮಿ ಎದುರು, ಪಿನ್ ಕೋಡ್ ಬೆಂಗಳೂರು–560060,		
10	46988160008732	ಕೆ ಅರ್ಚನ	80.2
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಡೋರ್ ನಂ. 66, ಖಾತಾ ನಂ.865/66 ರೋಜಿಪುರ ಡಿ ಕ್ರಾಸ್, ನಂದಿನಿ ಆಸ್ಪತ್ರೆ ಹತ್ತಿರ, ದೊಡ್ಡಬಳ್ಳಾಪುರ, ಬೆಂಗಳೂರು–561203.		
11	45428160000300	ಶ್ರೀದೇವಿ ಶಿವಶರಣ್	279.8
12	31138730068446	ರುಕ್ಸಾನಬೇಗಮ್ ರಫಿಕ್ ಹಿರಿಯಾಲ್	11
13	31138730068472	ಮೌಲಾಲಿ ಮೆಹಬೂಬ್‌ಸಾಬ್ ಬಿಸ್ತಿ	4.7
14	31138730068383	ಮಹಾಂತೇಶ್ ಡಿ ಕಲಸಗೊಂಡ್	12
15	31138730068433	ಮೌಲಾಲಿ ಮೆಹಬೂಬ್‌ಸಾಬ್ ಬಿಸ್ತಿ	5.3
16	31138730068407	ಸುನಂದ ಶಿವನಗೌಡ್ ಪಾಟೀಲ್	7.9
17	31138730068294	ಸುನಂದ ಶಿವನಗೌಡ್ ಪಾಟೀಲ್	11.1
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #9, ಎಂಐಜಿ, ಕೆಹೆಚ್‌ಬಿ ಕಾಲೊನಿ, ಸೋಲಾಪುರ ರಸ್ತೆ, ಬಿಜಾಪುರ–586103.		
18	31878730047978	ಶಬ್ರೀನ್ ಜಫರ್ ಷರೀಫ್	5.5
19	31878160003202	ಮಂಜುನಾಥ ಎಂ	67.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 273–ಬಿ, ಕೊ–ಅಪರೇಟಿವ್ ಹೌಸ್ ಕಟ್ಟಡ ಸೊಸೈಟಿ ಚೌಡೇಶ್ವರಿ ಬಸ್ ನಿಲ್ದಾಣದ ಎದುರು, ಮತ್ತಿಕೆರೆ, ಬೆಂಗಳೂರು ನಗರ, ಕರ್ನಾಟಕ –560078.		
20	46658730027174	ದ್ಯಾವಪ್ಪ ಬಿ ಎಮ್	2.9
21	46658730027151	ಕಾಂತಮ್ಮ ಎನ್	10.7
22	46658730027085	ಸತೀಶ್‌ಕುಮಾರ್ ಸಿ ಪಿ	4.3
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ನಂ. 5, ಹೊಸ ಖಾತಾ ನಂ. 839/3735/3735 /5, ಎಸ್ ನರಸಿಂಹಯ್ಯ ಲೇಔಟ್, ವಾರ್ಡ್ ನಂ. 22 ಬೂದಿಗೆರೆ ರಸ್ತೆ ಎಡಭಾಗ, 4ನೇ ವಿಭಾಗ, ದೇವನಹಳ್ಳಿ ಪಟ್ಟಣ, ಬೆಂಗಳೂರು–562110.		
23	32018730009929	ಮಹೇಶ್ ವೈ	4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 239/2ಎ, 2ಬಿ/1ಡಿ, ಪ್ಲಾಟ್ ನಂ. 5, ನಂದಗೌಡ ರಸ್ತೆ, ನೂರ್ ಕೆರೂಡಿ ಆಸ್ಪತ್ರೆ, ವಿನಾಯಕ ನಗರ್, ಬಾಗಲಕೋಟೆ–587101.		
24	31830660000401	ನಾಗಮ್ಮ ಕೆ	72.8
25	32568730030015	ಶಾರದಾ ಚಿಕ್ಕ ಲಿಂಗಯ್ಯ	9.9
26	32568730030080	ಭಾಗ್ಯ ಎಸ್	8.1
27	30198730043042	ಶ್ರೀನಿವಾಸ ಕೆ	18.5
28	30198730042829	ಅಮೃತ ಕೆ	3.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ, 1ನೇ ಮತ್ತು 2ನೇ ಮಹಡಿ, 'ನಂದಿನಿ' ನಂ. 300/ಎ–70 10ನೇ ಮೈನ್, 36ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು–560041.		
29	32508730048950	ಆಶಾ ಹರಿನಾಥ್‌ರಾವ್	3.1
30	32508730049058	ರಂಜಿತ್ ಕುಮಾರ್	3.9
31	32508730048822	ಕವಿತ ರಾಜು	18.5
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ.543/4, ನೆಲಮಹಡಿ, ಜಾಕಿ ಶೋರೂಂ ಹತ್ತಿರ, ಜ್ವಾಲಮಾಲ ಕೈಗಾರಿಕಾ ಎಸ್ಟೇಟ್, ದೇವರಚಿಕ್ಕನಹಳ್ಳಿ ಮುಖ್ಯ ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು, ಕರ್ನಾಟಕ, ಪಿನ್–560068.		
32	31788730019862	ಧರ್ಮೇಂದ್ರ ಹೆಚ್ ಕೆ	10.04
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಹಾಜೀ ಬಾಶಾ ಸಾಬ್ ಆರ್ಕೇಡ್–1, ಆಸ್ತಿ ಸಂ. 399/707/1786, ವಾರ್ಡ್ ನಂ.27, ಗಂಗೋತ್ರಿ ರಸ್ತೆ, ತುಮಕೂರು–572101.		
33	46448730041191	ಸುಹೇಬ್ ಉಲ್ಲಾ ಷರೀಫ್	20.3
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 1809/1810, ಶ್ರೀ ಚಾಮುಂಡಿ ಟಿವಿಎಸ್, ಬಿಆರ್ ಹಿಲ್ಸ್, ಚಾಮರಾಜನಗರ ಪಿನ್–571313		
34	30948730023332	ಶಿವಶಂಕರ್ ಎಂ	30.3
35	33458730028840	ಸೋಮಶೇಖರ್ ಕೆ	5
36	33458730028060	ನಂದನ್ ಕುಮಾರ್ ಎಂ	2.3
37	33458730028790	ಎಂ ಸ್ವಾಮಿ	4.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಯುನಿಟ್ ನಂ.1, ನೆಲ ಮಹಡಿ ಸಾತ್ವಿಕ್ ಸ್ಲೆಂಡರ್ ಕಟ್ಟಡ ಕಾಳಿದಾಸ ರಸ್ತೆ, ಜಯಲಕ್ಷ್ಮಿಪುರಂ, ವಿವಿ ಮೊಹಲ್ಲಾ, ಮೈಸೂರು–570002.		
38	45448730009127	ಶ್ರುತಿ ರವಿ ಓಂಕರಿ	12.1
39	45448730009041	ಐಶ್ವರ್ಯ ರಮೇಶ್ ಪಣಿಗಟ್ಟಿ	35.75
40	45448730009012	ದೋನಿ ಶರಪುನ್ನೀಸಾ	15.1
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಬಿವಿಬಿ ಇಂಜಿನಿಯರಿಂಗ್ ಕಾಲೇಜು ಎದುರು ಮೆಕ್ ಡೊನಾಲ್ಡ್ ಹತ್ತಿರ, ಹಳೆ ರಾಷ್ಟ್ರೀಯ ಹೆದ್ದಾರಿ ಹುಬ್ಬಳ್ಳಿ –580021.		
41	49588160000014	ಮಮತ ಬಿ ಕೆ	43.1
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು ದಕ್ಷಿಣ ಬೆಂಗಳೂರು ನಗರ, ಕರ್ನಾಟಕ – 560040		

ಸ್ಥಳ: ಕರ್ನಾಟಕ
ದಿನಾಂಕ: 03.07.2026

ಸಹಿ/–ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ವಿದ್ಯಾರ್ಥಿನಿ ಮನೆಗೆ ನುಗ್ಗಿ ಹಲ್ಲೆ, ಜೀವ ಬೆದರಿಕೆ

ಚಿಂತಾಮಣಿ: ಕಾಲೇಜು ಮುಗಿಸಿ ಮನೆಗೆ ಮರಳುತ್ತಿದ್ದ ಯುವತಿಯನ್ನು ಚುಡಾಯಿಸಿ, ಬಳಿಕ ಆಕೆಯ ಮನೆಗೆ ನುಗ್ಗಿ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಚಿಂತಾ ಮಣಿ ನಗರದ ಆಶ್ರಯ ಬಡಾವಣೆಯಲ್ಲಿ ನಡೆದಿದೆ.

ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿರುವ ಬಿ.ಇ ಪ್ರಥಮ ವರ್ಷದ ವಿದ್ಯಾರ್ಥಿನಿ ಮೇಘನಾ ಎಸ್ (18) ಪ್ರಸ್ತುತ ಕೋಲಾರದ ಎಸ್.ಎನ್.ಆರ್. ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದು ನಂತರ ಚಿಂತಾಮಣಿ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ.

ಮೇಘನಾ ಅವರು ನೂತನ ಪ್ರೌಢ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಡ್ಯಾನ್ಸ್ ಕ್ಲಾಸ್ ಮುಗಿಸಿ 4:30ರ ಸುಮಾರಿಗೆ ತಮ್ಮ ದ್ವಿಚಕ್ರ ವಾಹನದ ಬಳಿ ತೆರಳುತ್ತಿದ್ದರು. ಈ ವೇಳೆ ಕಾರ್ತಿಕ್ ಮತ್ತು ವಿನೋದ್ ಎಂಬ ಇಬ್ಬರು ಯುವಕರು ಆಕೆಯನ್ನು ಮೇಡಂ, ಮೇಡಂ ಎಂದು ಕರೆದು ಚುಡಾಯಿಸಲು ಯತ್ನಿಸಿದ್ದಾರೆ. ಮೇಘನಾ ಅವರು ನೀವು ಯಾರು? ಎಂದು ಪ್ರಶ್ನಿಸಿದಾಗ, ಅವರಿಬ್ಬರು ಹತ್ತಿರ ಬಂದು ಅನುಚಿತವಾಗಿ ವರ್ತಿಸಲು ಯತ್ನಿಸಿದ್ದಾರೆ. ತಕ್ಷಣ ಸ್ವಯಂರಕ್ಷಣೆಗಾಗಿ ಮೇಘನಾ ಅವರು ಆರೋಪಿಗಳ ಕೆನ್ನೆಗೆ ಹೊಡೆದು ತಳ್ಳಿ, ಅಲ್ಲಿಂದ ಮನೆಗೆ ಬಂದಿದ್ದಾರೆ ಹಾಗೂ ನಡೆದ ವಿಷಯವನ್ನು ತಾಯಿಗೆ ಫೋನ್ ಮೂಲಕ ತಿಳಿಸಿದ್ದಾರೆ.

10 ಮಂದಿ ವಿರುದ್ಧ ದೂರು ದಾಖಲು

ಅದೇ ದಿನ ರಾತ್ರಿ ಸುಮಾರು 8:30ರ ವೇಳೆಗೆ ಕಾರ್ತಿಕ್, ವಿನೋದ್, ಶಾಲಿನಿ, ಕಾವ್ಯ ಸೇರಿದಂತೆ ಸುಮಾರು 10 ಜನರ ಅಕ್ರಮ ಗುಂಪು ಆಶ್ರಯ ಬಡಾವಣೆಯಲ್ಲಿರುವ ಮೇಘನಾ ಅವರ ಮನೆಗೆ ನುಗ್ಗಿದೆ. ನಮ್ಮ ಮುಂದೆಯೇ ನಮಗೆ ಹೊಡೆದು ತಳ್ಳುತ್ತೀಯಾ? ನಿನಗೆ ಎಷ್ಟು ಧೈರ್ಯ? ಎಂದು ಕೂಗಾಡಿ, ಕಾರ್ತಿಕ್ ಎಂಬಾತ ತನ್ನ ಕೈಯಲ್ಲಿದ್ದ ಮಡಚುವ ಬ್ಲೇಡ್ ಚಾಕುವಿನಿಂದ ಮೇಘನಾ ಅವರ ಹೊಟ್ಟೆಗೆ ಚುಚ್ಚಿ ರಕ್ತಗಾಯ ಮಾಡಿದ್ದಾನೆ ಎಂದು ಚಿಂತಾಮಣಿ ನಗರ ಠಾಣೆಯಲ್ಲಿ ದಾಖಲಾಗಿರುವ ದೂರಿನಲ್ಲಿ ವಿವರಿಸಲಾಗಿದೆ.

ನಗರಸಭಾ ಕಾರ್ಯಾಲಯ ನೆಲಮಂಗಲ
ಬೆಂಗಳೂರು ಗ್ರಾಮಾಂತರ ಜಿಲ್ಲೆ–562123 ದೂ: 0807722135
ಇ–ಮೇಲ್: ka.nelamangala.cmc@gmail.com

ಸಂಖ್ಯೆ: ನ.ಸ.ನೆ/ತಾಂತ್ರಿಕ(ವಿ)/ಟೆಂಡರ್/18/2026–27 ದಿನಾಂಕ: 29–06–2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆಡಬ್ಲ್ಯೂ 1&2ರ & ಕೆಜಿ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಪೌರಾಯುಕ್ತರು, ನಗರಸಭೆ ನೆಲಮಂಗಲ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2026–27ನೇ ಸಾಲಿನ ನಗರಸಭೆ ನಿಧಿಯಡಿ ಕುಡಿಯುವ ನೀರು ಸಮಸ್ಯೆ ಬಗೆಹರಿಸಲು ವಿವಿಧ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಕೊರೆದು ಪಂಪು ಮೋಟಾರ್ ಅಳವಡಿಸಲು, ಕೊಳವೆ ಬಾವಿಗಳನ್ನು ಕೊರೆಯಲು ಟೆಂಡರ್ ಕೈಗೊಳ್ಳಲು ಒಟ್ಟು ಮೊತ್ತ ರೂ. 230.00 ಲಕ್ಷಗಳ ಕಾಮಗಾರಿಗಳ ಐಟಂವಾರು ಇ–ಪ್ರೊಕ್ಯೂರ್‌ಮೆಂಟ್ ನ ಕೆ.ಪಿ.ಪಿ ಪೋರ್ಟಲ್‌ನ ದ್ವಿ ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ಇಂಡೆಂಟ್	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಮೀಸಲಾತಿ
1	DMA/2026-27/WS/WORK_INDENT60362	30.00	ಪರಿಶಿಷ್ಟ ಪಂಗಡ
2	DMA/2026-27/WS/WORK_INDENT60406	50.00	ಇತರೆ
3	DMA/2026-27/WS/WORK_INDENT60408	50.00	Cat-2A
4	DMA/2026-27/WS/WORK_INDENT60410	50.00	ಇತರೆ
5	DMA/2026-27/WS/WORK_INDENT60411	50.00	ಇತರೆ

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ತೆರೆಯುವ ದಿನಾಂಕ ಮುಂತಾದ ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: **https://kppp.karnataka.gov.in** ಹಾಗೂ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಶ್ರೀ. ಗಣೇಶ್ ಎನ್, ಮಾನ್ಯ ಅಧ್ಯಕ್ಷರು, ನಗರಸಭೆ, ನೆಲಮಂಗಲ
ಸಹಿ/– ಶ್ರೀ. ಗಂಗಾಧರ್ ಹೆಚ್, ಪೌರಾಯುಕ್ತರು, ನಗರಸಭೆ, ನೆಲಮಂಗಲ

DIPR/CP/SMCL/1437/26-27

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಕಾ,ನೀ,ನಿ,ನಿ ತುಮಕೂರು

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ; 06/2026–27 ದಿನಾಂಕ: 29.06.2026

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕಾ.ನೀ.ನಿ.ನಿ, ಹೇಮಾವತಿ ನಾಲಾ ವಿಭಾಗ, ತುಮಕೂರು ವ್ಯಾಪ್ತಿಯ ರೂ.15.94 ಲಕ್ಷ ದಿಂದ 22.57 ಲಕ್ಷದವರೆಗಿನ 5 ಕೆಲಸ ಕಾಮಗಾರಿಗಳ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ KTPP ನಿಬಂಧನೆಗಳೊಂದಿಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 04.07.2026 ಸಂಜೆ 4.00 ಗಂಟೆ ವರೆಗೆ

ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ:– 01.07.2026 ರಿಂದ 16.07.2026 ಸಂಜೆ 4.00 ಗಂಟೆ ವರೆಗೆ ತಾಂತ್ರಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ: 17.07.2026 ಸಂಜೆ 4.30 ಗಂಟೆ ನಂತರ. ಆರ್ಥಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ: 20.07.2026 ಸಂಜೆ 4.30 ಗಂಟೆ ನಂತರ (ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ)

ಇ.ಎಂ.ಡಿ ಮೊತ್ತ, ಕಾಲಾವಧಿ, ಕಾಮಗಾರಿಗಳ ವಿವರ, ಅರ್ಹತಾ ಷರತ್ತುಗಳು, ಹಾಗೂ ಇನ್ನಿತರ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸಿಸ್ಟಮ್ https://kppp.karnataka.gov.in/ ಮೂಲಕ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ವಿಭಾಗ, ತುಮಕೂರು

DIPR/TUM/127/KSMCA/2026-27

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560009.
ಫೋನ್ : 080–22341230/35, ಇ–ಮೇಲ್: bmicapa@gmail.com

ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–01/23/2026–27/547 ದಿನಾಂಕ:02.07.2026

ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಭುಜೇಂದ್ರ ಕೆ.ಎಂ ಬಿನ್ ಮಹಾಲಿಂಗಯ್ಯ, ಶ್ರೀ ಮಧು.ಕೆ.ಎಂ ಬಿನ್ ಮಹಾಲಿಂಗಯ್ಯ ಮತ್ತು ಶ್ರೀ ಮಹೇಶ್.ಕೆ.ಎಂ ಬಿನ್ ಮಹಾಲಿಂಗಯ್ಯ ಇವರುಗಳು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕುಂಬಳಗೋಡು, ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:2/1ಎರ 05ಎ–05ಗು ವಿಸ್ತೀರ್ಣದ ಪೈಕಿ 03ಎ–11ಗು (0ಎ–03 ಗು 'ಎ' ಖರಾಬು ಸೇರಿ) ವಿಸ್ತೀರ್ಣದ ಜಮೀನನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "**ವ್ಯವಸಾಯ**" ವಲಯದಿಂದ "**ವಸತಿ**" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಅನುಮೋದಿತ ಮಹಾಯೋಜನೆಯಲ್ಲಿ **ವ್ಯವಸಾಯ** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

1. ಈ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ, ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ದೊರಕುತ್ತವೆ.
2. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು, ಒಳಚರಂಡಿ, ವಿದ್ಯುತ್ ಸೌಲಭ್ಯ ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ.

ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಆಹ್ವಾನಿಸಲಾಗಿದೆ. ಯಾವುದೇ ವ್ಯಕ್ತಿಯು ಈ ಪ್ರಕಟಣೆಯ ದಿನಾಂಕದಿಂದ **15 ದಿನಗಳೊಳಗೆ** ಸದಸ್ಯ ಕಾರ್ಯದರ್ಶಿ, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು ಇವರಿಗೆ ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಬಹುದು. ನಿಗದಿತ ಅವಧಿಯ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/1453/ಶಿರಡಿ ಸಾಯಿ/2026–27

ದೇಶಕ್ಕೇ ಬರ ಭೀತಿ! ಅಣೆಕಟ್ಟು ಖಾಲಿ: ಡಿಕೆ

← ಮೊದಲ ಪುಟದಿಂದ

ಕೆಆರ್‌ಎಸ್‌ನಲ್ಲಿ 100 ಅಡಿ ಇದ್ದ ನೀರಿನ ಪ್ರಮಾಣ ಈಗ 22 ಅಡಿಯಷ್ಟಿದೆ, ಕಬಿನಿಯಲ್ಲಿ 79 ಅಡಿ ಇತ್ತು, ಈಗ 26 ಅಡಿಯಷ್ಟಿದೆ. ಈ ಅಣೆಕಟ್ಟುಗಳಲ್ಲಿ ಒಳಹರಿವಿನ ಪ್ರಮಾಣ 20%ಗೆ ಕುಸಿದಿದೆ. ಹೀಗಾಗಿ ಸಮಸ್ಯೆ ಹೆಚ್ಚುವ ಸಾಧ್ಯತೆ ಇದೆ ಎಂದು ವಿವರಿಸಿದರು. ನೀರು ಬಿಡುವ ವಿಚಾರದಲ್ಲಿ ರೈತರು ಒತ್ತಡ ಹಾಕಬೇಡಿ. ಮುಂದಿನ ದಿನಗಳಲ್ಲಿ ಮಳೆಯನ್ನು ಗಮನದಲ್ಲಿಟ್ಟುಕೊಂಡು ಬೆಳೆ ಹಾಕಿ. ಮಳೆ ಬಂದರೆ ನಾವು ನೀರನ್ನು ಒದಗಿಸಿಕೊಡುತ್ತೇವೆ. ಸಚಿವರಿಗೆ 2–3 ಜಿಲ್ಲೆಗಳ ಉಸ್ತುವಾರಿ ವಹಿಸಲಾಗಿದ್ದು, ನಾನು ನಾಲ್ಕು ವಿಭಾಗಗಳಿಗೆ ತೆರಳಿ ಪರಿಶೀಲನೆ ಮಾಡುತ್ತೇನೆ. ಪ್ರಧಾನಮಂತ್ರಿಗಳು ಈಗಾಗಲೇ ನೀರು ಹಾಗೂ ವಿದ್ಯುತ್ ವಿಚಾರವಾಗಿ ಎಚ್ಚರಿಕೆ ನೀಡಿದ್ದಾರೆ. ದೇಶದಲ್ಲೇ ಭೀಕರ ಬರಗಾಲ ಬರಲಿದೆ ಎಂದು ಕೇಂದ್ರ ಸರಕಾರ ಸಂದೇಶ ನೀಡಿದೆ. ವಿದ್ಯುತ್ ವಿಚಾರವಾಗಿ ಇಂಧನ ಇಲಾಖೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದೇನೆ. ನಾವು ಈ ಸಂದರ್ಭದಲ್ಲಿ ಎಚ್ಚರಿಕೆಯಿಂದ ಇರಬೇಕು. ಮೇವು ಹಾಗೂ ಕುಡಿಯುವ ನೀರಿನ ವಿಚಾರವಾಗಿ ಜಿಲ್ಲಾ ಸಚಿವರಿಗೆ ಪ್ರವಾಸ ಕೈಗೊಳ್ಳುವಂತೆ ಸೂಚನೆ ನೀಡಿದ್ದೇನೆ. ತುರ್ತಾಗಿ ಕೊಳವೆ ಬಾವಿ ಕೊರೆಯಲು ಸೂಚಿಸಲಾಗಿದೆ. ನಾನು ಕೂಡ ನಾಲ್ಕು ವಿಭಾಗಕ್ಕೆ ಪ್ರವಾಸ ಮಾಡಲಿದ್ದು, ನಂತರ ಜಿಲ್ಲಾ ಕೇಂದ್ರಗಳಿಗೆ ತೆರಳುತ್ತೇನೆ ಎಂದರು.

ಆ.15ರವರೆಗೆ ವಿದ್ಯುತ್ ಸಂಪರ್ಕಕ್ಕೆ ಅರ್ಜಿ: ಬಹಳ ಹಿಂದೆಯೇ ನಿರ್ಮಾಣವಾದ ವಸತಿ ಕಟ್ಟಡಗಳಿಗೆ ಒಸಿ (ವಾಸ್ತವ್ಯ ಪ್ರಮಾಣಪತ್ರ) ಪಡೆಯುವುದರಿಂದ ವಿನಾ ಯಿತಿ ನೀಡಲು ಸರಕಾರ ಒಪ್ಪಿಕೊಂಡಿದೆ. ಆದರೆ ಕೆಲವರು ನಾವು ಕಟ್ಟಡ ನಿರ್ಮಾಣ ಮಾಡಿದ್ದು, ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಹಾಕಿಲ್ಲ ಎಂದು ಮನವಿ ಮಾಡಿಕೊಂಡಿದ್ದಾರೆ. ಆದ್ದರಿಂದ ಯಾರೆಲ್ಲಾ ವಸತಿ ಕಟ್ಟಡ ನಿರ್ಮಾಣ ಮಾಡಿ ದ್ದಾರೋ, ಅವರ ದಾಖಲೆ, ಚಿತ್ರಗಳೊಂದಿಗೆ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಹಾಕಲು ಆಗಸ್ಟ್ 15ರವರೆಗೆ ಅವಕಾಶ ಕಲ್ಪಿಸಿದ್ದೇವೆ ಎಂದು ಶಿವಕುಮಾರ್ ಹೇಳಿದ್ದಾರೆ.

ಬಿಜೆಪಿ ಅನುಮತಿ ನೀಡಿದ್ದ ವಿದ್ಯುತ್ ಸಂಸ್ಥೆಗಳ ಖಾಸಗೀಕರಣಕ್ಕೆ ವಿರೋಧ

ವಿದ್ಯುತ್ ವಿತರಣೆಯನ್ನು ಖಾಸಗಿಯವರಿಗೆ ನೀಡುವ ವಿಚಾರವಾಗಿ ಎಲ್ಲಾ ಎಸ್ಕಾಂಗಳು ತಮ್ಮ ಆಕ್ಷೇಪಣೆಯನ್ನು ಸರಕಾರಕ್ಕೆ ಸಲ್ಲಿಸಬೇಕು ಎಂದು ತಿಳಿಸಿದ್ದೇನೆ. ಹಿಂದೆ ಬಿಜೆಪಿ ಸರಕಾರ ಖಾಸಗಿಯವರಿಗೆ ಪರವಾನಗಿ ಪಡೆಯಲು ಅವಕಾಶ ನೀಡಿತ್ತು. ಅದರ ಆಧಾರದ ಮೇಲೆ ಟಾಟಾ ಸಂಸ್ಥೆಯವರು ಅರ್ಜಿ ಹಾಕಿದ್ದಾರೆ. ಕೆಇಆರ್‌ಸಿ ಅವರು ಈ ಬಗ್ಗೆ ತೀರ್ಮಾನ ಮಾಡಲಿದೆ. ನಮ್ಮ ಸರಕಾರದ ತೀರ್ಮಾನವನ್ನು ಎಸ್ಕಾಂಗಳಿಗೆ ತಿಳಿಸಲಾಗಿದೆ. ಖಾಸಗಿಯವರು ಸರಕಾರಕ್ಕೆ ಅರ್ಜಿ ಹಾಕಿಲ್ಲ. ಕೆಇಆರ್‌ಸಿಗೆ ಅರ್ಜಿ ಹಾಕಿದ್ದಾರೆ. ಕೆಇಆರ್‌ಸಿ ಅವರು ಎಸ್ಕಾಂಗಳಿಗೆ ತಿಳಿಸಿದ್ದು, ಎಸ್ಕಾಂಗಳು ನಮ್ಮ ಬಳಿ ಚರ್ಚೆ ಮಾಡಿರುವ ಹಿನ್ನೆಲೆಯಲ್ಲಿ ಇದಕ್ಕೆ ನಮ್ಮ ಸಹಮತವಿಲ್ಲ ಎಂದು ತಿಳಿಸಿ ಎಂದು ಎಸ್ಕಾಂಗಳಿಗೆ ಸೂಚಿಸಿದ್ದೇನೆ ಎಂದರು.

30 ದಿನ ಸೆರೆಯಲ್ಲಿದ್ದರೆ ಪಿಎಂ, ಸಿಎಂ ಪದಚ್ಯುತಿ

← ಮೊದಲ ಪುಟದಿಂದ

ಕಳೆದ ಆಗಸ್ಟ್‌ನಲ್ಲೇ ಕೇಂದ್ರ ಗೃಹಸಚಿವ ಅಮಿತ್ ಶಾ ಈ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದ್ದರು. ಆಗದಕ್ಕೆ ಒಪ್ಪಿಗೆ ಸಿಕ್ಕಿರಲಿಲ್ಲ. ಇದಕ್ಕೆ ಸಂಸತ್ತಿನಲ್ಲಿ ಅಗತ್ಯವಿರುವ ಸಾಂವಿಧಾನಿಕ ಬಹು ಮತ ಸಿಕ್ಕರೆ ಕಾನೂನಾನಗಲಿದೆ.

ಪ್ರತಿಪಕ್ಷಗಳ ಆಕ್ಷೇಪವನ್ನೂ ಗಣಿಸಿರುವ ಕೇಂದ್ರ ಸರಕಾರ, ಮಸೂದೆಯನ್ನು ದುರುಪಯೋಗ ಮಾಡಿಕೊಳ್ಳದಂತೆ ತಡೆಯಲೂ ಆದ್ಯತೆ ನೀಡಿದೆ. ಅತ್ಯಂತ ಗಂಭೀರ ಪ್ರಕರಣಗಳಲ್ಲಿ ಈ ಮಸೂದೆ ಜಾರಿಯಾಗಲಿದೆ. ಹೇಗೆ ಬೇಕಾದರೆ ಹಾಗೆ ಬಳಕೆಯಾಗಲು ಸಾಧ್ಯವಿಲ್ಲ, ರಾಜಕೀಯ ಕಾರಣಗಳಿಗೂ ದುರುಪಯೋಗ ಸಾಧ್ಯವಿಲ್ಲ. ಯಾವುದೇ ಗಂಭೀರ ಪ್ರಕರಣಗಳಲ್ಲಿ ಪ್ರಧಾನಿ, ಮುಖ್ಯಮಂತ್ರಿ, ಸಚಿವರು 5 ವರ್ಷಕ್ಕಿಂತ ಹೆಚ್ಚುಕಾಲ ಜೈಲುಶಿಕ್ಷೆಗೊಳಗಾದರೆ, 30 ದಿನ ಬಂಧನದಲ್ಲೇ ಕಳೆದರೆ ಅವರು ಹುದ್ದೆ ಕಳೆದುಕೊಳ್ಳಲಿದ್ದಾರೆ. ಈ ನಡುವೆ ಅವರಿಗೆ ಜಾಮೀನು ಪಡೆಯಲು ಹಲವು ರೀತಿಯಲ್ಲಿ ಅವಕಾಶ ಮಾಡಿಕೊಡಲಾಗುತ್ತದೆ ಎಂದು ಮೂಲಗಳಿವೆ.

ಆದರೆ ಈ ಮಸೂದೆಗೆ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ನ್ಯಾಯಾಲಯದಲ್ಲಿ ವಿಚಾರಣೆ ಪೂರ್ಣಗೊಳ್ಳುವ ಮುನ್ನವೇ ವ್ಯಕ್ತಿಯನ್ನು ಅನರ್ಹಗೊಳಿಸುವುದು ಸಂವಿಧಾನದ ಮೂಲತತ್ವಗಳಿಗೆ ವಿರುದ್ಧವಾಗಬಹುದು ಎಂದು ಅಭಿಪ್ರಾಯಪಟ್ಟಿವೆ. ಅಪರಾಧ ಸಾಬೀತಾಗುವವರೆಗೆ ವ್ಯಕ್ತಿಯನ್ನು ನಿರಪರಾಧಿ ಎಂದು ಪರಿಗಣಿಸಬೇಕು ಎಂಬ ಸಂವಿಧಾನಾತ್ಮಕ ತತ್ವಕ್ಕೆ ಈ ಮಸೂದೆ ವಿರುದ್ಧವಾಗಿದೆ ಎಂದು ಪ್ರತಿಪಕ್ಷಗಳು ವಾದಿಸಿವೆ. ಮಹಿಳಾ ಮೀಸಲು ಮಸೂದೆಯೂ ಮಂಡನೆ: ಬಾರಿಯ ಮುಂಗಾರು ಅಧಿವೇಶನದಲ್ಲಿ ಕ್ಷೇತ್ರ ಮರುವಿಂಗಡಣೆ, ಮಹಿಳಾ ಮೀಸಲಾತಿ ಮಸೂದೆ ಸೇರಿದಂತೆ ಕೆಲವು ಪ್ರಮುಖ ಮಸೂದೆಗಳನ್ನು ಮರು ಮಂಡನೆ ಮಾಡುವ ಸಾಧ್ಯತೆಯಿದೆ. ಸರ್ಕಾರ ಪ್ರಮುಖ ನೀತಿ ನಿರ್ಧಾರಗಳಿಗೆ ಸಂಬಂಧಿಸಿದ ಶಾಸನ ಕಾರ್ಯಸೂಚಿಯ ಮೇಲೆ ಹೆಚ್ಚು ಗಮನಹರಿಸಿದೆ ಎಂದು ಮೂಲಗಳು ತಿಳಿಸಿವೆ.

ಜೆಪಿಸಿಯನ್ನು ಬಹಿಷ್ಕರಿಸಿದ ಕಾಂಗ್ರೆಸ್:

ಈ ಮಸೂದೆಯನ್ನು ಪರಿಶೀಲಿಸಲು 31 ಸದಸ್ಯರ ಜಂಟಿ ಸಂಸದೀಯ ಸಮಿತಿ ರಚಿಸಲಾಗಿದ್ದು, ಮಾಜಿ ಐಎಎಸ್ ಅಧಿಕಾರಿ ಹಾಗೂ ಬಿಜೆಪಿ ಸಂಸದೆ ಅಪರಾಜಿತಾ ಸಾರಂಗಿ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಈ ಸಮಿತಿಯನ್ನು ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಸಮಾಜವಾದಿ ಪಕ್ಷ, ಡಿಎಂಕೆ ಹಾಗೂ ಎಡಪಕ್ಷಗಳು ಬಹಿಷ್ಕರಿಸಿವೆ. ಆದರೆ ಶರದ್ ಪವಾರ್ ಬಣದ ಎನ್‌ಸಿಪಿ, ಎಐಎಂಐಎಂ ಹಾಗೂ ತಟಸ್ಥ ನಿಲುವು ಹೊಂದಿರುವ ಬಿಜು ಜನತಾ ದಳ (ಬಿಜೆಡಿ), ವೈಎಸ್‌ಆರ್ ಕಾಂಗ್ರೆಸ್ ಮತ್ತು ಶಿರೋಮಣಿ ಅಕಾಲಿದಳ ಸೇರಿದಂತೆ ಕೆಲವು ಪಕ್ಷಗಳು ಜಂಟಿ ಸಂಸದೀಯ ಸಮಿತಿಯ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿವೆ.

ಆರತಿ ಕೃಷ್ಣಗೆ ಅನಿವಾಸಿ ಸಚಿವೆ ಪಟ್ಟ ನೀಡಿ

← ಮೊದಲ ಪುಟದಿಂದ

ಈ ಇಲಾಖೆಯ ಮೂಲಕ ಮುಂದಿನ ದಿನದಲ್ಲಿ ವಿದೇಶದಲ್ಲಿರುವ ಕನ್ನಡಿಗರಿಗೆ ಅಗತ್ಯ ನೆರವು ನೀಡುವುದು, ವಿದೇಶಕ್ಕೆ ಕೆಲಸ, ವಿದ್ಯಾಭ್ಯಾಸಕ್ಕೆಂದು ಹೋಗುವವರಿಗೆ ಅಗತ್ಯ ಸಹಕಾರ ನೀಡುವುದರೊಂದಿಗೆ, ವಿದೇಶದಲ್ಲಿ ನೆಲೆಸಿರುವ ಅನಿವಾಸಿ ಕನ್ನಡಿಗರಿಂದ ಹೂಡಿಕೆಯನ್ನು ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ಈ ಇಲಾಖೆ ಒತ್ತು ನೀಡಲಿದೆ ಎನ್ನಲಾಗಿತ್ತು.

ಆದ್ದರಿಂದ ಸರಕಾರ ಆರಂಭಿಸಲು ಉದ್ದೇಶಿಸಿರುವ ಈ ಇಲಾಖೆಗೆ, ಹೊಸಬರನ್ನು ನೇಮಿಸುವ ಬದಲು ಈ ಹಿಂದೆ ಎನ್‌ಆರ್‌ಐ ಫೋರಂನಲ್ಲಿ ಕಾರ್ಯನಿರ್ವಹಿಸಿದ್ದ ಅನುಭವವಿರುವ ಆರತಿ ಕೃಷ್ಣರನ್ನೇ ಈ ಇಲಾಖೆಯ ಸಚಿವರನ್ನಾಗಿ ಮಾಡಬೇಕು. ಇದರಿಂದ ಸರಕಾರ ಹಾಗೂ ಎನ್‌ಐಆರ್‌ಗಳಿಗೆ ಅನುಕೂಲವಾಗಲಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ರಾಜ್ಯಕ್ಕೆ ಹೆಚ್ಚಿನ ಲಾಭ: ಆರತಿ ಕೃಷ್ಣ ಅವರು ಕಳೆದ ಒಂದುವರೆ ದಶಕದಿಂದ ಅನಿವಾಸಿ ಭಾರತೀಯರನ್ನು ಹಾಗೂ ರಾಜ್ಯ ಸರಕಾರದ ನಡುವೆ ಸೇತುವೆಯ ರೀತಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅನೇಕ ಅನಿವಾಸಿ ಭಾರತೀಯರಿಗೆ ಕರ್ನಾಟಕದಲ್ಲಿ ಹೂಡಿಕೆ ಮಾಡುವ ಮನಸ್ಸಿರುತ್ತದೆ. ಅಂತಹವರೊಂದಿಗೆ ಚರ್ಚಿಸಲು, ಅವರಿಗೆ ಅಗತ್ಯವಿರುವ ಸಹಾಯವನ್ನು ಸರಕಾರದ ಮಟ್ಟದಲ್ಲಿ ನೀಡಲು ಒಬ್ಬರ ಅಗತ್ಯವಿದೆ. ಅನಿವಾಸಿ ಭಾರತೀಯರಿಗೂ ಆರತಿ ಕೃಷ್ಣ ಅವರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವುದನ್ನು ಅವರಿಗೆ ಸಚಿವ ಸ್ಥಾನ ನೀಡಿದರೆ ರಾಜ್ಯಕ್ಕೆ ಬಂಡವಾಳ ಹೂಡಿಕೆಯೂ ಹೆಚ್ಚಾಗಲಿದೆ. ಆದ್ದರಿಂದ ಆರತಿ ಕೃಷ್ಣ ಅವರಿಗೆ ಸೂಕ್ತ ಸ್ಥಾನಮಾನ ನೀಡಬೇಕು ಎನ್ನುವ ಆಗ್ರಹ ಕೇಳಿಬರುತ್ತಿದೆ.

ಸಾಮಾಜಿಕ ಜಾಲತಾಣದಲ್ಲಿ ಟ್ರೆಂಡ್: ಇನ್ನು ಆರತಿ ಕೃಷ್ಣ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಕು, ಅವರಿಗೆ ಎನ್‌ಆರ್‌ಐ ಖಾತೆ ನೀಡಬೇಕು ಎನ್ನುವ ನಿಟ್ಟಿನಲ್ಲಿ ಅನಿವಾಸಿ ಭಾರತೀಯರು ಆರಂಭಿಸಿದ್ದ ಟ್ವಿಟರ್ ಅಭಿಯಾನ ಟ್ರೆಂಡ್ ಆಗಿದೆ. ನಾಲ್ಕೈದು ದಿನಗಳ ಹಿಂದೆ "#NRIMINISTRY" ಎನ್ನುವ ಹ್ಯಾಷ್‌ಟ್ಯಾಗ್ ಭಾರಿ ಟ್ರೆಂಡ್ ಆಗಿತ್ತು.

ಜಿಲ್ಲಾ ಪಂಚಾಯತ ಬಾಗಲಕೋಟೆ
ಕಾರ್ಯಪಾಲಕ ಅಭಿಯಂತರರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಾಗಲಕೋಟೆ
Fax: 08354-235043 Email: bgkeezpe@yahoo.com Phone: 08354-235042

ಸಂ:ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–1,2/ಟೆಂಡರ್/2026–27/1128
ದಿನಾಂಕ:02.07.2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಏಕ-ಲಕೋಟೆ) ಕೆ.ಡಬ್ಲ್ಯೂ-1 & 2 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ **Standard Tender Document KW-1&2** ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ಏಕ-ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಬಾಗಲಕೋಟೆ ಜಿಲ್ಲೆ ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ ಬಾಗಲಕೋಟೆ ವ್ಯಾಪ್ತಿಯಲ್ಲಿನ ವಿವಿಧ ಲೆಕ್ಕಶೀರ್ಷಿಕೆಗಳಡಿಯ ಅನುದಾನದ ಯೋಜನೆಯಡಿಯಲ್ಲಿ ಕಾಮಗಾರಿಗಳು ಮಂಜೂರಾಗಿರುತ್ತವೆ. 2025–26ನೇ ಸಾಲಿನ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ, ಬಾದಾಮಿ, ಬೀಳಗಿ, ಹುನಗುಂದ, ಜಮಖಂಡಿ, ಇಲಕಲ್ಲ ತಾಲೂಕಿನ ವ್ಯಾಪ್ತಿಯಲ್ಲಿ ಕಾಮಗಾರಿಗಳಿಗೆ ಈ ಕೆಳಗಿನಂತೆ ಟೆಂಡರ್ ಆಹ್ವಾನಿಸಿದೆ.

ಸಾಮಾನ್ಯ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ: 26768, 26767, 26920, 25574, 25569, 25576, 27411, 18795/Call-3, 25546/CALL-2, 25592/Call-2, 27361, 27155, 27362, 27360, 27154, 23744, 23747, 27027, 27618, 27609

ಪರಿಶಿಷ್ಟ ಜಾತಿ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ: 27376, 27615

ಪ್ರವರ್ಗ–2 ಎ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ: 27150 ಇದ್ದು, ಟೆಂಡರ್ ಕಾಮಗಾರಿ ವಿವರ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್‌ಗಿಟ್ಟ ಮೊತ್ತ ರೂ.5.20 ದಿಂದ 30.00 ಲಕ್ಷಗಳ ಮಿತಿಗೊಳಪಟ್ಟು)

ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ, ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ **ಕೊನೆಯ ದಿನಾಂಕ ಮತ್ತು ಸಮಯ: 21–07–2026 ರ ಸಾಯಂಕಾಲ 5:30 ಗಂಟೆವರೆಗೆ.** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ & ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ ಮತ್ತು ಸಮಯ: 23–07–2026 ರಂದು ಮುಂಜಾನೆ 11.00 ಗಂಟೆಯ ನಂತರ.**

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ, ಬಾಗಲಕೋಟೆ

ಡಿಐಪಿಆರ್/ಬಾಗಲಕೋಟೆ/121/ಮಣಿಪಾಲ್/2026–27

ಕ್ವಾರಿ ಬಂಡೆ ಉರುಳಿ 7 ಬಲಿ

← ಮೊದಲ ಪುಟದಿಂದ

ಮೇಲೆ 3 ಜನ ಕೆಲಸಗಾರರು ಕೆಲಸ ಮಾಡುತ್ತಿದ್ದರು. ಬಂಡೆಗಳು ಬಿದ್ದ ಪರಿಣಾಮ 5 ಜನ ಗಂಭೀರವಾಗಿ ಗಾಯಗೊಂಡಿದ್ದು, 7 ಜನರ ಸಾವು ಆಗಿದೆ. ಮಾಲೀಕರು ಯಾರು?, ಪರವಾನಗಿ ಇದೆಯೇ? ಇಲ್ಲವೇ? ಎನ್ನುವ ಮಾಹಿತಿ ಪಡೆಯುತ್ತೇವೆ. ನಿರ್ಲಕ್ಷ್ಯದಿಂದ ಘಟನೆ ನಡೆದಿರುವಂತೆ ಕಾಣುತ್ತಿದೆ ಎಂದು ಹೇಳಿದರು.

ಪ್ರಕರಣ ಸಂಬಂಧ ಎರಡೂ ಕ್ವಾರಿಗೆ ಸಂಬಂಧಿಸಿದಂತೆ ನಾಲ್ವರನ್ನು ವಶಕ್ಕೆ ಪಡೆದಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಬಫರ್ ಜೋನ್ ಬಿಡದೇ ಗಣಿಗಾರಿಕೆ ನಡೆಸಿದ್ದೇ ಅವಘಡಕ್ಕೆ ಕಾರಣ ಎಂಬ ಆರೋಪ ಕೇಳಿ ಬಂದಿದೆ. ದುರಂತದ ಬೆನ್ನಲ್ಲೇ 55 ಕ್ವಾರಿಗಳನ್ನು ತಕ್ಷಣವೇ ಸ್ಥಗಿತಗೊಳಿಸುವಂತೆ ಸೂಚನೆ ನೀಡಲಾಗಿದೆ. ಇನ್ನು, ಘಟನೆ ಬಗ್ಗೆ ಮೃತರ ಸಂಬಂಧಿಕರು ಹಾಗೂ ಪ್ರತ್ಯಕ್ಷದರ್ಶಿಗಳು ವಿವರ ನೀಡಿದ್ದಾರೆ. ಈ ಮಧ್ಯೆ, ಬಸವೇಶ್ವರ ಕ್ರಷರ್ ಮಾಲೀಕ ಆನಂದಸ್ವಾಮಿ ಹಾಗೂ ಕಾವೇರಿ ಕ್ರಷರ್ ಮಾಲೀಕ ಉದಯ ಶಂಕರ್ ಮೇಲೆ ತಾವರೆಕೆರೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಪ್ರಧಾನಿ ಮೋದಿ, ಸಿಎಂ ಡಿಕೆ ಸಂತಾಪ

ಘಟನೆಗೆ ಸಂಬಂಧ ಪ್ರಧಾನಿ ಮೋದಿ ಮೃತರಿಗೆ ಸಂತಾಪ ಸೂಚಿಸಿದ್ದಾರೆ. ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ಭೇಟಿ ಮಾಡಿದ ಸಿಎಂ.ಡಿ.ಕೆ.ಶಿವಕುಮಾರ್ ನಂತರ ಮಾತನಾಡಿ, 7 ಮಂದಿ ಮೃತಪಟ್ಟಿರುವ ಪ್ರಕರಣದ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ನಿಯಮಾನುಸಾರ ಪರಿಹಾರ ನೀಡಲಾಗುವುದು. ಗಣಿ ಹಾಗೂ ಭೂವಿಜ್ಞಾನ ಇಲಾಖೆ ಅಧಿಕಾರಿಗಳು ದುರಂತ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಸ್ಫೋಟದಿಂದಾಗಿ ಇದು ಸಂಭವಿಸಿಲ್ಲ. ಈ ಕ್ವಾರಿ ಕಾನೂನುಬದ್ಧವಾಗಿ ನಡೆಸಲಾಗುತ್ತಿದೆಯೇ ಇಲ್ಲವೇ ಎಂಬ ವರದಿ ಪಡೆದು ನಂತರ ಕ್ರಮ ಕೈಗೊಳ್ಳಲಾಗುವುದು. ಕ್ವಾರಿ ನಡೆಸುವಾಗ ಅದರದೇ ಆದ ನಿಯಮಗಳಿದ್ದು, ಅವುಗಳ ಪಾಲನೆಯಾಗುತ್ತಿವೆಯೇ ಇಲ್ಲವೇ ಎಂಬ ಪರಿಶೀಲನೆ ಮಾಡಲಾಗು ತ್ತದೆ. ಕಾನೂನು ಚೌಕಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಐದು ಜನ ಗಾಯಗೊಂಡಿರುವ ಸುದ್ದಿ ತಿಳಿದು ತೀವ್ರ ಆಘಾತವಾಯಿತು. ಇದೊಂದು ಅತ್ಯಂತ ದುರದೃಷ್ಟಕರ ಘಟನೆ. ವಿಷಯ ತಿಳಿಯುತ್ತಿದ್ದಂತೆ ಅಧಿಕಾರಿ ಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇ ನೆ. ಆಸ್ಪತ್ರೆಗೆ ತೆರಳಿ ಗಾಯಾಳ ಯೋಗಕ್ಷೇಮ ವಿಚಾರಿಸಿದೆ. ಈ ದುರ್ಘಟನೆಯಲ್ಲಿ ಪ್ರಾಣ ಕಳೆದುಕೊಂಡ ಕಾರ್ಮಿಕರ ಕುಟುಂಬಗಳಿಗೆ ನನ್ನ ಭಾವಪೂರ್ಣ ಸಂತಾಪಗಳು. ಸಂತ್ರಸ್ತ ಕುಟುಂಬಗಳ ಪರವಾಗಿ ನಮ್ಮ ಸರಕಾರ ಇರಲಿದ್ದು, ಎಲ್ಲ ರೀತಿಯ ನೆರವು ಮತ್ತು ಸಹಕಾರವನ್ನು ನೀಡಲಾಗುವುದು.

– ಕೃಷ್ಣ ಬೈರೇಗೌಡ, ಸಚಿವ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ
ಸಂ:ವಾಕರಸಾಸಂ:ಕಾನಿಅ:ನಕ್ಷೆ:ಹು:332:2026–27 ದಿನಾಂಕ : 02–07–2026

ಟೆಂಡರ ಪ್ರಕಟಣೆ

KPPP Portal ಪದ್ಧತಿಯಲ್ಲಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂ.ಇ.ಎಸ್ ನಲ್ಲಿ ನೋಂದಾಯಿತ ಅರ್ಹತೆಯುಳ್ಳ ಸಿವಿಲ್ ಗುತ್ತಿಗೆದಾರರಿಂದ ದ್ವಿ–ಲಕೋಟೆ ಆಧಾರದ ಮೇಲೆ ಈ ಕೆಳಕಂಡ ಕಾಮಗಾರಿಗಳಿಗೆ KPPP Portal ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ಈ ಕೆಳಕಂಡ ಕಾಮಗಾರಿಗಳಿಗೆ KPPP Portal ನಲ್ಲಿ ದಿನಾಂಕ : **01.07.2026**ರಂದು ಬಿಡುಗಡೆಗೊಳಿಸಿರುವಂತೆ, ಅರ್ಹ ದರ್ಜೆ–1 ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ http://kppp.karnataka.gov.inನಲ್ಲಿ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಯಾವುದೇ ತಿದ್ದುಪಡಿ/ ದಿನಾಂಕಗಳಲ್ಲಿನ ಬದಲಾವಣೆಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು, ಈ ಕುರಿತು ಪತ್ಯೇಕ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಕ್ರ. ಸಂ.	ಕಾಮಗಾರಿಯ ಹೆಸರು	ಇಂಡೆಂಟ್ ಸಂಖ್ಯೆ	ಟೆಂಡರಿಗೆ ಇಟ್ಟ ಅಂದಾಜು ಮೊತ್ತ (ರೂ. ಗಳಲ್ಲಿ)	ಮುಂಗಡ ಠೇವಣಿ ಹಣ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ
1	ಹುಬ್ಬಳ್ಳಿ ಪ್ರಾದೇಶಿಕ ಕಾರ್ಯಾಗಾರದ ಆವರಣದಲ್ಲಿ PM-e Bus Sewa ಯೋಜನೆಯಡಿಯಲ್ಲಿ ವಿದ್ಯುತ್ ಬಸ್ ಘಟಕವನ್ನು ನಿರ್ಮಿಸುವುದು	NWKRTC/ 2026-27/BD/ WORK_INDENT 96	13,40,06,860/–	15,00,000/–	30/07/2026 ಸಮಯ : 16.00 ಘಂಟೆ

ಹೆಚ್ಚಿನ ವಿವರಗಳಿಗೆ ಸಹಾಯವಾಣಿ (help desk) (help desk) +91–9240214000/+91–9240214001/ +91–8068948777/+91–8046010000, 0836–2332383 ಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ವಾಕರಸಾಸಂಸ್ಥೆ, ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ

ವಾಸಾಸಂಇ/ಧಾರವಾಡ/374/ಕೆಎಸ್ಎಂಸಿಎ/2026–27

ನಕಲಿ ದಾಖಲೆ ಸೃಷ್ಟಿಸಿ ಪೇದೆ: ಜೈಲು ಶಿಕ್ಷೆ

ಬೀದರ್: ನಕಲಿ ದಾಖಲಾತಿಗಳನ್ನು ಸೃಷ್ಟಿಸಿ, ಗೊಂಡ ಜಾತಿ ಪ್ರಮಾಣ ಪತ್ರ ಪಡೆದು ವಂಚಿಸಿರುವುದು ಸಾಬೀತಾದ ಕಾರಣ ಅಪರಾಧಿಗೆ ನಗರದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶೆ ಬಿ.ಕೆ.ಕೋಮಲ ಮೂರು ವರ್ಷ ಸಾದಾ ಜೈಲು ವಿಧಿಸಿದ್ದಾರೆ. ಔರಾದ ತಾಲೂಕಿನ ರಕ್ಷಾಳ (ಬಿ) ಗ್ರಾಮದ ವಿದ್ದೇಶಗೊಂಡ ವಿಠಲ ಗೊಂಡ ಬಾಳೂರೆ ಶಿಕ್ಷೆಗೊಳಗಾದ ಅಪರಾಧಿ. ಒಂದು ವರ್ಷ ಸಾದಾ ಕಾರಾಗೃಹ ಶಿಕ್ಷೆ ಹತ್ತು ಸಾವಿರ ದಂಡ ವಿಧಿಸಿದ್ದಾರೆ.

ದಂಡ ಕೊಡಲು ತಪ್ಪಿದ್ದಲ್ಲಿ ಹದಿನೈದು ದಿನ ಹೆಚ್ಚುವರಿ ಕಾರಾಗೃಹ ಶಿಕ್ಷೆ ನೀಡಬೇಕು ಎಂದು ಆದೇಶಿಸಲಾಗಿದೆ. ಸರಕಾರದ ಪರವಾ ಗಿ ಸರಕಾರಿ ಅಭಿಯೋಜಕ ಶರಣಗೌಡ ವಾದ ಮಂಡಿಸಿದರು.

ಸಮಾಚಾರ ಸಣ್ಣದಲ್ಲ

ಹುಚ್ಚುನಾಯಿ ದಾಳಿ: 8 ಮಂದಿಗೆ ಗಾಯ

ಹಾಸನ: ಸಿಕ್ಕ ಸಿಕ್ಕವರ ಮೇಲೆ ಹುಚ್ಚುನಾಯಿಯೊಂದು ದಾಳಿ ನಡೆಸಿ ಗಾಯಗೊಳಿಸಿದ ಘಟನೆ ಅರಕಲಗೂಡಿನ ಉಳ್ಳೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಹುಚ್ಚುನಾಯಿಯ ದಾಳಿಯಿಂದ ಇಬ್ಬರು ಮಕ್ಕಳು ಸೇರಿ 8 ಮಂದಿ ಗಾಯಗೊಂಡಿದ್ದಾರೆ. ರಾಜು, ರಘು, ಅಂಜಲಿ, ಮಂಜಯ್ಯ ಹಾಗೂ ಇಬ್ಬರು ಮಕ್ಕಳು ಸೇರಿದಂತೆ 8 ಜನರಿಗೆ ಹುಚ್ಚುನಾಯಿ ಕಚ್ಚಿ ಗಾಯಗೊಳಿಸಿದೆ. ಗಾಯಾಳುಗಳಿಗೆ ಕೊಣನೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಹುಚ್ಚುನಾಯಿ ದಾಳಿಯಿಂದ ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ. ಗ್ರಾಮದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಗ್ರಾಮಸ್ಥರ ಒತ್ತಾಯಿಸಿದ್ದಾರೆ.

ವಿಜಯೇಂದ್ರ ವಿರುದ್ಧ ಪಕ್ಷದಲ್ಲೇ ಒಳಸಂಚು

ಹೊನ್ನಾಳಿ: ಪ್ರಸ್ತುತ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಸಹ ಅವರದೇ ಪಕ್ಷದವರು ಒಳಸಂಚು ಮತ್ತು ಪಿತೂರಿಗಳ ಮೂಲಕ ಕಾಲೆಳೆಯುತ್ತಿ



ರುವುದು ಬೇಸರದ ಸಂಗತಿ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಪೀಠದ ಜಗದ್ಗುರು ಡಾ.ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ಭಾರತದಲ್ಲಿ ಮೊಟ್ಟಮೊದಲಿಗೆ ಬಿಜೆಪಿ ಅಧಿಕಾರಕ್ಕೆ ತಂದ ಕೀರ್ತಿ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪಗೆ ಸಲ್ಲುತ್ತದೆ. ಶಾಸನಸಭೆಯಲ್ಲಿ ಕೇವಲ ಇಬ್ಬರು ಶಾಸಕರಿದ್ದ ಕಾಲದಿಂದ ಸಮಾಜದ ಕಟ್ಟಕಡೆಯ ವ್ಯಕ್ತಿಯ ಮೂಲ ಸೌಕರ್ಯಕ್ಕಾಗಿ ಹೋರಾಡಿ ಅವರು ಪಕ್ಷ ಬೆಳೆಸಿದರು. ಆದರೆ, ಅಂದು ಕೂಡ ಬಿಎಸ್‌ವೈ ಅವರ ಕಾಲೆಳೆಯುವ ಕೆಲಸ ನಡೆಯಿತು ಎಂದರು. ಬಿಎಸ್‌ವೈ ಅಧಿಕಾರಾವಧಿಯಲ್ಲಿ ಭಾಗ್ಯಲಕ್ಷ್ಮೀ ಯೋಜನೆ, ಉಚಿತ ಬೈಸಿಕಲ್ ವಿತರಣೆ ಸೇರಿ ಹಲವು ಜನಪ್ರಿಯ ಯೋಜನೆ ಜಾರಿ ಬಂದಿದ್ದವು. ಎಲ್ಲ ವರ್ಗದ ಸಮುದಾಯಗಳಿಗೆ ಅವರು ಸ್ಪಂದಿಸಿದ್ದರು ಎಂದು ಸ್ಮರಿಸಿದರು. ವೀರಶೈವ ಲಿಂಗಾಯತ ಸಮಾಜವನ್ನು ನಿರ್ಲಕ್ಷಿಸಿ, ಆ ಪಟ್ಟವನ್ನು ಬೇರೆ ಯಾರಿಗಾದರೂ ನೀಡಿದರೆ ಬಿಜೆಪಿಗೆ ನಿರೀಕ್ಷಿತ ಪ್ರಮಾಣದಲ್ಲಿ ಫಲ ದೊರೆಯಲಾರದು ಎಂದು ಎಚ್ಚರಿಸಿದರು.

ಬಸ್‌ನಿಂದ ತಲೆ ಹೊರಗೆ ರುಂಡ ತುಂಡಾಗಿ ಸಾವು

ಹುಬ್ಬಳ್ಳಿ: ಬಸ್ ಪ್ರಯಾಣದ ವೇಳೆ ಕಿಟಕಿಯಿಂದ ತಲೆ ಹೊರಹಾಕಿದ್ದ ಯುವಕನಿಗೆ ಹಿಂದಿನಿಂದ ಬಂದ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಯುವಕನ ರುಂಡ ತುಂಡಾಗಿ ಸ್ಥಳದಲ್ಲೇ

ಮೃತಪಟ್ಟಿರುವ ಘಟನೆ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಶೆರೆವಾಡ ಗ್ರಾಮದ ಸಮೀಪ ನಡೆದಿದೆ. ಮೃತ ಯುವಕನನ್ನು ಶಿರೂರು ಗ್ರಾಮದ ಪಕ್ಕೀರಯ್ಯ ಚನ್ನಯ್ಯ ಮುತ್ತಳ್ಳಿಮಠ (18) ಎಂದು ಗುರುತಿಸಲಾಗಿದೆ. ಪಕ್ಕೀರಯ್ಯ ಹುಬ್ಬಳ್ಳಿಯಲ್ಲಿ ಐಟಿಐ ವ್ಯಾಸಂಗ ಮಾಡುತ್ತಿದ್ದು, ಲಕ್ಷ್ಮೇಶ್ವರ ಕಡೆಗೆ ತೆರಳುತ್ತಿದ್ದ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ. ಬಸ್‌ನ ಹಿಂಬದಿ ಆಸನದಲ್ಲಿ ಕುಳಿತಿದ್ದ ಆತ ಕಿಟಕಿಯಿಂದ ತಲೆ ಹೊರಹಾಕಿದ್ದಾನೆ ಎನ್ನಲಾಗಿದೆ. ಇದೇ ವೇಳೆ ಹಿಂದಿನಿಂದ ವೇಗವಾಗಿ ಬಂದ ಟಿಪ್ಪರ್, ಬಸ್‌ಗೆ ಸಮೀಪವಾಗಿ ಹಾದುಹೋಗುವಾಗ ಯುವಕನ ತಲೆಗೆ ತಗುಲಿ ಯುವಕನ ರುಂಡ ತುಂಡಾಗಿ ಕೆಳಗಡೆ ಬಿದ್ದಿದ್ದು, ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಸ್ಥಳಕ್ಕೆ ಕುಂದಗೋಳ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಿರಾಮ
ಪ್ರತಿ ಭಾನುವಾರ



ದಿನ ವಿಶೇಷ

03 ಜುಲೈ 2026 ಶುಕ್ರವಾರ

- ಸೂರ್ಯೋದಯ : 5-44
- ಸೂರ್ಯಾಸ್ತ : 7-15
- ತಿಥಿ : ತೃತೀಯ
- ನಕ್ಷತ್ರ : ಶ್ರಾವಣ
- ಸಂವತ್ಸರ : ಪರಾಭವ
- ಅಯನ : ದಕ್ಷಿಣಾಯನ
- ಋತು : ವರ್ಷ
- ಮಾಸ : ಜ್ಯೇಷ್ಠ
- ಪಕ್ಷ : ಕೃಷ್ಣಪಕ್ಷ

ಪ್ರತಿಯೊಬ್ಬ ನಾಗರಿಕರ ಮತದಾನದ ಹಕ್ಕನ್ನು ಕಾಪಾಡುವುದು ನಮ್ಮ ಸರಕಾರದ ಜವಾಬ್ದಾರಿ: ಸಿಎಂ ಡಿ.ಕೆ.ಶಿವಕುಮಾರ್

ಬಿಎಲ್‌ಓಗಳೇ ಮನೆಗೆ ಹೋಗಿ ಫಾರಂ ವಿತರಿಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಎಲ್‌ಓಗಳೇ ಮನೆ ಮನೆಗೆ ಹೋಗಿ ಗಣತಿ ನಮೂನೆ ವಿತರಿಸಬೇಕು. ಶಾಸಕರು ಹೇಳಿದರು ಎಂದು ಅವರಿಂದ ವಿತರಣೆ ಆಗಬಾರದು. ಭರ್ತಿ ಮಾಡಿದ ಗಣತಿ ನಮೂನೆಗಳನ್ನು ಬೇಕಾದರೆ ಬಿಎಲ್‌ಎಗಳು ಜನರಿಂದ ಸಂಗ್ರಹಿಸಿ ಬಿಎಲ್‌ಓಗಳಿಗೆ ನೀಡಲು ಅವಕಾಶವಿದೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಲ್ಯಾಣ ಮಂಟಪಗಳಲ್ಲಿ ಗಣತಿ ನಮೂನೆ ವಿತರಣೆ ಮಾಡಲಾಗುತ್ತಿದೆ ಎಂಬ ಆರೋಪ ಸಂಬಂಧ ಈ ವಿಚಾರ ನನ್ನ ಗಮನಕ್ಕೂ ಬಂದಿದೆ. ಇದು ಕಾನೂನು ಬಾಹಿರ. ಇದನ್ನು ಯಾರೇ ಮಾಡಿದರೂ ಅದಕ್ಕೆ ಅವಕಾಶ ನೀಡುವುದಿಲ್ಲ. ನಮ್ಮ ಶಾಸಕರು ಮಾಡಿದರೂ ನಾವು ಅದಕ್ಕೆ ಅವಕಾಶ ನೀಡುವುದಿಲ್ಲ ಎಂದರು.

ಕುಮಾರಸ್ವಾಮಿ ಅವರು ರಾಮನಗರವನ್ನು ಉಲ್ಲೇಖಿಸಿ ಈ ಆರೋಪ ಮಾಡಿದ್ದಾರೆ ಎಂದು ಕೇಳಿದಾಗ, ಜಯನಗರದಲ್ಲಿ ಬಿಜೆಪಿ ಶಾಸಕರು ಇದನ್ನೇ ಮಾಡುತ್ತಿದ್ದಾರೆ. ಎಲ್ಲೇ ಆದರೂ ಬಿಎಲ್‌ಓಗಳೇ ವಿತರಣೆ ಮಾಡಬೇಕು. ಜು.29ರವರೆಗೆ ಕಾಲಾವಕಾಶ ಇದೆ. ಬಿಎಲ್‌ಓಗಳೇ ಮನೆಗೇ ಹೋಗಿ ಅರ್ಜಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸುತ್ತಿದ್ದೇನೆ. ಎಸ್‌ಐಆರ್ ಪ್ರಕ್ರಿಯೆಯನ್ನು ಬಹಳ ಗಂಭೀರವಾಗಿ ಪರಿಗಣಿಸಲಾಗಿದೆ. ಪ್ರತಿಯೊಬ್ಬ ನಾಗರಿಕರ ಮತದಾನದ ಹಕ್ಕನ್ನು ಕಾಪಾಡುವುದು ನಮ್ಮ ಸರಕಾರದ ಜವಾಬ್ದಾರಿ. ಹೀಗಾಗಿ ಪ್ರತಿ ವಾರ್ಡ್ ಹಾಗೂ ಬೂತ್‌ನಲ್ಲಿ ಸಹಾಯ ಕೇಂದ್ರ ಸ್ಥಾಪಿಸಲು ಮುಂದಾಗಿದ್ದೇವೆ. ರಾಜ್ಯದ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಕೇಳಿದಾಗ, ವಿರೋಧ ಪಕ್ಷಗಳು ಇರುವುದೇ ಆರೋಪ ಮಾಡಲು. ನಾವು ಇರುವುದು ಜನರ ಸೇವೆಗೆ. ನಾವು ನಮ್ಮ ಕರ್ತವ್ಯ ಮಾಡುತ್ತೇವೆ ಎಂದರು.

ಸಾರಿಗೆ ದರ ವಿಚಾರದಲ್ಲಿ ಅಧಿಕಾರಿಗಳು ದೊಡ್ಡ ಗಾಬರಿ ವ್ಯಕ್ತಪಡಿಸಿದ್ದಾರೆ. ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚಾಗಿದ್ದು, ಅವರ ಪ್ರಸ್ತಾವನೆ ಏನಿದೆ ಸಲ್ಲಿಕೆ ಮಾಡಿ ಎಂದು ಹೇಳಿದ್ದೇವೆ. ತಾಂತ್ರಿಕವಾಗಿ ಸಾರಿಗೆಯವರಿಗೆ ಎಷ್ಟು ನಷ್ಟವಾಗುತ್ತಿದೆ ಎಂದು ಪರಿಶೀಲನೆ ಮಾಡಿದ ಬಳಿಕ ತೀರ್ಮಾನ ಮಾಡುತ್ತೇವೆ.

-ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ

ವಿಧಾನಸಭಾ ಕ್ಷೇತ್ರಗಳಲ್ಲಿ ಜನಸ್ಪಂದನ ಕಾರ್ಯಕ್ರಮ: ಜನರ ಸಮಸ್ಯೆ ಆಲಿಸಲು ಪ್ರಜಾಸೇವೆ ಎಂಬ ಪ್ರತ್ಯೇಕ ಸಚಿವಾಲಯ ರೂಪಿಸುತ್ತಿದ್ದು, ಸಚಿವರಿಗೆ ಇದರ ಜವಾಬ್ದಾರಿ ವಹಿಸಲಾಗುವುದು. ಯಾರ ದೂರೇ ಇರಲಿ, ಸಮಸ್ಯೆ ಇರಲಿ, ಪ್ರತಿಭಟನೆ ಮಾಡುವವರು ತಮ್ಮ ನೋವು ಹೇಳಿಕೊಳ್ಳಲು ಹಾಗೂ ಅವರ ಸಮಸ್ಯೆ ಬಗೆಹರಿಸಲು ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ ಹಾಗೂ ಜಿಲ್ಲಾ ಸಚಿವರಿಗೆ ಆ ವಿಚಾರ ತಲುಪಿಸಲು ಈ ಇಲಾಖೆ ಕಾರ್ಯನಿರ್ವಹಿಸಲಿದೆ. ಇದಕ್ಕೆ ಐಎಎಸ್ ಅಧಿಕಾರಿಯನ್ನು ಕಾರ್ಯದರ್ಶಿಯಾಗಿ ನೇಮಿಸುತ್ತಿದ್ದು, ಅಗತ್ಯ ಅಧಿಕಾರಿಗಳನ್ನು ನೀಡಲು ಇಂದು ತೀರ್ಮಾನಿಸಲಾಗಿದೆ. ಎಲ್ಲೇ ಪ್ರತಿಭಟನೆ ನಡೆದರೂ ಅವರ ಅರ್ಜಿ ಸ್ವೀಕರಿಸಿ ಕಾನೂನುಬದ್ಧವಾಗಿ ಸಹಾಯ ಮಾಡಲು ಅವಕಾಶವಿದ್ದರೆ ನಾವು ಕಾರ್ಯನಿರ್ವಹಿಸುತ್ತೇವೆ ಎಂದು ತಿಳಿಸಿದರು.

ಪ್ರತಿ ಜಿಲ್ಲಾ ಉಸ್ತುವಾರಿ ಸಚಿವರು ಕಡ್ಡಾಯವಾಗಿ ತಿಂಗಳಿಗೆ 2 ದಿನ (ಮೊದಲ ಹಾಗೂ ಮೂರನೇ ಶನಿವಾರದಂದು) 2 ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಿ ಈ ಪ್ರಜಾಸೇವೆ ಅಭಿಯಾನದಲ್ಲಿ ಭಾಗವಹಿಸಬೇಕು. ಎಲ್ಲ ಇಲಾಖೆಗಳ ಶಾಖೆಗಳು ಅಲ್ಲಿ ತೆರೆಯಲಾಗುವುದು. ಆ ಜಿಲ್ಲೆಗೆ ಸಂಬಂಧಿಸಿದ ಅಧಿಕಾರಿಗಳು ಅಲ್ಲಿ ಉಪಸ್ಥಿತರಿರಬೇಕು. ಆ ಭಾಗದ ಜನರಿಗೆ ಈ ಸಭೆ ಕುರಿತು ಮುಂಚಿತವಾಗಿ ಮಾಹಿತಿ ನೀಡಲಾಗುವುದು. ಸರ್ಕಾರವೇ ಜನರ ಮನೆ ಬಾಗಿಲಿಗೆ ಹೋಗುವಂತಾಗಬೇಕು. ನಾನು ಕೂಡ ಕೆಲವು ತಾಲ್ಲೂಕುಗಳಿಗೆ ಮಧ್ಯೆ ಮಧ್ಯೆ ಭೇಟಿ ಮಾಡುತ್ತೇನೆ ಎಂದು ತಿಳಿಸಿದರು.

ಗ್ರಾಮ್ ಜಿ ಯೋಜನೆಯಿಂದ ವಾರ್ಷಿಕ 3,806 ಕೋಟಿ ಹೊರೆ

ಕೇಂದ್ರಸರಕಾರದ ಗ್ರಾಮ್ ಜಿ ಯೋಜನೆ ವಿರುದ್ಧ ನಾವು ಹೋರಾಟ ಮಾಡಿದ್ದು, ನ್ಯಾಯಾಲಯದ ಮೆಟ್ಟಿಲು ಏರಿದ್ದೇವೆ. ಯೋಜನೆಯಲ್ಲಿ ಶೇ.40 ವೆಚ್ಚ ಭರಿಸಲು ಸಾಧ್ಯವಿಲ್ಲ ಎಂದು ಹೇಳಿದ್ದು, ನಾವು ಷರತ್ತಿನ ಆಧಾರದ ಮೇಲೆ ಯೋಜನೆ ಜಾರಿ ಮಾಡಬೇಕಾಗಿದೆ. ನಮ್ಮ ರಾಜ್ಯಕ್ಕೆ ಇದರಿಂದ ವಾರ್ಷಿಕ 3,806 ಕೋಟಿ ವೆಚ್ಚ ಬೀಳಲಿದೆ. ಎಲ್ಲೆಲ್ಲಿ ಈ ಕೆಲಸ ಕೈಗೊಳ್ಳಬೇಕು ಎಂದು ಇವತ್ತಿನಿಂದ ಅಧಿಸೂಚನೆ ಹೊರಡಿಸಲಾಗುತ್ತಿದೆ. ಪಂಚಾಯಿತಿಗಳಲ್ಲೂ ದಾಖಲೆ ಶುದ್ಧೀಕರಣಕ್ಕೆ ಭೂಗ್ಯಾರಂಟಿ ನೀಡಲಾಗುತ್ತಿದೆ. ಹೀಗಾಗಿ ಎಲ್ಲಾ ರಸ್ತೆಗಳನ್ನು ಸರ್ಕಾರಿ ರಸ್ತೆಗಳಾಗಿ ಘೋಷಿಸಲು ತೀರ್ಮಾನ ಮಾಡಲಾಗಿದೆ. ಇದಕ್ಕಾಗಿ ಕಾನೂನು ಅವಕಾಶ ಮಾಡಿಕೊಡುತ್ತೇವೆ ಎಂದರು.

ಪ್ರಮುಖ ನಿರ್ಣಯಗಳು

- ರಾಷ್ಟ್ರೀಯ ಅಂಧತ್ವ ನಿಯಂತ್ರಣದಿಂದ ಸಣ್ಣ ಮಕ್ಕಳಲ್ಲಿ ದೃಷ್ಟಿ ಆರೈಕೆ ಬಲಪಡಿಸಲು 26 ಕೋಟಿ ಅನುದಾನಕ್ಕೆ ಅನುಮೋದನೆ ನೀಡಲಾಗಿದೆ.
- ಬಾಗಲಕೋಟೆಯ ಬಿಳಗಿ ತಾಲೂಕಿನಲ್ಲಿ ಕೃಷ್ಣಾ ನದಿಯಿಂದ 7 ಸಾವಿರ ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲು ಬಿಳಗಿ ಏತ ನೀರಾವರಿ ಯೋಜನೆಗೆ 98.50 ಕೋಟಿ ರು.
- ಕಲಬುರಗಿಯಲ್ಲಿ ವಾಣಿಜ್ಯ ಹಾಗೂ ಕೈಗಾರಿಕೆ ಇಲಾಖೆಯಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜಂಟಿ ಸಹಕಾರದಲ್ಲಿ ಜವಳಿ ಪಾರ್ಕ್ ನಿರ್ಮಾಣಕ್ಕೆ ಕೆಐಎಡಿಬಿ ವತಿಯಿಂದ 700 ಕೋಟಿ ವೆಚ್ಚದ ಯೋಜನೆಗೆ ಮೊದಲ ಹಂತಕ್ಕೆ 320 ಕೋಟಿಗೆ ಅನುಮೋದನೆ
- ಎನ್‌ಜಿಎಫ್ ನಲ್ಲಿ 60 ಎಕರೆ ಜಾಗದಲ್ಲಿ ಟ್ರೀ ಪಾರ್ಕ್ ನಿರ್ಮಾಣಕ್ಕೆ 26 ಕೋಟಿ ಅನುದಾನ
- ಅಲ್ಪಸಂಖ್ಯಾತರ ಇಲಾಖೆಯಿಂದ ಕ್ರೀಡಾ ಉಡುಪು, ವಿದ್ಯಾರ್ಥಿ ಸಾಮಾಗ್ರಿ ವಿತರಣೆಗೆ 33 ಕೋಟಿ ರು.
- ವಾಣಿಜ್ಯ ಹಾಗೂ ಕೈಗಾರಿಕ ಇಲಾಖೆ ದೇವನಹಳ್ಳಿಯಲ್ಲಿ ಏರೋಸ್ಪೇಸ್ ಪಾರ್ಕ್ ನಲ್ಲಿ ಕಾಮನ್ ಫೆಸಿಲಿಟ್ ಸೆಂಟರ್ ಮಾಡಲು 30 ಕೋಟಿ ಅನುದಾನ ನೀಡಲು ಕೆಐಎಡಿಬಿಗೆ ಅನುಮತಿ
- ವಿಕಲಚೇತನ ಹಕ್ಕು ಕಾಯ್ದೆ ಅನ್ವಯ ಕೆಐಎಡಿಬಿಯಲ್ಲಿ ಶೇ.5 ಭೂ ಮೀಸಲಾತಿ ರಿಯಾಯಿತಿ ಬಗ್ಗೆ ಕಾನೂನು ತರಲಾಗಿತ್ತು. ಈಗ ಅವರಿಗೆ ಎರಡು ಆಯ್ಕೆ ನೀಡಿದ್ದು, ಭೂಮಿ ಮೌಲ್ಯದ ಶೇ.10 ಅಥವಾ ಗರಿಷ್ಠ 20 ಲಕ್ಷದವರೆಗೆ ರಿಯಾಯಿತಿ ನೀಡಲು ಮಿತಿ ಹಾಕಲಾಗಿದೆ.

ನಾಗರಿಕರಲ್ಲಿ ಜಾಗೃತಿ ಮೂಡಿಸುವುದು, ಅರ್ಹ ಮತದಾರರನ್ನು ಪಟ್ಟಿಯಲ್ಲಿ ಉಳಿಸಿಕೊಳ್ಳುವುದು ಅತ್ಯವಶ್ಯಕ: ದಿನೇಶ್ ಗೂಳಿಗೌಡ

ಗ್ಯಾರಂಟಿ ಸಮಿತಿ ಸದಸ್ಯರು ಬಿಎಲ್‌ಓಗಳಿಗೆ ನೆರವಾಗಿ

ಬೆಂಗಳೂರು: ರಾಜ್ಯದಲ್ಲಿ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ಆರಂಭವಾಗಿದ್ದು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರು ತಮ್ಮ ಕ್ಷೇತ್ರಗಳಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಅಭಿಯಾನದಲ್ಲಿ ಸಕ್ರಿಯವಾಗಿ ತೊಡಗಿಕೊಂಡು ಮತದಾರರು ಮತ್ತು ಬಿಎಲ್‌ಎಗಳಿಗೆ ನೆರವಾಗಬೇಕು ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ದಿನೇಶ್ ಗೂಳಿಗೌಡ ಹೇಳಿದರು.

ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ನಾಗರಿಕರಲ್ಲಿ ಜಾಗೃತಿ ಮೂಡಿಸುವುದು ಮತ್ತು ಅರ್ಹ ಮತದಾರರು ತಮ್ಮ ವಿವರಗಳನ್ನು ಪರಿಶೀಲಿಸಿ ಅಗತ್ಯವಿದ್ದರೆ ನಮೂನೆಗಳನ್ನು ಭರ್ತಿ ಮಾಡಲು ಸಹಕರಿಸುವುದರ ಜೊತೆಗೆ ಎಸ್‌ಐಆರ್ ಬಗ್ಗೆ ಮತದಾರರಲ್ಲಿ ಅರಿವು ಮೂಡಿಸಬೇಕಿದೆ. ಅವರಿಗೆ ಅಗತ್ಯ ದಾಖಲೆಗಳು ಮತ್ತು ಅರ್ಜಿ ಸಲ್ಲಿಕೆ ಕುರಿತು ಮಾಹಿತಿ ನೀಡುವ ಕಾರ್ಯದಲ್ಲಿ ತೊಡಗಿಕೊಳ್ಳಬೇಕು. ರಾಜ್ಯದ ಎಲ್ಲ ಜಿಲ್ಲಾ, ತಾಲೂಕು, ವಿಧಾನಸಭಾ ಕ್ಷೇತ್ರ ಹಾಗೂ ವಾರ್ಡ್ ಮಟ್ಟದ ಗ್ಯಾರಂಟಿ ಸಮಿತಿ ಸದಸ್ಯರು ತಮ್ಮ ವ್ಯಾಪ್ತಿಯಲ್ಲಿ ಅರ್ಹ ಮತದಾರರಿಗೆ ಮತದಾರರ ಪಟ್ಟಿ ಪರಿಷ್ಕರಣೆಯ ಮಹತ್ವವನ್ನು ತಿಳಿಸಿ, 18 ವರ್ಷ ಪೂರ್ಣಗೊಂಡ ಯುವಕರು ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಿಸಿಕೊಳ್ಳುವಂತೆ, ಈಗಾಗಲೇ ನೋಂದಾಯಿತರಾಗಿರುವವರು ತಮ್ಮ ಹೆಸರು, ವಿಳಾಸ ಹಾಗೂ ಇತರೆ ವಿವರಗ ಳನ್ನು ಪರಿಶೀಲಿಸಿ ಅಗತ್ಯವಿದ್ದಲ್ಲಿ ತಿದ್ದುಪಡಿ ಮಾಡಿಸಿಕೊಳ್ಳುವಂತೆ ಅರಿವು ಮೂಡಿಸಬೇಕಿದೆ ಎಂದರು.

ಗ್ಯಾರಂಟಿ ಯೋಜನೆಯ ಫಲಾನುಭವಿಗಳಿಗೆ ಮತದಾರರ ಗುರುತಿನ ಚೀಟಿ ಅತ್ಯವಶ್ಯಕ. ಮತದಾನದ ಗುರುತಿನ ಚೀಟಿ ಹೊಂದಿರದವರಿಗೆ ಗ್ಯಾರಂಟಿ ಯೋಜನೆಗಳ ಪ್ರಯೋಜನ ಸಿಗುವುದಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈಗಾಗಲೇ ತಿಳಿಸಿದ್ದಾರೆ. ರಾಜ್ಯದ ಪ್ರತಿಯೊಬ್ಬ ಮತದಾರರಿಗೂ ಗ್ಯಾರಂಟಿ ಯೋಜನೆಗಳು ತಲುಪಬೇಕು. ಇದು ಕಾಂಗ್ರೆಸ್ ಸರಕಾರದ ಆಶಯ. ಸಮಿತಿ ಸದಸ್ಯರು ಬಿಎಲ್‌ಎಗಳು ಹಾಗೂ ಸ್ಥಳೀಯ ಮುಖಂಡರೊಂದಿಗೆ ಸಮನ್ವಯ ಸಾಧಿಸಿ ಅಭಿಯಾನ ಯಶಸ್ವಿಗೊಳಿಸಿ ಎಂದರು.

ಹೆಚ್ಚುವರಿ ಹೊಣೆ

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾಗಿದ್ದ ಎಂ.ಎನ್.ಸೂರಜ್ ಹೆಗ್ಡೆ ಅವರ ಅಕಾಲಿಕ ನಿಧನದಿಂದ, ಅವರು ನಿರ್ವಹಿಸುತ್ತಿದ್ದ ಜವಾಬ್ದಾರಿಗಳನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ದಿನೇಶ್ ಗೂಳಿಗೌಡ ಅವರಿಗೆ ಹೆಚ್ಚುವರಿ ಹೊಣೆ ವಹಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ.

ಆಡಳಿತಾತ್ಮಕ ಹಿತದೃಷ್ಟಿಯಿಂದ ಐವರು ಐಎಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾಸೇವೆ ಇಲಾಖೆಗೆ ಹರ್ಷಗುಪ್ತ ಪ್ರಧಾನ ಕಾರ್ಯದರ್ಶಿ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜಾರಿಗೆ ತಂದಿರುವ ಪ್ರಜಾ ಸೇವಾ ಇಲಾಖೆಯ ಪ್ರಧಾನ

ಕಾರ್ಯದರ್ಶಿಯಾಗಿ ಹರ್ಷ ಗುಪ್ತ ಅವರನ್ನು ನೇಮಕ ಮಾಡಲಾಗಿದೆ.

ರಾಜ್ಯ ಸರಕಾರ ಸಾಲು ಸಾಲು ಐಎಎಸ್ ಅಧಿಕಾರಿಗಳ ವರ್ಗಾವಣೆ ಮಾಡುತ್ತಿದ್ದು, ಗುರುವಾರ ಐವರು ಅಧಿಕಾರಿಗಳ ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ಅಧಿಕಾರಿಗಳ ಮನವಿ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಐವರು ಐಎಎಸ್ ಅಧಿಕಾರಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಲಾಗಿದೆ.

ಪ್ರಮುಖವಾಗಿ ಹಿರಿಯ ಐಎಎಸ್ ಅಧಿಕಾರಿ ಹರ್ಷ ಗುಪ್ತ ಅವರನ್ನು ನೂತನ ಆರಂಭಿಸಿರುವ ಪ್ರಜಾ ಸೇವಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಜತೆಗೆ ಅವರು ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿಯ ಅಧ್ಯಕ್ಷ ಹುದ್ದೆಯ ಹೆಚ್ಚುವರಿ ಪ್ರಭಾರ ನೀಡಲಾಗಿದೆ. ಇನ್ನು ಹುದ್ದೆ ನಿರೀಕ್ಷೆಯಲ್ಲಿದ್ದ ಆರ್.ರಾಗಪ್ರಿಯ ಅವರನ್ನು ಕಾರ್ಮಿಕ ಇಲಾಖೆಯ ಆಯಕ್ತರನ್ನಾಗಿ ನೇಮಿಸಲಾಗಿದೆ. ಕಾರ್ಮಿಕ ಇಲಾಖೆಯ ಆಯುಕ್ತರಾಗಿದ್ದ ಡಾ.ಗೋಪಾಲಕೃಷ್ಣ ಅವರನ್ನು ಕಾಲೇಜು ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದೆ. ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರಾಗಿದ್ದ ಎನ್.ಮಂಜುಶ್ರೀ ಅವರಿಗೆ ಯಾವುದೇ ಹುದ್ದೆ ನೀಡಿಲ್ಲ.

ಪ್ರಜಾಸೇವಾ ಇಲಾಖೆ ಸ್ಥಾಪನೆ: ರಾಜ್ಯ ಸರಕಾರದಲ್ಲಿ ಆಡಳಿತಾತ್ಮಕ ದಕ್ಷತೆ ಹೆಚ್ಚಿಸಲು ಮತ್ತು ಸಾರ್ವಜನಿಕರ ಅಹವಾಲು ಒಂದೇ ಸೂರಿನಡಿ ತ್ವರಿತವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರಕಾರ ಮಹತ್ತರ ಹೆಜ್ಜೆಯಿಟ್ಟಿದೆ. ಸರಕಾರ ಅಧಿಕಾರಕ್ಕೆ ಬಂದ ಬಳಿಕ ಘೋಷಿಸಿದ್ದ ಮಹತ್ವಾಕಾಂಕ್ಷೆಯ ಪ್ರಜಾಸೇವಾ ಇಲಾಖೆಯನ್ನು ಹೊಸದಾಗಿ ಸ್ಥಾಪಿಸಿ ಆದೇಶ ಹೊರಡಿಸಲಾಗಿದೆ. ಜೂನ್ 20 ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಜೂ.24ರಂದು ಈ ಹೊಸ ಇಲಾಖೆಯನ್ನು ಸೃಜಿಸಿ ಅಧಿಸೂಚನೆ ಹೊರಡಿಸಿದೆ. ಸಾರ್ವಜನಿಕರ ದೂರುಗಳ ತ್ವರಿತ ವಿಲೇವಾರಿ ಮತ್ತು ಆಡಳಿತಾತ್ಮಕ ದಕ್ಷತೆ ಹೆಚ್ಚಿಸಲು ಪ್ರಜಾಸೇವಾ ಇಲಾಖೆಯನ್ನು ಹೊಸದಾಗಿ ಸ್ಥಾಪಿಸಿದೆ. ಆಡಳಿತ ಸುಧಾರಣೆ, ಸಾರ್ವಜನಿಕ ಕುಂದುಕೊರತೆ ವಿಭಾಗ ಮತ್ತು ಸಕಾಲ ಮಿಷನ್ ಅನ್ನು ವಿಲೀನಗೊಳಿಸಲಾಗಿದೆ.

ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಜೀವಕ್ಕೆ ಕುತ್ತು?

ಚಿಕ್ಕಬಳ್ಳಾಪುರ: ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ನಡೆದ ಗದ್ದಲ ಹಾಗೂ ಅದರ ನಂತರ

ಜಿಲ್ಲೆಯ ರಾಜಕೀಯ ವಲಯದಲ್ಲಿ ಉಂಟಾಗಿರುವ ಬೆಳವಣಿಗೆಗಳ ಹಿನ್ನೆಲೆ ಶಾಸಕ ಪ್ರದೀಪ್ ಈಶ್ವರ್ ಅವರಿಗೆ ಜೀವಭಯದ ಆತಂಕ ಎದುರಾಗಿರುವ ಕಾರಣ ಹೆಚ್ಚಿನ ಪೊಲೀಸ್ ಭದ್ರತೆ ಒದಗಿಸುವ ಅಗತ್ಯವಿದೆ ಎಂದು ರಾಜ್ಯ ಗುಪ್ತಚರ ಇಲಾಖೆ ಗೃಹ ಇಲಾಖೆಗೆ ವರದಿ ಸಲ್ಲಿಸಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಜೂನ್ 27ರಂದು ಸರಕಾರದ ವತಿಯಿಂದ ನಡೆದ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಶಾಸಕ ಪ್ರದೀಪ್ ಈಶ್ವರ್ ಕಾರ್ಯಕ್ರಮದಲ್ಲಿ ಇರಬಾರದು, ಕುಮಾರಸ್ವಾಮಿ ಮತ್ತು ದೇವೇಗೌಡರ ಕುಟುಂಬದ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ, ಗೋ ಬ್ಯಾಕ್ ಪ್ರದೀಪ್ ಈಶ್ವರ್ ಎಂದು ಘೋಷಣೆಗಳನ್ನು ಕೂಗುತ್ತಾ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಅಪಮಾನ ಮಾಡಿದ್ದರು.

ಇದರಿಂದ ಕುಪಿತರಾದ ಶಾಸಕರು ತೋಳು ತಟ್ಟಿ ಅಬ್ಬರಿಸಿದ್ದು ಭಾರೀ ಸುದ್ದಿಯಾಗಿತ್ತು . ಈ ಅನಿರೀಕ್ಷಿತ ಗಲಾಟೆ ಮತ್ತು ಗದ್ದಲ ಕ್ಷೇತ್ರದಲ್ಲಿ ಅಶಾಂತಿಗೆ ಕಾರಣವಾಗಿತ್ತು. ಮೇಲಾಗಿ ಈ ಘಟನೆ ರಾಜಕೀಯವಾಗಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಕಾಂಗ್ರೆಸ್ ಹಾಗೂ ಬಿಜೆಪಿ-ಜೆಡಿಎಸ್ ಮುಖಂಡರ ನಡುವೆ ಆರೋಪ-ಪ್ರತ್ಯಾರೋಪ, ದೂರು ಪ್ರತಿದೂರಿಗೆ ಕಾರಣವಾಗಿದೆ. ಈ ಬೆಳವಣಿಗೆಗಳ ಬೆನ್ನಲ್ಲೇ ಜುಲೈ 2ರಂದು ರಾಜ್ಯ ಗುಪ್ತಚರ ಇಲಾಖೆಯ ಹಿರಿಯ ಅಧಿಕಾರಿಗಳು ಚಿಕ್ಕಬಳ್ಳಾಪುರ ಜಿಲ್ಲೆಗೆ ಭೇಟಿ ನೀಡಿ ಕ್ಷೇತ್ರದ ವಿವಿಧ ಭಾಗಗಳಲ್ಲಿ ಸಂಚರಿಸಿ ಮಾಹಿತಿ ಕಲೆ ಹಾಕಿರುವುದು ಗಮನಾರ್ಹವಾಗಿದೆ.

ಮುನ್ನೆಚ್ಚರಿಕೆ ಕ್ರಮಗಳಿಗೆ ಶಿಫಾರಸು

ಸಲ್ಲಿಕೆಯಾಗಿರುವ ಕ್ಷೇತ್ರದ ಅಧ್ಯಯನದ ವರದಿಯಲ್ಲಿ ಶಾಸಕ ಪ್ರದೀಪ್ ಈಶ್ವರ್‌ಗೆ ಹೆಚ್ಚುವರಿ ಪೊಲೀಸ್ ಭದ್ರತೆ ಒದಗಿಸುವುದು, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭದ್ರತಾ ವ್ಯವಸ್ಥೆಯನ್ನು ಬಲಪಡಿಸುವುದು ಹಾಗೂ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಲಾಗಿದೆ ಎಂಬ ಮಾಹಿತಿ ಉನ್ನತ ಮೂಲಗಳಿಂದ ತಿಳಿದುಬಂದಿದೆ. ಆದರೆ ಈ ಕುರಿತು ಪೊಲೀಸ್ ಇಲಾಖೆ ಅಥವಾ ಗೃಹ ಇಲಾಖೆಯಿಂದ ಅಧಿಕೃತ ಮಾಹಿತಿ ಇನ್ನೂ ಹೊರಬಂದಿಲ್ಲ.

ಕಲಬುರಗಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆಗೆ ಸಚಿವ ಸಂಪುಟ ಒಪ್ಪಿಗೆ

ಕಲಬುರಗಿ: ಜಿಲ್ಲೆಯ ಮಹತ್ವಾಕಾಂಕ್ಷೆಯ ಜವಳಿ ಪಾರ್ಕ್ ಅನ್ನು ಕರ್ನಾಟಕ ಕೈಗಾರಿಕಾ

ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಮೂಲಕ ಅಭಿವೃದ್ಧಿಪಡಿಸಲು ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಅವರು, ಕಲಬುರಗಿ ಜಿಲ್ಲೆಯ ನಂದಿಸಿನ್ನೂರು ಮತ್ತು ಕಿರಣಗಿ ಗ್ರಾಮಗಳ ವ್ಯಾಪ್ತಿಯ 1,000 ಎಕರೆಯಲ್ಲಿ ಜವಳಿ ಪಾರ್ಕ್ ಅಭಿವೃದ್ಧಿಪಡಿಸಲಾಗುತ್ತಿದ್ದು, ಯೋಜನೆಯ ಒಟ್ಟು ವೆಚ್ಚ 1,700 ಕೋಟಿ ಎಂದು ಹೇಳಿದರು. ಮೊದಲ ಹಂತದ ಅಭಿವೃದ್ಧಿ ಕಾಮಗಾರಿಗಳಿಗೆ 320 ಕೋಟಿ ವೆಚ್ಚವನ್ನು ಕೆಐಡಿಬಿ ಭರಿಸಲಿದೆ ಎಂದು ತಿಳಿಸಿದರು. ಕೇಂದ್ರ ಸರಕಾರದ ಪಿಎಂ ಮಿತ್ರ ಪಾರ್ಕ್ ಯೋಜನೆಯಡಿ ದೊರೆಯುವ 500 ಕೋಟಿ ರು. ಬಂಡವಾಳ ಸಹಾಯಧನದೊಂದಿಗೆ ಕೆಐಎಡಿಬಿ ಅನುದಾನ ಬಳಸಿ ಯೋಜನೆಗೆ ವೇಗ ನೀಡಲಾಗುವುದು.

ಜವಳಿ ಪಾರ್ಕ್ ಸ್ಥಾಪನೆಯಿಂದ ಸುಮಾರು 1 ಲಕ್ಷ ಮಂದಿಗೆ ನೇರ ಉದ್ಯೋಗ ಹಾಗೂ 2 ಲಕ್ಷ ಮಂದಿಗೆ ಪರೋಕ್ಷ ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ಈಗಾಗಲೇ ಹಲವು ಜವಳಿ ಉದ್ಯಮಗಳು ಕಲಬುರಗಿ ಜವಳಿ ಪಾಕ್‌ರ್ನಲ್ಲಿ ಬಂಡವಾಳ ಹೂಡಿಕೆಗೆ ಆಸಕ್ತಿ ತೋರಿರುವುದು ಯೋಜನೆಯ ಯಶಸ್ಸಿನತ್ತ ಸಕಾರಾತ್ಮಕ ಬೆಳವಣಿಗೆಯಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಚಾಮುಂಡಿ ವಿಶೇಷ ದರ್ಶನಕ್ಕೆ 2 ಸಾವಿರ ರುಪಾಯಿ ನಿಗದಿ

ಮೈಸೂರು: ಚಾಮುಂಡಿ ಬೆಟ್ಟದಲ್ಲಿ ಜುಲೈ 17 ರಿಂದ ಆಷಾಢ ಮಾಸ ವಿಶೇಷ ಪೂಜೆ ಆರಂಭವಾಗಲಿದೆ. ಭಕ್ತ ಸಾಗರವೇ ಹರಿದುಬರುವ ಹಿನ್ನೆಲೆ ಮೂರು ದಿನಗಳ ಕಾಲ ಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶ ನಿಷೇಧಿಸಲಾಗಿದೆ. ಭಕ್ತರಿಗೆ ವಿಶೇಷ ವಾಹನ ಸೌಲಭ್ಯ ಕಲ್ಪಿಸಿದ್ದು, ವಿಶೇಷ ದರ್ಶನಕ್ಕೆ ಬರೋಬ್ಬರಿ 2000 ರು. ಟಿಕೆಟ್ ದರ ನಿಗದಿ ಮಾಡಲಾಗಿದೆ ಎಂದು ಸಚಿವರಾದ ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ.ಸಚಿವ ಯತೀಂದ್ರ ಸಿದ್ದರಾಮಯ್ಯ ಅವರು ಚಾಮುಂಡಿ ಬೆಟ್ಟದಲ್ಲಿ ಸಿದ್ಧತಾ ಕಾರ್ಯಗಳನ್ನು ಪರಿಶೀಲನೆ ನಡೆಸಿದರು. ಈ ವೇಳೆ ಮಾತನಾಡಿದ ಅವರು, ಆಷಾಢ ಮಾಸದ ಶುಕ್ರವಾರ, ಶನಿವಾರ ಮತ್ತು ಭಾನುವಾರ (ಆಗಸ್ಟ್ 17,18,19) ಮೂರು ದಿನವೂ ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶಕ್ಕೆ ನಿಷೇಧ ಮಾಡಲಾಗಿದೆ. ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ದಿನವೂ ಖಾಸಗಿ ವಾಹನಗಳ ಪ್ರವೇಶ ಇಲ್ಲ ಎಂದರು.

ವಿಶೇಷ ದರ್ಶನ ಟಿಕೆಟ್ ಭಾರೀ ದುಬಾರಿ: ಭಕ್ತರ ವಿಶೇಷ ದರ್ಶನಕ್ಕೆ ಇದ್ದ 300 ರುಪಾಯಿ ಟಿಕೆಟ್ ಅನ್ನು ಈ ಬಾರಿ ರದ್ದು ಮಾಡಲಾಗಿದೆ. 2 ಸಾವಿರ ರುಪಾಯಿ ಟಿಕೆಟ್ ಖರೀದಿ ಮಾಡಿದರೆ ಸರತಿ ಇಲ್ಲದೇ ನೇರವಾಗಿ ದೇವರ ದರ್ಶನ ಪಡೆಯಬಹುದು. ಇನ್ನೂ ಈ ಟಿಕೆಟ್ ಜತೆಗೆ ಚಾಮುಂಡೇಶ್ವರಿ ಫೋಟೊ, ಲಾಡು ಪ್ರಸಾದ ಒಳಗೊಂಡ ವಿಶೇಷ ಕಿಟ್ ಕೊಡಲಾಗುತ್ತದೆ. ಬೆಳಗ್ಗೆ 5.30ರಿಂದ 9.30ರ ವರೆಗೆ ಮಾತ್ರ ವಿಐಪಿ ಹಾಗೂ ವಿವಿಐಪಿಗೆ ದರ್ಶನಕ್ಕೆ ವ್ಯವಸ್ಥೆ ಇರಲಿದೆ.

ಎಲ್ಲ ವಿಚಾರಗಳು ಹೈಕಮಾಂಡ್‌ಗೆ ತಲುಪಿವೆ: ವಿಜಯೇಂದ್ರ

ಅಡ್ಡ ಮತದಾನದ ಗೊಂದಲ ಮುಗಿದಿದೆ

ಮೈಸೂರು: ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಾದ ಅಡ್ಡ ಮತದಾನದಿಂದ ಉಂಟಾಗಿದ್ದ ಗೊಂದಲಗಳು ಈಗ ಮುಗಿದಿವೆ. ಎಲ್ಲ ವಿಚಾರವನ್ನೂ ನಾವು ಹೈಕಮಾಂಡ್‌ಗೆ ತಲುಪಿಸಿದ್ದೇವೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಮತ್ತೆ ಆ ಬಗ್ಗೆ ಚರ್ಚೆ ಬೇಡ ಎಂದು ಕೋರಿದರು.

ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಅವರ ಆಡಿಯೊ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿ, ಆ ಧ್ವನಿ ನನ್ನದಲ್ಲ ಎಂದು ಖುದ್ದು ಸದಾನಂದಗೌಡರೇ ಸ್ಪಷ್ಟನೆ ನೀಡಿದ್ದಾರೆ. ಆದ್ದರಿಂದ ಆ ಬಗ್ಗೆ ಚರ್ಚೆ ಏಕೆ? ಯಲಹಂಕ ಶಾಸಕ ಎಸ್. ಆರ್. ವಿಶ್ವನಾಥ್ ಅವರೊಂದಿಗೂ ಮಾತನಾಡಿದ್ದೇನೆ. ರಾಜಕೀಯ ಪಕ್ಷ ಎಂದ ಮೇಲೆ ಸಣ್ಣಪುಟ್ಟ ಗೊಂದಲಗಳು ಸಹಜ. ಅವೆಲ್ಲವನ್ನೂ ನಿಭಾಯಿಸಿಕೊಂಡೇ ನಾನು ಪಕ್ಷ ಕಟ್ಟುತ್ತಿದ್ದೇನೆ ಎಂದರು.

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ರಾಜ್ಯ ಸರಕಾರ ತಾನು ಮಾಡಿದ್ದೆಲ್ಲಾ ಸರಿ ಎಂಬ ಧೋರಣೆಯಲ್ಲಿದೆ. ರೈತರನ್ನು ಬೀದಿಗೆ ತರುವುದಕ್ಕೆ ಹೊರಟಿದೆ. ಈ ಧೋರಣೆ ಒಳ್ಳೆಯದಲ್ಲ. ಟೌನ್‌ಶಿಪ್‌ಗೆ ಭೂಮಿ ಕೊಡಲು ಶೇ 80ರಷ್ಟು ರೈತರ ವಿರೋಧವಿದೆ. ಪರ ಇರುವವರು ಕೆಲವೇ ಮಂದಿ ಮಾತ್ರ. ಆದರೂ ರೈತರ ವಿರೋಧವಿಲ್ಲ ಎಂದು ಸರಕಾರ ಸುಳ್ಳು ಹೇಳುತ್ತಿದೆ. ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆದ ದಿನದಿಂದಲೂ ಟೌನ್‌ಶಿಪ್ ಬಗ್ಗೆ ಬಹಳ ಆತುರದಲ್ಲಿದ್ದಾರೆ ಎಂದು ದೂರಿದರು.



ನಾವು ರೈತರ ಪರವಾಗಿದ್ದು, ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿ ಬಿಡದಿ ಟೌನ್‌ಶಿಪ್ ವಿಚಾರದ ಬಗ್ಗೆ ವಿಸ್ತೃತ ಚರ್ಚೆ ಮಾಡುತ್ತೇವೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಕೃಷಿ ವೆಚ್ಚದ ಸಂಕಷ್ಟದ ನಡುವೆ ಅನ್ನದಾತನಿಗೆ ವರವಾದ ಕೇಂದ್ರದ ಆರ್ಥಿಕ ಭದ್ರತೆ | 8.92 ಲಕ್ಷ ರೈತರಿಗೆ 178.45 ಕೋಟಿ ಜಮೆ

ಕಲ್ಯಾಣ ಕರ್ನಾಟಕದ ರೈತರಿಗೆ ಪಿಎಂ ಕಿಸಾನ್ ಆಸರೆ

ದೇವೇಂದ್ರ ಜಾಡಿ ಕಲಬುರಗಿ

ಕೃಷಿಯನ್ನೇ ಬದುಕಿನ ಮುಖ್ಯ ಆಧಾರವಾಗಿಸಿಕೊಂಡಿರುವ ಕಲ್ಯಾಣ ಕರ್ನಾಟಕ ಭಾಗದ ಲಕ್ಷಾಂತರ ರೈತ ಕುಟುಂಬಗಳಿಗೆ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ ನಿಧಿ (ಪಿಎಂ-ಕಿಸಾನ್) ಯೋಜನೆ ಈ ಬಾರಿಯ ಮುಂಗಾರು ವಿಳಂಬದ ಪರಿಸ್ಥಿತಿಯಲ್ಲಿ ಪ್ರಮುಖ ಆರ್ಥಿಕ ಆಸರೆಯಾಗಿ ಪರಿಣಮಿಸಿದೆ. 2026-27ನೇ ಸಾಲಿನ 23ನೇ ಕಂತಿನಡಿ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳ ಒಟ್ಟು 8,92,260 ರೈತ ಫಲಾನುಭವಿಗಳ ಬ್ಯಾಂಕ್ ಖಾತೆಗೆ 178.45 ಕೋಟಿ ನಗದು ನೇರವಾಗಿ ಜಮೆಯಾಗಿದೆ.

ಈ ಭಾಗದ ಬಹುತೇಕ ರೈತರು ಮಳೆ ಆಧಾರಿತ ಕೃಷಿಯನ್ನೇ ನೆಚ್ಚಿಕೊಂಡಿದ್ದಾರೆ. ಪ್ರಸ್ತುತ ಎಲ್‌ನಿನೋ ಪರಿಣಾಮದಿಂದಾಗಿ ಮುಂಗಾರು ಮಳೆ ವಿಳಂಬವಾಗಿದ್ದು, ಬಿತ್ತನೆಯ ಈ ಸಂದರ್ಭದಲ್ಲಿ ಹೆಚ್ಚುತ್ತಿರುವ ಕೃಷಿ ವೆಚ್ಚ ರೈತರಿಗೆ ಹೊರೆಯಾಗಿತ್ತು. ಇಂತಹ ಸನ್ನಿವೇಶದಲ್ಲಿ ಯಾವುದೇ ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ ನೇರವಾಗಿ ರೈತರ ಖಾತೆಗಳಿಗೆ ತಲುಪಿರುವ 2,000 ನಗದು ಕಂತು, ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳ ಖರೀದಿಗೆ ಸಕಾಲಿಕ ನೆರವಾಗಿದೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಲಬುರಗಿ ಜಿಲ್ಲೆಯೇ ಅತಿ ಹೆಚ್ಚು ಫಲಾನುಭವಿಗಳನ್ನು ಹೊಂದಿದ್ದು, ಇಲ್ಲಿನ 1.85 ಲಕ್ಷಕ್ಕೂ ಹೆಚ್ಚು ರೈತರಿಗೆ 37.17 ಕೋಟಿ ವರ್ಗಾವಣೆಯಾಗಿದೆ. ನಂತರದ ಸ್ಥಾನದಲ್ಲಿ ರಾಯಚೂರು ಜಿಲ್ಲೆ 31.84 ಕೋಟಿ ಹಾಗೂ ಬೀದರ್ ಜಿಲ್ಲೆ 25.35 ಕೋಟಿ ಅನುದಾನ ಪಡೆದುಕೊಂಡಿವೆ. ಮಧ್ಯವರ್ತಿಗಳಿಲ್ಲದ ನೇರ ನಗದು ವರ್ಗಾವಣೆ: ಪಿಎಂ ಕಿಸಾನ್ ಯೋಜನೆಯ ಅತ್ಯಂತ ದೊಡ್ಡ ಸಫಲತೆಯೆಂದರೆ ಹಣದ ನೇರ ವರ್ಗಾವಣೆ (ಡಿಬಿಟಿ). ರೈತರ ಬ್ಯಾಂಕ್ ಖಾತೆಗಳಿಗೆ ಯಾವುದೇ ಮಧ್ಯವರ್ತಿಗಳ ಹಸ್ತಕ್ಷೇಪ ಹಾಗೂ ಕಮಿಷನ್ ದಂಧೆಯಿಲ್ಲದೆ ಪೂರ್ಣ ಹಣ ತಲುಪುತ್ತಿದೆ. 2018-19ರಿಂದ 2025-26ರವರೆಗೆ ಕರ್ನಾಟಕದ ರೈತರಿಗೆ ಒಟ್ಟು 20,246.53 ಕೋಟಿ ಹಣ ವರ್ಗಾವಣೆಯಾಗಿದ್ದು, ಪ್ರಸ್ತುತ ಬರಗಾಲದ ಸಂದರ್ಭದಲ್ಲಿ ರೈತರಿಗೆ ಸಾಲದ ಸುಳಿಗೆ ಸಿಲುಕದಂತೆ ಇದು ನೆರವಾಗಿದೆ.

ಪಿಎಂ-ಕಿಸಾನ್ 23ನೇ ಕಂತು: ಕಲ್ಯಾಣ ಕರ್ನಾಟಕದ ಜಿಲ್ಲಾವಾರು ಚಿತ್ರಣ

ಜಿಲ್ಲೆ	ಒಟ್ಟು ಫಲಾನುಭವಿಗಳು	ಜಮೆ ಮೊತ್ತ (ಕೋ.ಗಳಲ್ಲಿ)
ಕಲಬುರಗಿ	1,85,847	37.17 ಕೋಟಿ ರು.
ರಾಯಚೂರು	1,59,212	31.84 ಕೋಟಿ ರು.
ಬೀದರ್	1,26,731	25.35 ಕೋಟಿ ರು.
ಬಳ್ಳಾರಿ	1,23,808	24.76 ಕೋಟಿ ರು.
ಕೊಪ್ಪಳ	1,15,587	23.12 ಕೋಟಿ ರು.
ವಿಜಯನಗರ	92, 663	18.53 ಕೋಟಿ ರು.
ಯಾದಗಿರಿ	88,412	17.68 ಕೋಟಿ ರು.
ಒಟ್ಟು	8,92,260	178.45 ಕೋಟಿ ರು.

ತಾಂತ್ರಿಕ ದೋಷ: ಇಳಿಕೆಯಾದ ಫಲಾನುಭವಿಗಳ ಸಂಖ್ಯೆ!

ಕಳೆದ 22ನೇ ಕಂತಿನಲ್ಲಿ ಕಲ್ಯಾಣ ಕರ್ನಾಟಕ ಭಾಗದ 9.38 ಲಕ್ಷ ರೈತರಿಗೆ 187.70 ಕೋಟಿ ರು. ಬಿಡುಗಡೆಯಾಗಿತ್ತು. ಆದರೆ, ಈ ಬಾರಿ ಫಲಾನುಭವಿಗಳ ಸಂಖ್ಯೆ 8.92 ಲಕ್ಷಕ್ಕೆ ಇಳಿಕೆಯಾಗಿದೆ. ಇ-ಕೆವೈಸಿ ಪೂರ್ಣಗೊಳಿಸದಿರುವುದು, ಆಧಾರ್-ಬ್ಯಾಂಕ್ ಖಾತೆ ಜೋಡಣೆ ಸಮಸ್ಯೆ ಹಾಗೂ ಭೂ ದಾಖಲೆಗಳ ವ್ಯತ್ಯಾಸದಿಂದಾಗಿ ಕೆಲವು ರೈತರು ಈ ಕಂತಿನ ಲಾಭದಿಂದ ವಂಚಿತರಾಗಿದ್ದಾರೆ. ಅರ್ಹ ರೈತರು ತಕ್ಷಣವೇ ತಮ್ಮ ದಾಖಲೆಗಳನ್ನು ನವೀಕರಿಸಿಕೊಳ್ಳುವಂತೆ ಕೃಷಿ ಇಲಾಖೆ ಕೋರಿದೆ.

ಈ ಬಾರಿ ಮುಂಗಾರು ಮಳೆ ಎಲ್‌ನಿನೋ ಪರಿಣಾಮದಿಂದಾಗಿ ಚೂರು ವಿಳಂಬವಾಗಿದ್ದು, ಇಂತಹ ಸಂಕಷ್ಟಗಳ ನಡುವೆಯೂ ಕಲಬುರಗಿ ಸೇರಿದಂತೆ ಕಲ್ಯಾಣ ಕರ್ನಾಟಕದ ರೈತರಿಗೆ ಮೋದಿ ಸರಕಾರದ ಪಿಎಂ-ಕಿಸಾನ್ ಯೋಜನೆ ಆರ್ಥಿಕ ಭದ್ರತೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಲಕ್ಷಾಂತರ ರೈತ ಕುಟುಂಬಗಳ ಬದುಕಿಗೆ ಬಲ ತುಂಬುತ್ತಿರುವ ಈ ಆರ್ಥಿಕ ನೆರವಿನಿಂದ ನಮಗೆ ಬೀಜ, ಗೊಬ್ಬರ ಇತ್ಯಾದಿ ಖರೀದಿಗೆ ಅನುಕೂಲವಾಗಲಿದೆ.

-ಸೂರ್ಯಕಾಂತ ಡೆಂಗಿ, ಫಲಾನುಭವಿ, ಕಲಬುರಗಿ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಲಬುರಗಿ ಜಿಲ್ಲೆ ಅತಿ ಹೆಚ್ಚು ಫಲಾನುಭವಿಗಳನ್ನು ಹೊಂದಿದೆ. ಜಿಲ್ಲೆಯ 1.85 ಲಕ್ಷಕ್ಕೂ ಹೆಚ್ಚು ರೈತರಿಗೆ 37.17 ಕೋಟಿ ರು.ಜಮೆಯಾಗಿದ್ದು, ಭಾಗದ ರೈತರಿಗೆ ಇದು ದೊಡ್ಡ ಆರ್ಥಿಕ ನೆರವಾಗಿದೆ. ಮುಂಗಾರು ವಿಳಂಬ, ಬೆಳೆ ನಷ್ಟ ಹಾಗೂ ಹೆಚ್ಚುತ್ತಿರುವ ಕೃಷಿ ವೆಚ್ಚದ ನಡುವೆಯೂ ಪಿಎಂ-ಕಿಸಾನ್ ಯೋಜನೆಯ 2,000 ಕಂತು ರೈತರಿಗೆ ಸಮಯೋಚಿತ ನೆರವಾಗುತ್ತಿದೆ.

-ಸಮದ್ ಪಟೇಲ್, ಜಂಟಿ ನಿರ್ದೇಶಕ, ಕೃಷಿ ಇಲಾಖೆ ಕಲಬುರಗಿ

ವಿಶ್ವವಾಣಿ

ಸಂಪಾದಕೀಯ

ಕ್ವಾರಿಗಳನ್ನು ಪರಿಶೀಲಿಸಿ

ಬೆಂಗಳೂರು ದಕ್ಷಿಣ ಜಿಲ್ಲೆಯ ಮಾದಾಪಟ್ಟಣ ಬಳಿ ಘೋರ ಕಲ್ಲು ಕ್ವಾರಿ ದುರಂತ ಸಂಭವಿಸಿದೆ. ದುರಂತದಲ್ಲಿ ಬೃಹತ್ ಬಂಡೆ ಕುಸಿದು ಬಿಹಾರ ಮೂಲದ 7 ಮಂದಿ ಕಾರ್ಮಿಕರು ಸಾವಿಗೀಡಾಗಿದ್ದು, ಐವರ ಸ್ಥಿತಿ ಗಂಭೀರವಾಗಿದೆ. ದುರಂತದಲ್ಲಿ ಸಾವನ್ನಪ್ಪಿದ 7 ಮಂದಿ ಕಾರ್ಮಿಕರ ಕುಟುಂಬಕ್ಕೆ ಕ್ವಾರಿ ಮಾಲೀಕರಿಂದಲೇ 10 ಲಕ್ಷ ಹಾಗೂ ಗಾಯಾಳುಗಳಿಗೆ 5 ಲಕ್ಷ ಪರಿಹಾರ ಕೊಡಿಸುವುದಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿ ತಿಳಿಸಿದ್ದಾರೆ. ಸುತ್ತ-ಮುತ್ತಲಿನ ಎಲ್ಲಾ ಕ್ವಾರಿಗಳನ್ನ ತಾತ್ಕಾಲಿಕವಾಗಿ ಬಂದ್ ಮಾಡಲು ಸೂಚನೆ ನೀಡಲಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ, ಕ್ವಾರಿಯಲ್ಲಿ ಸಾಕಷ್ಟು ಸುರಕ್ಷತೆ ಕ್ರಮಗಳನ್ನು ಮಾಲಿಕರು ತೆಗೆದುಕೊಂಡಿಲ್ಲ. ಭೂವಿಜ್ಞಾನಿ ಹೇಳಿಕೆ ಪ್ರಕಾರ, ಅವರು ಸೈಟ್ ವಿಸಿಟ್ ಮಾಡಿದಾಗ ಸುರಕ್ಷತೆ ಬಗ್ಗೆ ಸೂಚನೆ ನೀಡಿದ್ದರೂ ಮಾಲೀಕರು ಅಳವಡಿಸಿಕೊಂಡಿಲ್ಲ. ಇದಲ್ಲದೆ ಬಫರ್ ಜೋನ್‌ನಲ್ಲಿಯೂ ಕಾಮಗಾರಿ ಮಾಡಲಾಗಿದೆ. ಕ್ವಾರಿಯಲ್ಲಿ ಗಣಿಗಾರಿಕೆಗೆ ಅಧಿಕೃತ ಪರವಾನಗಿ ಇದೆಯೇ ಎಂಬುದು ಪರಿಶೀಲಿಸಬೇಕಿದೆ. ಸ್ಫೋಟವಿಲ್ಲದೆ ಬಂಡೆ ಕುಸಿಯಲು ಸಾಧ್ಯವಿಲ್ಲ. ಸ್ಫೋಟಕಗಳ ನಿಗದಿತ ಪ್ರಮಾಣದ ಬಳಕೆಗೆ ಮಾತ್ರ ಅನುಮತಿ ಇರುತ್ತದೆ. ಹೀಗಾಗಿ, ಎಲ್ಲ ರೀತಿಯಿಂದಲೂ ಈ ಪ್ರಕರಣದ ವಿಚಾರಣೆ ನಡೆಯಬೇಕಿದೆ. ಪರಿಹಾರ ಕೊಡಿಸಿದಲ್ಲಿಗೆ ಹೊಣೆ ಮುಗಿಯುವುದಿಲ್ಲ. ಮೃತಪಟ್ಟವರ ಜೀವಗಳು ಮತ್ತೆ ಕುಟುಂಬದವರಿಗೆ ಸಿಗುವುದಿಲ್ಲ. ರಾಜ್ಯದಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮಾಗಡಿ, ಕೊಪ್ಪಳ, ಹಾಸನ ವ್ಯಾಪ್ತಿಗಳಲ್ಲಿ ಸಾಕಷ್ಟು ನಡೆಯುತ್ತಿದೆ. ಒಂದು ಕ್ವಾರಿಗೆ ಅನುಮತಿ ಇದ್ದರೆ, ಒಂಬತ್ತಕ್ಕೆ ಇರುವುದಿಲ್ಲ. ಈ ಗಣಿಗಳಲ್ಲಿ ಬಿಹಾರ, ಮಧ್ಯ ಪ್ರದೇಶ, ಉತ್ತರ ಪ್ರದೇಶಗಳಿಂದ ಬಂದ ಕಾರ್ಮಿಕರು ಜೀವ ಅಡವಿಟ್ಟು ದುಡಿಯುತ್ತಾರೆ. ಕಾನೂನಿನ ಕೈಗಳ ಅಡಿಯಲ್ಲಿ ನುಸುಳುವ ಕಲೆ ಈ ಕ್ವಾರಿಗಳ ಮಾಲಿಕರಿಗೆ ಕರಗತವಾಗಿದೆ. ಇಲ್ಲಿ ಕೆಲಸ ಮಾಡುವವರ ಆರೋಗ್ಯ, ದುಡಿಮೆಯ ಸಮಯ, ಆಹಾರದ ಲಭ್ಯತೆ ಇತರ ಸವಲತ್ತುಗಳು ಎಲ್ಲವೂ ಮಾಲಿಕರ ಮರ್ಜಿಯಲ್ಲಿವೆ. ಅನಾರೋಗ್ಯಕರ ಜೀವನಶೈಲಿಯಿಂದ ಇವರು ಬಳಲುವುದೇ ಹೆಚ್ಚು. ಕತ್ತರಿಸಿದ ಕಲ್ಲನ್ನು ರಸ್ತೆಗಳಲ್ಲಿ ಇತರರಿಗೆ ತೊಂದರೆಯಾಗದಂತೆ ಮುಚ್ಚಿ ಸಾಗಿಸಬೇಕು; ಆದರೆ ಅದೂ ಕಾಣಬರುತ್ತಿಲ್ಲ. ಕ್ವಾರಿ ಲಾರಿಗಳು ರಸ್ತೆಯಲ್ಲಿವೆ ಎಂದರೆ ಸಂಚರಿಸಲು ಭಯಪಡುವಂತಾಗುತ್ತದೆ. ಇವೆಲ್ಲದರಿಂದ ನುಣುಚಿಕೊಳ್ಳಲು ಕ್ವಾರಿ ಮಾಲಿಕರು, ಅವರಿಗೆ ಅವಕಾಶ ನೀಡಿದ ಅಧಿಕಾರಿಗಳು ಪಳಗಿರುತ್ತಾರೆ. ತಪ್ಪಿತಸ್ಥರಿಗೆ ಶಿಕ್ಷೆ ಆಗುವಂತೆಯೇ, ಮುಂದೆ ಇಂಥ ದುರಂತಗಳು ಸಂಭವಿಸದಂತೆ ಕಟ್ಟೆಚ್ಚರದ ಕಾನೂನು ಅನುಷ್ಠಾನ ಆಗಬೇಕಿದೆ.

ಸೊಂಪಾದಕೀಯ

ವಿಚಿತ್ರ ದಾಂಪತ್ಯ

ಮದುವೆ ಆಗುವ ಜೋಡಿಯ ನಡುವೆ ಒಂದೆರಡು ವರ್ಷ ಅಂತರ ಇರುವುದು ಸಾಮಾನ್ಯ. ಎಂಟು- ಹತ್ತು ವರ್ಷ ಇದ್ದರೂ ಓಕೆ. ಆದರೆ 50 ವರ್ಷ ಅಂತರ ಇದ್ದರೆ! ಅದೂ ಹೆಣ್ಣು ದೊಡ್ಡವಳಾಗಿದ್ದು, ಗಂಡು ಸಣ್ಣವನಾಗಿದ್ದರೆ! ಇಂಥದೊಂದು ವಿಚಿತ್ರ ಘಟನೆ ನಡೆದಿರುವುದು ಡೊಮಿನಿಕನ್ ಗಣರಾಜ್ಯದಲ್ಲಿ. 22 ವರ್ಷದ ಯುವಕ ಡೇನಿಯಲ್ ರಾಮಿರೆಜ್, ಅಮೆರಿಕದ 72 ವರ್ಷದ ಎಲೀನರ್ ಹೇಯ್ಸ್ ಎಂಬಾಕೆಯನ್ನು ಮದುವೆ ಆಗಿದ್ದಾನೆ. 22 ವರ್ಷದ ಯುವಕನೊಬ್ಬ ತನಗಿಂತ 50 ವರ್ಷ ಹಿರಿಯ ಮಹಿಳೆಯನ್ನು ಹುಚ್ಚನಂತೆ ಪ್ರೀತಿಸಿ ವಿವಾಹವಾದ ವಿಷಯ ಈಗ ವೈರಲ್ ಆಗಿದೆ. ಪ್ರೀತಿಗೆ ಕಣ್ಣಿಲ್ಲ, ಗಡಿಯಿಲ್ಲ ಎಂದು ಇದನ್ನು ಹಲವರು ಕೊಂಡಾಡಿದ್ದಾರೆ. ಡೇನಿಯಲ್ ತನ್ನ ಕುಟುಂಬದ ಸಣ್ಣ ಕೆಫೆ ನಡೆಸುತ್ತಾನೆ. ಎಲೀನರ್ ಹೇಯ್ಸ್ ಫ್ಲೋರಿಡಾದ ಮಿಲಿಯನೇರ್ ರಿಯಲ್ ಎಸ್ಟೇಟ್ ಹೂಡಿಕೆದಾರ್ತಿ. ಈ ವಿಚಾರವೂ ನೆಟಿಜೆನ್‌ಗಳ ತಮಾಷೆಗೆ ಒಳಗಾಗಿದೆ. ಕೆಫೆ ನಡೆಸುವ ಹುಡುಗ ಕೋಟ್ಯಂತರ ಡಾಲರ್ ಬೆಲೆಬಾಳುವ ಮಹಿಳೆಯನ್ನು ವಿವಾಹವಾದದ್ದು ಅಚ್ಚರಿಯೇನಲ್ಲ. ಬಹುಶಃ ಆತ ಆಕೆಯ ಬ್ಯಾಂಕ್ ಬ್ಯಾಲೆನ್ಸ್ ನೋಡಿರಬೇಕು ಎಂದು ಕೆಲವರು. 72 ವರ್ಷದ ನಂತರ ನಡೆಯುವಾಗಲೂ ಬ್ಯಾಲೆನ್ಸ್ ಕಳೆದುಕೊಳ್ಳುವ ಹಿರಿಯ ವಯಸ್ಸಿನಾಕೆಯನ್ನು ಈತ ಬ್ಯಾಲೆನ್ಸ್ ಮಾಡಿಕೊಳ್ಳಬೇಕಲ್ಲ. ಅಂದ ಹಾಗೆ ಡೇನಿಯಲ್‌ಗೆ ಮಕ್ಕಳು ಬೇಡವೆ? ಅದಕ್ಕೆ ಬೇರೆ ವ್ಯವಸ್ಥೆ ಮಾಡಿಕೊಳ್ಳಬಹುದೇನೊ. ಎಲ್ಲದಕ್ಕೂ ಆಕೆಯನ್ನು ಒತ್ತಾಯಿಸುವುದು ಸರಿಯಲ್ಲ. ಆಕೆ ಸಾಕಷ್ಟು ಮಕ್ಕಳನ್ನು ಕಂಡಿರಬಹುದು. ಡೇನಿಯಲ್‌ನನ್ನೂ ಮಗುವಿನಂತೆಯೇ ನೋಡಿಕೊಳ್ಳಬಹುದು.

ಸಂಪಾದಕರ ಸದ್ಯಶೋಧನೆ

ಬ್ರಿಟಿಷ್ ಏರ್‌ವೇಸ್ ಲೋಗೋ

ಮೊನ್ನೆ ನಾನು ಬೆಂಗಳೂರಿನಿಂದ ಅಮೆರಿಕದ ಶಿಕಾಗೋಗೆ ಬ್ರಿಟಿಷ್ ಏರ್‌ವೇಸ್ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದೆ. ನೀವು ಅದರ ಲೋಗೋವನ್ನು ಗಮನಿಸಿರಬಹುದು. ಗಾಳಿಯಲ್ಲಿ ತೇಲುತ್ತಿರುವಂತೆ ಕಾಣುವ, ನಯವಾದ ತಿರುವುಗಳನ್ನು ಹೊಂದಿರುವ ಕೆಂಪು ಮತ್ತು ನೀಲಿ ಬಣ್ಣದ ರಿಬ್ಬನ್ ಮಾದರಿಯ ವಿನ್ಯಾಸ. ಈ ಲೋಗೋವನ್ನು ವಿಮಾನದ ಎಲ್ಲೆಡೆ ಧಾರಾಳವಾಗಿ ಬಳಸಲಾಗಿದೆ. ತಕ್ಷಣ ನೋಡಿದರೆ ಈ ಲೋಗೋದ ಅರ್ಥ ಏನೆಂಬುದು ಅರ್ಥವಾಗದಿರಬಹುದು. ನಾನು ಇದರ ಅರ್ಥ ಮತ್ತು ಹಿನ್ನೆಲೆಯನ್ನು ವಿವರಿಸುವಂತೆ ಗಗನಸಖಿಗೆ ಹೇಳಿದೆ. ಆಕೆ ಹೇಳಿದ ಸಂಗತಿಗಳನ್ನು ಸೇರಿಸಿ ಹೀಗೆ ವಿವರಿಸಬಹುದು. ಬ್ರಿಟಿಷ್ ಏರ್‌ವೇಸ್ ಜಾಗತಿಕ ವಾಯುಯಾನ ರಂಗದಲ್ಲಿ ಅತ್ಯಂತ ಪ್ರತಿಷ್ಠಿತ ಮತ್ತು ಹಳೆಯ ವಿಮಾನಯಾನ ಸಂಸ್ಥೆಗಳಲ್ಲಿ ಒಂದು. ಯಾವುದೇ ಒಂದು ಬ್ರ್ಯಾಂಡ್‌ನ ಯಶಸ್ಸು ಮತ್ತು ಗುರುತಿಸುವಿಕೆಯಲ್ಲಿ ಅದರ ಲೋಗೋ (ಲಾಂಛನ) ಪ್ರಮುಖ ಪಾತ್ರ ವಹಿಸುತ್ತದೆ. ಬ್ರಿಟಿಷ್ ಏರ್‌ವೇಸ್‌ನ ಲೋಗೋ ಕೇವಲ ಒಂದು ವಿನ್ಯಾಸವಲ್ಲ. ಅದು ಬ್ರಿಟನ್ ದೇಶದ ರಾಜಪ್ರಭುತ್ವ, ಸಾಂಸ್ಕೃತಿಕ ಹಿರಿಮೆ, ಜಾಗತಿಕ ನಾಯಕತ್ವ ಮತ್ತು ಆಧುನಿಕ ವಾಯುಯಾನದ ವಿಕಾಸವನ್ನು ಪ್ರತಿನಿಧಿಸುವ ಒಂದು ಜೀವಂತ ಸಂಕೇತ.

ಬ್ರಿಟಿಷ್ ಏರ್‌ವೇಸ್‌ನ ಇಂದಿನ ಲೋಗೋವನ್ನು 'ಟಾಸ್ಲ್ ರಿಬ್ಬನ್' (To Speedbird / Ribbon) ಎಂದು ಕರೆಯಲಾಗುತ್ತದೆ. ಇದು ಕೆಂಪು ಮತ್ತು ನೀಲಿ ಬಣ್ಣಗಳ ಮಿಶ್ರಣದೊಂದಿಗೆ ಅತ್ಯಂತ ಸರಳ ಹಾಗೂ ಆಕರ್ಷಕವಾಗಿ ಕಣ್ಣಿಗೆ ಕಟ್ಟುವಂತೆ ವಿನ್ಯಾಸಗೊಳಿಸಲಾಗಿದೆ. ಈ ಲೋಗೋದಲ್ಲಿ ಬಳಕೆಯಾಗಿರುವ ಕೆಂಪು, ಬಿಳಿ ಮತ್ತು ನೀಲಿ ಬಣ್ಣಗಳು ನೇರವಾಗಿ ಬ್ರಿಟನ್ ದೇಶದ ರಾಷ್ಟ್ರೀಯ ಧ್ವಜವಾದ 'ಯೂನಿಯನ್ ಜಾಕ್' ಅನ್ನು ಪ್ರತಿನಿಧಿಸುತ್ತವೆ. ನೀಲಿ ಬಣ್ಣ ಗಾಂಭೀರ್ಯ, ಭದ್ರತೆ, ಜವಾಬ್ದಾರಿ ಮತ್ತು ಆಕಾಶದ ವಿಸ್ತಾರವನ್ನು ಸೂಚಿಸಿದರೆ, ಕೆಂಪು ಬಣ್ಣ ಶಕ್ತಿ, ಧೈರ್ಯ, ವಾಯುಯಾನದ ವೇಗ ಮತ್ತು ಬ್ರಿಟಿಷ್ ರಾಯಲ್ ಪರಂಪರೆಯನ್ನು ಬಿಂಬಿಸುತ್ತದೆ ಹಾಗೂ ಬಿಳಿ ಬಣ್ಣ ಶುದ್ಧತೆ, ಶಾಂತಿ ಮತ್ತು ವಿಶ್ವದರ್ಜೆಯ ಸೇವೆಯ ದ್ಯೋತಕವಾಗಿದೆ. ಬ್ರಿಟಿಷ್ ಏರ್‌ವೇಸ್‌ನ ಇತಿಹಾಸವನ್ನು ಕೆದಕಿದರೆ ನಮಗೆ 'ಸ್ಪೀಡ್‌ಬರ್ಡ್' ಎಂಬ ಐತಿಹಾಸಿಕ ಸಂಕೇತ ಸಿಗುತ್ತದೆ. 1930ರ ದಶಕದಲ್ಲಿ ಇಂಪೀರಿಯಲ್ ಏರ್‌ವೇಸ್ ಬಳಸುತ್ತಿದ್ದ ಹಾರುವ ಹಕ್ಕಿಯ ರೇಖಾಚಿತ್ರವೇ ಈ ಸ್ಪೀಡ್‌ಬರ್ಡ್. ಇಂದಿನ ಆಧುನಿಕ ರಿಬ್ಬನ್ ವಿನ್ಯಾಸವು ಅದೇ ಹಳೆಯ 'ಸ್ಪೀಡ್‌ಬರ್ಡ್' ಪರಿಕಲ್ಪನೆಯ ಸಮಕಾಲೀನ ರೂಪ. ಇದು ವಿಮಾನವು ಅತ್ಯಂತ ವೇಗವಾಗಿ, ಸುರಕ್ಷಿತವಾಗಿ ಮತ್ತು ನಯವಾಗಿ ಆಕಾಶದಲ್ಲಿ ಚಲಿಸುವುದನ್ನು ಸಂಕೇತಿಸುತ್ತದೆ. ಲೋಗೋದಲ್ಲಿನ ರಿಬ್ಬನ್‌ನ ತಿರುವುಗಳು ಜಗತ್ತಿನಾದ್ಯಂತ ಬ್ರಿಟಿಷ್ ಏರ್‌ವೇಸ್ ಹೊಂದಿರುವ ನೆಟ್ವರ್ಕ್ ಅನ್ನು ಸೂಚಿಸುತ್ತವೆ. ವಿಮಾನವು ಒಂದು ಖಂಡದಿಂದ ಮತ್ತೊಂದು ಖಂಡಕ್ಕೆ ಹಾರುವಾಗ ಮೂಡುವ ವಾಯು ಮಾರ್ಗದ ರೇಖೆಗಳಂತೆ ಈ ರಿಬ್ಬನ್ ಕಾಣುತ್ತದೆ. ಇದು ಇಡೀ ಜಗತ್ತನ್ನು ಒಂದುಗೂಡಿಸುವ ವಿಮಾನಯಾನ ಸಂಸ್ಥೆಯ ಬದ್ಧತೆಯನ್ನು ತೋರಿಸುತ್ತದೆ. ಬ್ರಿಟಿಷ್ ಏರ್‌ವೇಸ್ ಇಂದು ಕಾಣುವ ರೂಪಕ್ಕೆ ಬರಲು ಹಲವು ದಶಕಗಳ ಕಾಲ ಲೋಗೋ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾ ಬಂದಿದೆ. ಬ್ರಿಟನ್ ದೇಶದ ಶ್ರೀಮಂತ ಇತಿಹಾಸ ಮತ್ತು ರಾಜಮನೆತನದ ಘನತೆಯನ್ನು ಈ ಲೋಗೋ ಪ್ರತಿನಿಧಿಸುತ್ತದೆ. ಜಗತ್ತಿನ ಯಾವುದೇ ವಿಮಾನ ನಿಲ್ದಾಣದಲ್ಲಿ ಈ ಕೆಂಪು-ನೀಲಿ ರಿಬ್ಬನ್ ಕಂಡರೆ, ಜನರಿಗೆ ತಕ್ಷಣವೇ ಅದು ಬ್ರಿಟನ್‌ನ ವಿಮಾನ ಎಂದು ತಿಳಿಯುತ್ತದೆ. ಲೋಗೋದ ನಯವಾದ ರಿಬ್ಬನ್ ವಿನ್ಯಾಸವು ಅತಿಥಿ ಸತ್ಕಾರದಲ್ಲಿನ ಮೃದುತ್ವವನ್ನು ಮತ್ತು ವಿಮಾನದ ಬಾಲದ ಮೇಲಿನ ಯೂನಿಯನ್ ಜಾಕ್ ವಿನ್ಯಾಸವು ಹಾರಾಟದ ದಕ್ಷತೆಯನ್ನು ಜಂಟಿಯಾಗಿ ಪ್ರತಿನಿಧಿಸುತ್ತದೆ. ಹಳೆಯ ಸಾಂಪ್ರದಾಯಿಕ ಹಕ್ಕಿಯ ಚಿತ್ರದಿಂದ ಇಂದಿನ ಅಮೂರ್ತ ರಿಬ್ಬನ್ ವಿನ್ಯಾಸಕ್ಕೆ ಬದಲಾಗಿರುವುದು ಸಂಸ್ಥೆಯು ಕಾಲಕ್ಕೆ ತಕ್ಕಂತೆ ಆಧುನಿಕ ತಂತ್ರಜ್ಞಾನ ಮತ್ತು ಗ್ರಾಹಕರ ಅಭಿರುಚಿಗೆ ತಕ್ಕಂತೆ ಬದಲಾಗಲು ಸಿದ್ಧವಿದೆ ಎಂಬುದನ್ನು ತೋರಿಸುತ್ತದೆ. ಒಂದು ಯಶಸ್ವಿ ಲೋಗೋ ಎಂದರೆ ಅದನ್ನು ಯಾವುದೇ ಭಾಷೆಯ ಅಕ್ಷರಗಳಿಲ್ಲದೆಯೂ ಕೇವಲ ಬಣ್ಣ ಮತ್ತು ಆಕಾರದಿಂದ ಗುರುತಿಸುವಂತಿರಬೇಕು. ವಿಮಾನದ ಬಾಲದ ಮೇಲೆ ಮೂಡಿಸಲಾಗಿರುವ ಈ ರಿಬ್ಬನ್ ಮತ್ತು ಯೂನಿಯನ್ ಜಾಕ್‌ನ ಕಲಾತ್ಮಕ ರೂಪವು ಆಕಾಶದಲ್ಲಿ ಹಾರಾಡುವಾಗ ಅತ್ಯಂತ ಆಕರ್ಷಕವಾಗಿ ಕಾಣುತ್ತದೆ. ಬ್ರ್ಯಾಂಡಿಂಗ್ ತಜ್ಞರ ಪ್ರಕಾರ, ಇದು ಕಾರ್ಪೊರೇಟ್ ಜಗತ್ತಿನ ಅತ್ಯಂತ ಯಶಸ್ವಿ ಮತ್ತು ಸ್ಥಿರವಾದ ರೀ-ಬ್ರ್ಯಾಂಡಿಂಗ್‌ಗಳಲ್ಲಿ ಒಂದಾಗಿದೆ.

ಧ್ಯಾನವೆಂದರೆ ರುಚಿಗೆ ತಕ್ಕಷ್ಟು ಉಪ್ಪು!

ನಾವೇ ಕಟ್ಟಿಕೊಂಡ ಡಿಜಿಟಲ್ ಜಗತ್ತು ನಮ್ಮ ತಲೆಯ ಮೇಲೆಯೇ ಕೈಯಿಡಲು ಬರುತ್ತಿದೆ. ಅದಕ್ಕಾಗಿಯೇ ಇಂದು ಆಸ್ಪತ್ರೆಯಿಂದ ಶಾಲೆಯವರೆಗೆ, ಕ್ರೀಡಾಪಟುಗಳಿಂದ ಬಾಹ್ಯಾಕಾಶ ಯಾತ್ರಿಗಳವರೆಗೆ, ಕಾರ್ಪೊರೇಟ್ ಕಂಪನಿಗಳಿಂದ ಜೈಲುಗಳವರೆಗೆ ಧ್ಯಾನ ವ್ಯಾಪಿಸುತ್ತಿದೆ. ಗಮನಿಸಿ- ಇವರಾರೂ ಧ್ಯಾನವನ್ನು ಧರ್ಮವೆಂದು ಮಾಡುತ್ತಿಲ್ಲ. ಔಷಧಿಯೆಂದು ಮಾಡುತ್ತಿದ್ದಾರೆ.

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ತಲೆ-ಹರಟೆ 4

ಒಂದಾನೊಂದು ಕಾಲದಲ್ಲಿ, ಒಂದು ಊರಲ್ಲಿ ಒಬ್ಬ ಶ್ರೀಮಂತ ವ್ಯಾಪಾರಿ ಇದ್ದ. ಅವನೊಮ್ಮೆ ತನ್ನ ಜೊತೆಗಾರರೊಂದಿಗೆ ದಟ್ಟಾರಣ್ಯದ ಮೂಲಕ ಇನ್ನೊಂದು ಊರಿಗೆ ಪ್ರಯಾಣ ಮಾಡುತ್ತಿದ್ದ. ಆಗ, ಕಾಡದಾರಿಯಲ್ಲಿ ವ್ಯಾಪಾರಿ ತನ್ನ ಜೊತೆಗಾರರಿಂದ ಬೇರೆಯಾಗಿಬಿಟ್ಟ. ಅವನಿಗೆ ದಾರಿ ತಪ್ಪಿ ಹೋಯಿತು. ವ್ಯಾಪಾರಿ ಮತ್ತು ಉಳಿದವರು ಪರಸ್ಪರ 'ಇಲ್ಲಿದ್ದೇವೆ, ನಾವಿಲ್ಲಿದ್ದೇವೆ' ಎಂದು ಕೂಗಿದರೆ ಪ್ರತಿಧ್ವನಿ ದಿಕ್ಕು ತಪ್ಪಿಸಿಬಿಟ್ಟಿತು. ಅವರು ತೆಂಕಣಕ್ಕೆ, ವ್ಯಾಪಾರಿ ಬಡಗಣಕ್ಕೆ – ಕಾಡಿನ ಮಾಯಾವಿ 'ದಿಕ್ಕು ಬಳ್ಳಿ' ದಾಟಿದವನಂತೆ! ಬೇರೆಯಾಗಿಬಿಟ್ಟರು. ವ್ಯಾಪಾರಿಗೆ ಎಲ್ಲೆಲ್ಲೋ ಸುತ್ತು ಹೊಡೆದು ಸಂಜೆಯಾದರೂ ಜೊತೆಯವರು ಮತ್ತು ಊರಿನ ದಾರಿ ಸಿಗಲೇ ಇಲ್ಲ. ಸಂಜೆಯಾಗಿಹೋಗಿದೆ. ಕಾಡಿನಲ್ಲಿ ರಾತ್ರಿ ಬೆಳಗಾಗುವುದರೊಳಗೆ ಬಚಾವಿಲ್ಲ.

ಅಷ್ಟಾಗುವಾಗ ವ್ಯಾಪಾರಿಗೆ ಅಲ್ಲೆಲ್ಲೋ ದೂರದಲ್ಲಿ, ಕಾಡಿನ ಮಧ್ಯೆ ಕಪ್ಪು ಹೊಗೆ ಕಾಣಿಸಿತು. ಹುಡುಕಿಕೊಂಡು ಹೋಗಿ ನೋಡಿದರೆ ಕಾಡು ಜನರು. ಅವರು ವ್ಯಾಪಾರಿಯನ್ನು (ಫಾರ್ ಅ ಚೇಂಜ್) ಹಿಡಿದು ತಿನ್ನಲಿಲ್ಲ! ಬದಲಿಗೆ ಪ್ರೀತಿಯಿಂದ ಸ್ವಾಗತಿಸಿದರು. ಊಟ ಕೊಟ್ಟರು. ಮಲಗಲು ಬೆಚ್ಚನೆಯ ಜಾಗ ಕೊಟ್ಟರು. ವ್ಯಾಪಾರಿಗಂತೂ ಅವರ ಆದರಾತಿಥ್ಯ ಬಹಳ ಇಷ್ಟವಾಗಿ ಹೋಯ್ತು. ಎಷ್ಟೆಂದರೆ ಅವನು ಒಂದೆರಡು ದಿನ ಅಲ್ಲಿಯೇ ಉಳಿದುಕೊಂಡುಬಿಟ್ಟ. ಪ್ರಕೃತಿಯ ಮಧ್ಯೆ ಅಲ್ಲಿ ಎಲ್ಲವೂ ಚೆನ್ನಾಗಿತ್ತು. ಆದರೆ ಒಂದೇ ದೊಡ್ಡ ಸಮಸ್ಯೆ. ಅವರು ಕೊಟ್ಟ ಊಟ ಮಾತ್ರ ಅವನಿಗೆ ತಿನ್ನಲಿಕ್ಕಾಗುತ್ತಿರಲಿಲ್ಲ. ಪ್ರತಿಯೊಂದು ಆಹಾರವೂ ಸಪ್ಪೆ ಸಪ್ಪೆ. ಉಪ್ಪಿಲ್ಲದ ಆಹಾರ. ವ್ಯಾಪಾರಿ 'ಉಪ್ಪು ಎಲ್ಲಿ? ಸ್ವಲ್ಪ ಕೊಡಿ' ಎಂದು ಕೇಳಿದರೆ ಅವರಿಗೆ ಆ ಶಬ್ದವೇ ಹೊಸತು. 'ಉಪ್ಪು' ಎಂದರೇನು ಎಂದೇ ಗೊತ್ತಿಲ್ಲ. ಆ ಗೊಂಡಾರಣ್ಯ ಮಧ್ಯೆ ಅವರಿಗೆಲ್ಲಿ ಉಪ್ಪು ಸಿಗಬೇಕು? ಹಾಗಾಗಿ ಅವರು ಯಾರೂ ಉಪ್ಪನ್ನು ಜೀವಮಾನದಲ್ಲಿ ರುಚಿಸಿಯೂ ಇರಲಿಲ್ಲ, ನೋಡಿಯೂ ಇರಲಿಲ್ಲ. ಎರಡು ಮೂರು ದಿನ ಅಲ್ಲಿ ಕಳೆದ ಮೇಲೆ ವ್ಯಾಪಾರಿಯನ್ನು ಊರಿನ ದಾರಿಗೆ ಮುಟ್ಟಿಸಲು ಅಲ್ಲಿನ ನಾಲ್ಕು ಜನರು ತಯಾರಾದರು. ಹೊರಡುವಾಗ ವ್ಯಾಪಾರಿ ಅಲ್ಲಿನ ಮುಖ್ಯಸ್ಥನಲ್ಲಿ 'ನಿಮ್ಮ ಆದರಾತಿಥ್ಯಕ್ಕೆ ನಾನು ಮನಸೋತಿದ್ದೇನೆ. ನೀವು ಒಮ್ಮೆ ನಮ್ಮೂರಿಗೆ ಬರಬೇಕು, ಬಂದು ನನ್ನ ಆತಿಥ್ಯವನ್ನು ಕೂಡ ಸ್ವೀಕರಿಸಬೇಕು. ನಾನು ಊರಿಗೆ ಹೋದ ಮೇಲೆ ನಮ್ಮವರನ್ನು ಕಳುಹಿಸಿ ಕೊಡುತ್ತೇನೆ. ನೀವು ಅವರ ಜೊತೆ ಬನ್ನಿ' ಎಂದು ಹೊರಟ.

ವ್ಯಾಪಾರಿ ಉಪಕಾರ ಮರೆಯಲಿಲ್ಲ, ಕೆಲ ದಿನಗಳ ನಂತರ ಕಾಡಿನ ಮುಖ್ಯಸ್ಥನನ್ನು ಕರೆತರಲು ನಾಲ್ಕು ಜನರನ್ನು ಕಳುಹಿಸಿ ಕೊಟ್ಟ. ಅವರ ಜೊತೆಯಾದ ಕಾಡುಜನರ ಮುಖ್ಯಸ್ಥ ವ್ಯಾಪಾರಿಯ ಊರು, ಮನೆಗೆ ಬಂದುಮುಟ್ಟಿದ. ಅಲ್ಲಿ ಅವನಿಗೆ ಭವ್ಯ ಸ್ವಾಗತ, ಭೂರಿ ಭೋಜನ ಎಲ್ಲಾ ವ್ಯವಸ್ಥೆಯಾಗಿತ್ತು. ಊಟದ ಪ್ರತಿಯೊಂದು ಪದಾರ್ಥವೂ ಕಾಡುಜನರ ಮುಖ್ಯಸ್ಥನಿಗೆ ಹೊಸ ಅನುಭವ, ಪರಮಾದ್ಭುತ ರುಚಿ. ಊಟ ಮಾಡುವಾಗ ಅವನದು ಒಂದೇ ಪ್ರಶ್ನೆ– ಆಹಾರಕ್ಕೆ ಈ ದಿವ್ಯ ರುಚಿ ಯಾವುದರಿಂದ? ವ್ಯಾಪಾರಿಗೆ ಅವನ ಪ್ರಶ್ನೆ ಅರ್ಥವಾಯಿತು. ಅಸಾಮಿ ಉಪ್ಪಿನ ಬಗ್ಗೆ ಕೇಳುತ್ತಿದ್ದಾನೆ ಎಂದು. ಅಲ್ಲಿಯೇ ದೊಡ್ಡ ಪಾತ್ರೆಯತ್ತ ಕೈ ಮಾಡಿ, ಇದೇ ಉಪ್ಪು ಎಂದು ತೋರಿಸಿದ. ವ್ಯಾಪಾರಿ ಮಾತು ಮುಗಿಸಿಲ್ಲ, ಮುಖ್ಯಸ್ಥ ಒಂದು ಹಿಡಿ ಉಪ್ಪನ್ನು ಬಾಚಿ ಬಾಯಿಗೆ ಹಾಕಿಕೊಂಡುಬಿಟ್ಟ! ಮುಂದೇನಾಯಿತು? ಮುಷ್ಟಿ ಉಪ್ಪು ಬಾಯಿಗೆ ಬಾಚಿಕೊಂಡರೆ ಏನಾಗಬೇಕಿತ್ತೋ ಅದುವೇ ಆಯಿತು.

ಧ್ಯಾನವೂ ಥೇಟ್ ಉಪ್ಪಿನ ಹಾಗೆಯೇ. ಹೇಗೆ ದೇಹಕ್ಕೆ ವ್ಯಾಯಾಮವೋ ಹಾಗೆ ಮನಸ್ಸಿಗೆ ಧ್ಯಾನ ಎಂದೆನಲ್ಲ, ವ್ಯಾಯಾಮವನ್ನು ಒಳ್ಳೆಯದೆಂದು ಇಡೀ ದಿನ, ಹಗಲು ರಾತ್ರಿ ವ್ಯಾಯಾಮ ಮಾಡಬೇಕಿಲ್ಲವಲ್ಲ, ಹಾಗೆಯೇ ಧ್ಯಾನ. ನಿತ್ಯ ಸ್ವಲ್ಪ ಹೊತ್ತಿನ ಕಸರತ್ತು ಸಾಕು. ಆದರೆ ಇಲ್ಲಿಯೂ ಕಸರತ್ತಿನ ಕೌಶಲ್ಯದೊಂದಿಗೆ, ನಿಯಮಿತತೆ ಎಲ್ಲಕ್ಕಿಂತ ಮುಖ್ಯ.

ಯೋಗ ಪಶ್ಚಿಮಕ್ಕೆ ಹೋಗುವಾಗ ಒಂದು ದೊಡ್ಡ ಯಡವಟ್ಟಾಗಿದೆ. ಯೋಗವೆಂದರೆ ಹೆಚ್ಚಿನ ಕಡೆ ಕೇವಲ ವ್ಯಾಯಾಮವಾಗಿ ಹೋಗಿ, ಈಗ ಅದುವೆ ನಮ್ಮಲ್ಲಿ ವಾಪಸ್ ಬಂದು ಯೋಗವೆಂದರೆ ಕೇವಲ ದೈಹಿಕ ಕಸರತ್ತು ಎಂದಾಗಿಬಿಟ್ಟಿದೆ. ಯೋಗಾಸನ ಮಾಡುವುದು ಬೇರೆ – ಯೋಗ ಬೇರೆ. ಯೋಗವೆಂದರೆ ಅದರಲ್ಲಿ ಹಠ ಯೋಗ ದೇಹಕ್ಕಾದರೆ ಧ್ಯಾನ ಮನಸ್ಸಿಗೆ– ಮಾನಸಿಕ ಆರೋಗ್ಯಕ್ಕೆ. ಹಿಂದಿನ ವಾರದ ತಲೆಹರಟೆಗೆ ಬಂದ ಕೆಲವು ಪ್ರತಿಕ್ರಿಯೆಯನ್ನು ಗಮನಿಸಿದಾಗ ಇದೊಂದು ವಿಷಯ ಹೇಳಬೇಕೆನಿಸುತ್ತಿದೆ. ಧ್ಯಾನ ಇಂದಿನ ಆಚರಣೆಯ ದೇವರ ಪೂಜೆ ಅಲ್ಲ. ಅಥವಾ ಗಡಿಬಿಡಿಯಲ್ಲಿ ಮಾಡುವ ಸಂಧ್ಯಾವಂದನೆ, ಕೈಂಕರ್ಯ ಯಾವುದು ಕೂಡ ಅಲ್ಲ. ಆದರೆ ಒಂದು ಮಜವೆಂದರೆ ಈ 'ಧ್ಯಾನ' ಎನ್ನುವುದು ದೇವರ ಪೂಜೆ, ಮಂತ್ರಗಳಲ್ಲಿ ಘಳಿಗೆಗೊಮ್ಮೆ ಬರುತ್ತದೆ. ವೈದಿಕರನ್ನು ಕರೆಯಿಸಿ ಮಾಡುವ ಪೂಜೆಗಳಲ್ಲಿ, 'ಅಥ ಧ್ಯಾನಮ್' ಮುಂದೆ ಧ್ಯಾನ ಎನ್ನುವುದನ್ನು ಕೇಳಿರುತ್ತೀರಿ. ಪೂಜೆ ಮಾಡಿಸುವವರು, ಮಾಡುವವರು ಸಾಮಾನ್ಯವಾಗಿ ಬೇಗ ಮುಗಿಸುವ ಗಡಿಬಿಡಿಯಲ್ಲಿ ಒಂದು ಸೌಟು ನೀರನ್ನು ಬಿಟ್ಟು ಧ್ಯಾನವನ್ನು ದೇವರಿಗೆ ನೀನೇ ಮಾಡಿಕೋ ಎಂದುಬಿಡುತ್ತೇವೆ. ವೈದಿಕರು, ಈಗೀಗ ಬೆಂಗಳೂರಿನ ಕಡೆ ಅವರನ್ನು ಗುರೂಜಿ ಎಂದು ಕರೆಯುವುದು. ಅವರಲ್ಲಿ ಹೆಚ್ಚಿನವರು ಜೀವಮಾನದಲ್ಲಿ ಅದೆಷ್ಟೋ ಪೂಜೆ ಸಾಗಿಸಿದ್ದರೂ, ಒಮ್ಮೆಯೂ, ಒಂದೇ ಒಂದು ಕ್ಷಣವೂ ಧ್ಯಾನ ಮಾಡಿರುವುದಿಲ್ಲ.

ನಾನಿಲ್ಲಿ ಹೀಗೆ ಕುಳಿತುಕೊಳ್ಳಿ, ಹೀಗೆ ಮಾಡಿ ಎಂದು ಧ್ಯಾನ ಮಾಡುವುದು ಹೇಗೆ ಎಂದೆಲ್ಲ ವಿವರಿಸುವುದಿಲ್ಲ. ಬದಲಿಗೆ ಯಾವುದು ಧ್ಯಾನವಲ್ಲ ಎನ್ನುವುದನ್ನು ಹೇಳಬೇಕೆನಿಸುತ್ತಿದೆ. ಧ್ಯಾನ ಸುಮ್ಮನೆ ಕೂತು ಯೋಚಿಸುವುದಲ್ಲ. ಅಥವಾ ಏಕಾಗ್ರತೆ ಕೂಡ ಅಲ್ಲ, ದೇವರ ರೂಪವನ್ನು ಕಲ್ಪಿಸಿಕೊಳ್ಳುವುದು, ಪ್ರಾರ್ಥನೆ, ಪೂಜೆ, ಆರತಿ, ವಿಶ್ರಾಂತಿ, ನಿದ್ರೆ, ಹಗಲುಗನಸು, ಯೋಚನೆಗಳನ್ನು ಹಿಡಿದು ನಿಲ್ಲಿಸುವುದು, ಜೀವನದ ಅಸಲಿಯತ್ತಿನಿಂದ ಒಂದಿಷ್ಟು ಹೊತ್ತು ಹೊರಗುಳಿವ ಎಸ್ಕೇಪ್ ಮಾರ್ಗ, ಧಾರ್ಮಿಕ ರಿವಾಜು, ಏನೇನೋ ಅತಿಮಾನುಷ ಅನುಭವ ಇದು ಯಾವುದೂ ಅಲ್ಲವೇ ಅಲ್ಲ. ಧ್ಯಾನವೆಂದರೆ ಮಾನಸಿಕ ಕಸರತ್ತು. ಜಿಮ್‌ಗೆ ಹೋಗಿ ಸಿಕ್ಕದ್ದನ್ನೆಲ್ಲಾ ಒಮ್ಮೆ ಎತ್ತಿ ಬಂದರೆ ಹೃತಿಕ್ ರೋಷನ್ ಆಗಿಬಿಡುವುದಿಲ್ಲವಲ್ಲ!! ನಿಯಮಿತವಾಗಿ ಜಿಮ್‌ಗೆ ಹೋದರೂ ಸರಿಯಾಗಿ ವ್ಯಾಯಾಮ ಮಾಡದೆ, ಕಾಲು ಸಪೂರವಾಗಿ ಕೈ ಮಾತ್ರ ಸನ್ನಿ ಡಿಯೋಲ್ ನಂತಾಗಿರುವವರನ್ನು ನೋಡಿರುತ್ತೀರಿ. ಹಾಗೆಯೇ ಧ್ಯಾನ. ಇದನ್ನು ಕಲಿಯುವುದಿದೆ. ಯಾವುದೇ ಕಲಿಕೆಯಂತೆ ಇದಕ್ಕೊಂದಿಷ್ಟು ತಯಾರಿಯೂ ಬೇಕಿರುತ್ತದೆ. ಆಗ ಧ್ಯಾನ ರುಚಿಸುತ್ತದೆ. ಸರಿಯಾದ ವ್ಯಾಯಾಮ ಮಾಡಿದರಷ್ಟೇ ಜಿಮ್ ಸಹ್ಯವಾಗುವಂತೆ, ಇಷ್ಟವಾಗುವಂತೆ, ಲಾಭವಾಗುವಂತೆ, ಮರಳಿ ಹೋಗುವಂತೆ, ಸರಿಯಾಗಿ ಕಲಿತ ಧ್ಯಾನ ಮಾತ್ರ ಪ್ರಯೋಜನಕ್ಕೆ ಬರುತ್ತದೆ. ಇಲ್ಲದಿದ್ದರೆ ಬರೀ ಸುಸ್ತು. ಮಾನಸಿಕ ಸುಸ್ತು ನಮ್ಮ ಉಮೇದಿಯನ್ನು ಕುಗ್ಗಿಸಿಬಿಡುತ್ತದೆ.

ಧ್ಯಾನದ ಬಗ್ಗೆ ಸಾವಿರ ಪುಸ್ತಕಗಳಿವೆ. ಈಗಂತೂ ಲಕ್ಷ ಪುಸ್ತಕಗಳೇ ಇರಬಹುದು. ಆದರೆ ಮೂಲವೆನ್ನಿಸುವ ಕೆಲವೇ ಕೆಲವು. ಈಗ ಸುಮಾರು ನಾಲ್ಕರಿಂದ ಆರು ಸಾವಿರ ವರ್ಷಗಳಿಂದ ಯೂಟ್ಯೂಬ್ ಇಲ್ಲವಾಗಿದ್ದರಿಂದ ಪತಂಜಲಿ ಇತ್ಯಾದಿ ಮಾಡಿರುವ ಪಾಡ್ಕಾಸ್ಟ್ ಸಿಗುವುದಿಲ್ಲ! ಋಗ್ವೇದದಲ್ಲಿ ತಪಸ್ಸು, ಏಕಾಗ್ರತೆ, ಅಂತರ್ಶುದ್ಧಿ ಇತ್ಯಾದಿ ವಿಷಯಪ್ರಸ್ತಾಪ ಇದೆ, ಅದುವೆ ಮೂಲ ಎಂಬೊಂದು ಅನಿಸಿಕೆಯಿದೆ. ಇನ್ನು ಕೆಲವು ಇತಿಹಾಸಕಾರರ ಪ್ರಕಾರ ಸಿಂಧು ನಾಗರಿಕತೆಯ ಉತ್ಖನನ ಸಮಯದಲ್ಲಿ ಸಿಕ್ಕ ಶಿವ – ಪಶುಪತಿ ಸೀಲ್(ಠಸ್ಸೆ) ಧ್ಯಾನದ ಮೊದಲ ಕುರುಹು ಎನ್ನಲಾಗುತ್ತದೆ. ಋಗ್ವೇದದಲ್ಲಿದೆ ಎಂದಾದರೆ ಧ್ಯಾನ ಅದಕ್ಕಿಂತ ಮೊದಲಿನ ಆವಿಷ್ಕಾರ ಎಂದಾಯಿತು! ಆದರೆ ಸ್ಪಷ್ಟವಾದ ಧ್ಯಾನದ ವಿವರಗಳು ಸಿಗುವುದು ಕಠ, ಮುಂಡಕ ಮತ್ತು ಛಾಂದೋಗ್ಯ ಉಪನಿಷತ್ತುಗಳಲ್ಲಿ. ಇಂದು ನಮಗೆ ಲಭ್ಯವಿರುವ ಧ್ಯಾನ ವಿಧಾನಗಳು ಆ ನಂತರದಲ್ಲಿ ಅಭಿವೃದ್ಧಿ ಹೊಂದಿರಬಹುದು, ಅಥವಾ ಅದು ದಾಖಲಾದದ್ದು ಆಯಾ ಕಾಲದಲ್ಲಿರಬಹುದು. ಇಂಥದ್ದಕ್ಕೆಲ್ಲ ಇತಿಹಾಸ – ಮೂಲ ಹುಡುಕಿ ಹೊರಟರೆ ಪ್ರಯೋಜನವೇನಿಲ್ಲ. ಅದು ಉಪ್ಪನ್ನು ಯಾರು ಮೊದಲು ಕಂಡುಹಿಡಿದರು, ತಿಂದರು ಎಂಬ ಪ್ರಶ್ನೆಯಷ್ಟೇ ಅಪ್ರಸ್ತುತ. ಭಗವದ್ಗೀತೆ, ಪತಂಜಲಿ ಯೋಗ ಸೂತ್ರ, ಸತಿಪಟ್ಠಾನ, ಆನಾಪಾನಸತಿ– ಬೌದ್ಧ ಸೂತ್ರ (ಸುತ್ತಗಳು), ಕ್ರಿಯಾ ಯೋಗ, ನಾದ ಯೋಗ ಹೀಗೆ ನಿಮಗೊಂದು ಉದ್ದದ ಪಟ್ಟಿ ಗೂಗಲ್‌ನಲ್ಲಿ ಸಿಗುತ್ತದೆ. ಇವೆಲ್ಲ ಉಪ್ಪುಗಳೇ– ಕಲ್ಲು ಉಪ್ಪು, ಸಮುದ್ರದ ಉಪ್ಪು, ಗೋಕರ್ಣದ ಉಪ್ಪು, ಪಾಕಿಸ್ತಾನದ ಹಿಮಾಲಯನ್ ಪಿಂಕ್ ಸಾಲ್ಟ್ ಹೀಗೆಲ್ಲಾ ವೈವಿಧ್ಯ ಇರುವಂತೆ. ಒಟ್ಟಾರೆ ಧ್ಯಾನ ನಡೆದು ಬಂದ ದಾರಿ ಯಾವುದು ಎಂದು ಕೇಳಿದರೆ ವೇದ– ಉಪನಿಷತ್ತುಗಳು– ಪತಂಜಲಿ– ಆನಂತರದಲ್ಲಿ ಕಾಶ್ಮೀರಿ ಶೈವರು.

ಹಾಗಾದರೆ ಎಷ್ಟು ರೀತಿಯಲ್ಲಿ ಧ್ಯಾನ ಸಾಧ್ಯ? 112. ಬರೋಬ್ಬರಿ ನೂರಾ ಹನ್ನೆರಡು ರೀತಿಯಲ್ಲಿ ಮಾತ್ರ ಸಾಧ್ಯ. ಅದಕ್ಕಿಂತ ಒಂದು ಹೆಚ್ಚು, ಒಂದು ಕಡಿಮೆ ಇಲ್ಲ. ಇದು ಧ್ಯಾನದ ಫುಲ್ ಲಿಸ್ಟ್. ಕಾಶ್ಮೀರಿ ಶೈವ ಪರಂಪರೆಯ– 'ವಿಜ್ಞಾನ ಭೈರವ ತಂತ್ರ'ದಲ್ಲಿ ಈ ನೂರಾಹನ್ನೆರಡು ವಿಧಾನಗಳ ಪಟ್ಟಿ ಇದೆ. ಇದನ್ನು ಶಿವ ಪಾರ್ವತಿಗೆ ಹೇಳಿದ ಮಾತುಕತೆಯ ರೂಪದಲ್ಲಿದೆ. ಬುದ್ಧ, ಜೆನ್, ಓಶೋ, ಅರಬಿಂದೋ, ರಾಮಕೃಷ್ಣ ಪರಮಹಂಸರು, ಶಿವಾನಂದರು, ರಮಣ ಮಹರ್ಷಿ, ಚಿನ್ಮಯಾನಂದರು, ನೀಮ್ ಕರೋಲಿ ಬಾಬಾ, ಶ್ರೀಶ್ರೀ, ಸದ್ಗುರು, ಎಕ್ಹಾರ್ಟ್ ಟೋಲ್, ಅಮೃತಾನಂದಮಯಿ ಎಲ್ಲರೂ ಕಲಿಸಿದ, ಕಲಿಸುವ ಧ್ಯಾನ ಸಾಮಾನ್ಯವಾಗಿ ಅವರವರ ಮೂಲದ ಹಿನ್ನೆಲೆ ಪ್ರತ್ಯೇಕವೇ ಆದರೂ ಅದೆಲ್ಲವೂ ಈ 112ರ ಪಟ್ಟಿಯಲ್ಲಿಯೇ ಒಂದಾಗಿರುತ್ತದೆ. ವಿಜ್ಞಾನ ಭೈರವ ತಂತ್ರವೇ ಧ್ಯಾನಕ್ಕೆ ಮೂಲವೆಂದಲ್ಲ. ಇದೊಂದು ಮಾಸ್ಟರ್ ಲಿಸ್ಟ್. ಜಗತ್ತಿನ ಎಲ್ಲ ಉಪ್ಪಿನ ವೈವಿಧ್ಯಗಳ ಪೂರ್ಣ ಕ್ಯಾಟಲಾಗ್ ಇದ್ದಂತೆ.



ಬುದ್ಧ ಕುಳಿತು ಉಸಿರನ್ನು ಗಮನಿಸುವ ಮೂಲಕ ಧ್ಯಾನ ಮಾಡಿ ಎಂದ. ಝೆನ್ ಪರಂಪರೆ 'ಸುಮ್ಮನೆ ಕುಳಿತುಕೋ' ಎನ್ನುತ್ತದೆ. ಅದೇ ಝೆನ್‌ನಲ್ಲಿ 'ಕಿನ್ಹಿನ್' ಎಂದು ನಡೆಯುತ್ತಲೇ ಮಾಡುವ ಧ್ಯಾನವೂ ಇದೆ! ವೇದಾಂತ 'ನಾನು ಯಾರು?' ಎಂದು ಕೇಳಿಕೊಳ್ಳುತ್ತ ಹೋಗಿ ಎನ್ನುತ್ತದೆ. ಭಕ್ತಿ ಪರಂಪರೆಯಲ್ಲಿ ನಾಮಸ್ಮರಣೆಯೇ ಧ್ಯಾನ. ವಿಜ್ಞಾನ ಭೈರವದ ನೂರಾ ಹನ್ನೆರಡರ ಪಟ್ಟಿಯಲ್ಲಿ ಉಸಿರು, ಶಬ್ದ, ಬೆಳಕು, ಕತ್ತಲೆ, ಸಂತೋಷ, ದುಃಖ, ನೋವು, ಪ್ರೀತಿ– ಯಾವುದನ್ನಾದರೂ ಧ್ಯಾನದ ಬಾಗಿಲಾಗಿಸಬಹುದು. ಮಾರ್ಗ ನೂರಾ ಹನ್ನೆರಡು. ಗಮ್ಯ ಮಾತ್ರ ಒಂದೇ– ತಲೆಯೊಳಗಿನ ನಿರಂತರ ಹರಟೆಯಿಂದ ಒಂದೆರಡು ಹೆಜ್ಜೆ ದೂರ ನಿಂತು ಅದನ್ನು ನೋಡುವುದು.

ಹಾಗಿದ್ದರೆ ಈ ನೂರಾ ಹನ್ನೆರಡರಲ್ಲಿ ನನಗೆ, ಅಥವಾ ನಿಮಗೆ ಸರಿಯಾದ ವಿಧಾನ ಯಾವುದು? ಈ ಪ್ರಶ್ನೆಯೇ ತಪ್ಪು. ಇದು 'ಯಾವ ವ್ಯಾಯಾಮ ಸರಿ?' ಎಂದು ಕೇಳಿದಂತೆ. ಒಬ್ಬರು ಓಡುತ್ತಾರೆ, ಇನ್ನೊಬ್ಬರು ಈಜುತ್ತಾರೆ, ಮತ್ತೊಬ್ಬರು ಜಿಮ್ಮಿನಲ್ಲಿ ಬೆವರು ಸುರಿಸುತ್ತಾರೆ. ಗುರಿ ಒಂದೇ– ದೇಹದ ಆರೋಗ್ಯ. ವಿಧಾನ ಅವರವರ ಜಾಯಮಾನಕ್ಕೆ ಹೊಂದಿಕೆಯಾಗಬೇಕು. ಧ್ಯಾನವೂ ಹಾಗೆಯೇ. ಕೆಲವರಿಗೆ ಉಸಿರಿನ ಮೇಲೆ ಗಮನವಿಡುವುದು ಸಲೀಸು. ಕೆಲವರಿಗೆ ನಡೆಯುವ ಧ್ಯಾನ ಒಗ್ಗುತ್ತದೆ. ಇನ್ನು ಕೆಲವರಿಗೆ ಪ್ರಕೃತಿಯ ನಡುವೆ ಸುಮ್ಮನೆ ಕುಳಿತರೆ ಸಾಕು, ಮನಸ್ಸು ನೆಲೆಗೊಳ್ಳುತ್ತದೆ. ಗೋಕರ್ಣದ ಉಪ್ಪೋ, ಹಿಮಾಲಯನ್ ಪಿಂಕ್ ಸಾಲ್ಟೋ– ಉಪ್ಪು ಉಪ್ಪೇ.

ಧ್ಯಾನದ ವಿಷಯದಲ್ಲಿ ದೊಡ್ಡ ಸಮಸ್ಯೆ ಎಂದರೆ ನಮ್ಮ ನಿರೀಕ್ಷೆ. ಧ್ಯಾನ ಮೊದಲ ದಿನವೇ ಫಲ ಕೊಡಬೇಕು. ಜಿಮ್ಮಿಗೆ ಮೊದಲ ದಿನ ಹೋಗಿಬಂದು ಕನ್ನಡಿಯ ಮುಂದೆ ನಿಂತು 'ಸ್ನಾಯು ಫ್ಲೆಕ್ಸ್' ಮಾಡಿಕೊಳ್ಳುವವರಂತೆ. ಧ್ಯಾನದಲ್ಲೂ ಹಾಗೆಯೇ– ಮೊದಲ ದಿನವೇ ಧ್ಯಾನ ದಕ್ಕುವುದಿಲ್ಲ. ಬದಲಿಗೆ ಆರಂಭದಲ್ಲಿ ಧ್ಯಾನಕ್ಕೆ ಕುಳಿತಾಗ ತಲೆಯೊಳಗಿನ ವಕೀಲ, ನ್ಯಾಯಾಧೀಶ, ಜ್ಯೋತಿಷಿ ಇತ್ಯಾದಿ ಹರಗಣಗಳೆಲ್ಲ ದಂಗೆಯೆದ್ದುಬಿಡುತ್ತಾರೆ. ಐದೇ ನಿಮಿಷದಲ್ಲಿ ತಲೆ ಚಿಟ್ಟು ಹಿಡಿದು ಸಾಕೆನಿಸಿಬಿಡುತ್ತದೆ.

ಹಾಗಾದರೆ ಎಲ್ಲಿಂದ ಶುರು? ಬಹಳ ಸರಳ. ದಿನಕ್ಕೆ ಕೇವಲ ಮೂರು ನಿಮಿಷ. ಮೊಬೈಲನ್ನು ಇನ್ನೊಂದು ಕೋಣೆಯಲ್ಲಿಟ್ಟು ಸುಮ್ಮನೆ ಕಣ್ಣುಮುಚ್ಚಿ ಕುಳಿತುಕೊಳ್ಳಿ. ಉಸಿರು ಬರುವುದನ್ನು, ಹೋಗುವುದನ್ನು ಗಮನಿಸಿ. ಯೋಚನೆ ಬಂದರೆ ಅದರ ಹಿಂದೆ ಹೋಗಬೇಡಿ, ಓಡಿಸಲೂಬೇಡಿ. ಯೋಚನೆಯನ್ನು ಗಮನಿಸಿ. ಮತ್ತೆ ಮನಸ್ಸನ್ನು ಉಸಿರಿಗೆ ತನ್ನಿ. ಅಷ್ಟೆ. ಮೂರು ನಿಮಿಷ ಇಷ್ಟನ್ನೇ ಮಾಡಿದರೆ ಸಾಕು. ತಲೆಯ ಯಾವುದೇ ಕಥೆಯನ್ನು, ಕಲ್ಪನೆಯನ್ನು ಮುಂದುವರಿಸಬೇಡಿ.

ಸುಮ್ಮನೆ ಗಮನಿಸಿ. ಮೂರೇ ಮೂರು ನಿಮಿಷ. ಒಂದು ಕಾಳು ಉಪ್ಪಿನ ರುಚಿ ಗೊತ್ತಾಗಲು ಸಾಕು. ಆದರೆ ಇದು ಕೇವಲ ಒಂದು ಕಾಳು ಮಾತ್ರ. ಇದು ರುಚಿಗೆ ಸಾಕು– ಆದರೆ ನಿತ್ಯ ಅಡುಗೆಗೆ ಪ್ರಯೋಜನವಿಲ್ಲ. ಉಸಿರಿನ ಮೇಲೆ ಗಮನ ಇಡುವುದು– ಕೇವಲ ಒಂದು ಧ್ಯಾನ ಪ್ರಕಾರದ ಮೊದಲ ಹಂತ. ಇದನ್ನೇ ಮುಂದುವರಿಸಿಕೊಂಡು ಹೋಗಿ– ನಾನೇ ಧ್ಯಾನವನ್ನು ಆವಿಷ್ಕರಿಸಿಬಿಡುತ್ತೇನೆ ಎನ್ನುವುದು ಮೂರ್ಖತನ. ಜಿಮ್ಮಿಗೆ ಹೋಗಿ ನಾನೇ ವ್ಯಾಯಾಮ ಕಲಿಯುತ್ತೇನೆ ಎಂದು ಹೊರಟಂತೆ. ಸಾಧ್ಯವಿಲ್ಲವೇ? ಸಾಧ್ಯವಿದೆ. ಆದರೆ ಸೋತು ಕೈಚೆಲ್ಲುವ ಸಾಧ್ಯತೆ ಜಾಸ್ತಿ. ಹೇಗೆ ಒಳ್ಳೆಯ ಜಿಮ್ ಇನ್‌ಸ್ಟ್ರಕ್ಟರ್ ಅವಶ್ಯವೋ ಹಾಗೆಯೇ ಧ್ಯಾನದ ಮಟ್ಟಿಗೆ ಒಬ್ಬ ಒಳ್ಳೆಯ ಗುರುವಿನ ಅವಶ್ಯಕತೆಯಿರುತ್ತದೆ. ಆದರೆ ಜಿಮ್ ಇನ್‌ಸ್ಟ್ರಕ್ಟರ್ ಕಾಲಿಗೆ ಬಿದ್ದರೆ ಪ್ರಯೋಜನವಿಲ್ಲ, ಅವನು ಹೇಳಿದ್ದನ್ನು ನಾವೇ ಮಾಡಬೇಕು. ನಿರಂತರ ಮಾಡಬೇಕು. ಗುರು ದಾರಿ ತೋರಿಸಬಲ್ಲ; ನಡೆಯಬೇಕಾದವರು ನಾವೇ.

ಆದರೆ ಯಾರಿಗೆ ಟೈಮ್ ಐತೆ ಸಾರ್ ಅಂದಿರಾ? ಇಪ್ಪತ್ತೊಂದನೆಯ ಶತಮಾನದ ಮನುಷ್ಯನ ದೊಡ್ಡ ಕೊರತೆ ಸಮಯದ್ದಲ್ಲ; ಗಮನದ್ದು. ನಮ್ಮ ಗಮನವನ್ನು ಪ್ರತಿಕ್ಷಣವೂ ಯಾರೋ ಕದಿಯುವ ವ್ಯವಸ್ಥೆಯ ನಡುವೆ ನಾವಿಂದು ಬದುಕುತ್ತಿದ್ದೇವೆ. ಮೊಬೈಲು, ಜಾಹೀರಾತು, ಸುದ್ದಿ, ಇಮೇಲ್, ಸಾಮಾಜಿಕ ಜಾಲತಾಣ, ಭವಿಷ್ಯದ ಅನಿಶ್ಚಿತತೆ ಇತ್ಯಾದಿ. ಹೀಗಿರುವ ವ್ಯವಸ್ಥೆಯಲ್ಲಿ ಧ್ಯಾನ ಒಂದು ಅವಶ್ಯಕತೆ. ಮಾನಸಿಕ ಆರೋಗ್ಯ ಇಂದಿನ ತಲೆಮಾರಿನ ಭಸ್ಮಾಸುರ. ನಾವೇ ಕಟ್ಟಿಕೊಂಡ ಡಿಜಿಟಲ್ ಜಗತ್ತು ನಮ್ಮ ತಲೆಯ ಮೇಲೆಯೇ ಕೈಯಿಡಲು ಬರುತ್ತಿದೆ. ಅದಕ್ಕಾಗಿಯೇ ಇಂದು ಆಸ್ಪತ್ರೆಯಿಂದ ಶಾಲೆಯವರೆಗೆ, ಕ್ರೀಡಾಪಟುಗಳಿಂದ ಬಾಹ್ಯಾಕಾಶ ಯಾತ್ರಿಗಳವರೆಗೆ, ಕಾರ್ಪೊರೇಟ್ ಕಂಪನಿಗಳಿಂದ ಜೈಲುಗಳವರೆಗೆ ಧ್ಯಾನ ವ್ಯಾಪಿಸುತ್ತಿದೆ. ಗಮನಿಸಿ- ಇವರಾರೂ ಧ್ಯಾನವನ್ನು ಧರ್ಮವೆಂದು ಮಾಡುತ್ತಿಲ್ಲ. ಔಷಧಿಯೆಂದು ಮಾಡುತ್ತಿದ್ದಾರೆ. ಇದು ಧರ್ಮದ ಪ್ರಶ್ನೆಯಲ್ಲ; ಗಮನದ ಪ್ರಶ್ನೆ. ನಮ್ಮ ಪೂರ್ವಜರು ಸಾವಿರಾರು ವರ್ಷಗಳ ಹಿಂದೆಯೇ ಕಂಡುಹಿಡಿದಿಟ್ಟ ಈ ಮನಸ್ಸಿನ ಕಸರತ್ತನ್ನು ಜಗತ್ತು ಇಂದು ಹೆಕ್ಕಿಕೊಳ್ಳುತ್ತಿರುವಾಗ ಅದರ ತವರಿನವರಾದ ನಾವು ಮಾತ್ರ 'ಅಥ ಧ್ಯಾನಮ್' ಎಂದು ಸೌಟು ನೀರು ಬಿಟ್ಟು ಮುಂದೆ ಹೋಗುತ್ತಿದ್ದೇವೆ!

ಕಾಡಿನ ಮುಖ್ಯಸ್ಥನಿಗೆ ಉಪ್ಪು ಆಹಾರದ ರುಚಿಯನ್ನು ಹೇಗೆ ಹೆಚ್ಚಿಸುತ್ತದೆ ಎಂದು ಶಿಶಿರಕಾಲ ಓದಿದರೆ ತಿಳಿಯುತ್ತಿತ್ತು. ಆದರೆ ರುಚಿಯ ಅನುಭವವಾಗುತ್ತಿರಲಿಲ್ಲ.

(ತಲೆ-ಹರಟೆ ಮುಗಿದಿಲ್ಲ)

ಕೋಟ್ಯಧಿಪತಿಯಾಗುವುದು ತೀರಾ ಅಸಾಧ್ಯ ಮಾತೇನಲ್ಲ!

ಮನಿಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಇಂದಿನ ದಿನಗಳಲ್ಲಿ 'ಕೋಟ್ಯಧಿಪತಿ' (Millionaire) ಎಂಬ ಪದದ ಅರ್ಥವು ಹಿಂದಿನ ದಶಕಗಳಿಗಿಂತ ಸಾಕಷ್ಟು ಬದಲಾಗಿದೆ. ಆರ್ಥಿಕವಾಗಿ ನೋಡಿದರೆ, ಕೇವಲ ₹1 ಕೋಟಿ ರೂಪಾಯಿ ಆಸ್ತಿ ಹೊಂದಿರುವುದು ಈಗ ಅಸಾಧ್ಯದ ಮಾತೇನಲ್ಲ. ಇದನ್ನು ಸಾಧಿಸುವುದು ಅಷ್ಟು ಕಠಿಣವಲ್ಲ, ಆದರೆ ಅದಕ್ಕೆ ಸರಿಯಾದ ದೃಷ್ಟಿಕೋನ (Mindset) ಮತ್ತು ಯೋಜನೆ (Planning) ಬೇಕು. ಇದನ್ನು ವಿಶ್ಲೇಷಿಸುವ ಕೆಲವು ಅಂಶಗಳು ಇಲ್ಲಿವೆ:

ಮೊದಲನೆಯದಾಗಿ 'ಆಸ್ತಿ'ಯ ವ್ಯಾಖ್ಯಾನವನ್ನು ಅರ್ಥಮಾಡಿಕೊಳ್ಳಬೇಕು. ನಮ್ಮಲ್ಲಿ ಅನೇಕರು ಸ್ವಂತ ಮನೆ, ಕಾರು ಅಥವಾ ದೈನಂದಿನ ಬಳಕೆಯ ವಸ್ತುಗಳನ್ನು ಆಸ್ತಿ ಎಂದು ಭಾವಿಸುತ್ತಾರೆ. ಆದರೆ ಹಣಕಾಸಿನ ಭಾಷೆಯಲ್ಲಿ ದೈನಂದಿನ ಬಳಕೆಯ ವಸ್ತುಗಳು ನಿಜವಾದ ಆಸ್ತಿಯಲ್ಲ!

ಹಣಕಾಸು ಪರಿಭಾಷೆಯಲ್ಲಿ ನಿಜವಾದ ಆಸ್ತಿ (Asset) ಯಾವುದೆಂದರೆ, ನಿಮ್ಮ ಜೇಬಿಗೆ ಹಣ ತಂದುಕೊಡುವ ವಸ್ತುಗಳು ಉದಾಹರಣೆಗೆ ಷೇರುಗಳು, ಮ್ಯೂಚುವಲ್ ಫಂಡ್, ಬಾಡಿಗೆ ಬರುವ ಮನೆ, ಚಿನ್ನ, ಬೆಳ್ಳಿ. ನಿಮ್ಮ ಜೇಬಿನಿಂದ ಹಣವನ್ನು ಹೊರಗೆ ತೆಗೆಯುವ ವಸ್ತುಗಳೂ ಬೇಕಾದಷ್ಟಿವೆ. ಉದಾಹರಣೆಗೆ ಸ್ವಂತ ಉಪಯೋಗದ ಕಾರು, ಲಕ್ಸುರಿ ಬೈಕ್, ಸ್ಮಾರ್ಟ್ ಫೋನ್, ಎಲೆಕ್ಟ್ರಾನಿಕ್ಸ್ ಸಾಧನಗಳು. ಕೋಟ್ಯಧಿಪತಿಯಾಗಲು ನಿಜವಾದ ಆಸ್ತಿಗಳನ್ನು ಹೊಂದಲು ಗಮನ ಕೊಡಬೇಕು.

ಇಂದು ₹1 ಕೋಟಿ ಎಂದರೆ ದೊಡ್ಡ ಮೊತ್ತವಾಗಿ ಕಾಣಬಹುದು. ಆದರೆ ಮುಂದಿನ 15-20 ವರ್ಷಗಳಲ್ಲಿ ಹಣದುಬ್ಬರದಿಂದಾಗಿ ಇದರ ಮೌಲ್ಯ ಕಡಿಮೆಯಾಗುತ್ತದೆ. ಆದ್ದರಿಂದ, ಕೇವಲ ₹1 ಕೋಟಿ ಸಂಖ್ಯೆಯನ್ನು ಗುರಿಯಾಗಿಸದೆ, ನಿವೃತ್ತಿಯ ನಂತರವೂ ಜೀವನಶೈಲಿಯನ್ನು ಕಾಪಾಡಿಕೊಳ್ಳಬಲ್ಲಷ್ಟು ದೊಡ್ಡ ಮೊತ್ತವನ್ನು ಗುರಿಯಾಗಿಸಿಕೊಳ್ಳಬೇಕು.

ಇಂದು ನಿಮ್ಮ ಬಳಿ ಇರುವ ₹1 ಕೋಟಿಯ ಮೌಲ್ಯವು 10 ವರ್ಷಗಳ ನಂತರ ಎಷ್ಟಿರಬಹುದು? ಎಂಬುದನ್ನು ತಕ್ಕಮಟ್ಟಿಗೆ ಲೆಕ್ಕಾಚಾರ ಮಾಡಬಹುದು. ಭಾರತದಲ್ಲಿ ಸಾಮಾನ್ಯವಾಗಿ ಹಣದುಬ್ಬರವು ವಾರ್ಷಿಕ ಸರಾಸರಿ 5ರಿಂದ 6 ಪರ್ಸೆಂಟ್ ಇರುತ್ತದೆ. ನೀವು ಇಂದಿನ 1 ಕೋಟಿ ರೂಪಾಯಿಯನ್ನು 10 ವರ್ಷಗಳ ನಂತರದ ಮೌಲ್ಯಕ್ಕೆ ಹೋಲಿಸಿದರೆ, 5 ಪರ್ಸೆಂಟ್ ಹಣದುಬ್ಬರ ದರದಲ್ಲಿ ₹1 ಕೋಟಿಯ ಕೊಳ್ಳುವ ಶಕ್ತಿಯು ಸುಮಾರು 61.4 ಲಕ್ಷಗಳಿಗೆ ಕುಸಿಯುತ್ತದೆ. 6 ಪರ್ಸೆಂಟ್ ಹಣದುಬ್ಬರ ದರದಲ್ಲಿ 10 ವರ್ಷಗಳ ನಂತರ ಇಂದಿನ 1 ಕೋಟಿಯ ಕೊಳ್ಳುವ ಶಕ್ತಿಯು ಸುಮಾರು 55.8 ಲಕ್ಷಗಳಿಗೆ ಇಳಿಯುತ್ತದೆ. ಅಂದರೆ, ಇಂದು 1 ಕೋಟಿಯಲ್ಲಿ ನೀವು ಏನು ಖರೀದಿಸಬಲ್ಲಿರೋ, ಅದೇ ವಸ್ತು ಅಥವಾ ಸೇವೆಯನ್ನು 10 ವರ್ಷಗಳ ನಂತರ ಖರೀದಿಸಲು ನಿಮಗೆ ಸುಮಾರು 1.6 ಕೋಟಿಯಿಂದ 1.8 ಕೋಟಿಯ ಅಗತ್ಯವಿರುತ್ತದೆ.

ಹಣದುಬ್ಬರ ಎಂದರೆ ವಸ್ತುಗಳ ಬೆಲೆ ಏರಿಕೆ. ನೀವು ಹಣವನ್ನು ಎಲ್ಲಿಯೂ ಹೂಡಿಕೆ ಮಾಡದೆ ಸುಮ್ಮನೆ ಕೂಡಿಟ್ಟರೆ, ಅದರ ನೈಜ ಮೌಲ್ಯ ಕಾಲದೊಂದಿಗೆ ಕಡಿಮೆಯಾಗುತ್ತದೆ. ನಿಮ್ಮ ಹಣದ ಮೌಲ್ಯವನ್ನು ಉಳಿಸಿಕೊಳ್ಳಲು ಮತ್ತು ಹೆಚ್ಚಿಸಿಕೊಳ್ಳಲು, ಅದನ್ನು ಹಣದುಬ್ಬರದ ದರಕ್ಕಿಂತ ಹೆಚ್ಚು ಪ್ರತಿಫಲ ನೀಡುವ ಯೋಜನೆಗಳಲ್ಲಿ ಹೂಡಿಕೆ ಮಾಡುವುದು ಅನಿವಾರ್ಯ. ಉದಾಹರಣೆಗೆ, ನೀವು ಹೂಡಿಕೆ ಮಾಡಿದ ಹಣಕ್ಕೆ 12 ಪರ್ಸೆಂಟ್ ವಾರ್ಷಿಕ ಆದಾಯ ಸಿಗುತ್ತಿದ್ದರೆ, ನಿಮ್ಮ ಆಸ್ತಿ ಹಣದುಬ್ಬರವನ್ನು ಮೀರಿ ಬೆಳೆಯುತ್ತದೆ. ಸಾಮಾನ್ಯ ಹಣದುಬ್ಬರ ಶೇಕಡಾ 5 ಇರಬಹುದು, ಆದರೆ ಶಿಕ್ಷಣ, ಆರೋಗ್ಯ ಮತ್ತು ವೈಯಕ್ತಿಕ ಸೇವೆಗಳ ಬೆಲೆಗಳು ಅದಕ್ಕಿಂತ ವೇಗವಾಗಿ (8-12 ಪರ್ಸೆಂಟ್) ಏರುತ್ತಿರುತ್ತವೆ ಎಂಬುದನ್ನು ಗಮನಿಸಬೇಕು.

ನಿಮ್ಮ ₹1 ಕೋಟಿಯ ಮೌಲ್ಯ ಕಡಿಮೆಯಾಗದಂತೆ ನೋಡಿಕೊಳ್ಳಲು, ಕೇವಲ ಬ್ಯಾಂಕ್ ಉಳಿತಾಯ ಖಾತೆಯಲ್ಲಿ ಠೇವಣಿ ಮಾಡಿದರೆ ಸಾಲದು. ಅದನ್ನು ಸರಿಯಾದ ಕಡೆಯಲ್ಲಿ ಹೂಡಿಕೆ ಮಾಡಬೇಕು. ಮ್ಯೂಚುವಲ್ ಫಂಡ್, ಸ್ಟಾಕ್ಸ್, ರಿಯಲ್ ಎಸ್ಟೇಟ್, ಚಿನ್ನವನ್ನು ಆಯ್ಕೆ ಮಾಡಬಹುದು.

ಶಿಸ್ತುಬದ್ಧ ಹೂಡಿಕೆಗೆ ಅದ್ಭುತವಾದ ಶಕ್ತಿ ಇದೆ. ನೀವು ತಿಂಗಳಿಗೆ ಕೇವಲ 10,000ರಿಂದ 15,000 ರುಪಾಯಿ ಹೂಡಿಕೆ ಮಾಡುವ ಸಾಮರ್ಥ್ಯ ಹೊಂದಿದ್ದರೆ, ಶಿಸ್ತುಬದ್ಧ ಹೂಡಿಕೆ ನಿಮ್ಮನ್ನು ಕೋಟ್ಯಧಿಪತಿಯನ್ನಾಗಿ ಮಾಡಬಲ್ಲದು. 12 ಪರ್ಸೆಂಟ್ ವಾರ್ಷಿಕ ರಿಟರ್ನ್ ನೀಡುವ ಮ್ಯೂಚುವಲ್ ಫಂಡ್‌ನಲ್ಲಿ ತಿಂಗಳಿಗೆ 15,000 ರುಪಾಯಿ ಹೂಡಿಕೆ ಮಾಡಿದರೆ, ಸುಮಾರು 20 ವರ್ಷಗಳಲ್ಲಿ ನೀವು 1 ಕೋಟಿಗಿಂತ ಹೆಚ್ಚು ಸಂಪತ್ತನ್ನು ಗಳಿಸಬಹುದು. ಇದು ನಿಮ್ಮ ಆದಾಯದ ಒಂದು ಭಾಗವಷ್ಟೇ ಆಗಿದ್ದರೆ, ಇನ್ನೂ ಬೇಗನೆ ಸಾಧಿಸಬಹುದು.

ಶಿಸ್ತುಬದ್ಧ ಆರ್ಥಿಕ ಯೋಜನೆ ಮತ್ತು ತಾಳ್ಮೆಯಿಂದ ಕೋಟ್ಯಧಿಪತಿಗಳಾಗುವ ಗುರಿಯನ್ನು ಖಂಡಿತವಾಗಿ ಯೂ ತಲುಪಬಹುದು. ಇದಕ್ಕಾಗಿ ವೈಜ್ಞಾನಿಕ ಮತ್ತು ವ್ಯವಸ್ಥಿತವಾದ ಹೂಡಿಕೆಯ ವಿಧಾನಗಳೂ ಇವೆ.

ಮೊದಲನೆಯದಾಗಿ, ಹೂಡಿಕೆಯನ್ನು ಎಷ್ಟು ಬೇಗ ಆರಂಭಿಸುತ್ತೀರೋ, ಅಷ್ಟು ವೇಗವಾಗಿ ನಿಮ್ಮ ಹಣ ಬೆಳೆಯುತ್ತದೆ. ಕಾಂಪೌಂಡಿಂಗ್ (ಚಕ್ರಬಡ್ಡಿ) ಶಕ್ತಿಯನ್ನು ಅರ್ಥಮಾಡಿಕೊಳ್ಳಬೇಕು. ಸಣ್ಣ ಮೊತ್ತದ ಹೂಡಿಕೆಯೂ ದೀರ್ಘಾವಧಿಯಲ್ಲಿ ದೊಡ್ಡ ಮೊತ್ತವಾಗಿ ಪರಿವರ್ತನೆಗೊಳ್ಳುತ್ತದೆ. ಎರಡನೆಯದಾಗಿ, ಮ್ಯೂಚುವಲ್ ಫಂಡ್‌ಗಳಲ್ಲಿ ಸಿಸ್ಟಮ್ಯಾಟಿಕ್ ಇನ್ವೆಸ್ಟ್ಮೆಂಟ್ ಪ್ಲಾನ್ (SIP) ಮೂಲಕ ಹೂಡಿಕೆ ಮಾಡುವುದು ಮಧ್ಯಮ ವರ್ಗದವರಿಗೆ ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದೆ. ಮಾಸಿಕ ಆದಾಯದ ಕನಿಷ್ಠ 15-20ರಷ್ಟು ಮೊತ್ತವನ್ನು ಹೂಡಿಕೆ ಮಾಡಲು ಪ್ರಯತ್ನಿಸಿ. ಪ್ರತಿ ವರ್ಷ ನಿಮ್ಮ ಆದಾಯ ಹೆಚ್ಚಾದಂತೆ, ಹೂಡಿಕೆಯ ಮೊತ್ತವನ್ನೂ ಹೆಚ್ಚಿಸುತ್ತಾ ಹೋಗಿ. ಇದು ನಿಮ್ಮ ಗುರಿಯನ್ನು ಬೇಗ ತಲುಪಲು ಸಹಾಯ ಮಾಡುತ್ತದೆ.

ಎಲ್ಲಾ ಹಣವನ್ನು ಒಂದೇ ಕಡೆ ಹೂಡಿಕೆ ಮಾಡಬೇಡಿ. ಅಪಾಯವನ್ನು ಕಡಿಮೆ ಮಾಡಲು ಹೂಡಿಕೆಯನ್ನು ಹೀಗೆ ವಿಭಜಿಸಿ– ಇಕ್ವಿಟಿ ಮ್ಯೂಚುವಲ್ ಫಂಡ್ಸ್: ದೀರ್ಘಾವಧಿಯಲ್ಲಿ ಹೆಚ್ಚಿನ ಲಾಭಕ್ಕಾಗಿ (10-15 ವರ್ಷಗಳಿಗಿಂತ ಹೆಚ್ಚು). ಪಬ್ಲಿಕ್ ಪ್ರಾವಿಡೆಂಟ್ ಫಂಡ್ (ಸಾರ್ವಜನಿಕ ಭವಿಷ್ಯ ನಿಧಿ): ಇದು ಸರಕಾರಿ ಬೆಂಬಲಿತ ಮತ್ತು ಸುರಕ್ಷಿತ ಹೂಡಿಕೆ. ತೆರಿಗೆ ಉಳಿತಾಯಕ್ಕೂ ಇದು ಉತ್ತಮ. ಚಿನ್ನ, ಎನ್‌ಪಿಎಸ್ (ರಾಷ್ಟ್ರೀಯ ಪಿಂಚಣಿ ಯೋಜನೆ).

ಕ್ರೆಡಿಟ್ ಕಾರ್ಡ್ ಸಾಲ ಅಥವಾ ಅತಿಯಾದ ಬಡ್ಡಿಯ ಸಾಲಗಳನ್ನು ಸಾಧ್ಯವಾದಷ್ಟು ಬೇಗ ತೀರಿಸಿ. ಸಾಲದ ಮೇಲಿನ ಬಡ್ಡಿಯು ನಿಮ್ಮ ಸಂಪತ್ತಿನ ಬೆಳವಣಿಗೆಯನ್ನು ತಡೆಯುತ್ತದೆ. ಸಂಬಳ ಹೆಚ್ಚಾದ ತಕ್ಷಣ ಐಷಾರಾಮಿ ಖರ್ಚುಗಳನ್ನು ಹೆಚ್ಚಿಸಬೇಡಿ. ಉಳಿತಾಯದ ಗುರಿಯನ್ನು ತಲುಪುವವರೆಗೆ ನಿಮ್ಮ ಜೀವನಶೈಲಿಯನ್ನು ಸರಳವಾಗಿ ಇಟ್ಟುಕೊಳ್ಳಿ. ಕನಿಷ್ಠ 6 ತಿಂಗಳ ಖರ್ಚಿಗೆ ಬೇಕಾಗುವಷ್ಟು ಹಣವನ್ನು ತುರ್ತು ನಿಧಿಯಾಗಿ ಮೀಸಲಿಡಿ (ಉದಾಹರಣೆಗೆ ಲಿಕ್ವಿಡ್ ಫಂಡ್ ಅಥವಾ ಉಳಿತಾಯ ಖಾತೆ). ಇದು ಯಾವುದೇ ಅನಿರೀಕ್ಷಿತ ಸಂದರ್ಭಗಳಲ್ಲಿ ನಿಮ್ಮ ದೀರ್ಘಕಾಲೀನ ಹೂಡಿಕೆಯನ್ನು ಮುರಿಯದಂತೆ ನೋಡಿಕೊಳ್ಳುತ್ತದೆ. ವಾರೆನ್ ಬಫೆಟ್ ಹೇಳುವಂತೆ, ನೀವೇ ನಿಮ್ಮ ಅತ್ಯುತ್ತಮ ಹೂಡಿಕೆ. ನಿಮ್ಮ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಿ, ಇದರಿಂದ ನಿಮ್ಮ ಆದಾಯದ ಮೂಲಗಳು ವೃದ್ಧಿಯಾಗುತ್ತವೆ. ಆದಾಯ ಹೆಚ್ಚಾದಷ್ಟು ಹೂಡಿಕೆ ಮಾಡುವ ಸಾಮರ್ಥ್ಯವೂ ಹೆಚ್ಚುತ್ತದೆ.

'ಚಕ್ರಬಡ್ಡಿಯು ವಿಶ್ವದ ಎಂಟನೇ ಅದ್ಭುತ' ಎಂದು ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಹೇಳಿದ್ದರು. ಇದು ಖಂಡಿತವಾಗಿಯೂ ಉತ್ಪ್ರೇಕ್ಷೆಯಲ್ಲ, ಬದಲಾಗಿ ಗಣಿತದ ಒಂದು ಅದ್ಭುತ ಸತ್ಯ. ಒಬ್ಬ ವ್ಯಕ್ತಿಯು ತನ್ನ ಹಣಕಾಸಿನ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಲು ತಿಳಿದುಕೊಳ್ಳಬೇಕಾದ ಅತಿ ಮುಖ್ಯವಾದ ವಿಷಯವೆಂದರೆ 'ಚಕ್ರಬಡ್ಡಿ' (Compounding). ಚಕ್ರಬಡ್ಡಿ ಎಂದರೇನು, ಅದು ಹೇಗೆ ಕೆಲಸ ಮಾಡುತ್ತದೆ ಮತ್ತು ಸಣ್ಣ ಉಳಿತಾಯವು ಹೇಗೆ ದೀರ್ಘಾವಧಿಯಲ್ಲಿ ಕೋಟಿಗಟ್ಟಲೆ ಸಂಪತ್ತನ್ನು ಸೃಷ್ಟಿಸುತ್ತದೆ ಎಂಬುದನ್ನು ನೋಡೋಣ.

ಸರಳವಾಗಿ ಹೇಳುವುದಾದರೆ, ಚಕ್ರಬಡ್ಡಿ ಎಂದರೆ ಬಡ್ಡಿಯ ಮೇಲೆ ಬಡ್ಡಿ ಪಡೆಯುವುದು. ಸರಳ ಬಡ್ಡಿ (Simple Interest) ಎಂದರೆ ನೀವು ಹೂಡಿದ ಮೂಲ ಹಣದ ಮೇಲೆ ಮಾತ್ರ ಪ್ರತಿ ವರ್ಷ ಬಡ್ಡಿ ಸಿಗುತ್ತದೆ. ಆದರೆ ಚಕ್ರಬಡ್ಡಿ ಇದ್ದಲ್ಲಿ ನೀವು ಹೂಡಿದ ಮೂಲ ಹಣದ ಮೇಲೆ ಬಡ್ಡಿ ಸಿಗುತ್ತದೆ. ಪ್ರತಿ ವರ್ಷ ಅಥವಾ ಪ್ರತಿ ಅವಧಿಯಲ್ಲಿ ಸಿಗುವ ಆ ಬಡ್ಡಿಯು ನಿಮ್ಮ ಮೂಲ ಹಣದ ಜೊತೆಗೆ ಸೇರಿಕೊಳ್ಳುತ್ತದೆ. ಮರುದಿನದಿಂದ, ಆ ಹೊಸ ಮೊತ್ತದ ಮೇಲೆ (ಅಂದರೆ ಅಸಲು + ಹಿಂದಿನ ಬಡ್ಡಿ) ಮತ್ತೆ ಬಡ್ಡಿ ಲೆಕ್ಕ ಹಾಕಲಾಗುತ್ತದೆ. ಈ ಪ್ರಕ್ರಿಯೆಯು ನಿರಂತರವಾಗಿ ಮುಂದುವರಿದಾಗ, ನಿಮ್ಮ ಹಣವು ಆರಂಭದಲ್ಲಿ ನಿಧಾನವಾಗಿ ಬೆಳೆದರೂ, ಸಮಯ ಕಳೆದಂತೆ ಅತ್ಯಂತ ವೇಗವಾಗಿ ಬೆಳೆಯಲು ಪ್ರಾರಂಭಿಸುತ್ತದೆ.

ಕಂಪೌಂಡಿಂಗ್‌ನಿಂದ ಹೆಚ್ಚು ಲಾಭ ಪಡೆಯಲು 3 ಸೂತ್ರಗಳನ್ನು ಪಾಲಿಸಬೇಕು. ನೀವು ಎಷ್ಟು ಬೇಗ ಹೂಡಿಕೆ ಆರಂಭಿಸುತ್ತೀರೋ, ಅಷ್ಟು ಹೆಚ್ಚು ಸಮಯ ನಿಮ್ಮ ಹಣಕ್ಕೆ ಬೆಳೆಯಲು ಸಿಗುತ್ತದೆ. ಕಂಪೌಂಡಿಂಗ್‌ನ ಮೊದಲ ಕೆಲವು ವರ್ಷಗಳಲ್ಲಿ ಬೆಳವಣಿಗೆ ನಿಧಾನವಾಗಿ ಕಾಣಿಸುತ್ತದೆ. ಆದರೆ 10-15 ವರ್ಷಗಳ ನಂತರ ಅದು ವೇಗವಾಗಿ ಏರುತ್ತದೆ. ಅದನ್ನು 'ಟಿಪ್ಪಿಂಗ್ ಪಾಯಿಂಟ್' ಎನ್ನಲಾಗುತ್ತದೆ. ಮಾರುಕಟ್ಟೆ ಮೇಲೆ-ಕೆಳಗೆ ಹೋದರೂ ಸಿಪ್ ಮುಂದುವರಿಸುವುದು ಬಹಳ ಮುಖ್ಯ. ಕಂಪೌಂಡಿಂಗ್ ಎಂಬುದು ಬೆಳೆಯುತ್ತಿರುವ ಮರದಂತೆ. ಮೊದಲ ಕೆಲವು ವರ್ಷಗಳು ಬೇರು ಬಿಡಲು ಸಮಯ ತೆಗೆದುಕೊಳ್ಳುತ್ತದೆ, ಆದರೆ ಒಮ್ಮೆ ಮರ ದೊಡ್ಡದಾದ ಮೇಲೆ ಅದು ತಾನಾಗಿಯೇ ಹಣ್ಣುಗಳನ್ನು ನೀಡುತ್ತಾ ಹೋಗುತ್ತದೆ. ನೀವು ಕೇವಲ ಹೂಡಿಕೆಯನ್ನು ನಿಲ್ಲಿಸಬಾರದು, ಅಷ್ಟೇ! ಸರಳ ಬಡ್ಡಿಯನ್ನು ಕೇವಲ ನೀವು ಹೂಡಿಕೆ ಮಾಡಿದ ಮೂಲ ಹಣದ (Principal) ಮೇಲೆ ಮಾತ್ರ ಲೆಕ್ಕ ಹಾಕಲಾಗುತ್ತದೆ. ಪ್ರತಿ ವರ್ಷವೂ ಬಡ್ಡಿಯ ಮೊತ್ತ ಒಂದೇ ಆಗಿರುತ್ತದೆ. ಆದರೆ ಚಕ್ರ ಬಡ್ಡಿಯಲ್ಲಿ, ಪ್ರತಿ ವರ್ಷ ಸಿಗುವ ಬಡ್ಡಿಯನ್ನು ಮೂಲ ಹಣಕ್ಕೆ ಸೇರಿಸಲಾಗುತ್ತದೆ. ಮುಂದಿನ ವರ್ಷದ ಬಡ್ಡಿಯು ಹಳೆಯ ಬಡ್ಡಿಯನ್ನೂ ಒಳಗೊಂಡಿರುವ ಹೊಸ ಮೊತ್ತದ ಮೇಲೆ ಲೆಕ್ಕ ಹಾಕಲಾಗುತ್ತದೆ. ಇದನ್ನೇ 'ಬಡ್ಡಿಯ ಮೇಲೆ ಬಡ್ಡಿ' ಎನ್ನುತ್ತಾರೆ. ಈ ಕಾರಣಕ್ಕಾಗಿ ಇದರಲ್ಲಿ ದೀರ್ಘಾವಧಿಯ ಹೂಡಿಕೆಯಿಂದ ಸಂಪತ್ತು ಗಳಿಸಬಹುದು.

ಸಾರ್ವಜನಿಕ ಭವಿಷ್ಯನಿಧಿಯಲ್ಲಿ ಚಕ್ರಬಡ್ಡಿ ಸಿಗುತ್ತದೆ. ಇದರಲ್ಲಿ ನೀವು ವರ್ಷಕ್ಕೆ ₹1.5 ಲಕ್ಷ ಹೂಡಿಕೆ ಮಾಡುತ್ತಾ ಬಂದರೆ ಮತ್ತು ಸರಾಸರಿ 7.1 ಪರ್ಸೆಂಟ್ ಬಡ್ಡಿ ಸಿಗುತ್ತಿದೆ ಎಂದುಕೊಂಡರೆ, 15 ವರ್ಷಗಳ ನಂತರ ಚಕ್ರಬಡ್ಡಿಯ ಕಾರಣದಿಂದಾಗಿ ನಿಮ್ಮ ಒಟ್ಟು ಹೂಡಿಕೆ (₹22.5 ಲಕ್ಷ) ಸುಮಾರು ₹40 ಲಕ್ಷಕ್ಕೂ ಹೆಚ್ಚು ಮೊತ್ತವಾಗಿ ಬೆಳೆದಿರುತ್ತದೆ. ಮ್ಯೂಚುವಲ್ ಫಂಡ್ಸ್ ಅಥವಾ ಇಂಡೆಕ್ಸ್ ಫಂಡ್ಸ್‌ನಲ್ಲಿ ದೀರ್ಘಾವಧಿಯ ಹೂಡಿಕೆ ಮೂಲಕ ಸರಳವಾಗಿ ಹೆಚ್ಚಿನ ಲಾಭ ಪಡೆಯಬಹುದು.

ಆದರೆ ರಾತ್ರೋರಾತ್ರಿ ಶ್ರೀಮಂತರಾಗುವ ಭ್ರಮೆಯಿಂದ ಹೊರಬರುವುದು ಮುಖ್ಯ. ಚಕ್ರಬಡ್ಡಿಯ ನಿಜವಾದ ಲಾಭ ಕಾಣಬೇಕಾದರೆ ಕನಿಷ್ಠ 10ರಿಂದ 20 ವರ್ಷಗಳ ಕಾಲ ಕಾಯುವ ತಾಳ್ಮೆ ಇರಲೇಬೇಕು.

ಭಟ್ಟರ್ ಸ್ಕಾಚ್

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಆ ಹುಡುಗಿಯ ತಾಯಿಗೆ ನಾನು ತುಂಬ ಇಷ್ಟವಾಗಿದ್ದೇನೆ. ಆದರೆ ಮಗಳು ನನ್ನನ್ನು ಮದುವೆಗೆ ಒಪ್ಪುತ್ತಿಲ್ಲವಲ್ಲ?
- **ಇಷ್ಟವಾದವರನ್ನೇ ಮದುವೆಗೆ ಒಪ್ಪಿಸಿ ನೋಡಬೇಕಿತ್ತು.**

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ಟೋಪಿಯಲ್ಲಿ ವಿಜೃಂಭಿಸುವ ವಾಟಾಳ್ ನಾಗರಾಜರ ಅಸಲಿ ಮುಖ ನೋಡಿದ ಗಂಡು ಈ ಭೂಮಿ ಮೇಲಿದ್ದಾರಾ?
- **ಅವರ ಮನೆಯವರು ಭೂಮಿಯ ಮೇಲಿದ್ದರೂ, ಅವರೂ ನೋಡಿಲ್ಲವಂತೆ!**

- **ಜೈಶಂಕರ, ಮೈಸೂರು**
ಭಟ್ರೇ, ಎಸ್‌ಬಿಎಂ, ಎಸ್‌ಬಿಐ ಆಗಿ ಬದಲಾದರೂ ಸಿಬ್ಬಂದಿಗಳ ಕಾರ್ಯವೈಖರಿ ನೋಡಿದರೆ ಬದಲಾದಂತೆ ಅನಿಸುವುದಿಲ್ಲವಲ್ಲ?
- **ಬದಲಾಗಬೇಕಿರುವುದು ಹೆಸರಲ್ಲ, ಮನಸ್ಥಿತಿ!**

- **ಘಂಟಿ ವರದಾಚಾರ್‍ರು, ಕೃಷ್ಣಮೂರ್ತಿಪುರಂ**
ಭಟ್ರೇ, ಮೆಟ್ರೋ ರೈಲು ಸ್ವಚ್ಛತೆಯಿಂದ ಕಂಗೊಳಿಸಲು ಏನು ಕಾರಣ?
- **ಪ್ರಕೃತಿ ಬಾಧೆ ನಿವಾರಣೆಗೆ ಅಲ್ಲಿ ಅವಕಾಶವಿಲ್ಲವಲ್ಲ!**

- **ಜೀವನ್ ನಾಯಕ, ಅಂಕೋಲಾ**
ಭಟ್ರೇ, ಕನ್ನಡ ಚಿತ್ರನಟಿಯರೆಲ್ಲ ಬಹಳ ದಪ್ಪ ಆಗಿದ್ದಾರಲ್ಲ?
- **ಕೈಯಲ್ಲಿ ಸಿನಿಮಾ ಇಲ್ಲದಿರುವ ಸಂಕೇತ!**

- **ಸಿ.ಕೇಶವ, ತಿಂಡ್ಲು**
ಭಟ್ರೇ, 'ಪ್ರವಾಸಿ ಪ್ರಪಂಚ'ವೇ ನನ್ನ ಪ್ರಪಂಚ ಎಂದು ನನ್ನಾಕೆ ಹೇಳ್ತಾಳಲ್ಲ?
- **ಹೆಂಡತಿ ಸತ್ಯವನ್ನೇ ನುಡಿಯುತ್ತಾಳೆ ಎಂಬುದು ನಿನಗೆ ಈಗಲಾದರೂ ಮನವರಿಕೆ ಆಗಿರಬಹುದಲ್ಲ?!**

- **ವಿಮಲಾ ವಿನೋದ, ಮಲ್ಲೇಶ್ವರ**
ಭಟ್ರೇ, ಮನೆಗೆಲಸದವಳು ಬರದಿದ್ದರೆ ಜೀವನವೇ ನರಕ, ಏನಂತೀರಾ?
- **ಈ ಮಾತನ್ನು ಹೆಂಡತಿ ಮುಂದೆ ಹೇಳಬೇಡ!**

- **ಹೆಣ್ಣೂರು ರಾಜು, ಬೆಂಗಳೂರು**
ಭಟ್ರೇ, ಕುಮಾರಣ್ಣನ ಹತ್ರ ಅರವತ್ತೆರಡು ವಾಚುಗಳು ಇವೆ ಎಂದು ಪ್ರದೀಪ್ ಈಶ್ವರ್ ಹೇಳಿದ್ದಾರಲ್ಲ?
- **ವಿಷಯ ಅದಲ್ಲ, ಕುಮಾರಣ್ಣ ಜೀವನವಿಡೀ ಎಚ್‌ಎಂಟಿ ವಾಚ್ ಕಟ್ಟುವ ಹಾಗಾಯ್ತಲ್ಲ!**

- **ಎಂ.ಮುದ್ದೇಗೌಡ, ಮಂಡ್ಯ**
ಭಟ್ರೇ, ಬಿಡದಿ ವಿವಾದ ಮುಂದೇನಾಗಬಹುದು?
- **ಪ್ರದೀಪ್ ಈಶ್ವರ್ ವಿವಾದ ಅದನ್ನು ನುಂಗಿಹಾಕಿಬಿಟ್ಟಿತಲ್ಲ?!**

ಈ ಅಮೂಲ್ಯ ವಿಟಮಿನ್‌ನ ಮೂಲ ನಮ್ಮ ದೇಶ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಲಿಂಬೆ ಹಣ್ಣು ಮತ್ತು ಕಿತ್ತಳೆ ಹಣ್ಣಿನ ಮಹತ್ವವನ್ನು ಎತ್ತಿ ತೋರಿಸುವ ಒಂದು ಅಪೂರ್ವ ಎನಿಸುವ ಬರಹವನ್ನು ಹಿರಿಯ ವೈದ್ಯರೂ, ಅಂಕಣಕಾರರೂ ಆದ ನಾ. ಸೋಮೇಶ್ವರ ಅವರು ಇತ್ತೀಚೆಗೆ ಬರೆದಿದ್ದಾರೆ. (ವಿಶ್ವವಾಣಿ: 24.6.2026). 1747ರಲ್ಲಿ ಬ್ರಿಟಿಷ್ ವೈದ್ಯನೊಬ್ಬನು, ವಿಟಮಿನ್ ಸಿ ಕೊರತೆಯಿಂದ ಬಳಲುತ್ತಿದ್ದ ಕೆಲವು ನಾವಿಕರ ಮೇಲೆ ಪ್ರಯೋಗಾರ್ಥವಾಗಿ, ಲಿಂಬಿ ರಸ ಮತ್ತು ಕಿತ್ತಳೆಯ ಪ್ರಯೋಗ ಮಾಡಿದನು: ಅಂದರೆ, ಇವುಗಳ ರಸವನ್ನು ಕುಡಿಸಿದನು. ಆ ನಾವಿಕರು ಹಲವು ವಾರಗಳ ಕಾಲ ಸಮುದ್ರದಲ್ಲಿ ಓಡಾಡುತ್ತಿದ್ದು, ತೀವ್ರ ಬಳಲಿಕೆ ತರುವ ಸ್ಕರ್ವಿ ಎಂಬ ರೋಗದಿಂದ ನರಳುತ್ತಿದ್ದರು. ಅವರನ್ನು ಐದು ಗುಂಪುಗಳನ್ನಾಗಿಸಿ, ಪ್ರತ್ಯೇಕ ಗುಂಪಿಗೆ ಸೇಬಿನ ಮದ್ಯ, ಗಂಧಕಾಮ್ಲದ ಹನಿ, ಮೂರು ಚಮಚ ವಿನೆಗರ್, ಅರ್ಧ ಪಿಂಟ್ ಸಮುದ್ರದ ನೀರು, ಬೆಳ್ಳುಳ್ಳಿ ಸಾಸಿವೆ ಕಷಾಯ ಮತ್ತು ಒಂದು ಗುಂಪಿಗೆ ದಿನಕ್ಕೆರಡು ಕಿತ್ತಳೆ ಮತ್ತು ಒಂದು ಲಿಂಬೆ ಹಣ್ಣಿನ ರಸವನ್ನು ಕುಡಿಸಲಾಯಿತು. ಸಿಟ್ರಸ್ ಹಣ್ಣುಗಳಾದ ಕಿತ್ತಳೆ ಮತ್ತು ಲಿಂಬೆಯನ್ನು ಸೇವಿಸಿದ ನಾವಿಕರ ತಂಡವು ಒಂದು ವಾರದಲ್ಲೇ ಚೇತರಿಕೆ ಕಂಡು, ಬಹುಬೇಗನೆ ಗುಣಮುಖರಾದರು. ಲಿಂಬೆ ಮತ್ತು ಕಿತ್ತಳೆಯಲ್ಲಿರುವ ವಿಟಮಿನ್ ಸಿ, ಅವರ ರೋಗವನ್ನು ಗುಣಮುಖರನ್ನಾಗಿಸಿತ್ತು. ಆ ನಂತರ, ಬ್ರಿಟಿಷ್ ಸೇನೆ ಮತ್ತು ಹಡಗುಗಳ ನಾವಿಕರು ಲಿಂಬೆ, ಕಿತ್ತಳೆ ಮೊದಲಾದ ಸಿಟ್ರಸ್ ಹಣ್ಣುಗಳನ್ನು ನಿಯಮಿತವಾಗಿ ಸೇವಿಸಿ, ಯುದ್ಧಗಳನ್ನೇ ಗೆದ್ದರು! ಆದ್ದರಿಂದ, ಬ್ರಿಟಿಷರು ತಮ್ಮ 'ಸೂರ್ಯ ಮುಳುಗದ ಸಾಮ್ರಾಜ್ಯ'ವನ್ನು ಸ್ಥಾಪಿಸಲು, ಸಿಟ್ರಸ್ ಹಣ್ಣುಗಳೇ ಕಾರಣ ಎಂದೂ ಹೊಗಳಲಾಗಿದೆ!

ಆದರೆ, ಆಗಿನ್ನೂ ವಿಟಮಿನ್ ಸಿ ಎಂಬದರ ಹೆಚ್ಚಿನ ವಿವರಗಳು ವೈದ್ಯಲೋಕಕ್ಕೆ ಗೊತ್ತಿರಲಿಲ್ಲ. ನಮ್ಮ ದೇಹವು 'ವಿಟಮಿನ್ ಸಿ'ಯನ್ನು ತಾನಾಗಿಯೇ ಉತ್ಪಾದಿಸಲಾರದು ಎಂಬುದೂ ಗೊತ್ತಿರಲಿಲ್ಲ. ಅದನ್ನು ಪ್ರತಿದಿನ ಆಹಾರದ ಮೂಲಕವೇ ಪಡೆಯಬೇಕು ಎಂಬುದು ನಂತರ ಗೊತ್ತಾಯಿತು. ಇಂದು ಪ್ರತಿ ದಿನ ಸಿಟ್ರಸ್ ರಸವನ್ನು, ಅಂದರೆ ಲಿಂಬೆ ಹಣ್ಣಿನ ರಸ ಅಥವಾ ಮೂಸಂಬಿ, ಕಿತ್ತಳೆ ಮೊದಲಾದ ಹಣ್ಣುಗಳನ್ನು ತಿನ್ನುವುದು ಉತ್ತಮ ಅಭ್ಯಾಸ ಎಂದು ಋಜುವಾತಾಗಿದೆ. ಆರೋಗ್ಯದ ಕುರಿತು ಕಾಳಜಿ ಇರುವವರೆಲ್ಲರೂ, ಬೇರೆ ಉತ್ತಮ ಆಹಾರದ ಜತೆ ಇವುಗಳನ್ನು ಸೇವಿಸುತ್ತಾರೆ. ಅಷ್ಟರ ಮಟ್ಟಿಗೆ ಅದು ನಮ್ಮ ದಿನಚರಿಯಲ್ಲಿ, ಆಹಾರದಲ್ಲಿ ಅನಿವಾರ್ಯ!

ವಿಶೇಷವೆಂದರೆ, ಇಂದು ಇಡೀ ಜಗತ್ತಿಗೆ ವ್ಯಾಪಿಸಿರುವ ಸಿಟ್ರಸ್ ಹಣ್ಣುಗಳ ಮೂಲ, ಭಾರತ ಮತ್ತು ಭಾರತ ಉಪಖಂಡ! ಇದನ್ನು ನಾವು ಹೆಮ್ಮೆಯಿಂದಲೇ ಹೇಳಿಕೊಳ್ಳಬಹುದು. ಮನುಷ್ಯನಿಗೆ ಅನಿವಾರ್ಯವಾಗಿ ಅಗತ್ಯವಿರುವ ವಿಟಮಿನ್ ಸಿಯ ಅತಿ ಶ್ರೀಮಂತ ಮೂಲವೇ ಈ ಸಿಟ್ರಸ್ ಹಣ್ಣುಗಳು. ನಮ್ಮ ನಾಡಿನಲ್ಲಿ, ನಮ್ಮ ದೇಶದಲ್ಲಿ ಲಿಂಬೆ, ಕಿತ್ತಳೆ, ಮುಸುಂಬಿ, ಎಳ್ಳಿ ಕಾಯಿ, ದುಡ್ಲೆ, ಗಜನಿಂಬೆ, ಕಂಚಿ ಮೊದಲಾದ ಹಣ್ಣುಗಳು ಸುಲಭವಾಗಿ ಬೆಳೆಯುವುದರಿಂದ, ಅಷ್ಟರ ಮಟ್ಟಿಗೆ ನಾವು ಅದೃಷ್ಟವಂತರೆಂದೇ ಹೇಳಿಕೊಳ್ಳಬೇಕು. ಜತೆಗೆ ಇಡೀ ಜಗತ್ತಿಗೆ ಸಿಟ್ರಸ್ ಹಣ್ಣನ್ನು ಕೊಟ್ಟ ನಾಡು ನಮ್ಮದು ಎಂಬುದೂ ಒಂದು ಹಿರಿಮೆಯೇ ಸರಿ.

ಬೇರೆ ಬೇರೆ ದೇಶಗಳಿಂದ ನಮ್ಮ ದೇಶಕ್ಕೆ ವಲಸೆ ಬಂದ ಸಸ್ಯ ಮತ್ತು ತರಕಾರಿಗಳ ಕುರಿತು ಸಾಕಷ್ಟು ವಿಚಾರಗಳನ್ನು ಕೇಳಿರಬಹುದು; ದೂರದ ದಕ್ಷಿಣ ಅಮೆರಿಕದಿಂದಲೋ, ಯುರೋಪಿನಿಂದಲೋ ಬಂದ ತರಕಾರಿ ಮತ್ತು ಸಸ್ಯಗಳ ಕುರಿತು ನಮಗೆ ಸಾಕಷ್ಟು ಕುತೂಹಲ, ಅಪಾರ ಬೆರಗು ಸಹ! ಉದಾಹರಣೆಗೆ ಮೆಣಸಿನ ಕಾಯಿಯು ದಕ್ಷಿಣ ಅಮೆರಿಕದ ಸಸ್ಯ; ಅದನ್ನು ಕೊಲಂಬಸ್ (1451–1506) ಮತ್ತು ಯುರೋಪಿಯನರು ಹೊರಜಗತ್ತಿಗೆ ಪರಿಚಯಿಸಿದರು; ಪೋರ್ಚುಗೀಸರ ಮೂಲಕ ಅದು ನಮ್ಮ ದೇಶಕ್ಕೂ ಬಂದಿರಬೇಕು; ನಮ್ಮ ದೇಶದಲ್ಲಿ ಈ ವಿದೇಶಿ ಸಸ್ಯವು ಮಾಡಿದ ಕ್ರಾಂತಿ ಅಷ್ಟಿಷ್ಟಲ್ಲ; ಕಾಳು ಮೆಣಸಿನ ಪ್ರಾಬಲ್ಯವನ್ನು ಮುರಿದದ್ದೇ ಈ ಮೆಣಸಿನ ಕಾಯಿ; ಆ ಮೂಲಕ, ಮಧ್ಯಯುಗದಲ್ಲಿ ನಮ್ಮ ದೇಶಕ್ಕೆ ಬರುತ್ತಿದ್ದ ಆದಾಯವನ್ನೂ ಪರೋಕ್ಷವಾಗಿ ತಪ್ಪಿಸಿತು! ನಾನಾ ರೀತಿಯ ಮೆಣಸಿನ ಗಿಡಗಳು, ಕಾಯಿಗಳು ನಮ್ಮ ನಾಲಗೆಯ ರುಚಿಯನ್ನು ತಣಿಸಿವೆ. ಚೂರು ಮೆಣಸು, ಬೋಂಡಾ ಮೆಣಸು, ಜೀರಿಗೆ ಮೆಣಸು, ಕ್ಯಾಪ್ಸಿಕಂ, ಹಸಿ ಮೆಣಸು ಇ.ಇ. ವಿಶೇಷವೆಂದರೆ, ಮೆಣಸಿನ ಕಾಯಿಯು ಯುರೋಪಿನಲ್ಲಿ ಪರಿಚಯಗೊಳ್ಳುವ ತನಕ, ನಮ್ಮ ನಾಡಿನ ಕಾಳು ಮೆಣಸು ಮಾತ್ರ ಆ ಜನರಿಗೆ ಖಾರ ನೀಡುವ ಸಂಬಾರ ಪದಾರ್ಥ ಎನಿಸಿತ್ತು! ಇದೇ ರೀತಿ, ಗೋಡಂಬಿ ಗಿಡವು ಮೂಲತಃ ದಕ್ಷಿಣ ಅಮೆರಿಕದ ಬ್ರೆಜಿಲ್ ಪ್ರದೇಶದ್ದು; ಇದನ್ನು ಸಹ ಯುರೋಪಿಯನ್ ನಾವಿಕರು ಅಮೆರಿಕದಿಂದ ಯುರೋಪಿಗೆ ತಂದು, ಅಲ್ಲಿಂದ ಗೋವಾ ಮೂಲಕ ನಮ್ಮ ದೇಶಕ್ಕೆ ಪರಿಚಯಿಸಿದರು. ಇಂತಹ ಹಲವು ವಿದೇಶಿ ಮೂಲದ ಸಸ್ಯಗಳು ನಮ್ಮ ನಾಲಗೆಯ ರುಚಿ ಹೆಚ್ಚಿಸಿವೆ; ಎಷ್ಟರ ಮಟ್ಟಿಗೆ ಎಂದರೆ, ಮೆಣಸಿನ ಕಾಯಿಯಂತಹ ರುಚಿಕರ, ಖಾರ, ಘಾಟಿನ ಸಸ್ಯವನ್ನು ಹೊರಗಿಟ್ಟು ನಮ್ಮ ದಿನಚರಿಯನ್ನು ಇಂದು ಊಹಿಸಿಕೊಳ್ಳಲು ಸಹ ಸಾಧ್ಯವಿಲ್ಲ.

ಇದಕ್ಕೆ ಸಂವಾದಿಯಾಗಿ, ನಮ್ಮ ದೇಶದ ಮೂಲದ ಹಲವು ಸಸ್ಯಗಳು ಯುರೋಪ್, ಅಮೆರಿಕ ಮೊದಲಾದ ಪ್ರದೇಶಗಳಿಗೆ ಪಯಣಿಸಿವೆ, ವಲಸೆ ಹೋಗಿವೆ. ಅವುಗಳಲ್ಲಿ ಅಗ್ರಗಣ್ಯ ಎಂದರೆ ಲಿಂಬೆ ಮತ್ತು ಸಿಟ್ರಸ್ ಜಾತಿಯ ಸಸ್ಯಗಳು. ಅದರಲ್ಲೂ ಲಿಂಬೆ, ಕಿತ್ತಳೆ ಮೊದಲಾದ ಸಿಟ್ರಸ್ ಹಣ್ಣುಗಳು ಜಗತ್ತಿನ ನಾಗರಿಕತೆಯ ವಿಕಸನಕ್ಕೆ ನೀಡಿರುವ ಕೊಡುಗೆ ಅಪಾರ, ಅಮೂಲ್ಯ.

1747ರಲ್ಲಿ, ಅಂದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕುವ 200 ವರ್ಷಗಳ ಹಿಂದೆ, ರಾಯಲ್ ನೇವಿಯ ವೈದ್ಯ ಜೇಮ್ಸ್ ಲಿಂಡ್‌ನು ತನ್ನ ದೇಶದ ನಾವಿಕರಿಗೆ ಲಿಂಬೆ ರಸವನ್ನು ಕುಡಿಸಿ, ಸ್ಕರ್ವಿ ರೋಗವನ್ನು ವಾಸಿ ಮಾಡಿದ್ದು ಐತಿಹಾಸಿಕ ಘಟನೆ. ಆದರೆ, ಅದಕ್ಕೂ ಬಹಳ ಮೊದಲೇ ಲಿಂಬೆ ಮತ್ತು ಇತರ ಸಿಟ್ರಸ್ ಹಣ್ಣುಗಳು ನಮ್ಮ ದೇಶದಿಂದ ಯುರೋಪ್ ಮೊದಲಾದ ದೇಶಗಳನ್ನು ತಲುಪಿದ್ದವು. ಬಹು ಪುರಾತನ ಕಾಲದಲ್ಲಿ ನಡೆದ ವಲಸೆ, ನಂತರ ಅರೇಬಿಯನ್ ವರ್ತಕರ ಮೂಲಕ ಲಿಂಬೆ ಮತ್ತು ಇತರ ಸಿಟ್ರಸ್ ಹಣ್ಣುಗಳು ಯುರೋಪ್ ತಲುಪಿದವು ಎಂದು ತಿಳಿಯಲಾಗಿದೆ. ಎರಡನೆಯ ಶತಮಾನದಲ್ಲೇ ಇಟೆಲಿ ಮತ್ತು ರೋಮ್ ಸಾಮ್ರಾಜ್ಯವನ್ನು ಲಿಂಬೆ ಪ್ರವೇಶಿಸಿತ್ತು. ಪರ್ಷಿಯಾ, ಇರಾಕ್, ಈಜಿಪ್ಟ್‌ಗೆ ಕ್ರಿ.ಶ.700ರಲ್ಲಿ ಲಿಂಬೆ ಪ್ರವೇಶವಾಯಿತು. ಹತ್ತನೆಯ ಶತಮಾನದಲ್ಲಿ ಅರೇಬಿಯಾದ ತೋಟಗಳಲ್ಲಿ ಲಿಂಬೆಯನ್ನು ಅಲಂಕಾರಿಕ ಸಸ್ಯವನ್ನಾಗಿ ಬೆಳೆಸಲಾಗುತ್ತಿತ್ತು. ಯುರೋಪ್‌ನಲ್ಲಿ 15ನೆಯ ಶತಮಾನದಲ್ಲಿ, ಅಮೆರಿಕದಲ್ಲಿ ಹದಿನಾರನೆ ಶತಮಾನದಲ್ಲಿ ಲಿಂಬೆಯ ತೋಟಗಳು, ಕಿತ್ತಳೆಯ ತೋಟಗಳು (ಆರೆಂಜರಿ) ತಲೆ ಎತ್ತಿದವು. ಯುರೋಪಿನ ಆರೆಂಜರಿಗಳು ಪ್ರತಿಷ್ಠೆಯ ವನಗಳಾಗಿದ್ದವು! 1493ರಲ್ಲಿ ಕ್ರಿಸ್ಟೋಫರ್ ಕೊಲಂಬಸನು ಲಿಂಬೆಯ ಬೀಜಗಳನ್ನು ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಅಮೆರಿಕಕ್ಕೆ ಕೊಂಡೊಯ್ದ.

ಬಹು ಪುರಾತನ ಕಾಲದಿಂದಲೂ ಹಿಮಾಲಯದ ತಪ್ಪಲಿನಲ್ಲಿ, ಅಸ್ಸಾಂ, ಮ್ಯಾನ್ಮಾರ್, ದಕ್ಷಿಣ ಚೀನಾ ಪ್ರದೇಶದಲ್ಲಿ ಲಿಂಬೆ ತನ್ನಷ್ಟಕ್ಕೆ ತಾನೇ ಬೆಳೆಯುತ್ತಿತ್ತು. ಇದು ಎಷ್ಟು ಪುರಾತನ ಕಾಲ ಎಂದರೆ, ಹಲವು ಲಕ್ಷ ವರ್ಷಗಳ ಹಿಂದೆ ಎಂದು ವಿಜ್ಞಾನಿಗಳು ಗುರುತಿಸಿದ್ದಾರೆ. ಹುಳಿ ಕಿತ್ತಳೆ/ ಕಾಡು ಕಿತ್ತಳೆ (ಬಿಟ್ಟರ್ ಆರೆಂಜ್) ಮತ್ತು ಸಿಟ್ರಾನ್ (ಕಾಡು ಲಿಂಬೆ) ಗಿಡಗಳ ಸಂಕರದಿಂದ ಲಿಂಬೆಯ ತಳಿಗಳು ಉತ್ಪನ್ನಗೊಂಡವು. ನಿಸರ್ಗದಲ್ಲೇ ಈ ಸಂಕರ ನಡೆದು, ಲಿಂಬೆ ಮತ್ತು ಇತರ ಹಲವು ಸಿಟ್ರಸ್ ತಳಿಗಳು ರೂಪುಗೊಂಡವು. ಆಯುರ್ವೇದ ಔಷಧ ಪದ್ಧತಿಯಲ್ಲಿ ಲಿಂಬೆ ರಸದ ವ್ಯಾಪಕ ಬಳಕೆಯನ್ನು ಗಮನಿಸಿದರೆ, ಲಿಂಬೆಯ ಔಷಧೀಯ ಗುಣಗಳನ್ನು ನಮ್ಮ ದೇಶದವರು ಸಾವಿರಾರು ವರ್ಷಗಳ ಮುಂಚೆಯೇ ಗುರುತಿಸಿದ್ದರು ಎನಿಸುತ್ತದೆ. ವಿಟಮಿನ್ ಸಿ ಹೇರಳವಾಗಿರುವ ಲಿಂಬೆಯು, ಹುಳಿ ಗುಣ ಹೊಂದಿದ್ದು, ನಾನಾ ರೀತಿಯಲ್ಲಿ ಬಳಕೆಯಾಗುತ್ತಿದೆ. ಔಷಧವಾಗಿ ಲಿಂಬೆ ರಸ ಪ್ರಮುಖವಾಗಿ ಬಳಕೆಯಾಗಿದೆ. ಹಾಲನ್ನು ಮೊಸರು ಮಾಡಲು ಈಗಲೂ ಲಿಂಬೆರಸವನ್ನು ಬಳಸುವ ಪುರಾತನ ಪದ್ಧತಿಯು ಅಲ್ಲಲ್ಲಿ ಮುಂದುವರಿದಿದೆ!

ಲಿಂಬೆಯ ಜತೆಯಲ್ಲೇ, ಹಲವು ಸಿಟ್ರಸ್ ಪ್ರಭೇದಗಳನ್ನು ಗುರುತಿಸಬಹುದು. ಕಿತ್ತಳೆ, ಗಜನಿಂಬೆ, ಎಳ್ಳಿ, ದುಡ್ಲಿ, ಮುಸುಂಬಿ, ಸಿಹಿ ಕಂಚಿ, ಕಹಿ ಕಂಚಿ, ಚಕ್ಕೋತ, ಕಿಮೋ – ಈ ರೀತಿ ನಾನಾ ರೀತಿಯ ಸಿಟ್ರಸ್ ತಳಿಗಳು ಪುರಾತನ ಕಾಲದಿಂದಲೇ ಮನುಷ್ಯನಿಗೆ ಪರಿಚಿತ. ಜಗತ್ತಿನ ಎಲ್ಲಾ ಸಿಟ್ರಸ್ ಪ್ರಭೇದದ ಹಣ್ಣುಗಳಿಗೆ ನಮ್ಮ ದೇಶದ ಹಿಮಾಲಯದ ತಪ್ಪಲಿನಲ್ಲಿದ್ದ ತಳಿಗಳೇ ತಂದೆ ತಾಯಿ ಇದ್ದಂತೆ ಎಂಬ ವಿಚಾರವೇ ವಿಸ್ಮಯ ಹುಟ್ಟಿಸುವಂತಹದ್ದು.

ನಮ್ಮ ಪಶ್ಚಿಮ ಘಟ್ಟಗಳಲ್ಲಿ ಅಲ್ಲಲ್ಲಿ ಕಾಡುಗಳಲ್ಲಿ ಕಾಣಸಿಗುವ ಕಾಡು ಕಿತ್ತಳೆ ತಳಿಗಳು, ಪುರಾತನ ಸಿಟ್ರಸ್ ಪ್ರಭೇದಗಳೇ ಇರಬೇಕು. (ಈ ಕುರಿತು ಸಂಶೋಧನೆ ಅಗತ್ಯವಿದೆ). ನಾಯಿ ಕಿತ್ತಳೆ, ಇಳ್ಳಿ ಹಣ್ಣು, ಚಿಟ್ಟ ಕಿತ್ತಳೆ ಮೊದಲಾದ ಹೆಸರುಗಳಿಂದ ಇವು ಸುಳ್ಯ, ಸಿರ್ಸಿ, ಸಾಗರ, ಚಿಕ್ಕಮಗಳೂರು ಮೊದಲಾದ ಕಡೆ ಮೊದಲಿನಿಂದಲೂ ಪರಿಚಿತ. ಸಿಹಿ ಕಿತ್ತಳೆ ಗಿಡಗಳನ್ನು ಕಸಿ ಮಾಡಲು ಕಾಡು ಕಿತ್ತಳೆ ಗಿಡಗಳ ಕಾಂಡವನ್ನು ಬಳಸುವುದುಂಟು. ಸಿಹಿ ಕಿತ್ತಳೆ ಹಣ್ಣಿನಲ್ಲಿ ನಾಲ್ಕಾರು ಬೀಜಗಳು ಕಂಡುಬಂದರೆ, ಕಾಡು ಕಿತ್ತಳೆಯಲ್ಲಿ ಹತ್ತಾರು ಅಥವಾ ಇನ್ನೂ ಜಾಸ್ತಿ ಬೀಜಗಳಿರುತ್ತವೆ ಮತ್ತು ಸಾಮಾನ್ಯವಾಗಿ ಇವು ಹುಳಿ; ಗಾತ್ರದಲ್ಲೂ ಚಿಕ್ಕವು. ಆದರೆ, ಒಂದು ಕಾಡು ಕಿತ್ತಳೆ ಮರದಲ್ಲಿ ವರ್ಷಕ್ಕೆ ಐನೂರಕ್ಕೂ ಹೆಚ್ಚು ಹಣ್ಣುಗಳಾಗುವುದನ್ನು ಗುರುತಿಸಲಾಗಿದೆ.

ಹಲವು ಸಿಟ್ರಸ್ ತಳಿಯ ಹಣ್ಣುಗಳು ನಮ್ಮಲ್ಲಿ ಬೆಳೆಯುತ್ತವೆ. ಬಯಲು ಸೀಮೆಯಲ್ಲಿ ಕಾಣಸಿಗುವ 'ಇಳ್ಳಿ ಹಣ್ಣು' ಸಿಟ್ರಸ್ ಗುಂಪಿಗೆ ಸೇರಿದ ಸಸ್ಯ; ಆದರೆ ಇದರಿಂದ ಜ್ಯೂಸ್ ತಯಾರಿಸಲು ಮಾತ್ರ ಸಾಧ್ಯ. ಆದರೆ, ಶಿರಸಿ ಪ್ರದೇಶದಲ್ಲಿ 'ಇಳ್ಳಿ ಹಣ್ಣು' ಎಂದರೆ ಕಾಡು ಕಿತ್ತಳೆ. ಮಲೆನಾಡಿನ ಕೆಲವು ಪ್ರದೇಶಗಳಲ್ಲಿ ಸಿಹಿ ಕಂಚಿ ಮತ್ತು ಕಹಿ ಕಂಚಿ ಎಂಬ ಎರಡು ಪ್ರಭೇದದ ಸಿಟ್ರಸ್ ಮರಗಳು ಕಾಣಸಿಗುತ್ತವೆ. ಇವುಗಳ ದೊಡ್ಡ ಗಾತ್ರದ ಹಣ್ಣುಗಳ ತೊಳೆಗಳನ್ನು ಉಪ್ಪು, ಮೆಣಸು ಬೆರೆಸಿ ತಿನ್ನಲು ಬಲು ರುಚಿ!

ಸಿಟ್ರಸ್ ಪ್ರಭೇದದ ಮೂಲವು ನಮ್ಮ ದೇಶ ಮತ್ತು ದಕ್ಷಿಣ ಏಷ್ಯಾವೇ ಆದರೂ, ಇಂದು ವಿದೇಶಗಳಲ್ಲಿ ಇವುಗಳ ವಿವಿಧ ತಳಿಗಳ ಅಭಿವೃದ್ಧಿ ಆಗಿದೆ. ಈ ರೀತಿ ಬೇರೆ ದೇಶಗಳಲ್ಲಿ ಅಭಿವೃದ್ಧಿ ಹೊಂದಿ, ಅಲ್ಲಿನ ಅಧಿಕೃತ ಹಣ್ಣು ಎಂದೇ ಗುರುತಿಸಲ್ಪಡುತ್ತಿರುವ ಹಣ್ಣುಗಳಲ್ಲಿ ಮೂಸಂಬಿ ಪ್ರಮುಖ. ಮೂಸಂಬಿ ಹಣ್ಣು ಮೂಲತಃ ನಮ್ಮ ದೇಶದ ಸಿಟ್ರಸ್ ಪ್ರಭೇದಗಳಿಂದ ರೂಪುಗೊಂಡ ಹಣ್ಣು. ಆದರೆ, ಇಂದು ಅಧಿಕೃತ ಮಾಹಿತಿಯನ್ನು ಗಮನಿಸಿದರೆ, ಮೂಸಂಬಿಯು ಇರಾನಿನ ದಕ್ಷಿಣ ಭಾಗದ ಹಣ್ಣು ಎಂದು ಪರಿಚಯಗೊಳ್ಳುತ್ತಿದೆ! ಅದಕ್ಕೆ ಕಾರಣವಿದೆ. ಮೂಸಂಬಿಯು, ಹುಳಿ ಕಿತ್ತಳೆ (ಸಿಟ್ರಸ್ ಆರೆಂಟಿಯಮ್) ಮತ್ತು ಕಾಡು ಲಿಂಬೆ /ಗಜ ಲಿಂಬೆ (ಸಿಟ್ರಸ್ ಮೆಡಿಕಾ) ಸಸ್ಯಗಳ ಸಂಕರದಿಂದ ರೂಪುಗೊಂಡ ಹಣ್ಣು. ಸಿಟ್ರಸ್ ಮೆಡಿಕಾದ ಮೂಲವು ಹಿಮಾಲಯದ ತಪ್ಪಲು; ಹುಳಿ ಕಿತ್ತಳೆ ಸಹ ಭಾರತ ಮೂಲದ್ದು. ಇವೆರಡನ್ನೂ ಸಂಕರಗೊಳಿಸಿ, ಮೂಸಂಬಿ ಎಂಬ ಹಣ್ಣನ್ನು ಉತ್ಪಾದಿಸಿದ ಕೀರ್ತಿ ಇರಾನ್‌ಗೆ ಸಂದಿದೆ!

ಮೂಸಂಬಿಯ ವಿಭಿನ್ನ ತಳಿಯು ಮೊಸಾಂಬಿಕ್ ದೇಶದಲ್ಲಿ ರೂಪುಗೊಂಡಿದ್ದು, ಇದನ್ನು ಪೋರ್ಚುಗೀಸರು ಭಾರತಕ್ಕೆ ತಂದರು. ಮೂಸಂಬಿ ಎಂಬ ಪದವು ಇರಾನ್ ಮತ್ತು ಮೊಸಾಂಬಿಕ್ ಪದಗಳಿಂದ ಬಂದಿದೆ ಎನ್ನಲಾದೆ. ಮುಸಂಬಿಯ ವಿಶೇಷವೆಂದರೆ, ಇದನ್ನು ಸೇವಿಸುವದರಿಂದ ಆರೋಗ್ಯ ಉತ್ತಮಗೊಳ್ಳುತ್ತದೆ ಮತ್ತು ಇರಾನ್ ದೇಶದಲ್ಲಿ ನೆಗಡಿ ಜ್ವರವಾದಾಗ ಇದರ ರಸವನ್ನು ನಾಟಿ ಔಷಧವಾಗಿ ಉಪಯೋಗಿಸುವರು! ಅಂತಹ ಔಷಧೀಯ ಗುಣಗಳು ಈ ಹಣ್ಣಿಗೆ ಇರುವುದಂತೂ ನಿಜ. ನಮ್ಮ ದೇಶದಲ್ಲಿ ಇಂದು ದೊರೆಯುವ ಅತ್ಯುತ್ತಮ ಹಣ್ಣುಗಳ ಪೈಕಿ (ನಮ್ಮ ಆರೋಗ್ಯ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ) ಮೂಸಂಬಿಯೇ ಅಗ್ರಗಣ್ಯ ಎನ್ನಬಹುದು.

ಕಿತ್ತಳೆಯು ನಮ್ಮ ರಾಜ್ಯದವರಿಗೆ ಕೊಡಗಿನ ಕಿತ್ತಳೆ ಎಂದೇ ಪರಿಚಿತ. ಕೆಲವು ದಶಕಗಳ ಹಿಂದೆ ಕೊಡಗಿನ ಕಿತ್ತಳೆ ಮರಗಳಿಗೆ ರೋಗವೊಂದು ಬಂದು, ಹಲವು ಮರಗಳು ನಾಶವಾದವು. ನಾಗಪುರದ ಕಿತ್ತಳೆಯು ಗಾತ್ರದಲ್ಲಿ ದೊಡ್ಡದಾಗಿದ್ದು, ಸಿಪ್ಪೆ ತೆಗೆಯಲು ಸುಲಭವಾಗಿದ್ದರಿಂದ, ಅದು ಇಂದು ಹೆಚ್ಚು ಜನಪ್ರಿಯ.

ಈ ಬರಹದ ಆರಂಭದಲ್ಲಿ, ಡಾ. ನಾ. ಸೋಮೇಶ್ವರರ ಪ್ರಸ್ತಾಪವಿದೆ; ಅವರು, ತಮ್ಮ ಅದೇ ಲೇಖನದ ಕೊನೆಯಲ್ಲಿ, ಎಲ್ಲರಿಗೂ ಒಂದು ಸಲಹೆ ಕೊಡುತ್ತಾರೆ: ".. .. ಪ್ರಸ್ತುತ ಜಂಕ್‌ಫುಡ್ ವ್ಯಾಮೋಹಕ್ಕೆ ಬಲಿಯಾಗಿರುವ ನಮ್ಮ ಯುವಜನತೆಯು ಸಬ್-ಕ್ಲಿನಿಕಲ್ ವಿಟಮಿನ್-ಸಿ ಡೆಫಿಶಿಯನ್ಸಿಗೆ ತುತ್ತಾಗಿದೆ. ಇದು ಅತ್ಯಂತ ವಿಷಾದನೀಯ. ಹಾಗಾಗಿ ಮನೆಯಲ್ಲಿರುವ ಪ್ರತಿಯೊಬ್ಬರೂ ದಿನಕ್ಕೆ ಒಂದು ಹುಳಿಹಣ್ಣನ್ನು ತಿನ್ನುವ ಪ್ರತಿಜ್ಞೆಯನ್ನು ಕೈಗೊಳ್ಳೋಣ." ಡಾ. ಸೋಮೇಶ್ವರ ಅವರು ನೀಡಿರುವ, ಅತ್ಯಂತ ಪ್ರಾಯೋಗಿಕವಾಗಿರುವ ಈ ಸಲಹೆ ಮಾತುಗಳನ್ನು ಸುವರ್ಣಾಕ್ಷರದಲ್ಲಿ ಬರೆಸಿಟ್ಟು, ಪ್ರತಿ ಮನೆಯಲ್ಲಿ ಪ್ರದರ್ಶಿಸಬೇಕು! ನಮ್ಮ ಯುವಜನತೆ ವಿಟಮಿನ್ ಸಿ ಢೆಫಿಶಿಯನ್ಸಿಗೆ ಗುರಿಯಾಗಿರುವ ವಿಚಾರ ಆತಂಕಕಾರಿ; ಇದಕ್ಕೆ ಸರಳ ಪರಿಹಾರವಾಗಿ, ನಮ್ಮಲ್ಲಿ ಹೇರಳವಾಗಿ ಲಭ್ಯವಿರುವ ಸಿಟ್ರಸ್ ಹಣ್ಣುಗಳನ್ನು (ಲಿಂಬೆ, ಮೂಸಂಬಿ, ಕಿತ್ತಳೆ ಇತ್ಯಾದಿ) ಉಪಯೋಗಿಸಬಹುದು. ಯುವಜನತೆಯ ಜತೆಗೇ, ಮನೆಯ ಎಲ್ಲರೂ ದಿನಕ್ಕೆ ಸ್ವಲ್ಪವಾದರೂ ಸಿಟ್ರಸ್ ರಸವನ್ನು ಅಥವಾ ಹಣ್ಣುಗಳನ್ನು ಸೇವಿಸೋಣ. ಈ ನಿಟ್ಟಿನಲ್ಲಿ, ನಮ್ಮ ದಿನನಿತ್ಯದ ಆಹಾರದ ಜತೆ ಲಿಂಬೆ ರಸವನ್ನು ಬೆರೆಸುವುದು ಒಂದು ಉತ್ತಮ ಅಭ್ಯಾಸ! ಬನ್ನಿ, ಲಿಂಬೆ ಮುಸುಂಬಿ ಸೇವಿಸೋಣ, ಆರೋಗ್ಯ ಉತ್ತಮಪಡಿಸಿಕೊಳ್ಳೋಣ!

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸಾಹಿತಿಗಳ ಪರನಿಂದೆಯ ಸೊಗಸು

ಸಂಪಾದಕರ ಅಂಕಣ ಲೇಖನ 'ಸಾಹಿತ್ಯ ಲೋಕದ ಪರನಿಂದಾ ಪುರಾಣವು' ತುಂಬ ಆಸಕ್ತಿಪೂರ್ಣವಾಗಿತ್ತು. ಈ ಸಂಬಂಧ ನಾನೂ ಒಂದೆರಡು ಘಟನೆ ಹಂಚಿಕೊಳ್ಳಲು ಬಯಸುತ್ತೇನೆ. ಬಹಳ ಹಿಂದೆ ಧಾರವಾಡದ ಕರ್ನಾಟಕ ಕಾಲೇಜಿನ ಗ್ರಂಥಾಲಯದಲ್ಲಿ ಒಂದು ಪುಟ್ಟ ಕಾರ್ಯಕ್ರಮ. ನಾನೂ ಹೋಗಿದ್ದೆ. ಕಾರಣ, ಭಾಷಣಕಾರರು ಶ್ರೀರಂಗರು. ಮಾತನಾಡುತ್ತಾ ಅವರು ಹೇಳಿದ್ದು 'ಎಲ್ಲರೂ ಕಾಳಿದಾಸ ಮಹಾನ್ ನಾಟಕಕಾರ ಎನ್ನುತ್ತಾರೆ. ಆದರೆ ಅವ ಏನ್ ಅಂಥ ದೊಡ್ಡ ನಾಟಕಕಾರ ಅಲ್ಲ.' ಅವರು ಯಾಕೆ ಹಾಗೆ ಅಂದರು ಎನ್ನುವದು ಈಗ ಮರೆತಿದೆ. ಎ.ಕೆ.ರಾಮಾನುಜನ್ ಬೆಳಗಾವಿಯಲ್ಲಿದ್ದಾಗ, ಶಂಕರ ಮೊಕಾಶಿ ಪುಣೇಕರರ ಮುಂದೆ 'ಮಿಲ್ಟನ್ ಕವಿಯೇ ಅಲ್ಲ' ಎಂದರಂತೆ. ಆದರೆ ಮೇಲಿನ ಎರಡೂ ಅಭಿಪ್ರಾಯಗಳು ಪ್ರಾಮಾಣಿಕವಾದವು. ರಾಮಾನುಜನರಿಗೆ ಕಾವ್ಯದ ಬಗ್ಗೆ ಅವರದೇ ನಿರೀಕ್ಷೆಗಳಿದ್ದವು. ಕಾವ್ಯ ವಿವರಣೆ ಆಗಬಾರದು, ಹಾಗೂ ಅದು ಗಣಿತದ ಪ್ರಮೇಯದ ಹಾಗಿರಬೇಕು ಎನ್ನುವದು. ಮಹಾನ್ ಕಾದಂಬರಿಕಾರ ಟಾಲ್‌ಸ್ಟಾಯ್, ಶೇಕ್ಸ್ಪಿಯರ್ ಬಗ್ಗೆ ಹೇಳುತ್ತ, 'ಅವನು ಕಲೆಯ ಎಲ್ಲ ಬೇಡಿಕೆಗಳನ್ನು ಈಡೇರಿಸುವುದಿಲ್ಲ, ಅಲ್ಲದೆ ಅವನ ಕೃತಿಗಳು ಅತಿ ಕೀಳು ಮಟ್ಟದ ಅನೈತಿಕ ಒಲವು ಹೊಂದಿವೆ. ಜನರಿಗೆ ಅವನು ಅವರ ಒಪ್ಪಿಗೆ ಇಲ್ಲದೆ ಅಪಾಯಕಾರಿ ಸಾಂಸ್ಕೃತಿಕ ಲಸಿಕೆ ನೀಡುತ್ತಾನೆ' ಎನ್ನುತ್ತಾನೆ.

– ಎಸ್‌ಎಲ್‌ಎಂ ಪಾಟೀಲ, ಬೆಳಗಾವಿ

ಫುಟ್‌ಪಾತ್ ತೆರವು ಬೇಕು

ಒಂದು ಉತ್ತಮ ನಗರವನ್ನು ನಿರ್ಮಿಸಲು ಕೆಲವೊಮ್ಮೆ ಕಠಿಣ ನಿರ್ಧಾರಗಳು ಅಗತ್ಯವಾಗುತ್ತವೆ. ಕೆಲವರಿಗೆ ತಾತ್ಕಾಲಿಕ ತೊಂದರೆ ಆಗಬಹುದು, ಆದರೆ ಅದು ಲಕ್ಷಾಂತರ ಜನರ ಸುರಕ್ಷತೆಗಾಗಿ. ಅಕ್ರಮ ಒತ್ತುವರಿಯಿಂದ ಫುಟ್‌ಪಾತ್‌ಗಳು ಮಾಯವಾಗಿ, ಮಕ್ಕಳು, ಹಿರಿಯರು ಮತ್ತು ಪಾದಚಾರಿಗಳು ರಸ್ತೆಯಲ್ಲೇ ನಡೆಯಬೇಕಾದ ಪರಿಸ್ಥಿತಿ ಬಂದಿದೆ. ಇದರಿಂದ ಅನೇಕ ಅಮೂಲ್ಯ ಜೀವಗಳು ಕಳೆದುಹೋಗಿವೆ. ಫುಟ್‌ಪಾತ್ ಜನರ ಹಕ್ಕು, ಅಂಗಡಿಗಳ ಅಥವಾ ಒತ್ತುವರಿಯ ಜಾಗವಲ್ಲ. ಸುರಕ್ಷಿತ ಬೆಂಗಳೂರಿಗಾಗಿ ಫುಟ್‌ಪಾತ್ ತೆರವು ಮತ್ತು ಸಂರಕ್ಷಣೆ ಅತ್ಯಗತ್ಯ. ಈಗಾಗಲೇ ತೀರ ತಡವಾಗಿ ಸರಕಾರ ಉತ್ತಮ ನಿರ್ಧಾರ ಕೈಗೊಂಡಿದೆ, ಪಾದಚಾರಿಗಳ ಮುಖದಲ್ಲಿ ಮಂದಹಾಸ ಬೀರಿದೆ. ಈ ನಿರ್ಧಾರ ಒಂದೆರಡು ದಿನದ ಬಾಳಾಗದೆ, ಯಾವುದೇ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಣಿಯದೆ ಮಾನ್ಯ ನಗರಾಭಿವೃದ್ಧಿ ಸಚಿವರಾದ ಕೃಷ್ಣಬೈರೇಗೌಡರು ಹೇಗೆ ನಿಭಾಯಿಸುವರು ಎಂಬುದೇ ಯಕ್ಷ ಪ್ರಶ್ನೆಯಾಗಿದೆ.

– ಬೆಂ. ಮು. ಮಾರುತಿ, ಬೆಂಗಳೂರು

ಭ್ರಷ್ಟರಿಗೆ ತಕ್ಕ ಪಾಠ ಕಲಿಸಿ

30 ದಿನ ಜೈಲಿನಲ್ಲಿದ್ದರೆ ಸಿಎಂ ಅಥವಾ ಪ್ರಧಾನಿಯನ್ನು ವಜಾಗೊಳಿಸುವ ನೂತನ ಮಸೂದೆ ಅತ್ಯಂತ ಸ್ವಾಗತಾರ್ಹ ಹಾಗೂ ಪ್ರಸ್ತುತ ರಾಜಕೀಯ ವ್ಯವಸ್ಥೆಗೆ ಅನಿವಾರ್ಯವಾಗಿದೆ. ನಮ್ಮ ದೇಶದ ವ್ಯವಸ್ಥೆಯನ್ನು ಭ್ರಷ್ಟ ಮತ್ತು ಸ್ವಾರ್ಥಿ ರಾಜಕಾರಣಿಗಳು ಸಂಪೂರ್ಣವಾಗಿ ಹಳ್ಳ ಹಿಡಿಸಿದ್ದಾರೆ. ಜೈಲಿನಲ್ಲಿದ್ದೂ ಅಧಿಕಾರಕ್ಕಾಗಿ ಲಜ್ಜೆಯಿಲ್ಲದೆ ಕಚ್ಚಾಡುವ ಇಂತಹ ನಾಯಕರಿಗೆ ಸಂವಿಧಾನದ ಬಿಸಿ ಮುಟ್ಟಿಸಲೇಬೇಕು. ಕೇವಲ 30 ದಿನಗಳ ಕಸ್ಟಡಿಯಲ್ಲ, ಗಂಭೀರ ಕ್ರಿಮಿನಲ್ ಆರೋಪ ಎದುರಿಸುವ ಭ್ರಷ್ಟರನ್ನು ತಕ್ಷಣವೇ ಹುದ್ದೆಯಿಂದ ಕಿತ್ತೊಗೆಯುವ ಕಠಿಣ ಕಾನೂನು ಬರಬೇಕು. ಇಂತಹ ನೈತಿಕತೆ ಇಲ್ಲದ ಜನಪ್ರತಿನಿಧಿಗಳು ದೇಶ ಆಳಲು ಸಂಪೂರ್ಣ ಅಸಮರ್ಥರು. ಸಂಸತ್ತು ಯಾವುದೇ ರಾಜಕೀಯ ನಾಟಕವಾಡದೆ ಈ ಮಸೂದೆಯನ್ನು ಕೂಡಲೇ ಜಾರಿಗೆ ತರಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ಯಾವುದೇ ಬೆಲೆ ಉಳಿಯುವುದಿಲ್ಲ. ಅಪರಾಧಿಗಳು ಕಾನೂನಿನಿಂದ ತಪ್ಪಿಸಿಕೊಳ್ಳಲು ಬಿಡಬಾರದು. ಜನಸಾಮಾನ್ಯರ ಹಿತದೃಷ್ಟಿಯಿಂದ ದೇಶದಲ್ಲಿ ಕಠಿಣ ಆಡಳಿತ ಅತ್ಯಗತ್ಯವಾಗಿದೆ.

– ಡಾ.ವಿಜಯಕುಮಾರ್ ಎಚ್.ಕೆ., ರಾಯಚೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಬಂಗಾಳದಲ್ಲಿ ಛಿದ್ರವಾದ ಮಮತಾ ಬ್ಯಾನರ್ಜಿ ಸಾಮ್ರಾಜ್ಯ

ಪ್ರಕಾಶ ಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಬೇರು ಆಳಕ್ಕೆ ಇಳಿಯದ ಮರವು ಜೋರಾದ ಮಳೆಗೆ ನೆಲಕಚ್ಚುವಂತೆ, ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ತೃಣಮೂಲ ಕಾಂಗ್ರೆಸ್ ವಿಧಾನಸಭೆಯ ಸೋಲಿಗೆ ಛಿದ್ರ ಛಿದ್ರವಾಗುತ್ತಿದೆ. ಶಾಸಕರು, ಸಂಸದರು ಹಾಗೂ ಪಾಲಿಕೆಯ ಸದಸ್ಯರು ದಿಕ್ಕಾಪಾಲಾಗಿ ಓಡುತ್ತಿದ್ದಾರೆ. ಪಕ್ಷದ ನಿಯಂತ್ರಣ ಕಳೆದುಕೊಂಡಿರುವ ಮಮತಾ ಅಸಹಾಯಕರಾಗಿ, ತಮ್ಮ ಕಣ್ಣ ಮುಂದೆಯೇ ತಾವೇ ಕಟ್ಟಿ ಬೆಳೆಸಿದ ಪಕ್ಷ ಕುಸಿಯುತ್ತಿರುವುದನ್ನು ನೋಡುವಂತಾಗಿದೆ.

1998ರಲ್ಲಿ ಮಮತಾ ಬ್ಯಾನರ್ಜಿ ಕಾಂಗ್ರೆಸ್‌ನಿಂದ ಸಿಡಿದು ಹೊರಬಂದು ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸಿದರು. ಅವರ ಏಕೈಕ ಗುರಿಯು ಪಶ್ಚಿಮ ಬಂಗಾಳದಲ್ಲಿ ಆಳವಾಗಿ ನೆಲೆಯೂರಿದ್ದ 21 ವರ್ಷದ ಎಡರಂಗ ಸರಕಾರವನ್ನು ಸೋಲಿಸುವುದು. ಎಡರಂಗ ಸರಕಾರದ ಹಿಂಸಾತ್ಮಕ ರಾಜಕಾರಣಕ್ಕೆ ಇತಿಶ್ರೀ ಹಾಡಲು ಅವರು ಏಕಾಂಗಿಯಾಗಿ ಹೋರಾಡಲು ಸಜ್ಜಾದರು.

1998ರ ಲೋಕಸಭಾ ಚುನಾವಣೆಯಲ್ಲಿ ಟಿಎಂಸಿ ಏಳು ಸ್ಥಾನಗಳನ್ನು ಗೆದ್ದಿತ್ತು. 1999ರ ಚುನಾವಣೆಯಲ್ಲಿ ಒಂಬತ್ತು ಸ್ಥಾನಗಳನ್ನು ಗೆದ್ದಿತು. 2006ರಲ್ಲಿ ಎನ್ ಡಿಎ ಮೈತ್ರಿಕೂಟದಿಂದ ಹೊರಬಂದು 2009ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆ ಸೇರಿ 19 ಸ್ಥಾನಗಳನ್ನು ವಶಪಡಿಸಿಕೊಂಡಿತು. ಮಮತಾರವರು ಯುಪಿಎ ಭಾಗವಾಗಿ ಮನಮೋಹನ ಸಿಂಗ್ ಅವರ ಸರಕಾರದಲ್ಲಿ ರೈಲ್ವೇ ಸಚಿವರಾದರು. 2010ರಲ್ಲಿ ಟಿಎಂಸಿ ಕೋಲ್ಕತ್ತಾ ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ 141 ಸ್ಥಾನಗಳಲ್ಲಿ 97 ಸ್ಥಾನ ಗೆದ್ದು ಪಾಲಿಕೆಯಲ್ಲಿ ಅಧಿಕಾರಕ್ಕೆ ಏರಿತು.

2011ರಲ್ಲಿ ಮಮತಾ ಬ್ಯಾನರ್ಜಿಯವರ ತೃಣಮೂಲ ಕಾಂಗ್ರೆಸ್ ಪಕ್ಷವು ಕಾಂಗ್ರೆಸ್ ಜೊತೆ ಕೈ ಜೋಡಿಸಿ 34 ವರ್ಷದಿಂದ ಆಡಳಿತ ಚುಕ್ಕಾಣಿ ಹಿಡಿದಿದ್ದ ಎಡರಂಗ ಸರಕಾರವನ್ನು ನೆಲಕಚ್ಚಿಸಿತು. ಟಿಎಂಸಿ 184 ಮತ್ತು ಕಾಂಗ್ರೆಸ್ 42 ಸ್ಥಾನಗಳನ್ನು ಗೆದ್ದು ಸರಕಾರ ರಚನೆ ಮಾಡಿದವು. 2016ರ ವಿಧಾನ ಸಭಾ ಚುನಾವಣೆಯಲ್ಲಿ ಟಿಎಂಸಿ 211 ಸ್ಥಾನಗಳನ್ನು ಗೆದ್ದು ಪ್ರಚಂಡ ಬಹುಮತದಿಂದ ಅಧಿಕಾರಕ್ಕೆ ಬಂತು.

ಇದೇ ಕಾಲದಲ್ಲಿ ಈ ಚುನಾವಣೆಯಲ್ಲಿ ಬಿಜೆಪಿ ಮೂರು ಸ್ಥಾನಗಳನ್ನು ಗಳಿಸಿ ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ಪಾದಾರ್ಪಣೆ ಮಾಡಿತು. ರಾಜ್ಯದಲ್ಲಿ ಬಿಜೆಪಿ ತನ್ನ ಪ್ರಭಾವವನ್ನು ವಿಸ್ತರಿಸಲು ಆರಂಭಿಸಿತು. ಮಮತಾ ಅಧಿಕಾರಕ್ಕೆ ಬರುವ ಮುನ್ನ ಅಕ್ರಮ ನುಸುಳುಕೋರರ ವಿರುದ್ಧ ಪ್ರಬಲ ಧ್ವನಿಯಾಗಿದ್ದರು. ಪಾರ್ಲಿಮೆಂಟಿನಲ್ಲಿ ಕಾಗದ ಹರಿದು ಬಿಸಾಡಿ ಹೊರಗೆ ಹೋಗಿದ್ದರು. ಆದರೆ ಅಧಿಕಾರ ದೊರತ ಕೂಡಲೇ ತಮ್ಮ ವರಸೆ ಬದಲಾಯಿಸಿ ನುಸುಳುಕೋರರ ಪರ ಬಲವಾಗಿ ನಿಂತರು. ದೇಶದ ಭದ್ರತೆಗೆ ಅಪಾಯ ಒಡ್ಡುವ ಹಾಗೆ ಅಕ್ರಮ ನುಸುಳುಕೋರರಿಗೆ ಮಮತಾ ಕೆಂಪುಗಂಬಳಿ ಹಾಕುತ್ತಾರೆ. ಬಂಗಾಳದ ಮುಸಲ್ಮಾನರಿಗಿಂತ ಅಕ್ರಮ ವಲಸಿಗರು ಮಮತಾರವರಿಗೆ ಹೆಚ್ಚು ಪ್ರಿಯರಾಗುತ್ತಾರೆ. ಇವರನ್ನು ತಮ್ಮ ಓಟು ಬ್ಯಾಂಕ್ ಆಗಿ ಪರಿವರ್ತಿಸಿ ಜೋಪಾನವಾಗಿ ಕಾಪಾಡಿದರು ಮಮತಾ. ಎಡರಂಗ ಸರಕಾರದ ಹಿಂಸಾ ಚಾರದ ವಿರುದ್ಧ ದಿಟ್ಟ ಹೋರಾಟ ಮಾಡಿದ್ದ ಮಮತಾ, ತಮ್ಮ ಹದಿನೈದು ವರ್ಷದ ಆಡಳಿತದಲ್ಲಿ ಎಡರಂಗ ಮೀರಿಸುವ ಹಿಂಸಾಚಾರ ಮತ್ತು ಅರಾಜಕತೆಯನ್ನು ನಿರ್ಮಿಸಿದ ಅಪಕೀರ್ತಿಯನ್ನು ಹೊಂದಿದ್ದಾರೆ. ದುರದೃಷ್ಟವಶಾತ್, ಯಾವ ಹಿಂಸಾಚಾರವನ್ನು ವಿರೋಧಿಸಿ ಅಧಿಕಾರಕ್ಕೆ ಬಂದರೋ ಅದೇ ಹಿಂಸಾ ಹಾದಿಯನ್ನು ಬಳಸಿಕೊಂಡು ತಮ್ಮ ಅಧಿಕಾರ ಉಳಿಸಿಕೊಳ್ಳುವ ಹೀನಾಯ ಸ್ಥಿತಿಗೆ ಅವರು ತಲುಪಿದರು. 2021ರ ವಿಧಾನ ಸಭಾ ಚುನಾವಣೆಯನ್ನು ಕೇವಲ ತೋಳ್ಬಲದಿಂದ ಮಮತಾ ಗೆದ್ದರು. ಬಿಜೆಪಿಯ ಪ್ರಬಲ ಪೈಪೋಟಿಯನ್ನು ಎದುರಿಸಲು ವ್ಯಾಪಕ ಹಿಂಸಾಚಾರ ನಡೆಯುತ್ತದೆ.

ಬಿಜೆಪಿ ಪ್ರಾಬಲ್ಯದ ಜಾಗದಲ್ಲಿ ಮತದಾನ ಮಾಡದಂತೆ ಗೂಂಡಾಗಿರಿಯ ಮೂಲಕ ಅಡ್ಡಿ ಮಾಡಿದರು. ಚುನಾವಣೆಯ ಹಿಂಸಾಚಾರದಲ್ಲಿ 24 ಜನರು ಬಲಿಯಾದರು. 2021ರ ಗೆಲುವು ಟಿಎಂಸಿಯ ನಾಯಕರಿಗೆ ಅಮಲು ನೆತ್ತಿಗೇರಿಸುತ್ತದೆ. ತಮ್ಮನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬ ನಂಬಿಕೆ ಬಲಪಡಿಸಿಕೊಂಡರು. ಇದರ ಪರಿಣಾಮ 2023ರಲ್ಲಿ ನಡೆದ ಪಂಚಾಯತ್ ಚುನಾವಣೆ ಯಲ್ಲಿ ಟಿಎಂಸಿ ಕಾರ್ಯಕರ್ತರು ನಡೆಸಿದ ಹಿಂಸಾಚಾರ ಮತ್ತು ಅತ್ಯಾಚಾರಕ್ಕೆ ಕಡಿವಾಣ ಇಲ್ಲದಾಗುತ್ತದೆ. ಅವಿರೋಧವಾಗಿ ಆಯ್ಕೆ ಮಾಡಲು ಬಿಜೆಪಿ ಮತ್ತಿತರ ವಿರೋಧ ಪಕ್ಷಗಳ ಅಭ್ಯರ್ಥಿಗಳ ಮೇಲೆ ಅಪಹರಣದ ಬೆದರಿಕೆ ಮತ್ತು ದೌರ್ಜನ್ಯ ಎಸಗಿದರು. ಸಾವಿರಾರು ಟಿಎಂಸಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರು. ಚುನಾವಣೆಯಲ್ಲಿ ಟಿಎಂಸಿ ಕ್ರೂರ ಹಿಂಸಾಚಾರಕ್ಕೆ 48 ಜನರು ಬಲಿಯಾದರು.

ಹೋರಾಟದ ಕೆಚ್ಚು ಕಳೆದುಕೊಂಡಿದ್ದ ಕಾಂಗ್ರೆಸ್ ಮತ್ತು ಎಡಪಕ್ಷಗಳು ಇವರ ಅಟ್ಟಹಾಸಕ್ಕೆ ಪ್ರತಿರೋಧ ತೋರುವ ಧೈರ್ಯವಿಲ್ಲದೆ ನಿಷ್ಕ್ರಿಯರಾದರು. ಕೇವಲ ಬಿಜೆಪಿಯ ಕಾರ್ಯಕರ್ತರು ಮಾತ್ರ ಇವರಿಗೆ ಪೈಪೋಟಿ ಒಡ್ಡಿದರು. ಮತ್ತು ಇವರ ದೌರ್ಜನ್ಯವನ್ನು ಎದುರಿಸಿ ಪಕ್ಷದ ಬಾವುಟ ಎತ್ತಿ ಹಿಡಿದರು. ಹಿಂಸಾಚಾರ ಮಿತಿ ಮೀರಿದಾಗ ಕೋಲ್ಕತ್ತಾ ಹೈಕೋರ್ಟ್ ಮಧ್ಯಪ್ರವೇಶಿಸಿ ಚುನಾವಣಾ ಪ್ರಕ್ರಿಯೆಗೆ ಭದ್ರತೆ ಒದಗಿಸಲು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳನ್ನು ನಿಯೋಜಿಸುವಂತೆ ಆದೇಶಿಸಿತು.

ಮೂರು ಬಾರಿ ಅಧಿಕಾರಕ್ಕೆ ಬಂದ ಪಕ್ಷವು ಅಧಿಕಾರದ ದರ್ಪದಲ್ಲಿ ಮಾನವೀಯತೆಯನ್ನು ಮರೆಯಿತು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಾಳಿಗೆ ತೂರಿ ನಿರಂಕುಶ ಆಡಳಿತ ನಡೆಸಿತು. ಪಕ್ಷದ ಕಾರ್ಯಕರ್ತರಿಗೆ ವಿಚಾರದ ಪ್ರೇರಣೆಯ ವಿಷಯವಿಲ್ಲ. ನಾಯಕರಿಗೆ ಮತ್ತು ಕಾರ್ಯಕರ್ತರಿಗೆ ತಮ್ಮ ಏಕೈಕ ನಾಯಕಿ ಮಮತಾ ಬ್ಯಾನರ್ಜಿಯನ್ನು ಹೊಗಳಿ ಅಟ್ಟಕೇರಿಸುವುದೇ ಆದ್ಯತೆಯಾಗಿತ್ತು.

ಆಕೆಯ ಅಣ್ಣನ ಮಗ ಅಭಿಷೇಕ್ ಬ್ಯಾನರ್ಜಿಯನ್ನು ಮುಂದಿನ ವಾರಸುದಾರನಾಗಿ ಪಕ್ಷದಲ್ಲಿ ಪ್ರತಿಷ್ಠಾಪಿಸಲಾಯಿತು. ವಯಸ್ಸು ಸಣ್ಣದಿದ್ದರೂ ದೊಡ್ಡ ಜವಾಬ್ದಾರಿ ಹೊತ್ತು ಪಕ್ಷಕ್ಕೆ ದಿಕ್ಕು ತೋರಿಸುವ ಕೆಲಸದ ಬದಲು ಕೇವಲ ಭ್ರಷ್ಟಾಚಾರ ಮತ್ತು ತೋಳ್ಬಲದ ರಾಜಕೀಯವನ್ನು ಪ್ರಾಧಾನ್ಯವಾಗಿಟ್ಟು ಆತ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದ.

ಅಭಿಷೇಕ್ ಬ್ಯಾನರ್ಜಿಯ ನೇತೃತ್ವದಲ್ಲಿ ಟಿಎಂಸಿ ನಾಯಕರ ಮತ್ತು ಕಾರ್ಯಕರ್ತರ ಗೂಂಡಾಗಿರಿಗೆ ತಡೆ ಇಲ್ಲವಾಯಿತು. ತತ್ಪರಿಣಾಮ 'ಕಟ್ ಮನಿ' ಹೆಸರಿನಲ್ಲಿ ಪ್ರತಿಯೊಂದು ಕೆಲಸಕ್ಕೂ ಹಣ ವಸೂಲಿ ಮಾಡುವ ದಂಧೆ ನಾಯಿಕೊಡೆಯಂತೆ ಹಬ್ಬಿತು. ಕಂಡ ಕಂಡವರ ಆಸ್ತಿಯನ್ನು ಅತಿಕ್ರಮಿಸುವ ಮಾಫಿಯಾಗಳು ಹುಟ್ಟಿಕೊಂಡವು. ಹಿಂದಿನ ಎಡರಂಗ ಸರಕಾರದ ಕಾರ್ಯಕರ್ತರು ಹಸಿರು ಬಣ್ಣ ಬಳಿದುಕೊಂಡು ಟಿಎಂಸಿ ಬಾವುಟ ಹಿಡಿದು ತಮ್ಮ ಕರಾಳ ದಂಧೆಯನ್ನು ಮುಂದುವರೆಸಿದರು.



2021ರ ನಂತರ ನಡೆದ 18 ಕ್ಷೇತ್ರಗಳ ಉಪಚುನಾವಣೆಯಲ್ಲಿ ಟಿಎಂಸಿ ಹದಿನೇಳರಲ್ಲಿ ಜಯ ಸಾಧಿಸಿತು ಈ ಗೆಲುವು ಮತದಾರರಿಗೆ ಮತದಾನ ಮಾಡಲು ಅವಕಾಶ ನೀಡದೆ ಗೂಂಡಾಗಿರಿಯ ಮೂಲಕ ಸಾಧಿಸಲಾಗಿತ್ತು.

ಟಿಎಂಸಿ ಗೂಂಡಾಗಿರಿಯ ಕಾರಣ ಬಿಜೆಪಿ ಕಾರ್ಯಕರ್ತರು ಹಲವಾರು ಕಡೆಗಳಲ್ಲಿ ರಾತ್ರಿಯ ಹೊತ್ತು ಪಕ್ಷದ ಕಚೇರಿಗೆ ಬಂದು ಮಲಗುವಂತಾಗಿತ್ತು. ಶಾಸಕರ ಮೇಲೆ ಹಲ್ಲೆ ಮಾಡುವುದು ಮತ್ತು ಅವರನ್ನು ಬೆದರಿಸುವುದು ಸಾಮಾನ್ಯವಾಗಿತ್ತು. ಇವೆಲ್ಲದರ ನಡುವೆ ಐದು ವರ್ಷದ ಅವಧಿಯಲ್ಲಿ 77 ಬಿಜೆಪಿ ಶಾಸಕರ ಪೈಕಿ ಕೇವಲ ಒಂಬತ್ತು ಶಾಸಕರು ಮಾತ್ರ ಟಿಎಂಸಿಗೆ ಸೇರಿದರು. ಇವರ ದಬ್ಬಾಳಿಕೆ ದೌರ್ಜನ್ಯದಿಂದ ಬಿಜೆಪಿಯನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ. ಮಮತಾ ಬ್ಯಾನರ್ಜಿ ಇಂಡಿ ಒಕ್ಕೂಟದ ಭಾಗವಾಗಿದ್ದರೂ ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಗೆಲುವಿನ ಅತಿಯಾದ ಆತ್ಮವಿಶ್ವಾಸದಿಂದ ಒಕ್ಕೂಟದ ಪಕ್ಷಗಳನ್ನು ಕ್ಯಾರೆ ಎನ್ನಲಿಲ್ಲ. ಇವೆಲ್ಲದರ ನಡುವೆ ಮಮತಾಗೆ ಮರ್ಮಾಘಾತ ನೀಡಿದ್ದು ಚುನಾವಣಾ ಆಯೋಗದ ಎಸ್ಐಆರ್ ಮೂಲಕ ಮತಪಟ್ಟಿಯ ಪರಿಷ್ಕರಣೆ. ಎಸ್ಐಆರ್ ನಡೆಯದಂತೆ ಮಾಡಲು ನ್ಯಾಯಾಲಯದಲ್ಲಿ ಒಂದಾದ ಮೇಲೆ ಒಂದು ಕೇಸ್ ಹೂಡಿ ತಡೆಯುವ ವಿಫಲ ಯತ್ನ ಮಾಡಿದರು. ಅಂತಿಮ ಮತದಾರರ ಪಟ್ಟಿ ಸಿದ್ಧವಾದಾಗ 93 ಲಕ್ಷ ಮತದಾರರು ಪಟ್ಟಿಯಿಂದ ಹೊರಗುಳಿದರು. ಚುನಾವಣಾ ಆಯೋಗದ ಈ ಕ್ರಮದ ನಿರೀಕ್ಷೆ ಇಲ್ಲದ ಮಮತಾ ದಿನನಿತ್ಯ ಒಂದಲ್ಲಾ ಒಂದು ನೆಪ ಮುಂದಿಟ್ಟುಕೊಂಡು ಸರ್ವೋಚ್ಚ ನ್ಯಾಯಾಲಯದ ಬಾಗಿಲು ಬಡಿದು ಬಡಿದು ಸುಸ್ತಾದರು.

ಮೇ 4ರಂದು ವಿಧಾನ ಸಭಾ ಚುನಾವಣೆಯ ಫಲಿತಾಂಶ ಹೊರಬೀಳುತ್ತಿದ್ದ ಹಾಗೆ ಟಿಎಂಸಿ ಸೋಲು ಖಚಿತವಾಗಿತ್ತು. ಮೇ 4ರ ನಂತರ ಮೊದಲ ಆಘಾತವೆಂದರೆ ಡೈಮಂಡ್ ಹಾರ್ಬರ್ ಲೋಕಸಭಾ ಕ್ಷೇತ್ರದ ಫಾಲ್ಟಾ ವಿಧಾನಸಭಾ ಕ್ಷೇತ್ರದ ಮರು ಮತದಾನ ನಡೆದಾಗ ಟಿಎಂಸಿ ಅಭ್ಯರ್ಥಿ ಜಹಾಂಗೀರ್ ಖಾನ್ ಸ್ಪರ್ಧೆಯಿಂದ ಹಿಂದೆ ಸರಿದದ್ದು. ಈ ಆಘಾತದಿಂದ ಹೊರಬರುವ ಮುನ್ನ ವಿರೋಧ ಪಕ್ಷದ ನಾಯಕರಾಗಿ ಶೋಹಬ್ ದೇಬ್ ಚಟ್ಟೋಪಾಧ್ಯಾಯ ನೇಮಕದ ಪತ್ರದಲ್ಲಿ ತಮ್ಮ ಸಹಿ ನಕಲು ಮಾಡಲಾಗಿದೆ ಎಂದು ರಿತಬ್ರತಾ ಬ್ಯಾನರ್ಜಿ ಮತ್ತು ಸಂದೀಪನ್ ಸಹಾ ವಿಧಾನಸಭಾ ಸ್ಪೀಕರ್ ಅವರಿಗೆ ದೂರು ನೀಡಿದರು. ತದನಂತರ ಎದ್ದ ಬಂಡಾಯದಲ್ಲಿ ಅರವತ್ತು ಶಾಸಕರು ತಮ್ಮದೇ ನಿಜವಾದ ಟಿಎಂಸಿ ಎಂದು ಘೋಷಿಸಿಕೊಂಡು ರಿತಬ್ರತಾ ಬ್ಯಾನರ್ಜಿಯವರನ್ನು ಶಾಸಕಾಂಗ ಪಕ್ಷದ ನಾಯಕರಾಗಿ ಘೋಷಿಸಿದರು. ಇದರ ಬೆನ್ನ ಹಿಂದೆಯೇ ಇಪ್ಪತ್ತು ಲೋಕಸಭಾ ಸದಸ್ಯರು ಪ್ರತ್ಯೇಕ ಗುಂಪು ರಚಿಸಿಕೊಂಡರು. ಇದು ಸಾಲದು ಎಂಬಂತೆ ಮೂರು ರಾಜ್ಯಸಭಾ ಸದಸ್ಯರು ತಮ್ಮ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿದರು. ಕೋಲ್ಕತ್ತಾ ಮಹಾನಗರ ಪಾಲಿಕೆಯ ಮೇಯರ್ ಫಿರ್ಹಾದ್ ಹಕೀಂ ತಮ್ಮ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿದರು ಹಾಗೂ ರಾಜ್ಯದ ಅನೇಕ ನಗರ ಪಾಲಿಕೆ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದರು.

ಟಿಎಂಸಿಯ ಅನೇಕ ಗೂಂಡಾಗಳನ್ನು ಸೊಂಟಕ್ಕೆ ಹಗ್ಗ ಕಟ್ಟಿ ಚಡ್ಡಿಯಲ್ಲಿ ಮೆರವಣಿಗೆ ಮಾಡಲಾಯಿತು. ಕಟ್ ಮನಿ ವಸೂಲಿ ಮಾಡುತ್ತಿದ್ದವರನ್ನು ಅಟ್ಟಾಡಿಸಿಕೊಂಡು ಮೊಟ್ಟೆ ಸೇವೆ ಮಾಡಲಾಯಿತು. ಟಿಎಂಸಿ ನಾಯಕರು ಹೆಲ್ಮೆಟ್ ಧರಿಸಿಕೊಂಡು ಓಡಾಡಬೇಕಾದ ದಯನೀಯ ಸ್ಥಿತಿಗೆ ತಲುಪಿದರು. ಇಪ್ಪತ್ತೆಂಟು ವರ್ಷದ ಪಕ್ಷವು ಚುನಾವಣೆ ಸೋತ ಇಪ್ಪತ್ತೆಂಟು ದಿನಗಳಲ್ಲಿ ಅಸ್ತಿತ್ವವೇ ಮರೆಯಾಗುವ ಹಾಗೆ ಕುಸಿಯಿತು. ಕೇವಲ ಭ್ರಷ್ಟಾಚಾರ ಮತ್ತು ದುರಾಚಾರದ ಆಧಾರಿತವಾಗಿದ್ದ ಪಕ್ಷವು ಒಂದು ಸೋಲಿನಿಂದ ತತ್ತರಿಸಿ ಹೋಗಿ ಮಮತಾ ಬ್ಯಾನರ್ಜಿ ಕಟ್ಟಿದ್ದ ಮಣ್ಣಿನ ಕೋಟೆಯು ಸಂಪೂರ್ಣವಾಗಿ ಕುಸಿದಿದೆ. ಸೈದ್ಧಾಂತಿಕವಾಗಿ ಅಥವಾ ಯಾವುದೇ ನೀತಿ ಆಧಾರವಿಲ್ಲದೆ ಪಕ್ಷ ಕಟ್ಟಿದರೆ ಅದರ ಭವಿಷ್ಯ ಅಲ್ಪಾವಧಿ ಎಂಬುದನ್ನು ಮಗದೊಮ್ಮೆ ಟಿಎಂಸಿ ಸಾಬೀತುಪಡಿಸಿದೆ.

ಪ್ರಸ್ತುತ
ಡಾ. ಎಲ್ಲಪ್ಪಜಿ., ಕಲಾದಗಿ

ರೈತರ ಸುಲಿಗೆಗೆ ಮಿತಿಯಿಲ್ಲ

ರೈತನ ಬೆಳೆಗೆ ನೀರೇ ಜೀವಾಳ. ಅದು ಆತನಿಗೆ ವಿವಿಧ ಸಂಪನ್ಮೂಲಗಳ ಮೂಲಕ ದೊರಕುತ್ತದೆ. ಬಯಲು ಸೀಮೆಗಂತೂ ಕೊಳವೆಬಾವಿಗಳೇ ಆಸರೆ ಮತ್ತು ಆಶ್ರಯ. ಅವು ಸರಿಯಾಗಿ ನಡೆದರೆ ಓಕೆ. ಇಲ್ಲದಿದ್ದರೆ ಅದರ ಪಾಡು ಹೇಳಲಾಗದು. ರೈತನ ಸುತ್ತ ಹತ್ತಾರು ಸಮಸ್ಯೆ ಮತ್ತು ಸವಾಲುಗಳು ಹುತ್ತಗಟ್ಟುತ್ತವೆ. ಆತನ ಬದುಕು ಜೂಜಾಟ. ಮಳೆ, ಬೆಲೆ, ಬೀಜ ಮತ್ತು ಕೀಟನಾಶಕಗಳ ತೊಡಕು ಒಂದು ಕಡೆಯಾದರೆ, ಸಕಾಲಕ್ಕೆ ದೊರೆಯದ ಸೇವೆಗಳು, ಜೊತೆಗೆ ವಿಪರೀತ ಬೆಲೆಗಳಿಂದ ಕಂಗಾಲಾಗುತ್ತಾನೆ.

ಕೊಳವೆ ಬಾವಿಗೆ ಅಳವಡಿಸುವ ಸಬ್ಮರ್ಸಿಬಲ್ ಮೋಟರ್ ರೈತನಿಗೆ ಆತ್ಮ ಇದ್ದಂತೆ. ಅದೊಂದು ರೀತಿಯ ಜೀವಾತ್ಮ! ಮೋಟರ್ ನಿಂತಿತು ಎಂದರೆ ಆತಂಕ ಮತ್ತು ದಿಗಿಲು. ವಿದ್ಯುತ್ ಪೂರೈಕೆಯ ಕೊರತೆಯಿಂದಲೋ, ವ್ಯತ್ಯಯದಿಂದಲೋ ಮೋಟಾರ್ ಕೆಟ್ಟರೆ ಮುಗೀತು. ನೂರಾರು ಅಡಿ ಆಳದಿಂದ ಅದನ್ನು ಮೇಲಕ್ಕೆ ಎತ್ತಿ ರಿಪೇರಿ ಮಾಡಿಸಿ ಇಳಿಸುವಷ್ಟರಲ್ಲಿ ಸಾಕು ಸಾಕೆನಿಸಿ ಬಿಡುತ್ತದೆ.

ಬೆಳೆಗೆ ನೀರು ಹಾಯಿಸುವ ಅನಿವಾರ್ಯತೆ ಒಂದು ಕಡೆಗೆ, ಸಕಾಲಕ್ಕೆ ಎತ್ತಿ ರಿಪೇರಿ ಮಾಡಿಸುವುದು ಮತ್ತೊಂದು ಕಡೆಗೆ. ಅದನ್ನು ಹೊರ ತೆಗೆಯುವವರ ದುಂಬಾಲು ಬೀಳಬೇಕು. ಅವರಿಗೆ ನಾವೊಬ್ಬರೇ ಗ್ರಾಹಕರಲ್ಲ. ಮನವೊಲಿಸುವ ಪ್ರಯತ್ನ ಒಂದೇ ದಾರಿ. ಮುಂದಿನದು ಅದರ ರಿಪೇರಿ ಮತ್ತು ಸುಲಿಗೆಯ ಕಥೆ. ಬೀಜ, ಗೊಬ್ಬರ, ದರ, ಧಾರಣೆ, ಹೀಗೆ ಹಲವಾರು ಸಂದರ್ಭಗಳಲ್ಲಿ ಸುಲಿಗೆ ಇದೆ. ಅವುಗಳಲ್ಲಿ ಮೋಟರ್ ರಿಪೇರಿ ಸುಲಿಗೆಯೂ ಒಂದು.

ಸುಟ್ಟು ಹೋದ ಮೋಟರನ್ನು ರೀ ವೈಂಡಿಂಗ್ ಮಾಡಲು ದರ ನಿಗದಿಪಡಿಸುವವರ್ಯಾರು? ಅದನ್ನು ನಿಯಂತ್ರಿಸುವವರು ಯಾರು? ಎಂಬುದೇ ಯಕ್ಷಪ್ರಶ್ನೆ. ಮೊನ್ನೆ ನಮ್ಮದೇ ತೋಟದ ಕೊಳವೆ ಬಾವಿಯ ಮೋಟರ್ ಆರು ತಿಂಗಳ ಅಂತರದಲ್ಲಿ ಮತ್ತೊಮ್ಮೆ ಕೆಟ್ಟು ನಿಂತಿತು. ಅಚ್ಚರಿಯಾದರೂ ಬೇರೆ ದಾರಿ ಇಲ್ಲ. ಮೇಲಕ್ಕೆತ್ತಲೇ ಬೇಕಾಯಿತು. ಕಳೆದ ಬಾರಿ ಸುತ್ತಿ ಕೊಟ್ಟ ವ್ಯಕ್ತಿಯ ಕಡೆಗೆ ಕೊಂಡೊಯ್ಯಲಾಯಿತು. ಆತನ ಬಿಲ್ಲು ನೋಡಿದರೆ, ಐದು ಸಾವಿರ ಮೀರಿತ್ತು. ಆರು ತಿಂಗಳ ಅಂತರದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಮೊತ್ತ ಏರಿಸಲಾಗಿದೆ. ಯಾಕೆ ಹೀಗೆ ಎಂದು ವಿಚಾರಿಸಿದರೆ, ವೈರ್ ರೇ ಟು ಹೆಚ್ಚಾಗಿದೆ ಎಂಬ ಪ್ರತಿಕ್ರಿಯೆ. ಆನ್‌ಲೈನಿನಲ್ಲಿ ಚೆಕ್ ಮಾಡಿದಾಗ ಒಂದು ಕೆಜಿಗೆ ಒಂಬೈನೂರು ಬೆಲೆ. ಆತ ಕೆಜಿಗೆ ಸಾವಿರದ ಐದುನೂರು ರೂಪಾಯಿಗಳಂತೆ ಬಿಲ್ ಮಾಡಿದ್ದ. ಪ್ರಶ್ನಿಸಿದರೆ ಇಷ್ಟ ಇದ್ರೆ ರಿಪೇರಿ ಮಾಡಿಸಿಕೊಳ್ಳಿ, ಇಲ್ಲವೆಂದರೆ ಬೇಡ ಎಂದು ಕಡ್ಡಿ ಮುರಿದ. ರೈತ ಇನ್ನೇನು ಮಾಡಲು ಸಾಧ್ಯ? ಬೇರೆಯವರ ಕಡೆ ಹೋದರೂ ಇದೇ ಬೆಲೆ ಹೇಳುತ್ತಾರೆ. ರೈತರನ್ನು ಎಲ್ಲರೂ ಯಾಮಾರಿಸುತ್ತಾರೆ.

ಇದೊಂದೇ ಅಲ್ಲ. ರೈತ ಎಂದರೆ ಸುಲಿಗೆಗೆ ಸುಲಭದ ವಸ್ತು. ಇದಕ್ಕೆಲ್ಲ ಕಡಿವಾಣ ಹಾಕುವವರು ಯಾರು? ಭೂಮಿಯಿಂದ ಆಕಾಶಕ್ಕೆ ಜಿಗಿಯುವ ಕ್ಷಿಪಣಿಗಳನ್ನ ಶೋಧಿಸಿದ್ದೇವೆ. ಅಂತರಿಕ್ಷವನ್ನೇ ಅಧ್ಯಯನಕ್ಕೊಳಪಡಿಸಿ, ಸಂಶೋಧನೆಗೆ ಮುಂದಾಗಿದ್ದೇವೆ. ಆದರೆ ರೈತನ ಬವಣೆಯ ಬದುಕಿಗೆ ಬಿಡುಗಡೆ ಇಲ್ಲವೇ? ಆತನ ನೋವುಗಳಿಗೆ ಮಾತ್ರೆಗಳಿಲ್ಲ ಎಂಬಂತಾಗಿದೆ! ಇಂದು ರೈತ ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದಾನೆ ಎಂದು ಊಹಿಸಿಕೊಳ್ಳುವುದು ಕಷ್ಟ. ಮಧ್ಯವರ್ತಿಗಳ ಕಾಟ, ಕೂಲಿ ಆಳುಗಳ ಕೊರತೆ, ವಿದ್ಯುತ್ತಿನ ವ್ಯತ್ಯಯ, ಹವಾಮಾನ ವೈಪರೀತ್ಯ, ಅಕಾಲಿಕ ಮಳೆ, ಬಂದ ಬೆಳೆಗೆ ಸೂಕ್ತ ಕಾಲದಲ್ಲಿ ಕೊಯ್ಲಿಗೆ ಜನ ಸಿಗದಿರುವುದು, ಬೆಳೆ ಕೈಗೆ ಹತ್ತಿದರೂ ಮಾರುಕಟ್ಟೆಗೆ ಕೊಂಡೊಯ್ದಾಗ ಪಿಳ್ಳೆ ನೆಪ ಹೇಳಿ ದರ ಕಡಿಮೆ ಮಾಡುವುದು, ಹೀಗೆ ಒಂದಲ್ಲ ಎರಡಲ್ಲ ಸರಪಳಿಯಂತೆ ಜೋಡಿಸಬಹುದು. ಬೇಸತ್ತ ಜೀವಗಳು ಬೆಲೆತೆತ್ತು ಹೋಗಿವೆ. ಬೇಸಾಯ ಮಾಡೋನು ದೇಶ ಹಿಡಿದೋದ, ಕೂಲಿ ಮಾಡೋನು ಕುದುರೆ ಏರಿದ ಎಂಬ ಗಾದೆ ಮಾತು ಮತ್ತೆ ಮತ್ತೆ ನೆನಪಾಗುತ್ತದೆ. ಭಾರತದಲ್ಲಿ ಯಾರನ್ನಾದರೂ ಸುಲಭವಾಗಿ ಶೋಷಿಸಬಹುದು ಎಂದರೆ ಅದು ಕೃಷಿಕನನ್ನು. ಪುಣ್ಯವಶಾತ್, ಇನ್ನೂ ಕೃಷಿಗೆ ಆದಾಯ ತೆರಿಗೆ ವಿಧಿಸಿಲ್ಲ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:168

ಸಮಾಚಾರ ಸಣ್ಣದಲ್ಲ

ಎಐಎಡಿಎಂಕೆ ತ್ಯಜಿಸಿದ 3 ಮಾಜಿ ಸಚಿವರು ಟಿವಿಕೆಗೆ

ಚೆನ್ನೈ: ರಾಷ್ಟ್ರೀಯ ಮಟ್ಟದ ರಾಜಕಾರಣದಲ್ಲಿ ಪಕ್ಷಾಂತರ, ವಿಲೀನ ಪ್ರಕ್ರಿಯೆಗಳು ನಡೆದಿರುವ ರೀತಿಯಲ್ಲೇ ತಮಿಳುನಾಡು ರಾಜಕಾರಣದಲ್ಲಿಯೂ ಪಕ್ಷಾಂತರ ಪ್ರಕ್ರಿಯೆ ಹಲವು ಕಂತುಗಳಲ್ಲಿ ನಡೆಯುತ್ತಿದೆ. ಜನಪ್ರಿಯ ನಟ-ವಿಶಿಷ್ಟ ರಾಜಕಾರಣ ಎಂ.ಜಿ. ರಾಮಚಂದ್ರನ್ ಅವರು ಸ್ಥಾಪಿಸಿದ, ಜಯಲಲಿತಾ ಅವರು ಉತ್ತುಂಗಕ್ಕೇರಿಸಿದ 'ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ'(ಎಐಎಡಿಎಂಕೆ) ಪಕ್ಷವೀಗ ನಿದಾನವಾಗಿ ಕರಗಿಹೋಗುತ್ತಿದೆ. ಎಐಎಡಿಎಂಕೆ ಶಾಸಕರು, ಹಿರಿಯ ನಾಯಕರು, ಮಾಜಿ ಸಚಿವರು ಒಬ್ಬೊಬ್ಬರಾಗಿ ಪಕ್ಷ ತೊರೆದು ಆಡಳಿತಾರೂಢ 'ತಮಿಳಗ ವೆಟ್ರಿ ಕಳಗಂ'(ಟಿವಿಕೆ) ಪಕ್ಷವನ್ನು ಸೇರಿಕೊಳ್ಳುತ್ತಿದ್ದಾರೆ. ಎಐಎಡಿಎಂಕೆ ನಾಯಕರು, ಮಾಜಿ ಸಚಿವರೂ ಆದ ಡಾ.ವಿಜಯಭಾಸ್ಕರ್, ಆನಂದನ್, ವಿಜಯಭಾಸ್ಕರ್ ಎಐಎಡಿಎಂಕೆ ತೊರೆದು, ಗುರುವಾರ ಸಂಜೆ ಮಾಮಲ್ಲಪುರಂನಲ್ಲಿ ನಡೆದ ಬೃಹತ್ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರ ಉಪಸ್ಥಿತಿಯಲ್ಲಿ, ಎಐಎಡಿಎಂಕೆಯ ಹಲವು ಜಿಲ್ಲೆಗಳ ಪದಾಧಿಕಾರಿಗಳು, ನೂರಾರು ಬೆಂಬಲಿಗರ ಜತೆಗೂಡಿ ಟಿವಿಕೆ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಎಐಎಡಿಎಂಕೆಯನ್ನು ಪ್ರಸ್ತುತ ಮುನ್ನಡೆಸುತ್ತಿರುವವರು ತಪ್ಪು ತಪ್ಪು ನಿರ್ಧಾರಗಳನ್ನು ಕೈಗೊಳ್ಳುತ್ತಿರುವುದರಿಂದಲೇ ನಾವು ಪಕ್ಷವನ್ನು ತ್ಯಜಿಸಿ ಟಿವಿಕೆ ಸೇರಿದ್ದೇವೆ ಎಂದು ಡಾ.ವಿಜಯಭಾಸ್ಕರ್ ಹೇಳಿದ್ದಾರೆ. 45 ವರ್ಷಗಳಿಂದ ಎಐಎಡಿಎಂಕೆ ಪಕ್ಷಕ್ಕೆ ನಿಷ್ಠರಾಗಿದ್ದ ಮಾಜಿ ಸಚಿವ ಎಂಎಸ್‌ಎಂ ಆನಂದನ್ ಅವರು, ತಾವುಗಳು ಪಕ್ಷ ತ್ಯಜಿಸಬೇಕಾದಂತಹ ಪರಿಸ್ಥಿತಿ ಸೃಷ್ಟಿ ಮಾಡಿದ ಎಐಎಡಿಎಂಕೆ ನಾಯಕರ ಬಗ್ಗೆ ಕಿಡಿಕಾರಿದ್ದಾರೆ.

ಪಾಕ್ ಗುರುದ್ವಾರ ನೆಲಸಮಕ್ಕೆ ಖಂಡನೆ

ಇಸ್ಲಾಮಾಬಾದ್: ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ 125 ವರ್ಷಗಳ ಇತಿಹಾಸದ 'ಶ್ರೀಗುರು ಸಿಂಗ್ ಸಭಾ ಸಾಹಿಬ್' ಸಿಖ್ ಗುರುದ್ವಾರವನ್ನು ಸ್ಥಳೀಯ ಉದ್ಯಮಿ ನೆಲಸಮ ಮಾಡಿದ್ದು, ತೀವ್ರ ವಿವಾದಕ್ಕೆ ಕಾರಣವಾಗಿದೆ. ಪಾಕ್‌ನಲ್ಲಿನ ಅಲ್ಪಸಂಖ್ಯಾತ ಸಿಖ್ ಸಮುದಾಯ ಬಲವಾಗಿ ಖಂಡಿಸಿದೆ, ಸಿಖ್ ಜನತೆ ಪ್ರತಿಭಟನೆ ನಡೆಸಿದ್ದಾರೆ. ಭಾರತ ಸರಕಾರವೂ ಗುರುದ್ವಾರ ನೆಲಸಮ ಕೃತ್ಯವನ್ನು ಬಲವಾಗಿ ಖಂಡಿಸಿದೆ. ಭಾರತದ ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಈ ಘಟನೆಯನ್ನು ತೀವ್ರವಾಗಿ ಖಂಡಿಸಿದ್ದು, ಪ್ರಕರಣದ ಕುರಿತು ತ್ವರಿತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಾಕಿಸ್ತಾನ ಸರಕಾರವನ್ನು ಒತ್ತಾಯಿಸಿದ್ದಾರೆ. ಗುರುದ್ವಾರವನ್ನು ಶೀಘ್ರವೇ ಮರುನಿರ್ಮಿಸಬೇಕು. ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯದ ಸುರಕ್ಷತೆಯನ್ನು ಖಾತರಿಡಿಸಬೇಕು ಎಂದು ಆಗ್ರಹಿಸಿದ್ದಾರೆ. ಸರಕಾರದ ಯಾವುದೇ ಇಲಾಖೆಯಿಂದ ಅನುಮತಿ ಪಡೆಯದಿದ್ದರೂ ಉದ್ಯಮಿ ಜೂನ್ 24ರ ರಾತ್ರಿ ಗುರುದ್ವಾರವನ್ನು ನೆಲಸಮಗೊಳಿಸಿದ್ದಾರೆ ಎಂದು ಸ್ಥಳೀಯ ಆಡಳಿತ ಅಧಿಕಾರಿಗಳು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ದೆಹಲಿ ದಾಳಿಸಂಚು: 4 ಆರೋಪಿಗಳ ಸೆರೆ

ದೆಹಲಿ: ಪಾಕಿಸ್ತಾನದ ಗುಪ್ತಚರ ಸಂಸ್ಥೆ 'ಐಎಸ್‌ಐ' ಜತೆ ಸಂಪರ್ಕ ಹೊಂದಿದ್ದ, ಭಯೋತ್ಪಾದಕ ಚಟುವಟಿಕೆಗಳು ಮತ್ತು ಶಸ್ತ್ರಾಸ್ತ್ರ ಕಳ್ಳಸಾಗಣೆ ಜಾಲವನ್ನು ರಚಿಸಿಕೊಂಡು ಹಲವು ರಾಜ್ಯಗಳಲ್ಲಿ ಕಾರ್ಯನಿರತವಾಗಿದ್ದ ನಾಲ್ವರನ್ನು ದೆಹಲಿ ಪೊಲೀಸ್ ವಿಶೇಷ ದಳ ಗುರುವಾರ ಬಂಧಿಸಿದೆ. ಬಂಧಿತರಲ್ಲಿ ಮೂವರು ಪಂಜಾಬ್ ರಾಜ್ಯದವರಾದರೆ, ಒಬ್ಬ ದೆಹಲಿಯವನು. ಆರೋಪಿಗಳು ಸದ್ಯ ಪಾಕ್‌ನಲ್ಲಿರುವ ಗ್ಯಾಂಗ್‌ಸ್ಟರ್ ಶಹಜಾದ್ ಭಟ್ಟಿಯ ಸೂಚನೆ ಮೇರೆಗೆ ದೆಹಲಿ ಮತ್ತು ರಾಷ್ಟ್ರೀಯ ರಾಜಧಾನಿ ವಲಯ(ಎನ್‌ಸಿಆರ್)ನಲ್ಲಿ ಭಯೋತ್ಪಾದಕ ದಾಳಿ ನಡೆಸಲು ಸಿದ್ಧತೆ ನಡೆಸಿದ್ದರು ಎಂದು ಪೊಲೀಸ್ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಬಂಧಿತರನ್ನು ಪಂಜಾಬ್‌ನ ತರಣ್ ತರಣ್ ನಿವಾಸಿ ಶುಭದೀಪ್ ಸಿಂಗ್ ಅಲಿಯಾಸ್ ವಿಶಾಲ್, ಅಮೃತಸರ ನಿವಾಸಿ ಗುರ್ಜಂತ್ ಸಿಂಗ್ ಅಲಿಯಾಸ್ ರಿಷಿ ಮತ್ತು ಫತೇಘರ್ ಸಾಹಿಬ್ ನಿವಾಸಿ ಗಗನ್‌ಪ್ರೀತ್ ಹಾಗೂ ದೆಹಲಿಯ ಸಜನ್ ಸಿಂಗ್ ಅಲಿಯಾಸ್ ಹನಿ ಎಂದು ಗುರುತಿಸಲಾಗಿದೆ. ಆರೋಪಿಗಳಿಂದ ವಿದೇಶಿ ನಿರ್ಮಿತ 2 ಜಿಗಾನಾ ಪಿಸ್ತೂಲ್‌ಗಳು ಮತ್ತು .30 ಬೋರ್ ರೈಫಲ್, 9 ಲೈವ್ ಕಾರ್ಟ್ರಿಡ್ಜ್‌ಗಳು ಮತ್ತು 5 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದೆ.

{ಕಪಿಲ್ ಸಿಬಲ್} ರಾಜ್ಯಸಭೆ ಸದಸ್ಯ

ಶ್ರೀ ರಾಮ ಮಂದಿರದ ದೇಣಿಗೆ ದುರುಪಯೋಗ ಮಾಡಿದವರು ನಿಜವಾದ ಹಿಂದೂಗಳೇ? ಬಿಜೆಪಿ, ಬಜರಂಗದಳ ಮತ್ತು ವಿಎಚ್‌ಪಿ ಸಂಘಟನೆಗಳು ರಾಮನ ಹೆಸರಿನಲ್ಲಿ ಮತ ಕೇಳಿದ್ದವು. ನಂತರ ರಾಮನನ್ನೇ ಲೂಟಿ ಮಾಡುತ್ತಿವೆ. ಭಗವಾನ್ ರಾಮನನ್ನೇ ಲೂಟಿ ಮಾಡಿದ ಇವರೆಲ್ಲರೂ 'ಫಾರ್ಜಿ(ನಕಲಿ) ಹಿಂದೂಗಳು'.

ಹಲವಾರು ಪ್ರದೇಶಗಳು ಜಲಾವೃತ, ನದಿಗಳಂತಾದ ರಸ್ತೆಗಳು | ತಗ್ಗು ಪ್ರದೇಶ ಮನೆಗಳೊಳಕ್ಕೆ ನೀರು, ಮುಳುಗಿದ ವಾಹನಗಳು

ಮುಂಬೈನಲ್ಲಿ 205 ಮಿಮೀ ಮಳೆ, ವ್ಯಕ್ತಿ ಬಲಿ

ಮುಂಬೈ: ರಾಜಧಾನಿ ನಗರ ಮುಂಬೈ ಸೇರಿದಂತೆ ಮಹಾರಾಷ್ಟ್ರ ರಾಜ್ಯಾದ್ಯಂತ ಭಾರೀ ಮಳೆಯಾಗುತ್ತಿದೆ. ಮುಂಬೈನಲ್ಲಿ ಬುಧವಾರ ಬೆಳಗ್ಗೆಯಿಂದ ಗುರುವಾರ ಬೆಳಗ್ಗೆವರೆಗಿನ 24 ಗಂಟೆಗಳ ಅವಧಿಯಲ್ಲಿ ಗರಿಷ್ಠ 205 ಮಿಮೀವರೆಗೂ ಮಳೆ ಸುರಿದಿದೆ. ನೆರೆಯ ಗೋವಾ, ಕೊಂಕಣ ಭಾಗದಲ್ಲಿಯೂ ಧಾರಾಕಾರ ಮಳೆಯಾಗುತ್ತಿದೆ. ಮಧ್ಯಪ್ರದೇಶದಲ್ಲಿಯೂ ಧಾರಾಕಾರ ಮಳೆಯಾಗುತ್ತಿದೆ.

ನೈಋತ್ಯ ಮುಂಗಾರು ಮಾರುತಗಳು ದಕ್ಷಿಣ ಭಾರತದ ರಾಜ್ಯಗಳಿಂದ ನಿರ್ಗಮಿಸಿ ಮಹಾರಾಷ್ಟ್ರ ಕರಾವಳಿ ಭಾಗದಲ್ಲಿ ಆರ್ಭಟಿಸುತ್ತಿವೆ. ಪರಿಣಾಮವಾಗಿ ಮಹಾರಾಷ್ಟ್ರ ರಾಜ್ಯಾದ್ಯಂತ ಕಳೆದ 3-4 ದಿನಗಳಿಂದ ಧಾರಾಕಾರ ಮಳೆಯಾಗುತ್ತಿದೆ. ಮುಂಬೈ ಮಹಾನಗರದಲ್ಲಿ ಬುಧವಾರ ಬೆಳಗ್ಗೆಯಿಂದ ಗುರುವಾರ ಬೆಳಗ್ಗೆವರೆಗಿನ 24 ಗಂಟೆಗಳ ಅವಧಿಯಲ್ಲಿ 205 ಮಿಮೀಗೂ ಅಧಿಕ ಮಳೆಯಾಗಿದೆ.

ಜುಹು ವಿಮಾನ ನಿಲ್ದಾಣ ಮತ್ತು ಸಂತಾಕ್ರೂಜ್-205 ಮಿಮೀ, ವಿಖ್ರೋಳಿ-193, ಮುಂಬೈ ಪೂರ್ವ ಉಪನಗರ-189, ಬಾಂದ್ರಾ-184, ರಾಮ್ ಮಂದಿರ್-178, ಮುಂಬೈ ಐಲ್ಯಾಂಡ್ ಮತ್ತು ಬೈಕುಲ್ಲಾ-172, ಮುಂಬೈ ಪಶ್ಚಿಮ ಉಪ ನಗರ ಮತ್ತು ಟಾಟಾ ಪವರ್ ಚೆಂಬೂರ್-165 ಮಿಮೀ ಮಳೆಯಾಗಿದೆ ಎಂದು ಬೃಹನ್ಮುಂಬೈ ಮಹಾನಗರ ಪಾಲಿಕೆ ಗುರುವಾರ ಸುದ್ದಿಸಂಸ್ಥೆಗೆ ಮಾಹಿತಿ ನೀಡಿದೆ.

ಗುರುವಾರ ಮುಂಜಾನೆ ಗೋರೆಗಾಂವ್, ಅಂಧೇರಿ, ದಾದರ್, ಪರೇಲ್, ಹಿಂದ್ಮಾತಾ, ಚಾರ್ಕೋಪ್, ವರ್ಲಿ ಪ್ರದೇಶಗಳಲ್ಲಿ ಧಾರಾಕಾರ ಮಳೆಯಾಗಿದ್ದು, ಪ್ರಮುಖ ರಸ್ತೆಗಳೆಲ್ಲಾ ನದಿಯಂತಾಗಿವೆ. ರೈಲು ಹಳಿಗಳು ನೀರಿನಲ್ಲಿ ಮುಳುಗಡೆಯಾಗಿರುವುದರಿಂದ ಲೋಕಲ್ ಟ್ರೇನ್ ಸಂಚಾರದಲ್ಲಿ ವ್ಯತ್ಯಯವಾಗಿದೆ.

ಮುಂಬೈನ ಹಲವು ತಗ್ಗು ಪ್ರದೇಶಗಳು ಜಲಾವೃತ್ತವಾಗಿವೆ.

ರಸ್ತೆಗಳಲ್ಲಿ ಮೊಣಕಾಲುವರೆಗೂ ನೀರು ನಿಂತಿದ್ದು, ಜನರು ಕಷ್ಟಪಟ್ಟು ಸಂಚರಿಸುತ್ತಿದ್ದಾರೆ. ಕೆಲವೆಡೆ ಮನೆಗಳಿಗೂ ನೀರು ನುಗ್ಗಿದ್ದು, ಜನರು ಸಂಕಷ್ಟಕ್ಕೀಡಾಗಿದ್ದಾರೆ. ನಗರದಲ್ಲಿಡೀ ಮೋಡ ಮುಸುಕಿದಂತೆಯೇ ಇದ್ದು, ಶುಕ್ರವಾರ ಮುಂಜಾನೆಯೂ ಧಾರಾಕಾರ ಮಳೆ ನಿರೀಕ್ಷಿತ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಧಾರಾಕಾರ ಮಳೆಯಿಂದ ಮುಂಬೈ ರಸ್ತೆಗಳು ನದಿಗಳಂತಾಗಿದ್ದು, ಕೆಲವೆಡೆ ಕಾರುಗಳೇ ಮುಳುಗಿಹೋಗಿವೆ.

ತೆರೆದ ಮ್ಯಾನ್‌ಹೋಲ್‌ಗೆ ಬಿದ್ದು 55ರ ವ್ಯಕ್ತಿ ಸಾವು

ಧಾರಾಕಾರ ಮಳೆಯಿಂದಾಗಿ ಮುಂಬೈನಲ್ಲಿ ರಸ್ತೆಗಳು, ಪಾದಚಾರಿ ಮಾರ್ಗಗಳೆಲ್ಲಾ ಜಲಾವೃತವಾಗಿವೆ. ಪರಿಣಾಮವಾಗಿ ಜನಸಂಚಾರವೇ ದೊಡ್ಡ ಸವಾಲಾಗಿದೆ. ಈ ಮಧ್ಯೆ, ಮುಂಬೈನ ಖೈರಾನಿ ಪ್ರದೇಶದಲ್ಲಿ ಜಲಾವೃತವಾದ ರಸ್ತೆಯ ಅಂಚಲ್ಲಿ ನಡೆದುಕೊಂಡು ಹೋಗುತ್ತಿದ್ದ 55 ವರ್ಷದ ಅಸ್ಲಂ ಎಸಾಫ್ ಷೇಕ್ ಎಂಬವರು ತೆರೆದ ಮ್ಯಾನ್ ಹೋಲ್ ಒಳಕ್ಕೆ ಬಿದ್ದು, ಹಲವು ಮೀಟರ್‌ಗಳಷ್ಟು ದೂರ ಕೊಚ್ಚಿಕೊಂಡು ಹೋಗಿ ಸಾವಿಗೀಡಾಗಿದ್ದಾರೆ. ಅಂಧೇರಿ-ಸಾಕಿನಾಕಾ ಮತ್ತು ಜೋಗೇಶ್ವರಿ ಪ್ರದೇಶಗಳನ್ನು ಸಂಪರ್ಕಿಸುವ ಖೈರಾನಿ ರಸ್ತೆಯಲ್ಲಿ ಅವರು ಗುರುವಾರ ಮಧ್ಯಾಹ್ನ 12.30ರ ವೇಳೆ ಛತ್ರಿ ಹಿಡಿದು, ಮೊಬೈಲ್‌ನಲ್ಲಿ ಮಾತನಾಡುತ್ತಾ ನಡೆದು ಹೋಗುತ್ತಿದ್ದರು. ಇಡೀ ರಸ್ತೆಯೇ ಧಾರಾಕಾರ ಮಳೆಯಿಂದಾಗಿ ಜಲಾವೃತವಾಗಿತ್ತು.

ಹಾಗಾಗಿ ಮ್ಯಾನ್‌ಹೋಲ್ ಮುಚ್ಚಲ ತೆರೆದುಕೊಂಡಿರುವುದು ಕಾಣಿಸದೇ, ಮ್ಯಾನ್ ಹೋಲ್ ಮೇಲೆಯೇ ಕಾಲಿಟ್ಟದ್ದರಿಂದ ಒಳಕ್ಕೆ ಬಿದ್ದು, ಕೊಚ್ಚಿಕೊಂಡು ಹೋಗಿದ್ದಾರೆ. ಅಸ್ಲಂ ಅವರಿಗೆ ತಕ್ಷಣ ಮ್ಯಾನ್‌ಹೋಲ್‌ನಿಂದ ಹೊರಬರಲು ಸಾಧ್ಯವಾಗಿಲ್ಲ. ಅದೇ ಸ್ಥಳದಲ್ಲಿದ್ದ ಜನರು, ರಸ್ತೆಯಂಚಲ್ಲಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿ ಏಕಾಏಕಿ ಕಾಣೆಯಾಗಿದ್ದನ್ನು ಕಂಡು ಅನುಮಾನಗೊಂಡು ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಅಲ್ಲಿ ಮ್ಯಾನ್‌ಹೋಲ್‌ಗೆ ಮುಚ್ಚಲವೇ ಇಲ್ಲದಿರುವುದು ಗೊತ್ತಾಗಿದೆ. ಸ್ಥಳೀಯರು ರಕ್ಷಣೆಗೆ ಯತ್ನಿಸಿದರೂ ಸಾಧ್ಯವಾಗಿಲ್ಲ. ಬಳಿಕ ಪೊಲೀಸ್ ಕಂಟ್ರೋಲ್ ರೂಂಗೆ ಮತ್ತು ಅಗ್ನಿಶಾಮಕ ದಳಕ್ಕೆ ಕರೆ ಮಾಡಿದ್ದಾರೆ.

ಅಗ್ನಿಶಾಮಕ ದಳದ ಸಿಬ್ಬಂದಿ 2 ಗಂಟೆಗಳ ಕಾಲ ಶ್ರಮಿಸಿದ ಬಳಿಕ ಅಸ್ಲಂ ಅವರು ಹಲವು ಮೀಟರ್‌ಗಳಷ್ಟು ದೂರದ ಮ್ಯಾನ್‌ಹೋಲ್ ಬಳಿ ಪತ್ತೆಯಾಗಿದ್ದಾರೆ. ಕೊಕ್ಕೆಗಳ ಮೂಲಕ ಅಸ್ಲಂ ಅವರ ದೇಹಕ್ಕೆ ಹಗ್ಗ ಕಟ್ಟಿ ಹೊರಕ್ಕೆ ತೆಗೆಯಲಾಗಿದೆ. ಬಳಿಕ ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ, ವೈದ್ಯರು, ಅಸ್ಲಂ ಅವರು ಅದಾಗಲೇ ಸಾವಿಗೀಡಾಗಿ ಗಂಟೆಯಾಗಿದೆ ಎಂದು ಹೇಳಿದ್ದಾರೆ.

ಉತ್ತರ-ಈಶಾನ್ಯಕ್ಕೆ ಮುಂಗಾರು ಕೃಪೆ

ದಕ್ಷಿಣ ಭಾರತಕ್ಕೆ ಕೈಕೊಟ್ಟಿರುವ ನೈಋತ್ಯ ಮುಂಗಾರು ಮಾರುತಗಳು, ಮಧ್ಯ ಮತ್ತು ಉತ್ತರ ಭಾರತದಲ್ಲಿ ಭಾರೀ ಮಳೆ ಸುರಿಸುತ್ತಿವೆ. ಈಶಾನ್ಯ ಭಾರತದಲ್ಲಿಯಂತೂ ಹಲವು ಭಾರಿ ಮೇಘಸ್ಫೋಟವಾಗಿ ಧಾರಾಕಾರ ಮಳೆಯಾಗುತ್ತಿದೆ. ಅರುಣಾಚಲ ಪ್ರದೇಶ ಮತ್ತು ಅಸ್ಸಾಂನಲ್ಲಿ ದಾಖಲೆ ಪ್ರಮಾಣದ ಮಳೆಯಾಗುತ್ತಿದೆ. ಜೂನ್ 27ಕ್ಕೆ ನೈಋತ್ಯ ಮುಂಗಾರು ದೆಹಲಿ ಭಾಗಕ್ಕೆ ಪ್ರವೇಶಿಸಬೇಕಿತ್ತು. ಆದರೆ, 5 ದಿನಗಳಷ್ಟು ವಿಳಂಬವಾಗಿ ಕಾಲಿಟ್ಟಿದೆ. ಆದರೆ, ಭಾರೀ ಮಳೆಯನ್ನೇ ಹೊತ್ತು ತಂದಿದೆ ಎಂದು ಭಾರತೀಯ ಹವಾಮಾನ ಇಲಾಖೆ ಗುರುವಾರ ತಿಳಿಸಿದೆ. ದೆಹಲಿ ರಾಷ್ಟ್ರೀಯ ರಾಜಧಾನಿ ಪ್ರದೇಶ, ಉತ್ತರ ಪ್ರದೇಶ, ಹರಿಯಾಣ, ಹಿಮಾಚಲ ಪ್ರದೇಶ, ಪಂಜಾಬ್, ಗುಜರಾತ್ ರಾಜ್ಯದಲ್ಲಿಯೂ ಮಳೆಯಾಗುತ್ತಿದೆ. ಈ ಭಾಗಗಳಲ್ಲಿ ಜುಲೈ 8ರವರೆಗೂ ಉತ್ತಮ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ವರದಿಯಲ್ಲಿ ತಿಳಿಸಿದೆ.

ಹಿಮಾಚಲ ಪ್ರದೇಶ ರಾಜ್ಯದ ನಗರವೊಂದರಲ್ಲಿ ಪರ್ವತಗಳ ಸಾಲಿನ ಪಕ್ಕದಲ್ಲಿಯೇ ಬಿಳಿಯ ಮೋಡ ಗಳು ಚಲಿಸುತ್ತಿ ರುವ ಸುಂದರ ನೋಟ ಗುರುವಾರ ಕಂಡುಬಂದಿತು.

ಮೇಘಮಾಲೆ...

ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿ ಪರ್ವತನೇನಿ ಕಟು ನುಡಿ

ಭಯೋತ್ಪಾದಕರಲ್ಲಿ ಕೆಟ್ಟವ-ಒಳ್ಳೆಯವ ಎಂಬುದಿಲ್ಲ

ನ್ಯೂಯಾರ್ಕ್: ಭಯೋತ್ಪಾದಕ ಎಂದರೆ ಆತ ಭಯೋತ್ಪಾದಕನೇ. ಅದರಲ್ಲಿ ಒಳ್ಳೆಯ-ಕೆಟ್ಟ ಭಯೋತ್ಪಾದಕ ಎಂಬ ಭೇದವಿರದು. ಭಯೋತ್ಪಾದನೆ ಚಟುವಟಿಕೆಗಳಿಗೆ ಯಾವುದೇ ಸಮರ್ಥನೆ ಅಥವಾ ಕಾರಣ ಇರಲು ಸಾಧ್ಯವಿಲ್ಲ ಎಂದು ಭಾರತ ವಿಶ್ವಸಂಸ್ಥೆಯಲ್ಲಿ ಸ್ಪಷ್ಟವಾಗಿ ಹೇಳಿದೆ.

ಉಗ್ರವಾದವನ್ನು ಎದುರಿಸುವ ವಿಚಾರದಲ್ಲಿ ದ್ವಂದ್ವ ನೀತಿ ಬಿಡಬೇಕು, ವಿಶ್ವದ ಎಲ್ಲಾ ರಾಷ್ಟ್ರಗಳು ಒಟ್ಟಾಗಿ ಭಯೋತ್ಪಾದನೆ ದಮನಕ್ಕೆ ಕಾರ್ಯನಿರ್ವಹಿಸಬೇಕು ಎಂದು ಭಾರತ ವಿಶ್ವಕ್ಕೆ ಕರೆ ನೀಡಿದೆ. ವಿಶ್ವಸಂಸ್ಥೆಯ ಜಾಗತಿಕ ಭಯೋತ್ಪಾದನೆ ನಿಗ್ರಹ ಕಾರ್ಯ ತಂತ್ರದ 9ನೇ ಪರಿಶೀಲನಾ ವರದಿ ಚರ್ಚೆ-ಅಂಗೀಕಾರ ವೇಳೆ ಮಾತನಾಡಿದ ವಿಶ್ವಸಂಸ್ಥೆಯಲ್ಲಿನ ಭಾರತದ ಖಾಯಂ ಪ್ರತಿನಿಧಿ ಹರೀಶ್ ಪರ್ವತನೇನಿ, ಭಯೋತ್ಪಾದಕರ ಮಾನವ ಹತ್ಯೆಯ ಸಮರ್ಥನೆಯ ಸಿದ್ಧಾಂತವನ್ನು ಪೂರ್ಣವಾಗಿ ನಿರ್ಮೂಲನೆ ಮಾಡಬೇಕು. ಭಯೋತ್ಪಾದಕ ಕೃತ್ಯ ಕೈಗೊಳ್ಳುವವರಷ್ಟೇ ಅಲ್ಲದೆ, ಉಗ್ರ ಸಂಘಟನೆಗೆ ಹಣ-ಆಶ್ರಯ ನೀಡುವವರು, ಉಗ್ರರನ್ನು ಬೆಂಬಲಿಸುವವರ ಮೇಲೂ ಕಠಿಣ ಕ್ರಮ ಜರುಗಬೇಕು ಎಂದು ಆಗ್ರಹಿಸಿದರು.

ಹಲವು ದಶಕಗಳಿಂದ ಭಾರತ ಗಡಿಯಾಚೆ ಭಯೋತ್ಪಾದನೆಯಿಂದ ಸಂಕಷ್ಟ ಅನುಭವಿಸಿದೆ. ನೆರೆಯ ದೇಶದ ಭಯೋತ್ಪಾದಕ ಚಟುವಟಿಕೆಗಳಿಂದಾಗಿ ಭಾರತದ ಸಾವಿರಾರು ಜನರು ಜೀವ ಕಳೆದುಕೊಂಡಿದ್ದಾರೆ. ಅನೇಕ ಕುಟುಂಬಗಳು ನೋವು ಅನುಭವಿಸಿವೆ. ಯಾವುದೇ ಅಹವಾಲು, ರಾಜಕೀಯ ಕಾರಣ, ಕಾರ್ಯತಂತ್ರ ಹೆಸರಲ್ಲಿ ಭಯೋತ್ಪಾದನೆಯನ್ನು ಸಮರ್ಥಿಸಲಾಗದು. ಭಯೋ ತ್ಪಾದನೆ ವಿರುದ್ಧದ ಹೋರಾಟ ರಾಜಕೀಯದ ಸಾಧನವಾ ಗಬಾರದು ಎಂದು ಪ್ರತಿಪಾದಿಸಿದರು.

ಭಯೋತ್ಪಾದನೆ ವಿರುದ್ಧದ ಕ್ರಮಗಳನ್ನು ರಾಜಕೀಯಗೊಳಿಸುವುದು ಅಥವಾ ಸುಳ್ಳು ಸಮಾನತೆಗಳನ್ನು ಸೃಷ್ಟಿಸು ವುದು ಅಪಾಯಕಾರಿ. ಭಯೋತ್ಪಾದನೆ ವೃದ್ಧಿಗೆ ಕಾರಣವಾ ಗುವ ಸಂಗತಿಗಳನ್ನು ನಿವಾರಿಸಬೇಕು. ಅವನ್ನು ಸಮರ್ಥಿ ಸಬಾರದು. ಮಾನವ ಹಕ್ಕುಗಳನ್ನು ಕಾಪಾಡುತ್ತಲೇ ಭಯೋ ತ್ಪಾದನೆಯನ್ನೂ ದಮನ ಮಾಡಬೇಕು ಎಂದು ಹೇಳಿದರು.

ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿ ಹರೀಶ್ ಪರ್ವತನೇನಿ ಮಾತು.

ಉಗ್ರರ ದಮನಕ್ಕೆ ದ್ವಂದ್ವ ನೀತಿ ಸಲ್ಲ

ಭಯೋತ್ಪಾದನೆಗೆ ಹಣದ ನೆರವು ತಡೆಯುವುದು ಜಾಗತಿಕ ಆದ್ಯತೆಯಾಗಲಿ. ಗುಪ್ತಚರ ಮಾಹಿತಿ ವಿನಿಮಯ ಹೆಚ್ಚಲಿ. ಫೈನಾನ್ಷಿಯಲ್ ಆಕ್ಷನ್ ಟಾಸ್ಕ್ ಫೋರ್ಸ್(ಎಫ್‌ಎಟಿಎಫ್) ಮಾನದಂಡಗಳ ಕಟ್ಟುನಿಟ್ಟು ಜಾರಿ ಆಗಬೇಕು. ಯಾವ ದೇಶವೂ ಉಗ್ರರಿಗೆ, ಅವರ ನೆಲೆಗೆ ಸುರಕ್ಷಿತ ತಾಣವಾಗಬಾರದು. ಕೃತಕ ಬುದ್ಧಿಮತ್ತೆ(ಎ.ಐ) ಸೇರಿದಂತೆ ಹೊಸ ಬಗೆಯ ತಂತ್ರಜ್ಞಾನಗಳನ್ನು ಉಗ್ರ ಸಂಘಟನೆಗಳು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಕಳವಳಕಾರಿ. ಭಯೋತ್ಪಾದನೆ ನಿಗ್ರಹ ಕಾರ್ಯತಂತ್ರದಲ್ಲಿ ದ್ವಂದ್ವ ಇರುವುದು ನಿರಾಶಾದಾಯಕ. ಇಸ್ಲಾಮೋಫೋಬಿಯಾ, ಕ್ರಿಶ್ಚಿಯನ್ಫೋಬಿಯಾ ಹಾಗೂ ಯಹೂದಿ ವಿರೋಧದಂತೆಯೇ ಇತರೆ ಧರ್ಮಗಳ ವಿರುದ್ಧದ ದ್ವೇಷವನ್ನೂ ವಿಶ್ವಸಂಸ್ಥೆ ಸಮಾನವಾಗಿ ಪರಿಗಣಿಸಬೇಕು ಎಂದೂ ಪರ್ವತನೇನಿ ಹೇಳಿದರು.

'ಆತ್ಮೀಯ ಸೋದರಿ ಪ್ರಧಾನಿ ಸನೇ ತಕೈಚಿ'

ಜಪಾನ್ ಪ್ರಧಾನಿ ಕುರಿತ ಪ್ರಧಾನಿ ಮೋದಿ ಸಂಭೋದನೆ

ಜಪಾನ್-ಭಾರತ ಪ್ರಧಾನಿಗಳಿಂದ ಸಚಿವರ ಪರಿಚಯ

ದೆಹಲಿ: 16ನೇ ಭಾರತ-ಜಪಾನ್ ವಾರ್ಷಿಕ ಶೃಂಗಸಭೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಮೂರು ದಿನಗಳ ಅಧಿಕೃತ ಪ್ರವಾಸಕ್ಕಾಗಿ ಭಾರತಕ್ಕೆ ಆಗಮಿಸಿರುವ ಜಪಾನ್ ಪ್ರಧಾನಿ ಸನಾಯೆ ತಕೈಚಿ ಅವರನ್ನು 'ನನ್ನ ಆತ್ಮೀಯ ಸೋದರಿ, ಜಪಾನ್ ಪ್ರಧಾನಿ ಸನ್ನೆ ತಕೈಚಿ ಅವರಿಗೆ ಹೃತ್ಪೂರ್ವಕ ಸ್ವಾಗತ' ಎಂದು ಬರಮಾಡಿಕೊಂಡರು.

ಜಪಾನ್ ಪ್ರಧಾನಿ ಕುರಿತು ಪ್ರಧಾನಿ ಮೋದಿ ಅವರು ಬಳಸಿದ ಸಂಭೋದನೆಗೆ ಮೆಚ್ಚುಗೆ ವ್ಯಕ್ತವಾ ಗಿದೆ. ಜಪಾನ್ ಪ್ರಧಾನಿಯಾಗಿ ಇತ್ತೀಚೆಗಷ್ಟೇ ಅಧಿಕಾರ ಸ್ವೀಕರಿಸಿರುವ ಸನ್ನೆ ತಕೈಚಿ ಅವರು, ಇದೇ ಮೊದಲ ಬಾರಿಗೆ ಭಾರತ ಪ್ರವಾಸ ಕೈಗೊಂಡಿದ್ದಾರೆ. ಸನ್ನೆ ಅವರ ನೇತೃತ್ವದ ಉನ್ನತ ಮಟ್ಟದ ಜಪಾನ್ ನಿಯೋಗವನ್ನು ಭಾರತಕ್ಕೆ ಬರಮಾಡಿಕೊಳ್ಳಲು ಬಹಳ ಸಂತೋಷವಾಗುತ್ತಿದೆ ಎಂದು ಮೋದಿ ಹೇಳಿದರು.

ಸನ್ನೆ ತಕೈಚಿ ಅವರಿಗೆ ದೆಹಲಿಯಲ್ಲಿ ರಾಷ್ಟ್ರಪತಿ ಭವನದಲ್ಲಿ ಸಾಂಪ್ರದಾಯಿಕ ಹಾಗೂ ಅದ್ದೂರಿ ಸ್ವಾಗತ ಕೋರಲಾಯಿತು. ಈ ಸಂದರ್ಭ ಪ್ರಧಾನಿ ನರೇಂದ್ರ ಮೋದಿ ಮತ್ತು ಜಪಾನ್ ಪ್ರಧಾನಿ ತಕೈಚಿ ಅವರು ತಮ್ಮ ದೇಶದ ಪ್ರಮುಖ ಸಚಿವರು ಹಾಗೂ ರಾಜತಾಂತ್ರಿಕ ನಿಯೋಗದ ಪ್ರಮುಖರನ್ನು ಪರಿಚಯ ಮಾಡಿಕೊಟ್ಟರು. ದೆಹಲಿಯಲ್ಲಿನ ಹೈದರಾಬಾದ್ ಹೌಸ್‌ನಲ್ಲಿ ಇಬ್ಬರೂ ಪ್ರಧಾನಿಗಳು ಗುರುವಾರ ಜಂಟಿ ಸುದ್ದಿಗೋಷ್ಠಿ ನಡೆಸಿದರು. ಜಗತ್ತು ರಾಜಕೀಯವಾಗಿ ಮತ್ತು ಭೌಗೋಳಿಕವಾಗಿ ಅತ್ಯಂತ ವೇಗವಾಗಿ ಬದಲಾಗುತ್ತಿರುವ ಈ ಸಂದರ್ಭದಲ್ಲಿ ಭಾರತ-ಜಪಾನ್ ದೇಶಗಳ ನಡುವಿನ ಸಂಬಂಧ ಮಾತ್ರ ಈ ಹಿಂದಿನಷ್ಟೇ ದೃಢವಾಗಿದೆ. ದೆಹಲಿ-ಟೋಕಿಯೊ ಸ್ನೇಹ ಸಂಬಂಧ ದಿನೇ ದಿನೇ ಹೆಚ್ಚು ಗಟ್ಟಿಯಾಗುತ್ತಿದೆ. ಅದಕ್ಕೆ ಕಾರಣವಾಗಿರುವುದು ಪರಸ್ಪರರಲ್ಲಿನ ನಂಬಿಕೆ ಮತ್ತು ವಿಶ್ವಾಸ ಎಂದು ಮೋದಿ ಹೇಳಿದರು.

ಭಾರತದ ಮೂಲಸೌಕರ್ಯ ಮತ್ತು ಕೈಗಾರಿಕೆಗಳ ಆಧುನೀಕರಣ, ಬುಲೆಟ್ ಟ್ರೇನ್, ತಯಾರಿಕಾ ವಲಯದಲ್ಲಿನ ಎರಡೂ ದೇಶಗಳ ನಡುವಿನ ಸ್ನೇಹ ಸಂಬಂಧ, ಕೊಡುಕೊಳ್ಳುವಿಕೆ ಅದ್ವಿತೀಯವಾಗಿದೆ ಎಂದು ಮೋದಿ ಬಣ್ಣಿಸಿದರು. 16ನೇ ಭಾರತ-ಜಪಾನ್ ವಾರ್ಷಿಕ ಶೃಂಗಸಭೆಯಲ್ಲಿ ಮೋದಿ-ತಕೈಚಿ ಭಾಗವಹಿಸಲಿದ್ದಾರೆ.

ದೂರದೃಷ್ಟಿಯ ನಾಯಕಿ ಸನ್ನೆ ತಕೈಚಿ

ಜಪಾನ್‌ನ ನಾರಾ ಪ್ರಾಂತ್ಯಕ್ಕೆ ಸೇರಿದ ಸನ್ನೆ ತಕೈಚಿ ಅವರು ಜಪಾನ್ ಇತಿಹಾಸದಲ್ಲಿಯೇ ಬಲು ದೂರದೃಷ್ಟಿಯುಳ್ಳ ನಾಯಕಿ. ಜಪಾನ್‌ನ ಪ್ರಧಾನ ಮಂತ್ರಿ ಹುದ್ದೆಗೇರಿದ ಮೊದಲ ಮಹಿಳೆ ಎಂಬ ಹಿರಿಮೆ ಹೊಂದಿದ್ದಾರೆ. ನಾರಾ ಪ್ರದೇಶವು ಭಾರತದ ಜತೆಗೆ ಬೌದ್ಧ ಧರ್ಮದ ಕಾರಣಕ್ಕೆ ಐತಿಹಾಸಿಕ ಮತ್ತು ಸಾಂಸ್ಕೃತಿಕ ನಂಟು ಹೊಂದಿದೆ.

ಬಿಗಿ ಭದ್ರತೆಯೊಂದಿಗೆ ಅಮರನಾಥ ಯಾತ್ರೆ ಶುರು

ಶ್ರೀನಗರ: ಹಿಮಾಲಯದ ತಪ್ಪಲಿನಲ್ಲಿರುವ ಹಿಮಲಿಂಗದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಶ್ರೀಅಮರನಾಥಕ್ಕೆ ಭಕ್ತರು ವಾರ್ಷಿಕವಾಗಿ ಕೈಗೊಳ್ಳುವ ಪವಿತ್ರ ಯಾತ್ರೆಯು ಗುರುವಾರ ಆರಂಭಗೊಂಡಿದೆ. ಈ ಬಾರಿ ಯಾತ್ರೆ ಕೈಗೊಂಡಿರುವ ಶಿವಭಕ್ತರಿಗೆ ಬಹುಸ್ತರದ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ಭಕ್ತರ ಮೊದಲ ತಂಡ ಜಮ್ಮುವಿನಿಂದ ಕಾಶ್ಮೀರಕ್ಕೆ ಪ್ರಯಾಣ ಬೆಳೆಸಿದೆ.

ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಜಮ್ಮುವಿನ ಭಗವತಿ ನಗರದಲ್ಲಿರುವ ಅಮರನಾಥ ಯಾತ್ರಿಕರ ಬೇಸ್ ಕ್ಯಾಂಪ್‌ನಲ್ಲಿ ಗುರುವಾರ ಮುಂಜಾನೆ ವಿಶೇಷ ಪೂಜೆ ಸಲ್ಲಿಸಿ ಮೊದಲ ಅಮರನಾಥ ಯಾತ್ರಾ ತಂಡಕ್ಕೆ ಕೇಸರಿ ಧ್ವಜ ತೋರಿ ಶುಭ ಕೋರಿದರು.

3,707 ಪುರುಷರು, 816 ಮಹಿಳೆಯರು, 16 ಮಕ್ಕಳು ಹಾಗೂ 283 ಸಾಧುಗಳು, ಸಾಧ್ವಿಯರು ಸೇರಿದಂತೆ ಒಟ್ಟು 4,822 ಭಕ್ತರು ಅಮರನಾಥ ಯಾತ್ರೆಯ ಮೊದಲ ತಂಡದಲ್ಲಿ ಪ್ರಯಾಣ ಬೆಳೆಸಿದ್ದಾರೆ. ಇವರಲ್ಲಿ 2,510 ಯಾತ್ರಿಕರು ಸಾಂಪ್ರದಾಯಿಕ ಪಹಲ್ಗಾಮ್ ಮಾರ್ಗ ಆರಿಸಿಕೊಂಡಿದ್ದರೆ, 2,312 ಮಂದಿ ಬಲು ಕಡಿದಾದ ಬಲ್ತಾಲ್ ಮಾರ್ಗದಲ್ಲಿ ಪ್ರಯಾಣಿಸುತ್ತಿದ್ದಾರೆ. ಈ ವರ್ಷದ ಅಮರನಾಥ ಯಾತ್ರೆ 57 ದಿನಗಳದ್ದಾಗಿದೆ. ಜು.3ರಿಂದ ಆ.28ರವರೆಗೂ ನಡೆಯಲಿದೆ. ರಕ್ಷಾಬಂಧನದ ದಿನ ಮುಕ್ತಾಯಗೊಳ್ಳಲಿದೆ. ಈವರೆಗೆ 3.90 ಲಕ್ಷ ಭಕ್ತರು ಪವಿತ್ರ ಅಮರನಾಥ ಯಾತ್ರೆಗೆ ನೋಂದಾಯಿಸಿಕೊಂಡಿದ್ದಾರೆ.

ಶರದ್ ಪವಾರ್ ದ್ವಂದ್ವ, ಎನ್‌ಸಿಪಿ ಆಂತರಿಕ ಚರ್ಚೆ | ಸುಪ್ರಿಯಾ, ನಿಷ್ಠರಿಗೆ ಮಹತ್ವದ ಹುದ್ದೆಗೂ ಚೌಕಾಸಿ

ಎನ್‌ಡಿಎಗೆ ಬೆಂಬಲವೋ, ಕಾಂಗ್ರೆಸ್ ಜತೆ ವಿಲೀನವೋ?

ಮುಂಬೈ: ಮಹಾರಾಷ್ಟ್ರ ರಾಜಕೀಯದಲ್ಲಿ ಪಕ್ಷಾಂತರ ಪರ್ವ ತೀವ್ರ ಸಂಚಲನ ಮೂಡಿಸಿದೆ. ಪ್ರತಿಪಕ್ಷಗಳ ಸಂಸದರು ಮತ್ತು ಶಾಸಕರ ಪಕ್ಷಾಂತರ ನಡೆಗಳು ವೇಗ ಪಡೆದುಕೊಂಡಿವೆ.

ಕೇಂದ್ರದ ಮಾಜಿ ಸಚಿವ, ಮಹಾರಾಷ್ಟ್ರದ ಮಾಜಿ ಸಿಎಂ ಶರದ್ ಪವಾರ್ ನೇತೃತ್ವದ ಪಕ್ಷ ಎನ್‌ಸಿಪಿ(ಶರದ್ ಬಣ) ಎರಡು ಸಂಭಾವ್ಯ ರಾಜಕೀಯ ಆಯ್ಕೆಗಳ ಕುರಿತು ಚಿಂತನೆ ನಡೆಸುತ್ತಿದೆ.

ಕಾಂಗ್ರೆಸ್ ಪಕ್ಷದ ಮೂಲಕವೇ ತಮ್ಮ ರಾಜಕೀಯ ಜೀವನ ಪ್ರಾರಂಭಿಸಿದ ಶರದ್ ಪವಾರ್ ಅವರಿಗೀಗ 86 ವರ್ಷ. ಈ ಹೊತ್ತಿನಲ್ಲಿ ರಾಜಕೀಯವಾಗಿ ಅತಿದೊಡ್ಡ ನಿರ್ಧಾರ ಕೈಗೊಳ್ಳಬೇಕಾದ ಅನಿವಾರ್ಯದಲ್ಲಿದ್ದಾರೆ. ಮಾತೃಪಕ್ಷ ಕಾಂಗ್ರೆಸ್‌ನಲ್ಲಿ ವಿಲೀನವಾಗುವುದೊ ಅಥವಾ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟಕ್ಕೆ ಬೆಂಬಲ ನೀಡುವುದೊ ಎಂಬ ಗೊಂದಲದಲ್ಲಿರುವ ಎನ್‌ಸಿಪಿ(ಶರದ್ ಬಣ) ನಾಯಕರು, ಈ ಸಂಬಂಧ ಪಕ್ಷದೊಳಗೇ ಚರ್ಚೆ ಆರಂಭಿಸಿದ್ದಾರೆ.

ಮಗಳು-ಸಂಸದೆ ಸುಪ್ರಿಯಾ ಸುಳೆಗೆ ಅಖಿಲ ಭಾರತ ಕಾಂಗ್ರೆಸ್ ಸಮಿತಿ(ಎಐಸಿಸಿ) ಉಪಾಧ್ಯಕ್ಷೆ ಹುದ್ದೆ ಮತ್ತು ತಮ್ಮ ನಿಷ್ಠಾವಂತರಿಗೆ ಕಾಂಗ್ರೆಸ್ ದೊಡ್ಡ ಹುದ್ದೆ(ಕಾಂಗ್ರೆಸ್‌ನ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಸ್ಥಾನ) ನೀಡಬೇಕು. ಅಷ್ಟೇ ಅಲ್ಲದೇ, ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯಲ್ಲಿ ಶರದ್ ಪವಾರ್ ಬಣದವರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಬೇಕು. ಇದೆಲ್ಲವೂ ಆಗುವುದಾದರೆ ಎನ್‌ಸಿಪಿ(ಶರದ್ ಬಣ)ವನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಲು ಸಿದ್ಧ ಎಂಬುದು ಶರದ್ ಪವಾರ್ ಅವರ ನಿರ್ಧಾರವಾಗಿದೆ ಎಂಬುದು ಪಕ್ಷದ ಉನ್ನತ ಮೂಲಗಳಿಂದ ಬಂದ ಮಾಹಿತಿ.

ಈ ಕ್ರಮದ ಮೂಲಕ ತಾವು ಹುಟ್ಟು ಹಾಕಿದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ(ಎನ್‌ಸಿಪಿ) ಮತ್ತೊಮ್ಮೆ ವಿಭಜನೆ ಆಗುವುದನ್ನು ತಡೆಯಬೇಕು, ಆ ಮೂಲಕ ಪ್ರತಿಪಕ್ಷಗಳ 'ಇಂಡಿಯ' ಒಕ್ಕೂಟವನ್ನು ಬಲಪಡಿಸಬೇಕು ಎಂಬುದೇ ಶರದ್ ಪವಾರ್ ಅವರ ತಂತ್ರವಾಗಿದೆ ಎಂದು ಎನ್‌ಸಿಪಿ ನಾಯಕರೊಬ್ಬರು ಹೇಳಿದ್ದಾರೆ.

ಕಾಂಗ್ರೆಸ್‌ನಲ್ಲಿ ಎನ್‌ಸಿಪಿ(ಶರದ್ ಬಣ) ವಿಲೀನ ಕುರಿತು ರಾಜ್ಯದಲ್ಲಿ ಚರ್ಚೆಗಳಾಗಿಲ್ಲ. ಹೈಕಮಾಂಡ್ ನಿರ್ಧಾರ ತೆಗೆದುಕೊಂಡರೆ ಅದಕ್ಕೆ ರಾಜ್ಯ ಘಟಕವೂ ಬದ್ಧವಾಗಿರಲಿದೆ ಎಂದು ಕಾಂಗ್ರೆಸ್ ಮಹಾರಾಷ್ಟ್ರ ಘಟಕದ ನಾಯಕರು ಪ್ರತಿಕ್ರಿಯಿಸಿದ್ದಾರೆ.

ಪವಾರ್ ಅವರಿಗೆ ತಮ್ಮ ಪಕ್ಷವನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸುವ ಇಚ್ಛೆಯಿಲ್ಲ. ಆದರೆ, ಬಿಜೆಪಿ ಜತೆ ಸಚಿವ ಸ್ಥಾನಗಳಿಗೆ ಚೌಕಾಸಿ ಮಾಡುವುದಕ್ಕೆ ಅಸ್ತ್ರವಾಗಿ ಈ ವದಂತಿ ಬಳಸಿಕೊಳ್ಳುತ್ತಿರುವ ಸಾಧ್ಯತೆ ಇದೆ ಎಂದು ಮಹಾರಾಷ್ಟ್ರದ ಹಿರಿಯ ಕಾಂಗ್ರೆಸ್ ನಾಯಕರೊಬ್ಬರು ಪ್ರತಿಕ್ರಿಯಿಸಿದ್ದಾರೆ.

ಎನ್‌ಸಿಪಿ ಶರದ್ ಬಣದ ದ್ವಂದ್ವ

ಆದರೆ, ಎನ್‌ಸಿಪಿ(ಶರದ್ ಬಣ)ದ ಮತ್ತೊಂದು ಗುಂಪಿನ ಮಾತೇ ಬೇರೆ ಇದೆ. ಎನ್‌ಸಿಪಿ(ಶರದ್ ಬಣ)ದ ಹೆಚ್ಚಿನ ಚುನಾಯಿತ ಜನಪ್ರತಿನಿಧಿಗಳು(ಸಂಸದ-ಶಾಸಕರು) ಮಹಾರಾಷ್ಟ್ರದಲ್ಲಿನ ಆಡಳಿತರೂಢ 'ಮಹಾಯುತಿ' ಮೈತ್ರಿಕೂಟದ ಭಾಗವಾಗಲು ಮತ್ತು ಕೇಂದ್ರದಲ್ಲಿ ಎನ್‌ಡಿಎ ಬೆಂಬಲಿಸಲು ಬಯಸಿದ್ದಾರೆ ಎಂದು ಎನ್‌ಸಿಪಿಯ(ಶರದ್ ಬಣ) ಮತ್ತೊಬ್ಬ ಹಿರಿಯ ನಾಯಕರು ಹೇಳಿದ್ದಾರೆ. ಎನ್‌ಸಿಪಿ(ಶರದ್ ಬಣ)ದಲ್ಲಿ ಸದ್ಯ 8 ಲೋಕಸಭಾ ಸದಸ್ಯರು, ಮಹಾರಾಷ್ಟ್ರ ವಿಧಾನಸಭೆಯಲ್ಲಿ 10 ಶಾಸಕರಿದ್ದಾರೆ. ಇವರಲ್ಲಿ ಐವರು ಸಂಸದರು ಅದಾಗಲೇ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರ ನೇತೃತ್ವದ ಶಿವಸೇನೆ ಸೇರಲು ಉತ್ಸುಕರಾಗಿದ್ದಾರೆ. ಉಳಿದ ಮೂವರು ಸಂಸದರು ಬಿಜೆಪಿ ನೇತೃತ್ವದ ಎನ್‌ಡಿಎ ಜತೆ ಸೇರಲು ಒಲವು ತೋರಿದ್ದಾರೆ. ಉಳಿದಂತೆ 10 ಶಾಸಕರಲ್ಲಿ ಅರ್ಧದಷ್ಟು ಮಂದಿ ಎನ್‌ಡಿಎ ಸೇರಲು ಇಚ್ಛಿಸಿದ್ದರೆ, ಇನ್ನರ್ಧ ಜನರು ಕಾಂಗ್ರೆಸ್‌ನಲ್ಲಿ ವಿಲೀನಗೊಳ್ಳಲು ಬಯಸಿದ್ದಾರೆ ಎಂಬ ಮಾಹಿತಿ ಇದೆ.

ಅದಲ್ಲದೇ, ಶರದ್ ಪವಾರ್ ಪುತ್ರಿ, ಸಂಸದೆ ಸುಪ್ರಿಯಾ ಸುಳೆ ಅವರ ಪುತ್ರಿಯು ಆರ್‌ಎಸ್‌ಎಸ್ ಹಿನ್ನೆಲೆಯ ನಾಗಪುರ ಮೂಲದ ಕುಟುಂಬದ ಯುವಕನನ್ನು ವಿವಾಹವಾಗಿದ್ದಾರೆ. ಆ ಕುಟುಂಬ ಶರದ್ ಪವಾರ್ ಅವರ ಎನ್‌ಸಿಪಿ ಬಣವನ್ನು 'ಎನ್‌ಡಿಎ'ಗೆ ಸೇರಿಸಿಕೊಳ್ಳಲು ಉತ್ಸುಕವಾಗಿದೆ. ನಾಗಪುರ ಮೂಲದ ಹಿರಿಯ ಬಿಜೆಪಿ ನಾಯಕರೊಬ್ಬರು ಎನ್‌ಸಿಪಿ(ಶರದ್ ಬಣ)ದ ಜತೆ ಮಾತುಕತೆ ನಡೆಸಿದ್ದಾರೆ ಎನ್ನಲಾಗಿದೆ. ಎನ್‌ಸಿಪಿ ನಾಯಕರು ಸುಪ್ರಿಯಾ ಅವರಿಗೆ ಕೇಂದ್ರ ಸಚಿವೆ ಸ್ಥಾನ ಮತ್ತು ಶರದ್ ಪವಾರ್ ನಿಷ್ಠ ಶಾಸಕರಿಬ್ಬರಿಗೆ ಮಹಾರಾಷ್ಟ್ರ ಸಚಿವ ಸಂಪುಟದಲ್ಲಿ 2 ಸ್ಥಾನ ಕೇಳಿದ್ದಾರೆ ಎಂದು ಬಿಜೆಪಿ ನಾಯಕರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ರಾಮನಗರ ಎಸ್ಐಆರ್ ಪ್ರಕ್ರಿಯೆ ಲೋಪ: ನಿಖಿಲ್

ಬೆಂಗಳೂರು: ರಾಮನಗರ ವಿಧಾನಸಭಾ ಕ್ಷೇತ್ರದಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ (ಎಸ್ ಐಆರ್) ಪ್ರಕ್ರಿಯೆಯಲ್ಲಿ ಭಾರೀ ಲೋಪ ನಡೆದಿದೆ ಎಂದು ಆರೋಪಿಸಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಚುನಾವಣಾ ಆಯೋಗದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸರಣಿ ಪೋಸ್ಟ್ ಮಾಡಿ, ರಾಮನಗರದಲ್ಲಿ ಎಸ್ಐಆರ್ ಪ್ರಕ್ರಿಯೆಗೆ ಕಪ್ಪುಚುಕ್ಕೆ! ಮನೆ-ಮನೆಗೆ ಹೋಗಿ ಗಣತಿ ನಮೂನೆ ವಿತರಿಸಬೇಕಾದ ಅಧಿಕಾರಿಗಳು, ರಾಮನಗರ ಟೌನ್ ನಗರಸಭೆಯ ವಾರ್ಡ್ ನಂ-23, ಟಿಪ್ಪುನಗರದ ಕಲ್ಯಾಣ ಮಂಟಪದಲ್ಲಿ 'ಜಾತ್ರೆ' ಮಾಡುತ್ತಿದ್ದಾರೆ. ಇದು ನಿಯಮಗಳನ್ನು ಗಾಳಿಗೆ ತೂರಿ, ಪ್ರಜಾಪ್ರಭುತ್ವಕ್ಕೆ ಮಾಡಿದ ಅಣಕ ಎಂದಿದ್ದಾರೆ. ಅಲ್ಲದೆ, ರಾಮನಗರ ಕ್ಷೇತ್ರದ ಪ್ರಸ್ತುತ ಪ್ರಕ್ರಿಯೆಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕು. ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಗಳು ಖುದ್ದು ನೇರ ಮೇಲ್ವಿಚಾರಣೆ ವಹಿಸಿಕೊಳ್ಳಬೇಕು. ನಿಯಮ ಉಲ್ಲಂಘಿಸಿ ತಮ್ಮಿಷ್ಟದಂತೆ ವರ್ತಿಸುತ್ತಿರುವ ಭ್ರಷ್ಟ ಅಧಿಕಾರಿಗಳನ್ನು ತಕ್ಷಣ ಅಮಾನತುಗೊಳಿಸಿ, ಕಠಿಣ ಕಾನೂನು ಕೈಗೊಳ್ಳಬೇಕು.ಪಾರದರ್ಶಕತೆಗೆ ಹೆಸರಾದ ಚುನಾವಣಾ ಆಯೋಗ, ರಾಮನಗರದಲ್ಲಿ ಕಾನೂನು ಬಾಹಿರವಾಗಿ ನಡೆಯುತ್ತಿರುವ ಈ ಅಕ್ರಮಗಳ ವಿರುದ್ಧ ಕಣ್ಣುಮುಚ್ಚಿ ಕುಳಿತುಕೊಳ್ಳಬಾರದು. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿ, ಪ್ರಜಾಪ್ರಭುತ್ವವನ್ನು ಉಳಿಸಿ ಎಂದು ಒತ್ತಾಯಿಸಿದ್ದಾರೆ.

ಉ.ಪ್ರ: ಬುಲ್ಡೋಜರ್ ಅಸ್ತ್ರ ಪ್ರಯೋಗ?

ಅಯೋಧ್ಯೆ: ರಾಮ ಮಂದಿರದಲ್ಲಿ ದೇಣಿಗೆ ಲೂಟಿ ಮಾಡಿದವರ ಮೇಲೆ ಬುಲ್ಡೋಜರ್ ಅಸ್ತ್ರ ಪ್ರಯೋಗಕ್ಕೆ ಉತ್ತರ ಪ್ರದೇಶ ಸರಕಾರ ಮುಂದಾಗಿದೆ. ಮಂದಿರದ ಹಣ ಲೂಟಿ ಮಾಡಿ ಶಹದತ್‌ಗಂಜ್‌ನ ಲವ್‌ಕುಶ್ ಮಿಶ್ರಾ ಹಾಗೂ ಕೌಶಲ್‌ಪುರಿಯಲ್ಲಿರುವ ಅನುಕಲ್ಪ್ ಮಿಶ್ರಾ ಮನೆ ಧ್ವಂಸಕ್ಕೆ ಅಯೋಧ್ಯಾ ಡೆವಲಪ್‌ಮೆಂಟ್ ಅಥಾರಿಟಿ ನೋಟಿಸ್ ಕೊಟ್ಟಿದೆ. ಲವ್‌ಕುಶ್ ಮಿಶ್ರಾ 1000 ಚದರ ಅಡಿ ವಿಸ್ತೀರ್ಣದಲ್ಲಿ ಬೃಹತ್ ಮನೆ ನಿರ್ಮಿಸ್ತಿದ್ದಾನೆ. ಇದಕ್ಕಾಗಿ 25 ಲಕ್ಷ ರು. ಹಣ ಕೊಟ್ಟು ಭೂಮಿ ಖರೀದಿಸಿದ್ದಾನೆ. 80-90 ಲಕ್ಷ ರು. ವೆಚ್ಚದಲ್ಲಿ ಮನೆ ನಿರ್ಮಾಣ ಮಾಡಿದ್ದಾನೆ. ಮನೆಯು ಮುಂದಿನ 4 ತಿಂಗಳ ಒಳಗೆ ಪೂರ್ಣಗೊಳ್ಳಬೇಕಿತ್ತು. ಬೇನಾಮಿ ಹೆಸರಿನಲ್ಲಿ ಆಸ್ತಿಪಾಸ್ತಿ ಮಾಡಿರುವ ಶಂಕೆಯಲ್ಲಿ ಟ್ರಸ್ಟ್‌ನ ಎಲ್ಲಾ ಸದಸ್ಯರು, ಬಂಧಿತ ಆರೋಪಿಗಳ ಆಸ್ತಿ, ನೋಂದಣಿ ದಾಖಲೆಗಳನ್ನು ಪರಿಶೀಲಿಸಲು ಎಸ್ಐಟಿ ಮುಂದಾಗಿದೆ. ಆರೋಪಿಗಳ ಆಸ್ತಿ ಅಯೋಧ್ಯಾ, ಲಖನೌ, ನೋಯ್ಡಾ ಹಾಗೂ ಇತರೆ ರಾಜ್ಯಗಳಲ್ಲಿ ಇದೆಯೇ ಎಂದು ಶೋಧಿಸುತ್ತಿದ್ದಾರೆ.ಈ ಮಧ್ಯೆ, ಅಯೋಧ್ಯೆಯ ಶ್ರೀರಾಮ ಮಂದಿರದ ದೇಣಿಗೆ ಹಗರಣದಲ್ಲಿ ಚಂಪತ್‌ರಾಯ್, ಅನಿಲ್ ಮಿಶ್ರಾ ಹಾಗೂ ಗೋಪಾಲ್ ರಾವ್ ಮೇಲೆ ಎಫ್ಐಆರ್ ದಾಖಲಿಸುವಂತೆ ಫೈಜಾಬಾದ್ ಬಾರ್ ಅಸೋಸಿಯೇಷನ್ ಪೊಲೀಸರಿಗೆ ದೂರು ಕೊಟ್ಟಿದೆ.

ನ್ಯಾಯಯುತ ಸಮಗ್ರ ತನಿಖೆ ಆಗಲಿ: ಕೇಜ್ರಿವಾಲ್

ದೆಹಲಿ: ಅಯೋಧ್ಯೆ ಶ್ರೀರಾಮ ಮಂದಿರದಲ್ಲಿ ನಡೆದ ಕಾಣಿಕೆ ಹಣ ಕಳ್ಳತನ ಮತ್ತು ಅಕ್ರಮಗಳ ಕುರಿತು ಆಮ್ ಆದ್ಮಿ ಪಕ್ಷದ (ಎಎಪಿ) ರಾಷ್ಟ್ರೀಯ ಸಂಚಾಲಕ, ಮಾಜಿ ಸಿಎಂ ಅರವಿಂದ್ ಕೇಜ್ರಿವಾಲ್ ಅವರು ಕೇಂದ್ರ ಸರಕಾರ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಈ ಕುರಿತು ಗುರುವಾರ ಮಾಧ್ಯಮಗೋಷ್ಠಿ ನಡೆಸಿದ ಅವರು, ಕೆಳ ಹಂತದ ನೌಕರರನ್ನು ಮಾತ್ರ ಬಂಧಿಸುವ ಮೂಲಕ ಸಾರ್ವಜನಿಕರನ್ನು ದಾರಿ ತಪ್ಪಿಸಲಾಗುತ್ತಿದೆ. ಆದರೆ ಇದರಲ್ಲಿ ಭಾಗಿಯಾಗಿರುವ ನಿಜವಾದ ಮತ್ತು ಪ್ರಭಾವಿ ವ್ಯಕ್ತಿಗಳನ್ನು ರಕ್ಷಿಸಲು ಪ್ರಯತ್ನಗಳು ನಡೆಯುತ್ತಿವೆ ಎಂದು ಆರೋಪಿಸಿದ ಅವರು, ಕೋಟ್ಯಂತರ ರಾಮ ಭಕ್ತರ ನಂಬಿಕೆಗೆ ಧಕ್ಕೆಯಾದ ಪ್ರಕರಣವನ್ನು ನ್ಯಾಯಯುತ ಮತ್ತು ಸಮಗ್ರ ತನಿಖೆ ನಡೆಸಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಶ್ರೀರಾಮ ಮಂದಿರ ಟ್ರಸ್ಟ್ ಅನ್ನು ಪ್ರಧಾನಿಯೇ ರಚಿಸಿದ್ದಾರೆ. ಪ್ರಮುಖ ಸದಸ್ಯರನ್ನು ಅವರ ಮೇಲ್ವಿಚಾರಣೆಯಲ್ಲಿ ಆಯ್ಕೆ ಮಾಡಲಾಗಿದೆ. ಇಷ್ಟು ದೊಡ್ಡ ಪ್ರಮಾಣದ ಅಕ್ರಮಗಳು ನಡೆದರೂ ಸರಕಾರ ಮತ್ತು ಸಂಬಂಧಿತ ಸಂಸ್ಥೆಗಳಿಗೆ ತಿಳಿದಿರಲಿಲ್ಲವೇ? ಅವರಿಗೆ ತಿಳಿದಿದ್ದರೆ, ಏಕೆ ಕ್ರಮ ಕೈಗೊಳ್ಳಲಿಲ್ಲ? ಇದು ಆಡಳಿತಾತ್ಮಕ ವೈಫಲ್ಯ ಎಂದು ಆರೋಪಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ರಾಹುಲ್ ಗಾಂಧಿ } ಲೋಕಸಭಾ ವಿಪಕ್ಷ ನಾಯಕ
ಮಣಿಪುರವು ಹಲವು ವರ್ಷಗಳಿಂದ ಧರ್ಮ, ಜಾತಿ ಹೆಸರಿನಲ್ಲಿ ಉರಿಯುತ್ತಿದೆ. ಈಗ ಆ ದ್ವೇಷದ ಬೆಂಕಿಯಲ್ಲಿ 20ಕ್ಕೂ ಹೆಚ್ಚು ಮನೆಗಳು ಬೂದಿಯಾಗಿವೆ. ಕೇಂದ್ರ ಸರಕಾರ ಮತ್ತು ರಾಷ್ಟ್ರಪತಿ ಆಳ್ವಿಕೆ ಇದ್ದರೂ ಸಮುದಾಯಗಳ ನಡುವಿನ ಸಂಘರ್ಷ ಇನ್ನಷ್ಟು ಹೆಚ್ಚುತ್ತಿದೆ. ಈ ಘರ್ಷಣೆಯಲ್ಲಿ ಸಾವಿರಾರು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ಬರಪೀಡಿತ ಪ್ರದೇಶಗಳನ್ನು ಘೋಷಣೆ ಮಾಡಿ, ತುರ್ತು ಪರಿಸ್ಥಿತಿಯ ಯೋಜನೆ ಜಾರಿ ಮಾಡಿ | ಸಿಎಂ ಡಿಕೆಶಿಗೆ ಅಶೋಕ್ ಪತ್ರ

ಬೆಳೆಹಾನಿ ಸಮೀಕ್ಷೆ ಆರಂಭಿಸಿ: ರಾಜ್ಯ ಸರಕಾರಕ್ಕೆ ಒತ್ತಾಯ

ಬೆಂಗಳೂರು: ರಾಜ್ಯದಲ್ಲಿ ತೀವ್ರಗೊಳ್ಳುತ್ತಿರುವ ಬರ ಪರಿಸ್ಥಿತಿಯನ್ನು ನಿರ್ವಹಣೆ ಮಾಡಲು ಯುದ್ಧೋಪಾದಿಯಲ್ಲಿ ಮುನ್ನೆಚ್ಚರಿಕೆ ಮತ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿ ಪ್ರತಿಪಕ್ಷ ನಾಯಕ ಆರ್.ಅಶೋಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

ಮುಂಗಾರು ಮಳೆಯ ತೀವ್ರ ಕೊರತೆಯಿಂದಾಗಿ ರಾಜ್ಯದ ಹಲವು ಭಾಗಗಳಲ್ಲಿ ರೈತರು, ಕೃಷಿ ಕಾರ್ಮಿಕರು ಹಾಗೂ ಗ್ರಾಮೀಣ ಜನತೆ ಸಂಕಷ್ಟ ಎದುರಿಸುತಿದ್ದಾರೆ. ಬಿತ್ತನೆ ಕಾರ್ಯಗಳು ಹಿನ್ನಡೆ ಕಂಡಿದ್ದು, ಬೆಳೆಗಳು ಒಣಗುವ ಭೀತಿ ಎದುರಾಗಿದೆ.

ಜಲಾಶಯಗಳ ನೀರಿನ ಮಟ್ಟವೂ ನಿರಂತರವಾಗಿ ಕುಸಿಯುತ್ತಿದ್ದು, ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯೂ ಗಂಭೀರ ಸ್ವರೂಪ ಪಡೆಯುವ ಆತಂಕ ಎದುರಾಗಿದೆ. ಸದ್ಯದ ಮಾಹಿತಿ ಪ್ರಕಾರ 150 ಕ್ಕೂ ಅಧಿಕ ತಾಲೂಕುಗಳಲ್ಲಿ ಬರ ಪರಿಸ್ಥಿತಿ ಉಂಟಾಗಿದ್ದು, ಹಲವೆಡೆ ಸಾಮಾನ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮಳೆ ಸುರಿದಿದೆ. ಈಗಾಗಲೇ ಬಿತ್ತನೆಯಾದ ಬೆಳೆಗಳು ತೇವಾಂಶದ ಕೊರತೆಯಿಂದ ಒಣಗುವ ಸ್ಥಿತಿಗೆ ತಲುಪಿದೆ. ಇದು ಕೃಷಿ ಉತ್ಪಾದನೆಯ ಮೇಲೆ ಹಾಗೂ ಉದ್ಯೋಗದ ಮೇಲೆ ನೇರ ಪರಿಣಾಮ ಬೀರುತ್ತಿದೆ. ಕೃಷಿ ಕಾರ್ಮಿಕರು ನಗರಗಳತ್ತ ಹಾಗೂ ನೆರೆ ರಾಜ್ಯಗಳತ್ತ ವಲಸೆ ಹೋಗುತ್ತಿದ್ದಾರೆ ಎಂದು ಅವರು ಪತ್ರದಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಬೆಳಗಾವಿ, ಬಾಗಲಕೋಟೆ ಸೇರಿದಂತೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಜಲಾಶಯಗಳ ನೀರಿನ ಮಟ್ಟ ಅಪಾಯಕಾರಿಯಾಗಿ ಕುಸಿದಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆ. ಇದು ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಮೇಲೂ ಪರಿಣಾಮ ಬೀರಿದೆ. ಮುಂದೆ ಕುಡಿಯುವ ನೀರಿನ ಸಮಸ್ಯೆ ಯಾವ ಮಟ್ಟಿಗೆ ತೀವ್ರವಾಗಬಹುದು ಎಂಬುದನ್ನು ಸರಕಾರ ಗಂಭೀರವಾಗಿ ಪರಿಗಣಿಸಬೇಕಿದೆ. ಬಹುತೇಕ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಜಿಲ್ಲೆಗಳಲ್ಲಿ ಬರ ಪರಿಸ್ಥಿತಿ ಕುರಿತು ಸಮಗ್ರ ಪರಿಶೀಲನಾ ಸಭೆ ನಡೆಸಿಲ್ಲ, ತಾಲೂಕುಗಳಿಗೆ ಭೇಟಿ ನೀಡಿಲ್ಲ ಎಂಬುದು ದುರದೃಷ್ಟಕರ. ಕೃಷಿ ಇಲಾಖೆಗೆ ಪೂರ್ಣಾವಧಿ ಸಚಿವರೇ ಇಲ್ಲದೆ ಕಾರ್ಯ ನಿರ್ವಹಿಸುತ್ತಿದೆ. ಲಕ್ಷಾಂತರ ರೈತರ ಬದುಕಿನ ಪ್ರಶ್ನೆ ಎದುರಾಗಿರುವಾಗ, ಕೃಷಿ ಇಲಾಖೆಗೆ ನಾಯಕತ್ವ ಇಲ್ಲವಾಗಿರುವುದು ಆಡಳಿತದ ಆದ್ಯತೆಗಳ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಎಂದು ಅವರು ದೂರಿದ್ದಾರೆ.

ಕ್ರಮ ವಹಿಸಿ

- ರಾಜ್ಯದ ವಾಸ್ತವ ಪರಿಸ್ಥಿತಿ ಜಿಲ್ಲಾವಾರು ಮತ್ತು ತಾಲೂಕುವಾರು ಪರಿಶೀಲಿಸಿ, ತಕ್ಷಣ ಬರಪೀಡಿತ ಪ್ರದೇಶಗಳೆಂದು ಘೋಷಿಸಬೇಕು.
- ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮತ್ತು ಉಸ್ತುವಾರಿ ಕಾರ್ಯದರ್ಶಿಗಳು ತಕ್ಷಣ ಜಿಲ್ಲಾವಾರು ಬರ ಪರಿಶೀಲನಾ ಸಭೆ ನಡೆಸುವಂತೆ ಸೂಚಿಸಿ, ವಾರವಾರದ ಪ್ರಗತಿ ಪರಿಶೀಲನೆ ನಡೆಸ ಬೇಕು.
- ರಾಜ್ಯವ್ಯಾಪಿ ತುರ್ತು ಪರಿಸ್ಥಿತಿಯ ಯೋಜನೆ ಪ್ರಕಟಿಸಿ, ಪರ್ಯಾಯ ಬೆಳೆ, ಬಿತ್ತನೆ ಸಲಹೆ, ಬೀಜ, ಮೇವು, ಜಾನುವಾರುಗಳ ಸಂರಕ್ಷಣೆ, ಕುಡಿಯುವ ನೀರು ಹಾಗೂ ತುರ್ತು ಉದ್ಯೋಗ ಸೃಷ್ಟಿಗೆ ಸಮಗ್ರ ಕಾರ್ಯಯೋಜನೆ ರೂಪಿಸಬೇಕು.
- ವಿಬಿ ಜಿರಾಮ್ಜಿ ಯೋಜನೆ ಜಾರಿಗೊಳಿಸಿ, ಗ್ರಾಮೀಣ ಪ್ರದೇಶಗಳಲ್ಲಿ ತಕ್ಷಣ ಕಾಮಗಾರಿ ಆರಂಭಿಸಬೇಕು. ಕೃಷಿ ಕಾರ್ಮಿಕರು ಬದುಕಿಗಾಗಿ ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣವಾಗದಂತೆ ನೋಡಿಕೊಳ್ಳುವುದು
- ಕುಡಿಯುವ ನೀರಿನ ಬಿಕ್ಕಟ್ಟು ಎದುರಾ ಗುವ ಗ್ರಾಮಗಳನ್ನು ಈಗಲೇ ಗುರು ತಿಸಿ, ಟ್ಯಾಂಕರ್, ಬೋರ್‌ವೆಲ್ ಪುನಶ್ಚೇತನ, ಪರ್ಯಾಯ ನೀರು ಪೂರೈಕೆ ಮತ್ತು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ತುರ್ತು ಅನುದಾನ ಬಿಡುಗಡೆ ಮಾಡಬೇಕು.
- ಬೆಳೆಹಾನಿಯ ವೈಜ್ಞಾನಿಕ ಸಮೀಕ್ಷೆಯನ್ನು ತಕ್ಷಣ ಆರಂಭಿಸಿ, ರೈತರಿಗೆ ಮಧ್ಯಂತರ ಪರಿಹಾರ, ಬೆಳೆ ವಿಮೆ ಹಾಗೂ ಅಗತ್ಯ ಕೃಷಿ ಸಾಧನಗಳ ನೆರವನ್ನು ವಿಳಂಬವಿಲ್ಲದೆ ಒದಗಿಸಬೇಕು.
- ಕೃಷಿ ಇಲಾಖೆಗೆ ತಕ್ಷಣ ಪೂರ್ಣಾವಧಿ ಕೃಷಿ ಸಚಿವರನ್ನು ನೇಮಿಸಿ, ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ರಾಜ್ಯಮಟ್ಟದ ವಿಶೇಷ ಬರ ನಿರ್ವಹಣಾ ಕಾರ್ಯಪಡೆ ರಚಿಸಬೇಕು. ಹಾಲಿ ಸಚಿವರೊಬ್ಬರಿಗೆ ಹೆಚ್ಚುವರಿಯಾಗಿ ಕೃಷಿ ಇಲಾಖೆ ಉಸ್ತುವಾರಿ ಕೊಡಬೇಕು.
- ಕೇಂದ್ರ ಸರಕಾರದ ಮಾರ್ಗಸೂಚಿಗಳ ಅನ್ವಯ ಅಗತ್ಯ ದಾಖಲೆಗಳನ್ನು ಸಕಾಲದಲ್ಲಿ ಸಿದ್ಧಪಡಿಸಿ, ರಾಜ್ಯಕ್ಕೆ ದೊರೆಯಬೇಕಾದ ಎಲ್ಲ ನೆರವು ಮತ್ತು ಪರಿಹಾರವನ್ನು ಪಡೆಯಲು ತುರ್ತು ಕ್ರಮ ಕೈಗೊಳ್ಳಬೇಕು.

ಸಂಕಷ್ಟ ಉಲ್ಬಣಿಸುವ ಮೊದಲೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಉತ್ತಮ ಆಡಳಿತದ ಲಕ್ಷಣ. ಬರ ಪೀಡಿತ ಪ್ರದೇಶಗಳ ಘೋಷಣೆ ಮಾಡುವಲ್ಲಿ ವಿಳಂಬ ಮಾಡಿದಷ್ಟೂ ರೈತರಿಗೆ ಪರಿಹಾರ, ಬೆಳೆಹಾನಿ ಸಮೀಕ್ಷೆ, ಜಾನುವಾರುಗಳಿಗೆ ಮೇವು, ಕುಡಿಯುವ ನೀರು, ಕೇಂದ್ರ ಸರಕಾರದಿಂದ ಪಡೆಯಬೇಕಾದ ನೆರವು ಮೊದಲಾದ ಪ್ರಕ್ರಿಯೆಗಳು ತಡವಾಗುತ್ತವೆ. ಈ ವಿಳಂಬದ ಬೆಲೆಯನ್ನು ಕಟ್ಟುವುದು ಸರಕಾರವಲ್ಲ, ರೈತರು ಮತ್ತು ಗ್ರಾಮೀಣ ಬಡ ಜನತೆ ಎಂದು ಹೇಳಿದ್ದಾರೆ.

ಬರ ಎಂದರೆ ಯಾವುದೇ ಪಕ್ಷದ ಸಮಸ್ಯೆಯಲ್ಲ. ಅದು ರಾಜ್ಯದ ಸಮಸ್ಯೆ. ರೈತರ ಬದುಕು ಮತ್ತು ಗ್ರಾಮೀಣ ಆರ್ಥಿಕತೆಯ ಪ್ರಶ್ನೆಯಲ್ಲಿ ರಾಜಕೀಯಕ್ಕಿಂತ ಜನಹಿತವೇ ಮುಖ್ಯವಾಗಬೇಕು. ಈಗಲಾದರೂ ಪರಿಸ್ಥಿತಿ ಗಂಭೀರತೆ ಅರ್ಥ ಮಾಡಿಕೊಂಡು ತ್ವರಿತ, ಪರಿಣಾಮಕಾರಿ ಹಾಗೂ ಸಮನ್ವಯದ ಕ್ರಮ ಕೈಗೊಂಡರೆ ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಮಾನವೀಯ ಹಾಗೂ ಆರ್ಥಿಕ ಸಂಕಷ್ಟ ತಡೆಯಲು ಸಾಧ್ಯ ಎಂದು ಆರ್. ಅಶೋಕ್ ಅವರು ಸಲಹೆ ನೀಡಿದ್ದಾರೆ.

ಯಾದಗಿರಿ, ಚಿಕ್ಕಮಗಳೂರು, ಮೈಸೂರು ಜಿಲ್ಲಾ ಕೋರ್ಟ್‌ನಲ್ಲೂ ತೀವ್ರ ತಪಾಸಣೆ | ಪ್ರಕರಣ ದಾಖಲು, ತನಿಖೆ

ಇಸ್ರೋ ಕಚೇರಿಗೆ ಹುಸಿ ಬಾಂಬ್ ಸಂದೇಶ

ಬೆಂಗಳೂರು: ಇಲ್ಲಿನ ಇಸ್ರೋ ಕಚೇರಿ ಸೇರಿ ರಾಜ್ಯದ ವಿವಿಧ ಜಿಲ್ಲಾ ಕೋರ್ಟ್‌ಗಳಿಗೆ ಹುಸಿ ಬಾಂಬ್ ಸಂದೇಶ ಹಾಗೂ ಕರೆಗಳು ಬಂದಿರುವ ಪ್ರಕರಣಗಳು ಶುಕ್ರವಾರ ವರದಿ ಆಗಿವೆ. ಸಂಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಇಸ್ರೋ ಬಾಹ್ಯಾಕಾಶ ಕೇಂದ್ರಕ್ಕೆ ಅಪರಿಚಿತ ವ್ಯಕ್ತಿಯು ಬಾಂಬ್ ಸಂದೇಶ ಕಳುಹಿಸಿದ್ದ ಹಿನ್ನೆಲೆಯಲ್ಲಿ ಕೆಲ ಗಂಟೆಗಳ ಕಾಲ ಆತಂಕ ಮನೆ ಮಾಡಿತ್ತು. ವಿಷಯ ತಿಳಿಯುತ್ತಿದ್ದಂತೆ ಬಾಂಬ್ ನಿಷ್ಕ್ರಿಯ ತಂಡ ಹಾಗೂ ಶ್ವಾನದಳದೊಂದಿಗೆ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿದರು. ಇಸ್ರೋ ಕಚೇರಿ ಪೂರ್ತಿ ಶೋಧ ನಡೆಸಿದಾಗ ಇದೊಂದು ಹುಸಿ ಬಾಂಬ್ ಸಂದೇಶ ಖಾತ್ರಿಯಾಗುತ್ತಿದ್ದಂತೆ ಕಚೇರಿ ಸಿಬ್ಬಂದಿಗಳು ನಿಟ್ಟುಸಿರು ಬಿಟ್ಟರು. ಅಪರಿಚಿತನಿಂದ ಕಚೇರಿಯ ಮೇಲ್‌ಗೆ ಗುರುವಾರ ಮುಂಜಾನೆ 4 ಗಂಟೆ ಸುಮಾರಿಗೆ ಸಂದೇಶ ಬಂದಿದೆ. ಇಸ್ರೋ ಕಚೇರಿಯಲ್ಲಿ ಬಾಂಬ್ ಇಟ್ಟಿದ್ದು ಸ್ಫೋಟಗೊಳ್ಳಲಿದೆ ಎಂದು ಸಂದೇಶ ರವಾನಿಸಿದ್ದಾನೆ. ಈ ಮೇಲ್ ಅನ್ನು ಸಿಬ್ಬಂದಿ ಮಧ್ಯಾಹ್ನ 1 ಗಂಟೆ ಸುಮಾರಿಗೆ ನೋಡಿ ಒಂದು ಕ್ಷಣ ದಂಗಾಗಿ ದ್ದಾರೆ. ಕೂಡಲೇ ಮಾಹಿತಿ ನೀಡಿದ ಮೇರೆಗೆ ತಪಾಸಣಾ ತಂಡ ದೊಂದಿಗೆ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿದಾಗ ಹುಸಿ ಬಾಂಬ್ ಸಂದೇಶ ಎಂಬುದು ಗೊತ್ತಾಗಿದೆ. ಪ್ರಕರಣ ದಾಖಲಿಸಿ ಕೊಂಡು ದುಷ್ಕರ್ಮಿ ಬಂಧನಕ್ಕಾಗಿ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಚಿಕ್ಕಮಗಳೂರು ಕೋರ್ಟ್‌ಗೆ ಬೆದರಿಕೆ: ಚಿಕ್ಕಮಗಳೂರು ನಗರದ ಹೃದಯ ಭಾಗದಲ್ಲಿರೋ ಜಿಲ್ಲಾ ನ್ಯಾಯಾಲಯಕ್ಕೆ ದುಷ್ಕರ್ಮಿಗಳು ಬಾಂಬ್ ಬೆದರಿಕೆ ಹಾಕಿದ್ದಾರೆ. ಬೆದರಿಕೆಯ ನಡುವೆಯೇ ಕೋರ್ಟ್ ಕಲಾಪ ನಡೆದಿದೆ. ಮಧ್ಯಾಹ್ನ 1:30 ರಿಂದ 3:30ರ ಒಳಗೆ ಬಾಂಬ್ ಬ್ಲಾಸ್ಟ್ ಮಾಡುತ್ತೇವೆ ಎಂದು ಇ-ಮೇಲ್ ಮೂಲಕ ಬೆದರಿಕೆ ಹಾಕಲಾಗಿದೆ. ಆದರೆ ಜಡ್ಜ್ ಕಲಾಪ ನಿಲ್ಲಿಸದೇ ಪೊಲೀಸರಿಗೆ ತಪಾಸಣೆ ನಡೆಸುವಂತೆ ಸೂಚಿಸಿದರು. ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳದಿಂದ ತಪಾಸಣೆ ನಡೆಯುತ್ತಿದೆ. ನ್ಯಾಯಾಲಯಕ್ಕೆ ಎಸ್ಪಿ ಜಿತೇಂದ್ರ ದಯಾಮ ಭೇಟಿ ನೀಡಿ, ಪೊಲೀಸ್ ಸಿಬ್ಬಂದಿ ಜತೆ ಈ ಬಗ್ಗೆ ಮಾಹಿತಿ ಕಲೆಹಾಕಿದ್ದಾರೆ. ಈ ಬಗ್ಗೆ ಹೆಚ್ಚಿನ ತನಿಖೆ ನಡೆಯುತ್ತಿದೆ.

ಹುಸಿ ಬಾಂಬ್ ಸ್ಫೋಟದ ಇ-ಮೇಲ್ ಬಂದ ಹಿನ್ನೆಲೆಯಲ್ಲಿ ಯಾದಗಿರಿ ಕೋರ್ಟ್‌ನಲ್ಲಿ ತೀವ್ರ ತಪಾಸಣೆ ನಡೆಸಲಾಯಿತು.

ಯಾದಗಿರಿ: ತೀವ್ರ ತಪಾಸಣೆ

ಯಾದಗಿರಿ ನಗರದ ಮುದ್ನಾಳ ಕ್ರಾಸ್‌ನಲ್ಲಿರುವ ನೂತನ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣಕ್ಕೆ ಗುರುವಾರ ಅನಾಮಧೇಯ ವ್ಯಕ್ತಿಯಿಂದ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಬಂದ ಹಿನ್ನೆಲೆಯಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಯಿತು. ಬೆದರಿಕೆ ಸಂದೇಶದಿಂದ ನ್ಯಾಯಾಲಯದ ಕಲಾಪಕ್ಕೂ ಕೆಲಕಾಲ ವ್ಯತ್ಯಯ ಉಂಟಾಯಿತು. ಮಧ್ಯಾಹ್ನ 12 ಗಂಟೆ ಸುಮಾರಿಗೆ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ ಬಂದ ಇ-ಮೇಲ್‌ನಲ್ಲಿ ಮಧ್ಯಾಹ್ನ 1.30ರಿಂದ 3 ಗಂಟೆಯೊಳಗೆ ನ್ಯಾಯಾಲಯದ ಕಟ್ಟಡದಲ್ಲಿ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಹಾಕಲಾಗಿತ್ತು. ಮಾಹಿತಿ ತಿಳಿಯುತ್ತಿದ್ದಂತೆ ನ್ಯಾಯಾಂಗ ಅಧಿಕಾರಿಗಳು, ಸಿಬ್ಬಂದಿ, ವಕೀಲರು ಹಾಗೂ ನ್ಯಾಯಾಲಯಕ್ಕೆ ಬಂದಿದ್ದ ಸಾರ್ವಜನಿಕರನ್ನು ಸುರಕ್ಷತಾ ದೃಷ್ಟಿಯಿಂದ ಹೊರಗೆ ಕಳುಹಿಸಲಾಯಿತು.

ನ್ಯಾಯಾಲಯಕ್ಕೂ ಬೆದರಿಕೆ

ಅನಾಮಿಕ ವ್ಯಕ್ತಿಯೊಬ್ಬ ಈ ಮೇಲ್ ಮೂಲಕ ಮೈಸೂರು ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ ಹಾಕಿದ ಘಟನೆ ನಡೆದಿದೆ. ಈ ಮಾಹಿತಿ ಗಮನಕ್ಕೆ ಬರುತ್ತಿದ್ದಂತೆ ಎಚ್ಚೆತ್ತ ಎಸಿಪಿ ಕೆ.ಸಿ.ಪ್ರಕಾಶ್, ಇನ್‌ಸ್ಪೆಕ್ಟರ್ ಬಿ.ಎಸ್.ರವಿಶಂಕರ್ ಹಾಗೂ ಪೊಲೀಸ್ ಸಿಬ್ಬಂದಿ, ಸ್ಫೋಟಕ ಪತ್ತೆ ದಳ ಹಾಗೂ ಶ್ವಾನ ದಳ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆದರೆ, ಯಾವುದೇ ರೀತಿಯ ಬಾಂಬ್ ಮಾದರಿ ಕಂಡುಬರಲಿಲ್ಲವಾದ್ದರಿಂದ ಇದೊಂದು ಹುಸಿ ಬಾಂಬ್ ಸಂದೇಶ ಎಂಬ ನಿರ್ಧಾರಕ್ಕೆ ಬರಲಾಯಿತು. ನ್ಯಾಯಾಲಯಕ್ಕೆ ಮೇಲಿಂದ ಮೇಲೆ ಹುಸಿ ಬಾಂಬ್ ಸಂದೇಶ ಬರುತ್ತಿರುವುದರ ಬಗ್ಗೆ ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿದ್ದು, ತನಿಖೆ ಮುಂದುವರಿಸಿದೆ.

ರಾಮನಗರ: ಎಸ್ಐಆರ್ ಸ್ಕ್ಯಾಮ್

ಬೆಂಗಳೂರು: ರಾಜ್ಯದಲ್ಲಿ ಚುರುಕುಗೊಂಡಿರುವ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಗೆ ರಾಮನಗರದಲ್ಲಿ ಬೃಹತ್ 'ಸ್ಕ್ಯಾಮ್' ಅಂಟಿಕೊಂಡಿದೆ ಎಂದು ಆರೋಪಿಸಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ವಿಡಿಯೋ ಸಹಿತದ ದಾಖಲೆ ಬಿಡುಗಡೆ ಮಾಡಿದರು.

ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಮನಗರ ಸೇರಿದಂತೆ ರಾಜ್ಯದ ಹಲವಾರು ಭಾಗಗಳಲ್ಲಿ ಕಾಂಗ್ರೆಸ್ ಸರಕಾರ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಹಾಳುಮಾಡಲು ಹೊರಟಿದೆ. ಅದಕ್ಕೆ ರಾಮನಗರ ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮವೇ ಸಾಕ್ಷಿ. ಕೂಡಲೇ ರಾಮನಗರ ಜಿಲ್ಲಾಧಿಕಾರಿಯನ್ನು ಅಮಾನತು ಮಾಡಬೇಕು ಹಾಗೂ ಇದಕ್ಕೆ ಸಂಬಂಧಿಸಿ ಕರ್ತವ್ಯಲೋಪ ಎಸಗಿರುವ ಎಲ್ಲಾ ಅಧಿಕಾರಿಗಳನ್ನು ಮನೆಗೆ ಕಳಿಸಬೇಕು ಎಂದು ಅಗ್ರಪಡಿಸಿದರು.

ಮುಖ್ಯಮಂತ್ರಿಗಳ ನೇರ ಪ್ರಭಾವ ಬಳಸಿ ಬಾಂಗ್ಲಾದೇಶದ ಅಕ್ರಮ ವಲಸಿಗರು ಸೇರಿದಂತೆ ಸಾವಿರಾರು ಕಳ್ಳ ಮತದಾರರಿಗೆ ದಾಖಲೆ ಸೃಷ್ಟಿಸುವ ಯತ್ನ ನಡೆಯುತ್ತಿದೆ, ಹಾಗಾಗಿ ಕೂಡಲೇ ಕೇಂದ್ರೀಯ ಚುನಾವಣಾ ಆಯೋಗ ಮಧ್ಯಪ್ರವೇಶಿಸಿ ಈ ಅಕ್ರಮಕ್ಕೆ ಕಡಿವಾಣ ಹಾಕಬೇಕು. ಈ ವಿಡಿಯೋಗಳನ್ನು ನೋಡುತ್ತಿದ್ದರೆ ನಮ್ಮ ಪ್ರಜಾಪ್ರಭುತ್ವ ಎಲ್ಲಿಗೆ ಬಂದಿದೆ ಎಂಬುದು ಅರ್ಥವಾಗುತ್ತದೆ. ಒಂದು ಕೈಯಲ್ಲಿ ಸಂವಿಧಾನ ಹಿಡಿದು ಶೋ ಮಾಡುವ ಪಕ್ಷ ಮಾಡುತ್ತಿರುವ ಹೀನ ಕೆಲಸ ಇದಾಗಿದೆ. ಗ್ಯಾರೆಂಟಿಗಳಿಗೆ ಕತ್ತರಿಯಾಗುವುದಾಗಿ ಜನರಲ್ಲಿ ಪ್ರೀತಿ ಸೂಚಿಸಿ ಈ ದಂಧೆ ಮಾಡುತ್ತಿದೆ ಎಂದು ಆರೋಪಿಸಿದರು.

ಕನ್ನಡ ಸಾಹಿತ್ಯ ಓದುವ ಅಭ್ಯಾಸದಿಂದ ಭಾಷಾ ಪ್ರೌಢಿಮೆ ಬೆಳೆಯುತ್ತದೆ: ಸೀತಾರಾಮ ಹೆಗಡೆ



ಕಾರ್ಯಕ್ರಮದಲ್ಲಿ ಅಂಕಣಕಾರ ಸೀತಾರಾಮ ಹೆಗಡೆ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ವೇಳೆ ಬೆಂಗಳೂರು ಕಾಯಕ ಫೌಂಡೇಶನ್ ಕಾರ್ಯದರ್ಶಿ ಮಹೇಶ್, ವಂಶವಾಹಿನಿ ಟ್ರಸ್ಟ್ ಹಾಗೂ ಪತ್ರಿಕಾ ಸ್ನೇಹಿತರ ಬಳಗದ ಅಧ್ಯಕ್ಷ ರಮೇಶ್ ಹೆಗಡೆ ಗುಂಡೂಮನೆ, ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಶಿವಕುಮಾರ್ ಸೇರಿದಂತೆ ಇನ್ನಿತರರು ಇದ್ದರು.

ಶಿವಮೊಗ್ಗ: ಪತ್ರಿಕಾ ದಿನಾಚರಣೆಯ ಅಂಗವಾಗಿ ವಂಶವಾಹಿನಿ ಟ್ರಸ್ಟ್, ಗುಂಡೂಮನೆ-ಸಾಗರ, ಪತ್ರಿಕಾ ಸ್ನೇಹಿತರ ಬಳಗ ಹಾಗೂ ನಾಲಂದ ಪ್ರೌಢ ಶಾಲೆಯ ಸಂಯುಕ್ತ ಆಶ್ರಯದಲ್ಲಿ ಶಿವಮೊಗ್ಗದ ತಾಳಗುಪ್ಪದ ನಾಲಂದ ಪ್ರೌಢಶಾಲೆ ಆವರಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಅಂಕಣಕಾರ ಸೀತಾರಾಮ ಹೆಗಡೆ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಅಂಕಣಕಾರ ಸೀತಾರಾಮ ಹೆಗಡೆ ಮಾತನಾಡಿ, ಮಾತೃಭಾಷೆಯ ಸರಿಯಾದ ಅಧ್ಯಯನವಿಲ್ಲದೆ ಇಂಗ್ಲಿಷ್ ಸೇರಿದಂತೆ ಯಾವುದೇ ಭಾಷೆಯ ಕಲಿಕೆ ಸಂಪೂರ್ಣವಾಗುವುದಿಲ್ಲ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇಂಗ್ಲಿಷ್‌ಗೆ ಹೆಚ್ಚಿನ ಒತ್ತು ನೀಡುವ ಭರದಲ್ಲಿ ಯುವಜನರು ಕನ್ನಡವನ್ನು ಕಡೆಗಣಿಸಬಾರದು. ಕನ್ನಡದ ಕವಿಗಳು ಹಾಗೂ ಸಾಹಿತ್ಯ ಓದುವ ಅಭ್ಯಾಸ ಬೆಳೆಸಿಕೊಳ್ಳುವುದರಿಂದ ಭಾಷಾ ಪ್ರೌಢಿಮೆ ಮತ್ತು ವಿಚಾರ ಸಮೃದ್ಧಿ ಎರಡೂ ವೃದ್ಧಿಯಾಗುತ್ತವೆ ಎಂದರು.

ಬೆಂಗಳೂರು ಕಾಯಕ ಫೌಂಡೇಶನ್ ಕಾರ್ಯದರ್ಶಿ ಮಹೇಶ್, ಮಲೆನಾಡಿನ ಮಣ್ಣು ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ, ಸಂಗೀತ ಹಾಗೂ ಯಕ್ಷಗಾನದಂತಹ ಕ್ಷೇತ್ರಗಳಿಗೆ ಅನೇಕ ಪ್ರತಿಭೆಗಳನ್ನು ನೀಡಿದ್ದು, ಸೀತಾರಾಮ ಹೆಗಡೆ ಅವರಂತಹ ಹಿರಿಯ ಪತ್ರಕರ್ತರನ್ನು ರೂಪಿಸಿರುವುದು ಹೆಮ್ಮೆಯ ಸಂಗತಿ. ಸೀತಾರಾಮ ಹೆಗಡೆ ಅವರು ವಿಶಾಲ ಕರ್ನಾಟಕ, ನವನಾಡು, ಸಂಯುಕ್ತ ಕರ್ನಾಟಕ ಸೇರಿದಂತೆ ಹಲವು ಪ್ರಮುಖ ಪತ್ರಿಕೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ವಿಜಯ ಕರ್ನಾಟಕದ ಶಿವಮೊಗ್ಗ ಆವೃತ್ತಿಯ ಸ್ಥಾನಿಕ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ್ದರು. ಅವರ ಲೇಖನಗಳು ಸುಧಾ, ತರಂಗ ಹಾಗೂ ಕಸ್ತೂರಿ ಪತ್ರಿಕೆಗಳಲ್ಲಿ ಪ್ರಕಟವಾಗಿ ಜನಮನ್ನಣೆ ಗಳಿಸಿವೆ. ಪತ್ರಿಕೋದ್ಯಮದಲ್ಲಿ ಅವರ ಮಾರ್ಗದರ್ಶನದಲ್ಲಿ ಬೆಳೆದ ಅನೇಕ ಯುವ ಪತ್ರಕರ್ತರು ಇಂದಿಗೂ ಅವರನ್ನು ತಮ್ಮ ಗುರುವಾಗಿ ಗೌರವಿಸುತ್ತಿದ್ದಾರೆ ಎಂದರು. ಈ ವೇಳೆ ವಂಶವಾಹಿನಿ ಟ್ರಸ್ಟ್ ಹಾಗೂ ಪತ್ರಿಕಾ ಸ್ನೇಹಿತರ ಬಳಗದ ಅಧ್ಯಕ್ಷ ರಮೇಶ್ ಹೆಗಡೆ ಗುಂಡೂಮನೆ, ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಶಿವಕುಮಾರ್, ಉತ್ತರ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಗಂಗಾಧರ ಕೊಳಗಿ, ನಾಲಂದ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಅಜಿತ್ ಕುಮಾರ್, ಲಕ್ಷ್ಮೀ ನಾರಾಯಣ ಕಲಗಾರು, ಯುವ ಸಾಹಿತಿ ಸೃಜನ್ ಗಣೇಶ ಹೆಗಡೆ ಸೇರಿದಂತೆ ಇನ್ನಿತರರು ಇದ್ದರು.

10 ಶತಕೋಟಿ ಡಾಲರ್ ಹೂಡಿಕೆ ನಿರೀಕ್ಷೆ, ಕೃತಕ ಬುದ್ಧಿಮತ್ತೆ, ರಕ್ಷಣಾ ವಲಯಕ್ಕೂ ಆದ್ಯತೆ

ಭಾರತ-ಜಪಾನ್: ಐತಿಹಾಸಿಕ ಸಹಕಾರ ಒಪ್ಪಂದ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಮತ್ತು ಜಪಾನ್ ಪ್ರಧಾನಿ ಸನಾಯೆ ತಕೈಚಿ ಅವರು ಗುರುವಾರ ಸಂಜೆ ದೆಹಲಿಯ ಹೈದರಾಬಾದ್ ಹೌಸ್‌ನಲ್ಲಿ ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಪಾಲುದಾರಿಕೆ ಹೊಸ ಎತ್ತರಕ್ಕೆ ಕೊಂಡೊಯ್ಯುವ ಐತಿಹಾಸಿಕ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ದ್ವಿಪಕ್ಷೀಯ ಮಾತುಕತೆ ಬಳಿಕ ನಡೆದ ಉಭಯ ದೇಶಗಳ 120ಕ್ಕೂ ಹೆಚ್ಚು ಒಪ್ಪಂದಗಳು ಭಾರತಕ್ಕೆ ಸುಮಾರು 10 ಶತಕೋಟಿ ಡಾಲರ್ (95,330 ಕೋಟಿ ರು.) ಹೂಡಿಕೆಯನ್ನು ತರಲಿವೆ. ಇದರೊಂದಿಗೆ ಹಣಕಾಸು ಸೇವಾ ಸಂಸ್ಥೆಗಳ ನಡುವಿನ ಇಂದಿನ ಒಪ್ಪಂವು ಬಂಡವಾಳ ಹೂಡಿಕೆಯ ಹರಿವನ್ನುಮತ್ತಷ್ಟು ಸುಗಮಗೊಳಿಸುತ್ತದೆ. ಜಪಾನ್‌ನಿಂದ ಭಾರತ ಸುಮಾರು 10 ಟ್ರಿಲಿಯನ್ ಯೇನ್ (5.92 ಲಕ್ಷ ಕೋಟಿ) ಹೂಡಿಕೆಯನ್ನು ಆಕರ್ಷಿಸುತ್ತದೆ. ಇದು ಮುಂದಿನ ದಶಕದಲ್ಲಿ ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಪಾನಿನ ಕಂಪನಿಗಳ ಸಂಖ್ಯೆಯನ್ನು ದ್ವಿಗುಣಗೊಳಿಸುವ ಗುರಿಯಾಗಿದೆ ಎಂದು ಅವರು ತಿಳಿಸಿದರು.

ಹಣಕಾಸು ಸೇವೆಗಳ ಏಜೆನ್ಸಿಗಳ ನಡುವಿನ ನೂತನ ಒಪ್ಪಂದವು ಬಂಡವಾಳದ ಹರಿವನ್ನು ಮತ್ತಷ್ಟು ಸುಗಮಗೊಳಿಸಲಿದೆ. ಭಾರತ ಜಪಾನ್ ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಪಾಲುದಾರಿಕೆಯಲ್ಲಿ ಹೊಸ ಅಧ್ಯಾಯ ಪ್ರಾರಂಭಿಸುತ್ತವೆ ಎಂದು ಬಣ್ಣಿಸಿದರು.

ಭಾರತ ಮತ್ತು ಜಪಾನ್ ಎರಡೂ ವಿಶ್ವದ ಅತಿದೊಡ್ಡ ಆರ್ಥಿಕತೆಗಳಲ್ಲಿ ಸೇರಿಕೊಂಡಿವೆ. ಎಐ ತಂತ್ರಜ್ಞಾನ, ರಕ್ಷಣೆ, ಇಂಧನ ಮತ್ತು ಆರ್ಥಿಕ ಭದ್ರತೆಯನ್ನೊಳಗೊಂಡ ಈ ದ್ವಿಪಕ್ಷೀಯ ಮಾತುಕತೆ, ಕೇವಲ ಭಾರತ ಮತ್ತು ಜಪಾನ್ ನಡುವಿನ ದೇಶಗಳ ವ್ಯಾಪಾರ ವೃದ್ಧಿಗೆ ಸೀಮಿತವಾಗಿರದೇ, ಸಮಗ್ರ ಇಂಡೋ-ಪೆಸಿಫಿಕ್ ವಲಯದಲ್ಲಿ ಹೊಸ ಶಕ್ತಿ ಸಮತೋಲನ ಸೃಷ್ಟಿಸುವ ದೂರದೃಷ್ಟಿ ಹೊಂದಿದೆ ಎಂದು ಹೇಳಿದರು.

ಎಐ, ರಕ್ಷಣಾ ವಲಯ: ವಿಶ್ವದ ಡಿಜಿಟಲ್ ಪವರ್‌ಹೌಸ್ ಆಗಿ ಹೊರಹೊಮ್ಮುತ್ತಿರುವ ಭಾರತದ ಸಾಫ್ಟ್‌ವೇರ್ ಸಾಮರ್ಥ್ಯ ಮತ್ತು ಜಪಾನ್‌ನ ನಿಖರ ಉತ್ಪಾದನಾ ತಂತ್ರಜ್ಞಾನ ಒಂದಾದರೆ ಜಾಗತಿಕ ಮಟ್ಟದಲ್ಲಿ ಕ್ರಾಂತಿ ಸೃಷ್ಟಿಸಬಲ್ಲದು ಎಂಬುದಕ್ಕೆ ಈ ಶೃಂಗಸಭೆ ದಿಕ್ಸೂಚಿಯಾಯಿತು. ಕೃತಕ ಬುದ್ಧಿಮತ್ತೆ ವಲಯದಲ್ಲಿ ಉಭಯ ದೇಶಗಳು ಜಂಟಿ ಘೋಷಣೆಯನ್ನು ಬಿಡುಗಡೆ ಮಾಡಿದ್ದು, ದ್ವಿಪಕ್ಷೀಯ ಸಹಕಾರವನ್ನು ತೀವ್ರಗೊಳಿಸಲು ಒಪ್ಪಂದ ಮಾಡಿಕೊಂಡಿವೆ.

ರಕ್ಷಣಾ ವಲಯದಲ್ಲಿ ಹೊಸ ಅಧ್ಯಾಯ: ಭಾರತ ಮತ್ತು ಜಪಾನ್ ನಡುವಿನ ರಕ್ಷಣಾ ಪಾಲುದಾರಿಕೆಯಲ್ಲಿ ಇದೇ ಮೊದಲ ಬಾರಿಗೆ ಅತ್ಯಂತ ಮಹತ್ವದ ಜಂಟಿ ಅಭಿವೃದ್ಧಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಭಾರತೀಯ ನೌಕಾಪಡೆಗಾಗಿ ಅತ್ಯಾಧುನಿಕ ರೇಡಿಯೋ ಆಂಟೆನಾ ಯುನಿಕಾರ್ನ್ ಅನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವ ಯೋಜನೆಗೆ ಅಧಿಕೃತ ಚಾಲನೆ ನೀಡಲಾಗಿದೆ.

ಪಾಲುದಾರಿಕೆಯಲ್ಲಿ ಹೊಸ ಅಧ್ಯಾಯ: ಉಭಯ ದೇಶಗಳ ರಕ್ಷಣಾ ತಂತ್ರಜ್ಞಾನ ಪಾಲುದಾರಿಕೆಯಲ್ಲಿ ಹೊಸ ಅಧ್ಯಾಯ ಬರೆಯಲಿದೆ. ಇಂಧನ ಸುರಕ್ಷತೆಗೆ ಸಂಬಂಧಿಸಿದಂತೆ ನಾವು ಹಲವಾರು ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ. ಭಾರತ-ಜಪಾನ್ ಜೈವಿಕ ಅನಿಲ ಉಪಕ್ರಮವು ಭಾರತದಾದ್ಯಂತ 1,000 ಜೈವಿಕ ಅನಿಲ ಮತ್ತು ಸಾವಯವ ಗೊಬ್ಬರ ಸ್ಥಾವರಗಳನ್ನು ಸ್ಥಾಪಿಸಲು ನಮಗೆ ಸಹಾಯ ಮಾಡುತ್ತದೆ. ಇದು ನಮ್ಮ ಗೋಬರ್‌ಧನ್ ಉಪಕ್ರಮವನ್ನು ಮತ್ತಷ್ಟು ಬಲಪಡಿಸುತ್ತದೆ. ಭಾರತದ ಹಳ್ಳಿಗಳಲ್ಲಿ ಸುಸ್ಥಿರತೆ, ಸಮೃದ್ಧಿ ಮತ್ತು ಗ್ರಾಮೀಣ ಜೀವನೋಪಾಯಕ್ಕೆ ಹೊಸ ಉತ್ತೇಜನ ನೀಡುತ್ತದೆ ಎಂದು ಮೋದಿ ಹೇಳಿದ್ದಾರೆ.

ತಂತ್ರಜ್ಞಾನ ಪಾಲುದಾರಿಕೆಗೂ ಒಪ್ಪಿಗೆ

ತಂತ್ರಜ್ಞಾನ ಪಾಲುದಾರಿಕೆಯು ನಮ್ಮ ಸಹಕಾರದ ಬಲವಾದ ಆಧಾರಸ್ತಂಭವಾಗಲಿದೆ ಎಂದು ಪ್ರಧಾನಿ ತಕೈಚಿ ಮತ್ತು ನಾನು ನಂಬುತ್ತೇವೆ. ಇದಲ್ಲದೇ ಬ್ಯಾಟರಿಗಳು, ಹಸಿರು ಹೈಡ್ರೋಜನ್ ಮತ್ತು ಪರಮಾಣು ಶಕ್ತಿಯಲ್ಲಿ ನಮ್ಮ ಸಹಕಾರವು ಜಾಗತಿಕ ಶುದ್ಧ ಇಂಧನ ಭವಿಷ್ಯಕ್ಕೆ ಮಹತ್ವದ ಕೊಡುಗೆ ನೀಡುತ್ತದೆ ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ.

ಹಳೇ ವಿದ್ಯಾರ್ಥಿಗಳ ಸಂಘ ಉದ್ಘಾಟನೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಪ್ರಾಣಿಶಾಸ್ತ್ರ ಹಳೇ ವಿದ್ಯಾರ್ಥಿಗಳ ಸಂಘ ಉದ್ಘಾಟಿಸಲಾಯಿತು. ಈ ಕುರಿತು ಕುಲಪತಿ ಜಯಕರ ಎಸ್.ಎಂ ಮಾತನಾಡಿ, ಹಳೇ ವಿದ್ಯಾರ್ಥಿಗಳ ಸಂಘ ಸ್ಥಾಪನೆಗೆ ಮುಂದಾಗಿರುವ ವಿಭಾಗ ಹಾಗೂ ಪದಾಧಿಕಾರಿಗಳು ಅಭಿನಂದನೆ. ಮಾರ್ಗದರ್ಶನ, ಸಂಶೋಧನೆಗೆ ಬೆಂಬಲ, ಕೈಗಾರಿಕೆ-ಶೈಕ್ಷಣಿಕ ಸಹಭಾಗಿತ್ವ ಮತ್ತು ವಿಶ್ವವಿದ್ಯಾಲಯದ ಸಮಗ್ರ ಅಭಿವೃದ್ಧಿಯಲ್ಲಿ ಹಳೇ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದಾಗಿದೆ. ವಿಭಾಗ ಮತ್ತು ಅದರ ಹಳೇ ವಿದ್ಯಾರ್ಥಿಗಳ ನಡುವಿನ ಬಾಂಧವ್ಯ ಉತ್ತಮ ಮತ್ತು ಶೈಕ್ಷಣಿಕ ಶ್ರೇಷ್ಠತೆ, ವೃತ್ತಿಪರ ಜಾಲತಾಣ, ಮಾರ್ಗದರ್ಶನ ಮತ್ತು ಸಹಾಯಕ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಈ ಸಂಘ ಸ್ಥಾಪಿಸಲಾಗಿದೆ ಎಂದರು. ಐಎಸ್‌ಎಸ್ ಅಧಿಕಾರಿ ಚಂದ್ರಶೇಖರ್ ಮಾತನಾಡಿ, ಸಕ್ರಿಯ ಹಳೇ ವಿದ್ಯಾರ್ಥಿಗಳ ಜಾಲತಾಣವು ಜೀವಿತಾವಧಿಯ ಕಲಿಕೆ, ನವೋದ್ಯಮ, ವೃತ್ತಿಪರ ಶ್ರೇಷ್ಠತೆ ಹಾಗೂ ಸಾಮಾಜಿಕ ಹೊಣೆಗಾರಿಕೆ ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಬೆಂ.ವಿ.ವಿ ಕುಲಪತಿ ಜಯಕರ ಎಸ್.ಎಂ ಪ್ರಾಣಿಶಾಸ್ತ್ರ ಹಳೆ ವಿದ್ಯಾರ್ಥಿಗಳ ಸಂಘವನ್ನು ಉದ್ಘಾಟಿಸಿದರು. ಈ ವೇಳೆ ಐಎಸ್ ಎಸ್ ಅಧಿಕಾರಿ ಚಂದ್ರಶೇಖರ್, ಪ್ರಾಣಿಶಾಸ್ತ್ರ ವಿಭಾಗದ ಅಧ್ಯಕ್ಷೆ ಪ್ರೊ.ಬಿ.ಪಿ. ಹರಿಣಿ, ಪ್ರೊ.ಉಷಾ ಆನಂದಿ, ಪ್ರೊ.ಮಹಬೂಬ್ ಬಾಷಾ, ಪ್ರೊ.ಪುರುಷೋತ್ತಮ, ಡಾ.ನಾಗರಾಜ, ಡಾ.ವಿ. ಶ್ರೀನಿವಾಸ ಸೇರಿದಂತೆ ಇನ್ನಿತರರು ಇದ್ದರು.

ಸಮಾಚಾರ ಸಣ್ಣದಲ್ಲ

ಏರ್ ಇಂಡಿಯಾ ವಿಮಾನ ಸೇವೆ ಪುನರಾರಂಭ

ದೆಹಲಿ: ಅಮೆರಿಕ, ಇಸ್ರೇಲ್ ಹಾಗೂ ಇರಾನ್ ಯುದ್ಧದಿಂದ ವಿಮಾನಯಾನ ಸೇವೆ ಸ್ಥಗಿತಗೊಳಿಸಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಗುರುವಾರ ಪಶ್ಚಿಮ ಏಷ್ಯಾದ ಎಲ್ಲಾ ವಿಮಾನ ನಿಲ್ದಾಣಗಳಿಗೆ ವಿಮಾನ ಸೇವೆಯನ್ನು ಪುನಃಸ್ಥಾಪಿಸಿದ್ದು, ಒಮಾನ್ ಮತ್ತು ಕುವೈತ್‌ಗೆ ವಿಮಾನಗಳು ಆರಂಭವಾಗಲಿವೆ ಎಂದು ಹೇಳಿದೆ. ಟಾಟಾ ಗ್ರೂಪ್ ಒಡೆತನದ ವಿಮಾನಯಾನ ಸಂಸ್ಥೆಯು, ಈ ಪ್ರದೇಶದಲ್ಲಿ ಸಂಘರ್ಷದ ಹಿನ್ನೆಲೆಯಲ್ಲಿ ಕೆಲವು ಪಶ್ಚಿಮ ಏಷ್ಯಾಗೆ ವಿಮಾನ ಸೇವೆಗಳನ್ನು ಸ್ಥಗಿತಗೊಳಿಸಿತ್ತು. ಒಮನ್‌ನ ಸಲಾಲಾ ಮತ್ತು ಕುವೈತ್‌ಗೆ ಸೇವೆಗಳನ್ನು ಪುನರಾರಂಭಿಸುವುದರೊಂದಿಗೆ, ಪಶ್ಚಿಮ ಏಷ್ಯಾ ಜಾಲದಾದ್ಯಂತ ಎಲ್ಲಾ ವಿಮಾನ ನಿಲ್ದಾಗಳಿಗೆ ಸಂಪರ್ಕವನ್ನು ಪುನಃಸ್ಥಾಪಿಸಲಾಗಿದೆ ಎಂದು ವಿಮಾನ ಯಾನ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ಕೋಯಿಕ್ಕೋಡ್–ಸಲಾಲಾ ಮಾರ್ಗದಲ್ಲಿ ಜುಲೈ 2ರಿಂದ ವಿಮಾನ ಸೇವೆ ಪುನರಾರಂಭಗೊಂಡಿದ್ದು, ಕೋಯಿಕ್ಕೋಡ್ ಮತ್ತು ಕುವೈತ್ ನಡುವಿನ ಸೇವೆಗಳು ಜುಲೈ 3ರಿಂದ ಪುನರಾರಂಭಗೊಳ್ಳಲಿದ್ದು, ಬೆಂಗಳೂರು ಮತ್ತು ಕುವೈತ್ ನಡುವಿನ ವಿಮಾನ ಸೇವೆ ಜುಲೈ 4ರಿಂದ ಪ್ರಾರಂಭವಾಗಲಿದೆ. ಮುಂಬರುವ ದಿನಗಳಲ್ಲಿ ಹಂತ ಹಂತವಾಗಿ ವಿಮಾನ ಸೇವೆಯನ್ನು ಹೆಚ್ಚಿಸಲಾಗುವುದು ಎಂದು ಏರ್ ಇಂಡಿಯಾ ಹೇಳಿದೆ.

ಭಾರತದಿಂದ ಪೆಟ್ರೋಲ್ ಖರೀದಿಸುತ್ತಿರುವ ರಷ್ಯಾ

ದೆಹಲಿ: ಉಕ್ರೇನ್ ದಾಳಿಯಿಂದ ಇಂಧನ ಕೊರತೆ ಎದುರಿಸುತ್ತಿರುವ ರಷ್ಯಾ, ದೇಶ ಭಾರತದಿಂದಲೇ ಪೆಟ್ರೋಲ್ ಆಮದು ಮಾಡಿಕೊಳ್ಳಲು ಪ್ರಾರಂಭಿಸಿದೆ. ರಷ್ಯಾದ ಇಂಧನ ಮೂಲಸೌಕರ್ಯದ ಮೇಲೆ ಉಕ್ರೇನ್ ಪದೇ ಪದೇ ಡ್ರೋನ್ ದಾಳಿ ನಡೆಸುತ್ತಿದೆ. ಇದರಿಂದ ರಷ್ಯಾ ದೇಶಾದ್ಯಂತ ಇಂಧನ ಕೊರತೆ ಎದುರಾಗಿದೆ. ಇಂಧನ ರಫ್ತು ಮಾಡುವ ಬದಲು ರಷ್ಯಾ ಈಗ ತಾನೇ ಖರೀದಿ ಮಾಡುತ್ತಿದೆ. ದೇಶೀಯ ಮಾರುಕಟ್ಟೆಯನ್ನು ಪೂರೈಕೆ ಮಾಡುವಂತೆ ವಿದೇಶಗಳನ್ನು ಕೇಳಿಕೊಳ್ಳುತ್ತಿದೆ. ರಷ್ಯಾದ 11 ಟೈಮ್ ಝೋನ್‌ಗಳಲ್ಲಿ ಇಂಧನ ಕೊರತೆ ತಲೆದೋರಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪಡಿತರ ವ್ಯವಸ್ಥೆ, ಪೆಟ್ರೋಲ್ ಬಂಕ್‌ಗಳಲ್ಲಿ ಉದ್ದನೆಯ ಸರತಿ ಸಾಲುಗಳು ಕಂಡುಬರುತ್ತಿವೆ, ಅಲ್ಲದೇ ಹಲವಾರು ಪ್ರದೇಶಗಳಲ್ಲಿ ದಾಖಲೆಯ ಪೆಟ್ರೋಲ್ ಬೆಲೆ ಏರಿಕೆ ವರದಿಯಾಗಿದೆ. ರಷ್ಯಾ ಈಗಾಗಲೇ ಭಾರತದಿಂದ ಸಮುದ್ರದ ಮೂಲಕ ಪೆಟ್ರೋಲ್ ಆಮದು ಮಾಡಿಕೊಳ್ಳುತ್ತಿದೆ. ಭಾರತದಿಂದ ಕನಿಷ್ಠ 60,000 ಮೆಟ್ರಿಕ್ ಟನ್ ಪೆಟ್ರೋಲ್ ಅನ್ನು ರಷ್ಯಾಗೆ ರವಾನಿಸಲಾಗಿದೆ ಎಂದು ವರದಿಗಳು ತಿಳಿಸಿವೆ. ಯಾವ ಭಾರತೀಯ ಸಂಸ್ಕರಣಾಗಾರ ಈ ಇಂಧನವನ್ನು ಪೂರೈಸುತ್ತಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ದೇಶದಲ್ಲಿನ ಕೊರತೆ ಯನ್ನು ನೀಗಿಸಲು ಸ್ವೀಕಾರಾರ್ಹ ಬೆಲೆಯಲ್ಲಿ ಇಂಧನ ಖರೀದಿಸುವ ಬಗ್ಗೆ ರಷ್ಯಾ ಹಲವಾರು ದೇಶಗಳೊಂದಿಗೆ ಚರ್ಚಿಸುತ್ತಿದೆ.

ವೇಷ ಧರಿಸಿ ಉದ್ಯಮಿ ಮನೆಯಿಂದ 40 ಲಕ್ಷ ಕಳವು

ರತ್ಲಂ (ಮಧ್ಯ ಪ್ರದೇಶ): ನಗರದ ಸರ್ವೆ ಪ್ರದೇಶದಲ್ಲಿ ನಡೆದ ದರೋಡೆ ಸಂಚಲನ ಮೂಡಿಸಿದೆ. ಬ್ಲಿಂಕಿಟ್ ಸಮವಸ್ತ್ರ ಧರಿಸಿದ ಇಬ್ಬರು ಮುಸುಕುಧಾರಿ ದುಷ್ಕರ್ಮಿಗಳು ಈ ಕೃತ್ಯ ಎಸಗಿದ್ದಾರೆ. ದೂರುದಾರ ಉದ್ಯಮಿ, ತನ್ನ ಮನೆಯಲ್ಲಿ 40 ಲಕ್ಷ ನಗದನ್ನು ಚೀಲದಲ್ಲಿ ಇರಿಸಲಾಗಿತ್ತು ಎಂದು ಹೇಳಿದ್ದಾರೆ. ಆ ಚೀಲವನ್ನು ದುಷ್ಕರ್ಮಿಗಳು ಕಸಿದುಕೊಂಡು ಪರಾರಿಯಾಗಿದ್ದಾರೆ ಎಂದಿದ್ದಾರೆ. ಪೊಲೀಸರ ಪ್ರಕಾರ, ಉದ್ಯಮಿ ಮನೀಶ್ ಪಟ್ವಾ, ಸಾಂಪ್ರದಾಯಿಕ ಅನೌಪಚಾರಿಕ ಕ್ರೆಡಿಟ್, ಹವಾಲಾ ಶೈಲಿ ವಹಿವಾಟು ನಡೆಸುತ್ತಿದ್ದಾರೆ. ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರಿನಲ್ಲಿ 40 ಲಕ್ಷ ಮೊತ್ತವು ಸರಕಾರಿ ಮದ್ಯದ ಅಂಗಡಿಗಳಿಂದ ಸಂಗ್ರಹವಾಗಿದೆ ಎಂದು ಹೇಳಲಾಗಿದೆ. ಹಗಲು ಹೊತ್ತಿನಲ್ಲಿ ನಡೆದ ದರೋಡೆಯ ಬಗ್ಗೆ ಸ್ಟೇಷನ್ ರಸ್ತೆ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಸಿಸಿಟಿವಿ ದೃಶ್ಯಗಳ ಆಧಾರದ ಮೇಲೆ ಪೊಲೀಸರು ದುಷ್ಕರ್ಮಿಗಳನ್ನು ಹುಡುಕುತ್ತಿದ್ದಾರೆ. ಅಕ್ರಮ ಹಣಕಾಸು ವಹಿವಾಟುಗಳಿಗೆ ಸಂಬಂಧಿಸಿದ ದೃಷ್ಟಿಕೋನದಲ್ಲೂ ಸಹ ಅವರು ತನಿಖೆ ಮಾಡುತ್ತಿದ್ದಾರೆ.

ದೆಹಲಿಯಲ್ಲಿ ಎಸ್‌ಐಆರ್: 10 ಲಕ್ಷ ಅರ್ಜಿ ವಿತರಣೆ

ದೆಹಲಿ: ದೇಶದ ರಾಜಧಾನಿ ದೆಹಲಿಯಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯು ಅತ್ಯಂತ ವೇಗವಾಗಿ ಆರಂಭಗೊಂಡಿದೆ. ಮನೆ ಮನೆಗೆ ತೆರಳಿ ಮತದಾರರ ವಿವರ ಸಂಗ್ರಹಿಸುವ ಈ ಬೃಹತ್ ಅಭಿಯಾನದ ಮೊದಲ ಎರಡು ದಿನಗಳಲ್ಲೇ ಬರೋಬ್ಬರಿ 10 ಲಕ್ಷಕ್ಕೂ (9.9 ಲಕ್ಷ) ಅಧಿಕ ಅರ್ಜಿಗಳನ್ನು ಸಾರ್ವಜನಿಕರಿಗೆ ವಿತರಿಸಲಾಗಿದ್ದು, ಈ ಪೈಕಿ 32 ಸಾವಿರಕ್ಕೂ ಹೆಚ್ಚು ಅರ್ಜಿಗಳನ್ನು ಈಗಾಗಲೇ ಯಶಸ್ವಿಯಾಗಿ ಡಿಜಿಟಲೀಕರಣಗೊಳಿಸಲಾಗಿದೆ ಎಂದು ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ. ಮತದಾರರ ಪಟ್ಟಿಯಲ್ಲಿರುವ ತಪ್ಪುಗಳನ್ನು ಸರಿಪಡಿಸಲು, ನಕಲಿ ಹೆಸರುಗಳನ್ನು ಕೈಬಿಡಲು ಹಾಗೂ ಅರ್ಹ ಮತದಾರರ ವಿವರಗಳನ್ನು ನವೀಕರಿಸಲು ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯು ಅಭಿಯಾನವನ್ನು ಹಮ್ಮಿಕೊಂಡಿದೆ.

{ ಮಲ್ಲಿಕಾರ್ಜುನ ಖರ್ಗೆ } ಕಾಂಗ್ರೆಸ್ ಅಧ್ಯಕ್ಷ

ಡಬಲ್ ಎಂಜಿನ್ ಎನ್‌ಡಿಎ ಸರಕಾರಗಳ ಭಾರೀ ಭರವಸೆಗಳು ಮಾಯವಾಗಿದ್ದು ಈಶಾನ್ಯ ಭಾರತದಲ್ಲಿ ಪ್ರವಾಹ ಎಂಬುದು ವಾರ್ಷಿಕ ವಿದ್ಯಾಮಾನದಂತೆ ಭಾಸವಾಗುತ್ತಿದೆ. ಮೋದಿ ಸರಕಾರವು ಈ ಘಟನೆಯನ್ನು ಮತ್ತೊಂದು ವಾಡಿಕೆಯ ವಿಪತ್ತು ಎಂದು ಪರಿಗಣಿಸದೆ ಪಿಎಂ ಕೇರ್ಸ್ ನಿಧಿಯನ್ನು ಬಳಸಿ ಸಂತಸ್ತ್ರರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು.



ಹಣದ ಥೈಲಿ ಉದ್ಯಮಿಗಳ ದರ್ಬಾರು | ಪವಿತ್ರಭೂಮಿ ಪರರಾಜ್ಯದವರಿಗೆ ಮಾರಬೇಡಿ: ಸ್ಥಳೀಯರ ಕೂಗು

ಕೊಡಗಿನಲ್ಲಿ ಹೊರಗಿನ ಉದ್ಯಮಿಗಳ ಕಾರುಬಾರು

ಅನಿಲ್ ಹೆಚ್.ಟಿ. ಮಡಿಕೇರಿ

ಮುಂಗಾರು ಪ್ರವೇಶಿಸಿ ಚಳಿ, ಗಾಳಿಯ ವಾತಾವರಣಕ್ಕೆ ಕಾರಣವಾಗುತ್ತಿರುವಂತೆಯೇ ಕೊಡಗಿನಲ್ಲಿ ಮತ್ತೊಮ್ಮೆ ಪರಿಸರ ನಾಶಕ್ಕೆ ವಿರೋಧದ ಪ್ರಬಲ ಕೂಗಿನ ಬಿಸಿಗಾಳಿ ಬೀಸತೊಡಗಿದೆ.

ಕೊಡಗಿನ ಭೂಮಿಯನ್ನು ಖರೀದಿಸಿ ವಾಣಿಜ್ಯ ಉದ್ದೇಶಕ್ಕೆ ಕೃಷಿ ಭೂಮಿಯನ್ನು ಬಳಸಿಕೊಳ್ಳುವ ಮೂಲಕ ಕೊಡಗಿನ ನಿಸರ್ಗವನ್ನು ನಾಶ ಮಾಡಲು ಅನೇಕರು ಮುಂದಾಗಿದ್ದಾರೆ. ಅದರಲ್ಲಿಯೂ ವಾಣಿಜ್ಯ ಉದ್ದೇಶಕ್ಕೆ ಕೊಡಗಿನ ಭೂಪ್ರದೇಶವನ್ನು ಬಳಸಿಕೊಳ್ಳುವಲ್ಲಿ ಹೊರರಾಜ್ಯದ ಉದ್ಯಮಿಗಳು ಮುಂದಾಗುತ್ತಿರುವುದು ಆತಂತಕಾರಿ ಎಂಬ ಕಳವಳಕಾರಿ ಧ್ವನಿ ವ್ಯಾಪಕವಾಗುತ್ತಿದೆ.

ಇಂತಹ ಒಂದು ಕೂಗಿಗೆ ಈ ವರ್ಷ ಕಾರಣವಾಗಿರುವುದು ಕೊಡಗಿನ ಮಳೆದೈವ, ಕುಲದೈವ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯ ಬಳಿಯಲ್ಲಿನ ಮಲ್ಮ ಎಂಬ ಕೊಡವರ ಪವಿತ್ರ ಬೆಟ್ಟದ ಬಳಿಯಲ್ಲಿಯೇ ಧಾರ್ಮಿಕ ಮುಖಂಡರೋರ್ವರು ಭೂಮಿ ಖರೀದಿಸಿ ವಾಣಿಜ್ಯ ಉದ್ದೇಶಕ್ಕೆ ಬಳಸಲು ಮುಂದಾಗಿರುವುದು ವಿವಾದವಾಗತೊಡಗಿದೆ.

ಭಾರತ ಮಾತ್ರವಲ್ಲ, ವಿಶ್ವವ್ಯಾಪಿ ಖ್ಯಾತಿ ಪಡೆದಿರುವ ಶ್ರೀ.ಎಂ ಎಂದೇ ಹೆಸರಾದ ಮಮ್ತಾಜ್ ಅಲಿ ಅವರು ಮಲ್ಮ ಬೆಟ್ಟದ ತಪ್ಪಲಿನಲ್ಲಿ ಸುಮಾರು 72 ಎಕರೆ ಜಾಗ ಖರೀದಿಸಿದ್ದರು. ಧಾರ್ಮಿಕ ಕೇಂದ್ರ ಮತ್ತು ಗೋಶಾಲೆ ಸ್ಥಾಪನೆಯ ಉದ್ದೇಶವಿತ್ತು ಎಂದು ಮಮ್ತಾಜ್ ಅಲಿ ಹೇಳಿಕೊಂಡಿದ್ದರು. ಸ್ಥಳೀಯರು ಇದನ್ನು ನಂಬಲಿಲ್ಲ, ಬದಲಿಗೆ ರೆಸಾರ್ಟ್ ನಿರ್ಮಾಣ ಮಾಡಲಾಗುತ್ತದೆ. ಸ್ಥಳೀಯ ಸಂಸ್ಕೃತಿಗೆ ವಿರುದ್ಧವಾಗಿ ಇಲ್ಲಿ ಕೊಳ, ಕಾಟೇಜ್‌ಗಳು ತಲೆಎತ್ತುತ್ತವೆ. ಮರಗಳನ್ನು ಕಡಿದು ರಸ್ತೆ ನಿರ್ಮಾಣ ಮಾಡಲು ಬಿಡುವುದಿಲ್ಲ ಎಂದು ಪ್ರತಿರೋಧವೊಡ್ಡಿದ್ದರು. ಅದಾಗಲೇ ಕೋಟಿಗಟ್ಟಲೆ ಹಣ ನೀಡಿ ಜಾಗ ಖರೀದಿಸಿದ್ದ ಶ್ರೀ.ಎಂ. ಈ ವಿರೋಧಕ್ಕೆ ಬೆಚ್ಚಿ ಬಿದ್ದರು. ಕೊನೆಗೆ ತಾನು ಖರೀದಿಸಿದ ಜಮೀನನ್ನು ವಾಪಾಸು ಮರಳಿಸುತ್ತೇನೆ. ಕೊಡಗಿನಲ್ಲಿ ಯಾವುದೇ ಯೋಜನೆ ಹಮ್ಮಿಕೊಳ್ಳಲಾರೆ. ಸ್ಥಳೀಯ ಭೂಮಾಲೀಕರು ತನ್ನನ್ನು ದಾರಿ ತಪ್ಪಿಸಿ ಜಾಗ ಮಾರಾಟ ಮಾಡಿದ್ದರು ಎಂದು ಶ್ರೀ.ಎಂ ನೊಂದು ನುಡಿದಿದ್ದರು.

ಈ ನಿಟ್ಟಿನಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಜು.10ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಶಾಂತಿಯು ಸತ್ಯಾಗ್ರಹ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ತಿಳಿಸಿದ್ದಾರೆ. ನೆಲಜಿ ಗ್ರಾಮದ ಮಲ್ಮ ಬೆಟ್ಟ ವ್ಯಾಪ್ತಿಯಲ್ಲಿ ನಡೆದಿರುವ ಕಾಮಗಾರಿಯನ್ನು ತೀವ್ರವಾಗಿ ವಿರೋಧಿಸಿರುವ ನಾಚಪ್ಪ, ಮದ್ರಾಸ್ ಹೈಕೋರ್ಟ್ ಆದೇಶಗಳನ್ನು ಪಾಲಿಸಿ, 2024–25ರಲ್ಲಿ ನೀಲಗಿರಿ ಜಿಲ್ಲೆಯ ಮಸಿನಗುಡಿಯಲ್ಲಿ ನೂರಾರು ರೆಸಾರ್ಟ್‌ಗಳನ್ನು ಒಂದೇ ಹಂತದಲ್ಲಿ ತೆರವುಗೊಳಿಸಿದ ಮಾದರಿಯಲ್ಲಿಯೇ, ಕರ್ನಾಟಕ ಸರಕಾರದಿಂದಲೂ ಕಠಿಣ ಕ್ರಮ ಜಾರಿಯಾಗಬೇಕೆಂದು ಸಾರ್ವತ್ರಿಕ ಒತ್ತಾಯವಾಗಿದೆ. ಸರಕಾರ ಮತ್ತು ಹೊರಗಿನ ಹಣದ ಚೀಲದ ಉದ್ಯಮಿಗಳು ಕೊಡವರ ಭಾವನೆಗಳೊಂದಿಗೆ ಚೆಲ್ಲಾಟವಾಡಬಾರದು. ಮಲ್ಮ ಬೆಟ್ಟ ಸಮಸ್ಯೆಗೆ ಸಂಬಂಧಿಸಿದಂತೆ ನೆಲಜಿನಾಡಿನಲ್ಲಿ ಸಾಂಸ್ಕೃತಿಕ–ಸಾಮಾಜಿಕ ಅಶಾಂತಿಗೆ ದಾರಿ ಮಾಡಿಕೊಡುವ ಲಕ್ಷಣಗಳು ಕಂಡುಬರುತ್ತಿದೆ. ಕೊಡವರು ಪರ್ವತ ದೇವರ ವಾಸಸ್ಥಾನವಾದ ಮಲ್ಮ ಬೆಟ್ಟದ ಮೇಲೆ ಅತ್ಯುನ್ನತ ಭಕ್ತಿಯನ್ನು ಇಟ್ಟಿದ್ದಾರೆ. ಇಲ್ಲಿನ ಜಾಗ ಖರೀದಿದಾರರು ಪರಿಚಿತ ಹೊರಗಿನ ಆಧ್ಯಾತ್ಮಿಕ ಉದ್ಯಮಿಯಾಗಿದ್ದಾರೆ. ಸರಕಾರ ಇದಕ್ಕೆ ತಡೆ ಒಡ್ಡಬೇಕು ಮತ್ತು ಸದರಿ ಆಸ್ತಿಯನ್ನು ಸ್ಥಳೀಯ ಕೊಡವರಿಗೆ ರಿಯಾಯಿತಿ ದರದಲ್ಲಿ ಸುಲಭವಾಗಿ ವರ್ಗಾಯಿಸಲು ಅನುಕೂಲ ಮಾಡಿಕೊಡಬೇಕು ಹಾಗೂ ಅದನ್ನು ಶಾಶ್ವತವಾಗಿ ಒಂದು ಪವಿತ್ರ ಸ್ಥಳ ವಾಗಿ ಉಳಿಸಿಕೊಳ್ಳಬೇಕು ಎಂದೂ ನಾಚಪ್ಪ ಆಗ್ರಹಿಸಿದ್ದಾರೆ.

ಹೊಸ ಕಾನೂನು ರೂಪಿಸಿ: ಕನ್ನಿ ಕಾವೇರಿ ಸೇವಾ ಟ್ರಸ್ಟ್ ನ ಕಾರ್ಯದರ್ಶಿ ಮಲ್ಚೀರ ಶಾನ್ ಬೋಪಯ್ಯ ಪ್ರತಿಕ್ರಿಯಿಸಿ, ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯಾಗದೆ ಪರಿಸ್ಥಿತಿ ಹದಗೆಟ್ಟಿದೆ. ಇದರಿಂದ ಕರ್ನಾಟಕ ಮಾತ್ರವಲ್ಲದೇ ಕೇರಳ, ತಮಿಳುನಾಡು ರಾಜ್ಯಗಳು ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಪರಿತಪಿಸುವ ಪರಿಸ್ಥಿತಿ ಎದುರಾಗುತ್ತದೆ. ರಾಜ್ಯ ಸರಕಾರ ಕೊಡಗಿನಲ್ಲಿ ಭೂಮಿ ಖರೀದಿ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಹೊಸ ಕಾನೂನು ರೂಪಿಸುವ ಅಗತ್ಯವಿದೆ ಎಂದು ಒತ್ತಾಯಿಸಿದ್ದಾರೆ.

ಕೊಡವರ ಭವಿಷ್ಯಕ್ಕೆ ಮಾರಕವಾಗಿರುವ ಹೊರಗಿನ ಉದ್ಯಮ ಸಂಸ್ಥೆಗಳು ಕೊಡಗಿನಲ್ಲಿ ನಿರ್ಮಿಸಿರುವ ಟೌನ್‌ಶಿಪ್ ಮತ್ತು ರೆಸಾರ್ಟ್‌ಗಳನ್ನು ತೆರವುಗೊಳಿಸಬೇಕು. ಈ ನಿಟ್ಟಿನಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಜು.10ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಶಾಂತಿಯು ಸತ್ಯಾಗ್ರಹ ನಡೆಯಲಿದೆ.

–ಎನ್.ಯು.ನಾಚಪ್ಪ, ಸಿಎನ್‌ಸಿ ಅಧ್ಯಕ್ಷ

ಭೌಗೋಳಿಕ ಚಿತ್ರಣ ಬದಲು

ಕೊಡಗು ಜಿಲ್ಲೆಯ ಭೂಮಿಯನ್ನು ಹೊರಗಿನವರು ಹೆಚ್ಚಿನ ಸಂಖ್ಯೆಯಲ್ಲಿ ಖರೀದಿ ಮಾಡುತ್ತಿದ್ದಾರೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಮುಂದಿನ 10 ವರ್ಷಗಳಲ್ಲಿ ಕೊಡಗಿನ ಭೌಗೋಳಿಕ ಚಿತ್ರಣವೇ ಬದಲಾಗಬಹುದು ಮತ್ತು ಮೂಲ ಸಂಸ್ಕೃತಿಯ ಮೇಲೆ ಪರಿಣಾಮ ಬೀರಬಹುದು ಎಂದು ಕೊಡಗು ಹಾಗೂ ಕಾವೇರಿ ಸಂರಕ್ಷಣಾ ವೇದಿಕೆಯ ಸಂಚಾಲಕ ನಿವೃತ್ತ ಕರ್ನಲ್ ಸಿ.ಪಿ. ಮುತ್ತಣ್ಣ 'ವಿಶ್ವವಾಣಿ' ಜತೆಗೆ ಮಾತನಾಡಿದ್ದಾರೆ.

ಎರಡು ದಶಕಗಳಿಂದಲೂ ವಾಸವಾಗಿದ್ದ ಸರಕಾರಿ ಮನೆ ತ್ಯಜಿಸಿ ಖಾಸಗಿ ಮನೆಗೆ ತೆರಳಿದ ಬಿಹಾರದ ಮಾಜಿ ಸಿಎಂ

ಕೊನೆಗೂ ಸರಕಾರಿ ಬಂಗಲೆ ತ್ಯಜಿಸಿದ ಮಾಜಿ ಸಿಎಂ ರಾಬ್ರಿ

ಪಾಟ್ನ: ಬಿಹಾರದ ಮಾಜಿ ಮುಖ್ಯಮಂತ್ರಿ ರಾಬ್ರಿ ದೇವಿ ಗುರುವಾರ ಸರಕಾರಿ ಬಂಗಲೆಯನ್ನು ತೊರೆದು ತಮ್ಮ ಸ್ವಂತ ಮನೆಗೆ ಸ್ಥಳಾಂತರಗೊಂಡಿದ್ದಾರೆ. ಜೆಡಿ (ಯು) ಅಧ್ಯಕ್ಷ ನಿತೀಶ್ ಕುಮಾರ್ ನೇತೃತ್ವದವರೆಗೂ ಆಡಳಿತ ಪಕ್ಷದೊಂದಿಗೆ ಉತ್ತಮ ಸಂಬಂಧ ಹೊಂದಿದ್ದ ವಿರೋಧ ಪಕ್ಷದ ಮೊದಲ ಕುಟುಂಬದ ಪ್ರಭಾವ ಕಡಿಮೆಯಾಗುತ್ತಿರುವುದರ ಸೂಚನೆಯಾಗಿ ಈ ಬೆಳವಣಿಗೆಯು ಕಂಡುಬರುತ್ತಿದೆ.

2005ರ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ಕಳೆದುಕೊಂಡ ಸ್ವಲ್ಪ ಸಮಯದ ನಂತರ, ಹಿಂದಿನ ನಿತೀಶ್ ಕುಮಾರ್ ಸರಕಾರವು ರಾಬ್ರಿ ದೇವಿಗೆ ಮುಖ್ಯಮಂತ್ರಿ ನಿವಾಸದಿಂದ ಮತ್ತು ರಾಜ್ಯಪಾಲರ ಭವನಕ್ಕೆ ಹತ್ತಿರದಲ್ಲಿರುವ ಸರ್ಕ್ಯುಲರ್ ರಸ್ತೆಯಲ್ಲಿನ ಬಂಗಲೆಯನ್ನು ಮಂಜೂರು ಮಾಡಿತ್ತು.

ಸಾಮ್ರಾಟ್ ಚೌಧರಿ ನೇತೃತ್ವದ ಬಿಜೆಪಿ ಆಡಳಿತದ ಒತ್ತಡದ ಮೇರೆಗೆ ಅವರು ಸುಮಾರು 2 ಕಿ.ಮೀ ದೂರದಲ್ಲಿರುವ ಕೌಟಿಲ್ಯ ನಗರದಲ್ಲಿರುವ ತಮ್ಮ ಖಾಸಗಿ ಮನೆಗೆ ಸ್ಥಳಾಂತರಗೊಂಡಿದ್ದಾರೆ. ಪಕ್ಷದ ನಾಯಕ ಮತ್ತು ಸಚಿವ ನಂದ ಕಿಶೋರ್ ರಾಮ್‌ಗೆ 10, ಸರ್ಕ್ಯುಲರ್ ರಸ್ತೆಯಲ್ಲಿರುವ ಈ ಬಂಗಲೆಯನ್ನು ಹಂಚಿಕೆ ಮಾಡಲಾಗಿದೆ.

ಕಳೆದ ವರ್ಷ ನವೆಂಬರ್‌ನಲ್ಲಿ ನಿತೀಶ್ ಕುಮಾರ್ ಸರಕಾರ 10, ಸರ್ಕ್ಯುಲರ್ ರಸ್ತೆಯನ್ನು ಉಪ ಮುಖ್ಯಮಂತ್ರಿ ನಿವಾಸವಾಗಿ ಗೊತ್ತುಪಡಿಸಬೇಕು ಎಂದು ಆದೇಶಿಸಿದಾಗ ಮತ್ತು ಆರ್‌ಜೆಡಿ ನಾಯಕಿಗೆ ರಾಜ್ಯ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕಿಯಾಗಿ ಮತ್ತೊಂದು ಬಂಗಲೆಯನ್ನು ಮಂಜೂರು ಮಾಡಿದಾಗ ರಾಬ್ರಿ ದೇವಿ ಅವರನ್ನು ಮನೆ ಖಾಲಿ ಮಾಡಲು ಕೇಳಲಾಗಿತ್ತು.

ಆದರೆ ರಾಬ್ರಿ ದೇವಿ ಅವರು ಹಾರ್ಡಿಂಜ್ ರಸ್ತೆಗೆ ಸ್ಥಳಾಂತರಗೊಳ್ಳಲು ನಿರಾಕರಿಸಿದರು, ಅದು ಸರ್ಕ್ಯುಲರ್ ರಸ್ತೆಯಷ್ಟು ವಿಶಾಲವಾಗಿಲ್ಲ, ಜತೆಗೆ ಅಲ್ಲಿ ವಾಸವಾದ ನಂತರ ಹಿಂದಿನ ಎಲ್ಲಾ ನಿವಾಸಿಗಳ ರಾಜಕೀಯ ಅದೃಷ್ಟವು ಕುಸಿದ ಕಾರಣ ಅವರನ್ನು ದುರದೃಷ್ಟಕರ ಎಂದು ಪರಿಗಣಿಸಲಾಗಿತ್ತು.

ಕಳೆದ ತಿಂಗಳು ರಾಜ್ಯ ಕಟ್ಟಡ ನಿರ್ಮಾಣ ಇಲಾಖೆಯು ರಾಬ್ರಿ ದೇವಿಯನ್ನು ಜೂನ್ 29ರೊಳಗೆ ಹಾರ್ಡಿಂಜ್ ರಸ್ತೆಗೆ ಸ್ಥಳಾಂತರಗೊಂಡು ಸರ್ಕ್ಯುಲರ್ ರಸ್ತೆಯ ಸ್ವಾಧೀನವನ್ನು ಬಿಟ್ಟುಕೊಡುವಂತೆ ಆದೇಶಿಸಿ ಹೊಸ ಆದೇಶವನ್ನು ಹೊರಡಿಸಿದಾಗ, ಅವರು ಕೋಪಗೊಂಡು ಪ್ರತಿಕ್ರಿಯಿಸಿದ್ದರಲ್ಲದೆ, ಹಿಂದೆ ಒಮ್ಮೆ ತಮ್ಮ ಸಂಪುಟದಲ್ಲಿ ಸೇವೆ ಸಲ್ಲಿಸಿದ್ದ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರಿಗೆ ತಮ್ಮನ್ನು ಬಂಗಲೆಯಿಂದ ಬಲವಂತವಾಗಿ ಹೊರಹಾಕುವಂತೆ ಸವಾಲು ಹಾಕಿದರು.

ಈ ಹಠಮಾರಿತನವು ವಿರೋಧ ಪಕ್ಷದಲ್ಲಿ ನಕಾರಾತ್ಮಕ ಪ್ರಚಾರವನ್ನು ಗಳಿಸಿದ ನಂತರ ಅವರು ತಮ್ಮ ನಿಲುವನ್ನು ಬದಲಾಯಿಸಿಕೊಂಡರು, ಆರ್‌ಜೆಡಿ ನಾಯಕರು ಕುಟುಂಬದ ಎಲ್ಲಾ ಸದಸ್ಯರಿಗೆ ಪ್ರತ್ಯೇಕ ಮನೆಗಳನ್ನು ಹೊಂದಲು ಒತ್ತಾಯಿಸುತ್ತಿದ್ದಾರೆ ಎಂದು ಎನ್‌ಡಿಎ ನಾಯಕರು ಆರೋಪಿಸಿದರು.

ತೇಜಸ್ವಿ, ತೇಜ್ ಪ್ರತಾಪ್‌ಗೂ ಸರಕಾರಿ ಬಂಗಲೆ

ರಾಬ್ರಿ ದೇವಿಯ ಕಿರಿಯ ಮಗ, ಆರ್‌ಜೆಡಿಯ ಕಾರ್ಯಕಾರಿ ಅಧ್ಯಕ್ಷ ತೇಜಸ್ವಿ ಯಾದವ್, ರಾಜ್ಯ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕನ ಸಾಮರ್ಥ್ಯದಲ್ಲಿ ಅವರಿಗೆ ಹಂಚಿಕೆ ಮಾಡಲಾದ ಪೋಲೊ ರಸ್ತೆಯ ಮಂತ್ರಿ ಬಂಗಲೆಯನ್ನು ಹೊಂದಿದ್ದಾರೆ. ಕುಟುಂಬದಿಂದ ದೂರವಾಗಿರುವ ಮತ್ತು ಕುಟುಂಬದಿಂದ ಹೊರಹಾಕಲ್ಪಟ್ಟ ಅವರ ಹಿರಿಯ ಮಗ ತೇಜ್ ಪ್ರತಾಪ್ ಯಾದವ್ ಕೂಡ ಸರಕಾರಿ ಬಂಗಲೆಯಲ್ಲಿ ವಾಸಿಸುತ್ತಿದ್ದಾರೆ, ಅವರು ತಮ್ಮ ಹೊಸ ಜನಶಕ್ತಿ ಜನತಾದಳವನ್ನು ನಡೆಸಲು ಸ್ಥಳಕ್ಕಾಗಿ ಸರಕಾರಕ್ಕೆ ಅರ್ಜಿ ಸಲ್ಲಿಸಿದ ನಂತರ ಅವರಿಗೆ ನೀಡಲಾಗಿದೆ.

ಧರ್ಮಕ್ಕಾಗಿ ತ್ಯಾಗ ಮಾಡಿದ ಹೋರಾಟಗಾರರನ್ನು ಗೌರವಿಸಿ: ಮೋಹನ್ ಭಾಗವತ್

ವಿಭಜನೆಯ ಬಳಿಕ ಬಂದವರು ನಿರಾಶ್ರಿತರಲ್ಲ

ನಾಗ್ಪುರ: 1947ರ ಭಾರತ ವಿಭಜನೆಯ ಬಳಿಕ ಪಾಕಿಸ್ತಾನದಿಂದ ಭಾರತಕ್ಕೆ ಬಂದವರನ್ನು 'ನಿರಾಶ್ರಿತರು' ಎಂದು ಕರೆಯುವುದು ಸರಿಯಲ್ಲ. ಅವರು ತಮ್ಮ ಮಾತೃಭೂಮಿ ಮತ್ತು ಧರ್ಮದ ಮೇಲಿನ ಪ್ರೀತಿಯಿಂದ ಎಲ್ಲವನ್ನೂ ತ್ಯಜಿಸಿದ 'ಹೋರಾಟದ ಯೋಧರು' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ನಾಗ್ಪುರದಲ್ಲಿ ನಡೆದ ಸಿಂಧು ಎಜುಕೇಶನ್ ಸೊಸೈಟಿಯ 75ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ವಿಭಜನೆಯ ವೇಳೆ ತಮ್ಮ ಮನೆ, ವ್ಯವಹಾರ, ಆಸ್ತಿ ಮತ್ತು ಹಲವು ತಲೆಮಾರುಗಳಿಂದ ಕಟ್ಟಿಕೊಂಡಿದ್ದ ಸಂಪತ್ತನ್ನು ಬಿಟ್ಟು ಭಾರತವನ್ನು ಆಯ್ಕೆ ಮಾಡಿಕೊಂಡವರು ಕೇವಲ ಸ್ಥಳಾಂತರಗೊಂಡ ವರಲ್ಲ, ರಾಷ್ಟ್ರ ಮತ್ತು ಧರ್ಮಕ್ಕಾಗಿ ತ್ಯಾಗ ಮಾಡಿದ ಹೋರಾಟಗಾರರು ಎಂದು ಹೇಳಿದರು. ಅವರು ನಿರಾಶ್ರಿತರಲ್ಲ, ಆ ಪದವನ್ನು ಆಗ ತಪ್ಪಾಗಿ ಬಳಸಲಾಯಿತು. ಭಾರತವನ್ನು ಒಗ್ಗೂಡಿಸಿ ಉಳಿಸಿಕೊಳ್ಳುವ ಹೋರಾಟದಲ್ಲಿ ನಾವು ಎಲ್ಲರೂ ಸೋತಿದ್ದೇವೆ. ಆದರೆ ಅವರು ಸಂಪತ್ತು ಅಥವಾ ವೃತ್ತಿಯನ್ನು ಆಯ್ಕೆ ಮಾಡಲಿಲ್ಲ. ಅವರು ದೇಶ ಮತ್ತು ಧರ್ಮವನ್ನು ಆಯ್ಕೆ ಮಾಡಿಕೊಂಡರು. ಅದಕ್ಕಾಗಿ ಅವರನ್ನು ಹೋರಾಟದ ಯೋಧರು ಎಂದು ಕರೆಯಬೇಕು ಎಂದು ಭಾಗವತ್ ಹೇಳಿದರು.

ಭಾರತಕ್ಕೆ ಬಂದವರು ತಮ್ಮ ಧರ್ಮವನ್ನು ಭಯವಿಲ್ಲದೆ ಆಚರಿಸಬಹುದಾದ ದೇಶವಾಗಿ ಭಾರತವನ್ನು ಜಾಗೃತಿಯಿಂದ ಆಯ್ಕೆ ಮಾಡಿಕೊಂಡಿದ್ದರು. ತಮ್ಮ ಎಲ್ಲವನ್ನೂ ಕಳೆದುಕೊಂಡರೂ ದೇಶ ಮತ್ತು ಧರ್ಮದ ಮೇಲಿನ ನಂಬಿಕೆಯನ್ನು ಕೈಬಿಡಲಿಲ್ಲ ಎಂದು ಅವರು ತಿಳಿಸಿದರು. ಜೀವನದಲ್ಲಿ ಎದುರಾಗುವ ಸಂಕಷ್ಟಗಳ ಮುಂದೆ ಯಾರೂ ಕೈಚೆಲ್ಲಬಾರದು. ಪರಿಸ್ಥಿತಿ ಅಥವಾ ವಿಧಿಯ ಮುಂದೆ ಅಸಹಾಯಕರಾಗದೆ, ಸವಾಲುಗಳನ್ನು ಧೈರ್ಯದಿಂದ ಎದುರಿಸಿ ನಿರಂತರ ಪ್ರಯತ್ನ ಮಾಡುವವರೇ ಅಂತಿಮವಾಗಿ ಯಶಸ್ಸು ಸಾಧಿಸುತ್ತಾರೆ ಎಂದು ಭಾಗವತ್ ಹೇಳಿದರು.

ಶಿಕ್ಷಣದಿಂದ ದೇಶದ ಭವಿಷ್ಯ ಬಲ

ಶಿಕ್ಷಣವು ಕೇವಲ ಉದ್ಯೋಗ ಪಡೆಯುವ ಸಾಧನವಾಗಿರಬಾರದು. ಅದು ಉತ್ತಮ ವ್ಯಕ್ತಿತ್ವ, ನೈತಿಕ ಮೌಲ್ಯಗಳು, ಶಿಸ್ತು ಹಾಗೂ ಸಮಾಜದ ಬಗ್ಗೆ ಜವಾಬ್ದಾರಿಯುತ ಮನೋಭಾವವನ್ನು ಬೆಳೆಸುವ ಪ್ರಕ್ರಿಯೆಯಾಗಿರಬೇಕು. ಮೌಲ್ಯಾಧಾರಿತ ಶಿಕ್ಷಣವು ವ್ಯಕ್ತಿಗೆ ಸರಿ–ತಪ್ಪುಗಳನ್ನು ಗುರುತಿಸುವ ವಿವೇಕವನ್ನು ನೀಡುತ್ತದೆ. ಈ ಮೌಲ್ಯಗಳು ಕೇವಲ ಪಠ್ಯಪುಸ್ತಕಗಳಿಂದ ಮಾತ್ರವಲ್ಲ, ಶಿಕ್ಷಕರ ನಡವಳಿಕೆ, ಅವರ ಆದರ್ಶಗಳು ಮತ್ತು ಅವರು ವಿದ್ಯಾರ್ಥಿಗಳಿಗೆ ನೀಡುವ ಸಂಸ್ಕಾರಗಳಿಂದಲೂ ರೂಪುಗೊಳ್ಳುತ್ತವೆ. ಶಿಕ್ಷಣದ ಅಂತಿಮ ಉದ್ದೇಶ ಉತ್ತಮ ಉದ್ಯೋಗಿಗಳನ್ನು ಸೃಷ್ಟಿಸುವುದಲ್ಲ, ಉತ್ತಮ ಮಾನವರನ್ನು ರೂಪಿಸುವುದಾಗಿದೆ. ಸಮಾಜದ ಕಲ್ಯಾಣಕ್ಕಾಗಿ ಸೇವಾ ಮನೋಭಾವ ಹೊಂದಿರುವ ನಾಗರಿಕರನ್ನು ರೂಪಿಸುವ ಶಿಕ್ಷಣವೇ ದೇಶದ ಭವಿಷ್ಯವನ್ನು ಬಲಪಡಿಸುತ್ತದೆ ಎಂದು ಮೋಹನ್ ಭಾಗವತ್ ಹೇಳಿದರು.

ಬೆದರಿಸಿ ಭೂ ಕಬಳಿಕೆಗೆ ಯತ್ನ | ಪ್ರಿಯಾಂಕಾ ಗಾಂಧಿ, ಪತಿ ವಾದ್ರಾ ವಿರುದ್ಧ ಬಿಜೆಪಿ ಆರೋಪ

ವಾದ್ರಾ ಕುಟುಂಬದಿಂದ ಭೂಕಬಳಿಕೆ: ಬಿಜೆಪಿ

ಡೆಹ್ರಾಡೂನ್: ಉತ್ತರಾಖಂಡದಲ್ಲಿ 4 ಎಕರೆ ಭೂಮಿ ಕಬಳಿಸುವ ಪ್ರಯತ್ನದಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಅವರ ಪತಿ ರಾಬರ್ಟ್ ವಾದ್ರಾ ಭಾಗಿಯಾಗಿದ್ದು, ಜಮೀನು ಜಾಗ ಖಾಲಿ ಮಾಡುವಂತೆ 90 ವರ್ಷದ ವೃದ್ಧೆಗೆ ಬೆದರಿಕೆ ಹಾಕಲಾಗುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

ಉತ್ತರಾಖಂಡದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ, ಗಾಂಧಿ ವಾದ್ರಾ ಕುಟುಂಬದ ನಿಜವಾದ ವ್ಯವಹಾರ ರಾಜಕೀಯ ಅಲ್ಲ, ಜನರ ಭೂಮಿ ಕಬಳಿಸುವುದಾಗಿದೆ ಎಂದರು. ಪ್ರಿಯಾಂಕಾ ಗಾಂಧಿ ಪತಿ ರಾಬರ್ಟ್ ವಾದ್ರಾ, ಅವರ ಸಹೋದರಿ ಸಾಯಿರಾ ವಾದ್ರಾ, ಉತ್ತರಾಖಂಡದ ಉಧಮ್ ಸಿಂಗ್ ನಗರ ಜಿಲ್ಲೆಯ ಕಿಚ್ಚಾದಲ್ಲಿ 4 ಎಕರೆ ಭೂಮಿಯನ್ನ ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಆ ಜಮೀನಿನ ಮೂಲ ಭೂ ಗುತ್ತಿಗೆ ದಿವಂಗತ ಕುಲ್ಸುಮ್ ಖಾನ್ ಹೆಸರಿನಲ್ಲಿದೆ. ಪ್ರಸ್ತುತ ಆ ಆಸ್ತಿಯನ್ನು ಅವರ 90 ವರ್ಷದ ಸಹೋದರಿ ನಸ್ರೀನ್ ಖಾನ್ ನೋಡಿಕೊಳ್ಳುತ್ತಿದ್ದಾರೆ. ಜು.2ರಂದು ತಡರಾತ್ರಿ ಕಿಚ್ಚಾಕ್ಷೇತ್ರದ ಕಾಂಗ್ರೆಸ್ ಶಾಸಕ ತಿಲಕ್ ರಾಜ್ ಬೆಹಾರ್, ಸುಮಾರು 100 ಬೆಂಬಲಿಗರೊಂದಿಗೆ ಬಂದು, ನಸ್ರೀನ್ ಖಾನ್ ಅವರು ಜಮೀನನ್ನು ಖಾಲಿ ಮಾಡದಿದ್ದರೆ ಕೆಟ್ಟ ಪರಿಣಾಮ ಎದುರಿಸಬೇಕಾಗುತ್ತೆ ಎಂದು ಬೆದರಿಕೆ ಹಾಕಿ ಹೋಗಿದ್ದಾರೆ ಎಂದು ದೂರಿದ್ದಾರೆ.

ಕಾನೂನು ಮಾರ್ಗಗಳು ವಿಫಲವಾದಾಗ ಕಾಂಗ್ರೆಸ್ ನಾಯಕರು ಜನರನ್ನು ಬೆದರಿಸುವ ಕೆಲಸ ಮಾಡುತ್ತಾರೆ.

ಹಾಗೆಯೇ ಸಾಯಿರಾ ವಾದ್ರಾ, ಕಾನೂನು ಮಾರ್ಗದಿಂದ ಪಡೆಯಲ ಆಗುವುದಿಲ್ಲ ಎನ್ನುವುದು ಗೊತ್ತಾಗಿ ವೃದ್ಧೆಯನ್ನು ಬೆದರಿಸುತ್ತಿದ್ದಾರೆ. ಆದರೆ ನಿಜವಾಗಿಯೂ ಇದರ ಹಿಂದಿರೋದು ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಪತಿ ರಾಬರ್ಟ್ ವಾದ್ರಾ, ಭಂಡಾರಿ ಎಂದರು. ಇದು ಸುಳ್ಳಲ್ಲ, ಖುದ್ದು ನಸ್ರೀನ್ ಖಾನ್ ಅವರ ಹೇಳಿಕೆಯನ್ನು ಪಡೆದೇ ನಾವು ಹೇಳುತ್ತಿದ್ದೇವೆ ಎಂದರಲ್ಲದೆ, ಕಾಂಗ್ರೆಸ್ ಕಾರ್ಯಕರ್ತರು ಆಸ್ತಿಯನ್ನುವಾದ್ರಾ ಕುಟುಂಬಕ್ಕೆ ಹಸ್ತಾಂತರಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ನಸ್ರೀನ್ ಖಾನ್ ಹೇಳಿಕೊಂಡಿದ್ದಾರೆ. ಈ ವಿಷಯದಲ್ಲಿ ಪ್ರಿಯಾಂಕಾ ಗಾಂಧಿ ಅವರ ಕೈವಾಡ ಇದೆ. ಪ್ರಿಯಾಂಕಾ ಅವರೇ ಕಾಂಗ್ರೆಸ್ ಶಾಸಕರಿಗೆ ಕರೆ ಮಾಡಿ 90 ವರ್ಷದ ವೃದ್ಧೆಯನ್ನು ಬೆದರಿಸಿ, ಭೂಮಿ ಸ್ವಾಧೀನಪಡಿಸಿಕೊಳ್ಳುವಂತೆ ಸೂಚನೆ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಸಂಸ್ಕೃತಿ ಅನಾವರಣ

ಕಾಂಗ್ರೆಸ್ ಪಕ್ಷವು ಮುಸ್ಲಿಮರು ಮತ್ತು ಬಡವರ ಪರ ನಿಲ್ಲುವುದಾಗಿ ಹೇಳಿಕೊಳ್ಳುತ್ತದೆ. ಆದರೆ 90 ವರ್ಷದ ಮುಸ್ಲಿಂ ಮಹಿಳೆಯೊಬ್ಬರಿಗೆ ತಮ್ಮ ಜಮೀನು ಖಾಲಿ ಮಾಡುವಂತೆ ಬೆದರಿಕೆ ಹಾಕಲಾಗುತ್ತಿದೆ. ಕಾಂಗ್ರೆಸ್ ಯಾವುದೇ ಒಂದು ಜಾಗದ ಮೇಲೆ ಕಣ್ಣಿಟ್ಟರೂ, ಅದನ್ನು ಪಡೆಯುವ ವರೆಗೆ ಬಿಡುವುದಿಲ್ಲ. ತಮ್ಮ ಬೆಂಬಲಿಗರನ್ನು ಕಳಿಸಿ ಪದೇ ಪದೇ ಬೆದರಿಕೆ ಹಾಕುತ್ತಾರೆ, ದೇಶದ ಜನ ಇದನ್ನು ಅರ್ಥಮಾಡಿಕೊಳ್ಳಬೇಕು ಎಂದು ಭಂಡಾರಿ ಎಚ್ಚರಿಸಿದ್ದಾರೆ.

ತೈಲ ಕಂಪನಿಗಳಿಗೆ 74,781 ಕೋಟಿ ನಷ್ಟ

ದೆಹಲಿ: ಮಧ್ಯಪ್ರಾಚ್ಯ ಯುದ್ಧದ ವೇಳೆ ತೈಲ ಕಂಪನಿಗಳು ಅಸಲು ವೆಚ್ಚಕ್ಕಿಂತ ಕಡಿಮೆ ಬೆಲೆಗೆ ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಮಾರಾಟ ಮಾಡಿದ್ದರಿಂದ ಜೂನ್ 30ರ ವರೆಗಿನ ಅವಧಿಗೆ ಒಟ್ಟು 74,781 ಕೋಟಿ ರು. ನಷ್ಟ ಅನುಭವಿಸಿವೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಗುರುವಾರ ತಿಳಿಸಿದ್ದಾರೆ. ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಮಾರ್ಚ್, ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಸಂಕಷ್ಟದ ಅವಧಿಯಲ್ಲೂ ದೇಶದ ಯಾವುದೇ ಭಾಗದಲ್ಲಿ ತೈಲ ಸರಬರಾಜಿನಲ್ಲಿ ವ್ಯತ್ಯಯವಾಗಿಲ್ಲ. ಎಲ್ಲೂ ಪೆಟ್ರೋಲ್ ಬಂಕ್‌ಗಳು ಮುಚ್ಚಿಲ್ಲ ಅಥವಾ ಜನರು ಕ್ಯೂ ನಿಲ್ಲುವ ಪರಿಸ್ಥಿತಿ ಬರಲಿಲ್ಲ. ಬಿಕ್ಕಟ್ಟನ್ನು ಭಾರತ ಯಶಸ್ವಿಯಾಗಿ ನಿಭಾಯಿಸಿದೆ ಎಂದು ಸಚಿವರು ಹೆಮ್ಮೆಯಿಂದ ಹೇಳಿದರು.

ಮುಂದಿನ 6ರಿಂದ 12 ತಿಂಗಳುಗಳಲ್ಲಿ ದೇಶದ ತೈಲ ಸಂಸ್ಕರಣಾ ಸಾಮರ್ಥ್ಯವನ್ನು ವಾರ್ಷಿಕ 300 ಮಿಲಿಯನ್ ಮೆಟ್ರಿಕ್ ಟನ್‌ಗಳಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಕಡಿತಗೊಳಿಸಲಾಗುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆಗಳು ಮುಂದಿನ ಕೆಲವು ವಾರಗಳ ಕಾಲ ಇದೇ ರೀತಿ ಇಳಿಕೆಯಲ್ಲೇ ಮುಂದುವರಿದರೆ, ದರ ಕಡಿತದ ಬಗ್ಗೆ ಕೇಳುವುದು ನ್ಯಾಯಸಮ್ಮತವಾದ ಪ್ರಶ್ನೆಯಾಗುತ್ತದೆ ಎಂದು ಹೇಳುವ ಮೂಲಕ ಮುಂಬರುವ ದಿನಗಳಲ್ಲಿ ಬೆಲೆ ಇಳಿಕೆಯಾಗುವ ಸುಳಿವು ನೀಡಿದರು.

ಅಮೆರಿಕ ಮತ್ತು ಇರಾನ್ ನಡುವೆ ಬಿಕ್ಕಟ್ಟು ಕೊನೆಗೊಳಿಸಲು ಒಪ್ಪಂದ ಏರ್ಪಟ್ಟ ನಂತರ ಜೂನ್ ಕೊನೆಯ ವಾರದಲ್ಲಿ ಕಚ್ಚಾ ತೈಲ ಬೆಲೆಗಳು ಇಳಿಕೆಯಾಗಲು ಪ್ರಾರಂಭಿಸಿವೆ. ಇದರ ಬೆನ್ನಲ್ಲೇ ಜುಲೈ 1ರಿಂದ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ಮತ್ತು ವಿತರಣೆಯ ಮೇಲಿದ್ದ ತಾತ್ಕಾಲಿಕ ನಿರ್ಬಂಧಗಳನ್ನು ಕೇಂದ್ರ ಸರಕಾರ ಹಿಂಪಡೆದಿದೆ.

ಸದ್ಯ ದರ ಇಳಿಕೆಯ ಲಾಭ ಏಕಿಲ್ಲ?

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಈಗ ಕಚ್ಚಾ ತೈಲ ಬೆಲೆಗಳು ಇಳಿಕೆಯಾಗಿದ್ದರೂ, ತೈಲ ಕಂಪನಿಗಳು ಇನ್ನೂ ನಷ್ಟದಲ್ಲಿಯೇ ಇವೆ. ತೈಲ ಕಂಪನಿಗಳು ಸಾಮಾನ್ಯವಾಗಿ ತಮಗೆ ಬೇಕಾದ ಕಚ್ಚಾ ತೈಲವನ್ನು ಕನಿಷ್ಠ ಎರಡು ತಿಂಗಳು ಮುಂಚಿತವಾಗಿಯೇ ಖರೀದಿಸುತ್ತವೆ, ಅಂದರೆ ಈಗ ಕಂಪನಿಗಳು ಸಂಸ್ಕರಿಸುತ್ತಿರುವ ತೈಲವು ಏಪ್ರಿಲ್ ಅಥವಾ ಮೇ ತಿಂಗಳ ಆರಂಭದಲ್ಲಿ ಅಂದರೆ ಪಶ್ಚಿಮ ಏಷ್ಯಾ ಬಿಕ್ಕಟ್ಟು ಉತ್ತುಂಗದಲ್ಲಿದ್ದಾಗ ದುಬಾರಿ ಬೆಲೆಗೆ ಖರೀದಿಸಿದ್ದಾಗಿದೆ. ಹೀಗಾಗಿ ಜಾಗತಿಕವಾಗಿ ದರ ಇಳಿಕೆಯಾಗಿದ್ದರೂ ಅದರ ಲಾಭ ತಕ್ಷಣಕ್ಕೆ ಸಿಗುತ್ತಿಲ್ಲ ಎಂದು ಸಚಿವರು ವಿವರಿಸಿದರು.

ಚಲಿಸುತ್ತಿದ್ದ ಬಸ್‌ನಿಂದ ಜಿಗಿದು ಹೃದಯಾಘಾತದಿಂದ ಬಳಲುತ್ತಿದ್ದ ವ್ಯಕ್ತಿಯ ಪ್ರಾಣ ಕಾಪಾಡಿದ ಕೇರಳದ ದಾದಿಯರು

ನರ್ಸ್‌ಗಳಿಂದ ಪ್ರಾಣ ರಕ್ಷಣೆ

ಎರ್ನಾಕುಲಂ (ಕೇರಳ): ಚಲಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಿಂದ ಜಿಗಿದ ಇಬ್ಬರು ನರ್ಸ್‌ಗಳು ಹೃದಯಾಘಾತದಿಂದ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿ ನರಳಾಡುತ್ತಿದ್ದ ವ್ಯಕ್ತಿಯೊಬ್ಬನ ಜೀವ ಕಾಪಾಡಿರುವ ಘಟನೆ ಕೇರಳದ ಎರ್ನಾಕುಲಂ ಜಿಲ್ಲೆಯಲ್ಲಿ ನಡೆದಿದೆ. ಬೆಂಗಳೂರಿನ ನರ್ಸಿಂಗ್ ವಿದ್ಯಾರ್ಥಿನಿ ಆದ್ರ್ರಾ ರಾಜ್ ಮತ್ತು ಅಂಗಮಾಲಿಯ ಎಲ್‌ಎಫ್ ಆಸ್ಪತ್ರೆಯ ಸ್ಟಾಫ್‌ನರ್ಸ್ ಅಂಜಲಿ ಬೈಜು ಅವರು ಬಸ್‌ನಿಂದ ಜಿಗಿದು ಹೃದಯ ಶ್ವಾಸಕೋಶ ಪುನರುಜ್ಜೀವನ (ಸಿಪಿಆರ್) ಮಾಡುವ ಮೂಲಕ 43 ವರ್ಷದ ವ್ಯಕ್ತಿಯ ಪ್ರಾಣವನ್ನು ರಕ್ಷಿಸಿದ್ದಾರೆ.

ಬುಧವಾರ ಬೆಳಿಗ್ಗೆ ಕಾಲಡಿ ಸೇತುವೆಯ ಬಳಿಯ ಎಂಸಿ ರಸ್ತೆಯಲ್ಲಿ ಈ ಘಟನೆ ನಡೆದಿದೆ. ಒಕ್ಕಲ್ ಬಳಿಯ ತನ್ನಿಪುಳದಲ್ಲಿ ಲಾಟರಿ ಅಂಗಡಿ ನಡೆಸುತ್ತಿರುವ ಸಿನೋಜ್ ಅವರಿಗೆ ಎದೆನೋವು ಕಾಣಿಸಿಕೊಂಡಿದ್ದು, ತಾನೇ ಕಾರು ಚಲಾಯಿಸಿಕೊಂಡು ಆಸ್ಪತ್ರೆಗೆ ತೆರಳುತ್ತಿದ್ದಾಗ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿ ಕಾರಿನ ಒಳಗಡೆ ಕುಸಿದು ಬಿದಿದ್ದಾರೆ. ಇದನ್ನು ನೋಡಿದ ಬಸ್‌ನಲ್ಲಿದ್ದ ನರ್ಸ್‌ಗಳು, ಕೂಡಲೇ ಜಿಗಿದು ಕಾರಿನ ಬಳಿ ಧಾವಿಸಿದ್ದಾರೆ.

ಸಿನೋಜ್ ಅಂಗಮಾಲಿಯ ಆಸ್ಪತ್ರೆಗೆ ತಲುಪುವವರೆಗೂ ಇಬ್ಬರೂ ಕಾರಿನೊಳಗೆ ಸಿಪಿಆರ್ ಮುಂದುವರೆಸಿದ್ದಾರೆ. ಹೀಗಾಗಿ ಅವರು ಆಸ್ಪತ್ರೆಗೆ ಬರುವಷ್ಟರಲ್ಲಿ ಚೇತರಿಸಿಕೊಂಡಿದ್ದರು ಎಂದು ವೈದ್ಯರು ಹೇಳಿದ್ದಾರೆ. ಪರೀಕ್ಷೆಯ ನಂತರ ಅಪಧಮನಿ ಬ್ಲಾಕ್ ಆಗಿರುವುದು ಕಂಡುಬಂದಿತು. ಕೂಡಲೇ ಅವರಿಗೆ ಆಂಜಿಯೋಪ್ಲ್ಯಾಸ್ಟಿ ಮಾಡಲಾಯಿತು. ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಉನ್ನತ ವೈದ್ಯಕೀಯ ಕೇಂದ್ರಕ್ಕೆ ಸ್ಥಳಾಂತರಿಸುವ ನಿರೀಕ್ಷೆಯಿದೆ. ಸ್ಥಳೀಯ ನಿವಾಸಿಗಳಿಂದಲೂ ರಕ್ಷಣೆ ಸಾಧ್ಯವಾಯಿತು. ಸಿನೋಜ್ ಎದೆನೋವಿನಿಂದ ಆಸ್ಪತ್ರೆಗೆ ಸಾಗಿಸುತ್ತಿದ್ದಾರೆ ಎಂದು ತಿಳಿದ ನಂತರ ಪ್ರಯಾಣಿಕರೊಬ್ಬರು ಕಾರನ್ನು ಚಲಾಯಿಸಿದ್ದರೆ ಇತರರು ಆಂಬ್ಯುಲೆನ್ಸ್ ವ್ಯವಸ್ಥೆಗೆ ನೆರವಾಗಿದ್ದಾರೆ. ನರ್ಸ್‌ಗಳ ಸಕಾಲಿಕ ನೆರವು ವ್ಯಾಪಕ ಮೆಚ್ಚುಗೆಯನ್ನು ಗಳಿಸಿದೆ. ವ್ಯಕ್ತಿಯ ಪ್ರಾಣ ಉಳಿಸಿದ್ದಕ್ಕಾಗಿ ಅವರ ತ್ವರಿತ ಪ್ರತಿಕ್ರಿಯೆಯನ್ನು ಅನೇಕರು ಶ್ಲಾಘಿಸಿದ್ದಾರೆ.

ಶಿವಾಜಿ ಮಹಾರಾಜರ ಶೌರ್ಯಕ್ಕೆ ಸಾಕ್ಷಿಯಾದ ಕೋಟೆಗೆ ಕಳಂಕ ಆಗುತ್ತಿದೆ ಎಂದು ಅಸಮಾಧಾನ

ಸಿಯಾ ಪಾಯಿಂಟ್ ಹೆಸರು: ಸ್ಥಳೀಯರ ಆಕ್ರೋಶ

ಮುಂಬೈ: ಶಿವಾಜಿ ಮಹಾರಾಜರ ಶೌರ್ಯಕ್ಕೆ ಸಾಕ್ಷಿಯಾದ ಲೋಹಗಡ ಕೋಟೆಗೆ 'ಸಿಯಾ ಪಾಯಿಂಟ್' ಹೆಸರಲ್ಲಿ ಕರೆದು ಕಳಂಕ ತರಲಾಗುತ್ತಿದೆ ಎಂದು ಸ್ಥಳೀಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಲೋಹಗಡ ಕೋಟೆ ಶತಮಾನಗಳ ಇತಿಹಾಸ ಹೊಂದಿದೆ. ಯುನೆಸ್ಕೋ ವಿಶ್ವ ಪರಂಪರೆ ಪಟ್ಟಿಗೆ ಸೇರಿಸಲಾದ ಕೋಟೆಗಳಲ್ಲಿ ಇದು ಒಂದಾಗಿದೆ, ಅಲ್ಲದೆ ಶಿವಾಜಿ ಮಹಾರಾಜರ ಶೌರ್ಯಕ್ಕೆ ಈ ಕೋಟೆ ಹೆಸರುವಾಸಿಯಾಗಿದೆ. ಇಂತಹ ಕೋಟೆಯ ಪ್ರತಿಷ್ಠೆಗೆ ಕೇತನ್ ಅಗರ್ವಾಲ್ ಹತ್ಯೆಯ ಬಳಿಕ ಕಳಂಕ ಎದುರಾಗಿದೆ. ವಿಂಚು ಕಡ ಭಾಗಕ್ಕೆ 'ಸಿಯಾ ಪಾಯಿಂಟ್' ಎಂದು ಕರೆಯಲಾಗುತ್ತಿದೆ. ಈ ರೀತಿಯ ಕಳಂಕ ತರುವುದು ಸರಿಯಲ್ಲ ಎಂದು ಸ್ಥಳೀಯರು ಅಸಮಾಧಾನ ಹೊರಹಾಕಿದ್ದಾರೆ. ಈ ಕೊಲೆ ರಾಜ್ಯಾದ್ಯಂತ ಜನರಲ್ಲಿ ಲೋಹ ಗಡ ಕೋಟೆಯ ಬಗ್ಗೆ ನಕಾರಾತ್ಮಕ ಗ್ರಹಿಕೆಯನ್ನು ಸೃಷ್ಟಿಸುತ್ತಿದೆ. ನಿರ್ದಿಷ್ಟ ವ್ಯಕ್ತಿಗಳು ಈ ಅಪರಾಧ ವನ್ನು ಮಾಡಿರುವುದರಿಂದ, ಕೋಟೆಯ ಇತಿ ಹಾಸ ಅಥವಾ ಪರಂಪರೆಯ ಮೇಲೆ ಪರಿಣಾಮ ಬೀರುತ್ತಿದೆ, ಇದು ಸರಿಯಲ್ಲ ಎಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ.

ವಿಂಚು ಕಡ ಬೋರ್ಡ್ ಅಳವಡಿಸಿ: ಶಿವಾಜಿ ಮಹಾರಾಜರ ಅಭಿಮಾನಿಗಳು, ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮತ್ತು ಬಜರಂಗ ದಳದ ಪದಾಧಿಕಾರಿಗಳು ಸ್ಥಳೀಯರು, ಮಾರ್ಗ ದರ್ಶಕರು ಮತ್ತು ಪ್ರವಾಸಿಗರು ಈ ಸ್ಥಳವನ್ನು ವಿಂಚು ಕಡ ಎಂದು ಮಾತ್ರ ಕರೆಯಬೇಕೆಂದು ಒತ್ತಾಯಿಸಿದ್ದಾರಲ್ಲದೆ ಸ್ಥಳದಲ್ಲಿ ವಿಂಚು ಕಡ ಎಂಬ ಹೆಸರನ್ನು ಪ್ರದರ್ಶಿಸುವ ಬೋರ್ಡ್ ಅಳವಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಇಬ್ಬರು ಆರೋಪಿಗಳಲ್ಲಿ ಯಾರು ಕೋಟೆಯಿಂದ ಕೇತನ್‌ನನ್ನು ತಳ್ಳಿದ್ದು ಎಂಬುದು ಇನ್ನೂ ಪೊಲೀಸರಿಗೆ ಕಗ್ಗಂಟಾಗಿದೆ. ಈ ಬಗ್ಗೆ ಸಿಯಾ ಹೇಳಿಕೆ ಗೊಂದಲಕ್ಕೆ ಕಾರಣವಾಗಿದೆ. ಇದರಿಂದ ಆಕೆಗೆ ಸುಳ್ಳು ಪತ್ತೆ ಪರೀಕ್ಷೆ ಹಾಗೂ ಮಂಪರು ಪರೀಕ್ಷೆ ನಡೆಸಲು ಪೊಲೀಸರು ನ್ಯಾಯಾಲಯದ ಅನುಮತಿಗಾಗಿ ಕಾಯುತ್ತಿದ್ದಾರೆ.



ವಿಂಚು ಕಡ ಹೆಸರು ಹೇಗೆ ಬಂತು?

ಮರಾಠಿಯಲ್ಲಿ ವಿಂಚು ಎಂದರೆ ಚೇಳು ಮತ್ತು ಕಡ ಎಂದರೆ ಪರ್ವತ ಶಿಖರ ಅಥವಾ ಬಂಡೆ ಎಂದರ್ಥ. ಮೇಲಿನಿಂದ ನೋಡಿದಾಗ, ಈ ಭಾಗದ ಭೌಗೋಳಿಕ ರಚನೆಯು ಚೇಳಿನ ಬಾಲವನ್ನು ಹೋಲುತ್ತದೆ, ಆದ್ದರಿಂದ ಈ ಭಾಗಕ್ಕೆ ವಿಂಚು ಕಡ ಎಂಬ ಹೆಸರು ಬಂದಿದೆ. ಇದು ಕೋಟೆಯ ರಕ್ಷಣೆಗೆ ನಿರ್ಮಿಸಲಾದ ಕಾವಲು ಗೋಪುರವಾಗಿದೆ.

ಸುಳ್ಳು ಪತ್ತೆ ಪರೀಕ್ಷೆಗೆ ಸಿದ್ಧತೆ

ಜೂನ್ 18ರಂದು ಲೋಹಗಡ ಕೋಟೆಯ ಎತ್ತರದ ಪ್ರದೇಶದಿಂದ ಕೇತನ್ ಅಗರ್ವಾಲ್ ಅವರನ್ನು ಭಾವಿ ಪತ್ನಿ ಸಿಯಾ ಗೋಯಲ್ (20) ಮತ್ತು ಅವಳ ಪ್ರಿಯಕರ ಚೇತನ್ ಚೌಧರಿ (22) ತಳ್ಳಿ ಕೊಲೆಗೈದಿದ್ದರು. ಈ ಹತ್ಯೆಯಲ್ಲಿ ಸಿಯಾ ಮತ್ತು ಚೇತನ್ ಇಬ್ಬರ ಪಾತ್ರ ದೃಢಪಟ್ಟಿದೆ. ಕೇತನ್ ಜೊತೆ ನಗುನಗುತ್ತಲೇ ಇದ್ದ ಸಿಯಾ ಒಳಗೊಳಗೆ ಮಸಲತ್ತು ನಡೆಸಿ ಈ ಕೃತ್ಯ ಎಸಗಿದ್ದಳು. ಇನ್ನೂ ಇವಳ ನಗುವನ್ನು ಕುರುಡನಾಗಿ ನಂಬಿದ್ದ ಕೇತನ್, ವಿಷಕನ್ಯೆಯ ಯಾವ ಸಂಚನ್ನೂ ಅರಿಯದೆ ಮದುವೆಯ ಶಾಪಿಂಗ್‌ಗೆ 1 ಕೋಟಿ ರು. ಹಣ ಕೊಟ್ಟಿದ್ದ. ಆದರೆ ಆಕೆ ಅದನ್ನು ಪ್ರಿಯಕರನಿಗೆ ಕೊಟ್ಟು ಬ್ಯುಸಿನೆಸ್ ಮಾಡು, ಈ ಘಟನೆಯನ್ನು ಜನ ಮರೆತ ಬಳಿಕ ಮದುವೆಯಾಗೋಣ ಎಂದಿದ್ದಳು.

ಭಾವುಕತೆ

ಮುಳುಗುವ ಚೇಳು

ಒಂದು ನದಿಯ ದಡದಲ್ಲಿ ಕುಳಿತಿದ್ದ ಜೆನ್ ಗುರುಗಳೊಬ್ಬರಿಗೆ, ನದಿಯ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದ ಚೇಳೊಂದು ಕಣ್ಣಿಗೆ ಬಿತ್ತು. ಇದನ್ನು ನೋಡಿದ ಗುರು ತಕ್ಷಣವೇ ತಮ್ಮ ಕೈಯನ್ನು ನೀರಿಗೆ ಚಾಚಿ, ಆ ಚೇಳನ್ನು ರಕ್ಷಿಸಲು ತಮ್ಮ ಹಸ್ತದ ಮೇಲೆ ಎತ್ತಿಕೊಂಡರು. ಆದರೆ, ಚೇಳು ತನ್ನ ಸ್ವಭಾವದಂತೆ ಗುರುಗಳ ಕೈಗೆ ಕಚ್ಚಿತು. ನೋವಿನ ತೀವ್ರತೆಗೆ ಗುರುಗಳ ಕೈ ನಡುಗಿ ಚೇಳು ಮತ್ತೆ ನೀರಿಗೆ ಬಿತ್ತು. ಗುರು ಕೈಯನ್ನು ಕೊಡವಿಕೊಂಡು, ದೀರ್ಘ ಉಸಿರು ತೆಗೆದುಕೊಂಡು, ಮತ್ತೊಮ್ಮೆ ಕೈಚಾಚಿ ಅದನ್ನು ಎತ್ತಲು ಪ್ರಯತ್ನಿಸಿದರು. ಈ ಬಾರಿಯೂ ಚೇಳು ಕುಟುಕಿತು. ಗುರುಗಳ ಕೈಯಿಂದ ರಕ್ತ ಬರಲಾರಂಭಿಸಿತು. ಆದರೂ ಅವರು ತಾಳ್ಮೆಯಿಂದ ಅದನ್ನು ದಡಕ್ಕೆ ತಂದರು.

ಪಕ್ಕದಲ್ಲೇ ನಿಂತು ಇದನ್ನು ಗಮನಿಸುತ್ತಿದ್ದ ಶಿಷ್ಯನಿಗೆ ಆಶ್ಚರ್ಯ ತಡೆಯಲಾಗಲಿಲ್ಲ. 'ಗುರುಗಳೇ, ತನ್ನನ್ನು ರಕ್ಷಿಸುವವರಿಗೂ ಕಚ್ಚುವ ಇಂತಹ ನೀಚತನದ ಪ್ರಾಣಿಯನ್ನು ನೀವು ಯಾಕೆ ಮತ್ತೆ ಮತ್ತೆ ಬದುಕಿಸಲು ಹೋದಿರಿ?' ಎಂದು ಕೇಳಿದ. ಗುರು ಶಾಂತವಾಗಿ ಹೇಳಿದರು: 'ಮಗನೇ, ಕುಟುಕುವುದು, ತನಗೆ ಒಳ್ಳೆಯದನ್ನು ಮಾಡುವವರಿಗೂ ಕೇಡು ಬಗೆಯುವುದು ಚೇಳಿನ ಸ್ವಭಾವ. ನನ್ನ ಬಳಿ ಬಂದ ಆರ್ತ ಜೀವಕ್ಕೆ ಕರುಣೆ ತೋರುವುದು ಮನುಷ್ಯನಾಗಿ ನನ್ನ ಸ್ವಭಾವ. ಚೇಳು ತನ್ನ ಸ್ವಭಾವ ಬಿಡದು, ನಾನೇಕೆ ಬಿಡಲಿ?'

ಸುತ್ತಮುತ್ತ

ಚಹಾಗೇಕೆ ಹಾಲು?

ಚಹಾಕ್ಕೆ ಹಾಲು ಸೇರಿಸಿಕೊಂಡು ಕುಡಿಯುವ ಪದ್ಧತಿ ಭಾರತದಲ್ಲಿ ಬಿಟ್ಟರೆ ಇನ್ಯಾವ ದೇಶದಲ್ಲೂ ಇಲ್ಲ. ಈ ರೀತಿ ಚಹಾ ಕುಡಿಯುವ ಪದ್ಧತಿ ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ಭಾರತಕ್ಕೆ ಬಂತು. 19ನೇ ಶತಮಾನದಲ್ಲಿ ಚೀನಾಕ್ಕೆ ಪೈಪೋಟಿ ನೀಡಲು ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ಚಹಾ ವ್ಯಾಪಾರ ಆರಂಭಿಸಿತು. ಆಗ ಭಾರತದಲ್ಲಿ ವ್ಯಾಪಕವಾಗಿ ಚಹಾ ಬೆಳೆಯಲಾಯಿತು. ಆದರೆ ಆರಂಭದಲ್ಲಿ ಅದು ಬ್ರಿಟಿಷರ ಬಳಕೆ ಮತ್ತು ರಫ್ತಿಗಾಗಿ ಮಾತ್ರ ಇತ್ತು. 1900ರ ದಶಕದಲ್ಲಿ ಭಾರತೀಯರಲ್ಲೂ ಚಹಾವನ್ನು ಜನಪ್ರಿಯಗೊಳಿಸಲು ಬ್ರಿಟಿಷರು ಅದಕ್ಕೆ ಹಾಲು ಮತ್ತು ಸಕ್ಕರೆ ಸೇರಿಸುವ ಸಲಹೆ ನೀಡಿದರು. ನಿಧಾನವಾಗಿ ಈ ಅಭ್ಯಾಸ ಜನರಲ್ಲಿ ಬೆಳೆದು ಬಂತು. ನಂತರ ಭಾರತೀಯರು ತಮ್ಮದೇ ಆದ ರುಚಿ ಮತ್ತು ಮಸಾಲೆಗಳನ್ನು ಸೇರಿಸಿ ಅದಕ್ಕೆ ಹೊಸ ರೂಪವನ್ನೇ ಕೊಟ್ಟರು. ಏಲಕ್ಕಿ, ಶುಂಠಿ, ದಾಲ್ಚಿನ್ನಿ ಮತ್ತು ಲವಂಗದಂತಹ ಮಸಾಲೆಗಳು ಚಹಾಕ್ಕೆ ಅದ್ಭುತ ಸುವಾಸನೆ ಮತ್ತು ರುಚಿ ನೀಡಿದವು.

ಮಾತು ಗೀತೆ

ನೀಚತನದ ಬಗೆ

ಭಗವದ್ಗೀತೆಯ ಶ್ಲೋಕವೊಂದು, ಮನುಷ್ಯ ನನ್ನು ನೀಚನನ್ನಾಗಿ ಮಾಡುವ ಮೂರು ಮುಖ್ಯ ಶತ್ರುಗಳನ್ನು ಗುರುತಿಸುತ್ತದೆ: 'ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ । ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್ ।' ಅಂದರೆ, ಮೊದಲನೆಯದು ಕಾಮ, ಅತಿಯಾದ ಆಸೆ. ಇದು ತನಗಾಗದಿದ್ದರೂ ಪರರ ದ್ದನ್ನು ಬಯಸುವುದು. ಎರಡನೆಯದು ಕ್ರೋಧ, ಆಸೆ ಈಡೇರದಿದ್ದಾಗ ಮೂಡುವ ಅಂಧಕೋಪ. ಮೂರನೆಯದು ಲೋಭ. ಎಷ್ಟು ಸಿಕ್ಕಿದರೂ ತೃಪ್ತಿಯಾಗದೆ, ಇನ್ನೊಬ್ಬರನ್ನು ವಂಚಿಸಿಯಾದರೂ ಸಂಪಾದಿಸಬೇಕು ಎಂಬ ಹಪಾಹಪಿ. ಕೃಷ್ಣನ ಪ್ರಕಾರ, ಈ ಮೂರು ಗುಣ ಗಳು ಮನುಷ್ಯನ ಆತ್ಮವನ್ನು ನಾಶಮಾಡುವ ಮತ್ತು ಅವನನ್ನು ನೀಚತನದ ಹಾದಿಗೆ ಎಳೆಯುವ ನರಕದ ಮೂರು ದ್ವಾರಗಳು. ಆದ್ದರಿಂದ ಇವುಗಳನ್ನು ಮೊದಲು ತ್ಯಜಿಸಬೇಕು.

ಹನಿ ಹನಿ ಕವಿತೆ

ಕ್ಷಣಿಕ ಪ್ರೇಮ

ಹಾರುವುದು ಕಾಳು ಹೆಕ್ಕುವುದು
ಗೂಡು ಕಟ್ಟುವುದು
ಬೇಟೆಯಿಂದ ತಪ್ಪಿಸಿಕೊಳ್ಳುವುದು
ಎಲ್ಲದರ ನಡುವೆ ಪ್ರೇಮಕ್ಕೆ
ಎಷ್ಟು ಕ್ಷಣಿಕ ಕಾಲ ಹಕ್ಕಿಗೆ!

● ಹರಿಶಂಕರ ಸುಳ್ಯ

ಪುಸ್ತಕ ಸಂತೆ: ಹಳ್ಳಿ ಮನೆ ಜಗಲಿಯೇರಲಿ ಪುಸ್ತಕ ಕಂತೆ!

● ತುರುವೇಕೆರೆ ಪ್ರಸಾದ್

ಕಳೆದ ವಾರಾಂತ್ಯದಲ್ಲಿ 'ವೀರಲೋಕ' ಸಾರಥ್ಯದಲ್ಲಿ ತುಮಕೂರಿನಲ್ಲಿ ನಡೆದ 5ನೆಯ ಪುಸ್ತಕ ಸಂತೆ ಪುಸ್ತಕ ಮಾರಾಟ, ಗೋಷ್ಠಿಗಳು, ವ್ಯವಸ್ಥೆ ಹೀಗೆ ಎಲ್ಲಾ ರೀತಿಯಲ್ಲೂ ಯಶಸ್ವಿ ಎನಿಸಿದೆ. ಸುಮಾರು 1 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ್ದರು ಮತ್ತು ರೂ.66 ಲಕ್ಷಕ್ಕೂ ಹೆಚ್ಚು ಮೌಲ್ಯದ ಪುಸ್ತಕಗಳು ಮಾರಾಟವಾಗಿವೆ ಎಂದು ಸಂಘಟಕರೇ ಹೇಳಿದ ಮೇಲೆ ಅದು ಭರ್ಜರಿ ಯಶಸ್ಸೇ ಎಂಬುದರಲ್ಲಿ ಎರಡು ಮಾತಿಲ್ಲ. ಸಾಹಿತ್ಯ ಸಮ್ಮೇಳನಗಳಿಗೆ ಪರ್ಯಾಯವೋ ಎಂಬಂತೆ ಸಾಹಿತ್ಯ ಮತ್ತು ಪುಸ್ತಕ ಈ ಎರಡೂ ಪರಿಚಾರಿಕೆಯಲ್ಲಿ ಪುಸ್ತಕ ಸಂತೆಗಳು ಜನರ ಗಮನ ಸೆಳೆಯುತ್ತಿವೆ. ಹಾಗೇ ವ್ಯಕ್ತಿ ಕೇಂದ್ರಿತ ಸಮ್ಮೇಳನಗಳನ್ನು ಜನಕೇಂದ್ರಿತ, ಓದುಗ ಕೇಂದ್ರಿತ ಸಾಹಿತ್ಯ ವೇದಿಕೆಗಳನ್ನಾಗಿ ರೂಪಿಸುತ್ತಿವೆ. ಜನರ ಬಳಿಗೆ ಪುಸ್ತಕಗಳನ್ನು ಮುಟ್ಟಿಸುವ ಈ ಪರಿಕಲ್ಪನೆಯ ಹರಿಕಾರ ವೀರಲೋಕದ ವೀರಕಪುತ್ರ ಶ್ರೀನಿವಾಸ್ ಮತ್ತು ಅವರ ಬೆನ್ನಿಗೆ ನಿಂತ ಎಲ್ಲಾ ಸಂಘಟನೆಗಳಿಗೆ ಹಾಗೂ ಪುಸ್ತಕ ಪ್ರೇಮಿಗಳಿಗೆ ಅಭಿನಂದನೆಗಳು.

60 ಲಕ್ಷ ರು. ಮೌಲ್ಯದ ಪುಸ್ತಕಗಳು ಮಾರಾಟವಾಗಿವೆ ಎಂದ ಮಾತ್ರಕ್ಕೆ ಪುಸ್ತಕಗಳು ಎಲ್ಲಾ ವರ್ಗಗಳ, ಗ್ರಾಮೀಣ ಭಾಗದ ಸಾಮಾನ್ಯ ಜನರ ಹಾಗೂ ವಿದ್ಯಾರ್ಥಿಗಳ ವಿಶೇಷವಾಗಿ ಯುವಕರ ಕೈ ಸೇರಿವೆಯೇ ಎಂಬುದನ್ನು ಯೋಚಿಸಬೇಕಿದೆ. 66 ಲಕ್ಷ ಮೌಲ್ಯದ ಪುಸ್ತಕಗಳು ಮಾರಾಟವಾದ ಬೆನ್ನಿಗೇ ಮೂರು ದಿನಗಳ ಕಾಲ ಅದ್ದೂರಿಯಿಂದ ಆಯೋಜಿಸಿದ್ದ ಪುಸ್ತಕ ಸಂತೆಯ ವ್ಯವಸ್ಥೆಯ ವೆಚ್ಚವೂ ಲಕ್ಷಗಟ್ಟಲೆ ಆಗಿರುತ್ತದೆ ಎಂಬುದು ಅಲ್ಲಿನ ವ್ಯವಸ್ಥೆಯನ್ನು ನೋಡಿದ ಯಾರಿಗಾದರೂ ತಟ್ಟನೆ ಹೊಳೆದು ಬಿಡುತ್ತದೆ. ಅತಿಥಿಗಳ ಸತ್ಕಾರ,ಅವರ ಗೌರವಧನ, ಗೋಷ್ಠಿಗಳ ಖರ್ಚು, ವೇದಿಕೆ, ವಿದ್ಯುದ್ದೀಪ, ಧ್ವನಿವರ್ಧಕ, ಸಾಂಸ್ಕೃತಿಕ ಕಾರ್ಯಕ್ರಮಗಳು, ಆಟದ ಪರಿಕರಗಳು, ಊಟ, ತಿಂಡಿ ವ್ಯವಸ್ಥೆ, ಪ್ರಚಾರ ಇತ್ಯಾದಿ ಇವೆಲ್ಲಾ ಖರ್ಚಿನ ಬಾತ್ತುಗಳೇ. ಸಂಘಟಕರದ್ದು ಲಾಭವೋ? ನಷ್ಟವೋ ಅವರಿಗೇ ಗೊತ್ತು! ಇಂತದೊಂದು ಪರಿಕಲ್ಪನೆ, ಪ್ರಯತ್ನವೇ ವಿಶಿಷ್ಟವಾಗಿದ್ದು ಓದುಗರ ಬಳಿಗೆ ಪುಸ್ತಕಗಳನ್ನು ಕೊಂಡೊಯ್ಯುವ ಸಾರ್ಥಕ ಕೆಲಸವಂತೂ ಆಗುತ್ತಿದೆ. ಪುಸ್ತಕ ಸಂತೆ ಹೆಸರಿಗೆ ಅನ್ವರ್ಥವಾಗಿ ಇದನ್ನು ವೀರಲೋಕದವರೋ ಅಥವಾ ಇನ್ಯಾರಾದರೂ ವಿಶೇಷವಾಗಿ ಗ್ರಾಮೀಣ ಜನರಿಗೆ ಮುಟ್ಟಿಸುವ ಇನ್ನೂ ಒಂದಿಷ್ಟು ವಿಭಿನ್ನ ಪ್ರಯತ್ನಗಳನ್ನು ಮಾಡಬಹುದೇನೋ?

ಸಂತೆ ಸಾಮಾನ್ಯವಾಗಿ ನಡೆಯುವುದೇ ಗ್ರಾಮೀಣ ಪ್ರದೇಶಗಳಲ್ಲಿ. ಸಂತೆಯ ಪರಿಕಲ್ಪನೆಯೇ ಸ್ಥಳೀಯವಾಗಿ ಸಿಗುವ ವಸ್ತುಗಳನ್ನು, ಅದರಲ್ಲೂ ತಾಜಾ ವಸ್ತುಗಳನ್ನು ಸ್ಥಳೀಯ ಜನರಿಗೇ ಮಾರುವುದು. ಪುಸ್ತಕ ಸಂತೆ ಎಂದ ಮೇಲೆ ಅವೂ ನಗರಗಳಿಂದ, ಜಿಲ್ಲಾ ಕೇಂದ್ರಗಳಿಂದ ಗ್ರಾಮೀಣ ಪ್ರದೇಶಗಳಿಗೆ ಬರಬೇಕು. ಮೊದಲು ತಾಲ್ಲೂಕು ಕೇಂದ್ರಗಳಲ್ಲಿ ನಂತರ ಹೋಬಳಿ ಕೇಂದ್ರಗಳಲ್ಲಿ ಚಿಕ್ಕ ಪ್ರಮಾಣದಲ್ಲಿ ಇಂತಹ ಪುಸ್ತಕ ಸಂತೆಗಳು ಆಯೋಜನೆಗೊಳ್ಳಬೇಕು. ಗ್ರಾಮೀಣ ಪ್ರದೇಶ ಎಂದ ಮೇಲೆ ಲಾಭಾಂಶದ ಬಗ್ಗೆ ಯೋಚನೆ ಮಾಡುವುದು ಕಷ್ಟವೇ! ಆದರೆ ಇಲ್ಲೂ ಪ್ರಯತ್ನಪಟ್ಟರೆ ಸ್ಥಳೀಯ ಸಂಸ್ಥೆಗಳು, ಕೆಲವು ದಾನಿಗಳು ಪ್ರಾಯೋಜಕರಾಗಿ ಮುಂದೆ ಬರುತ್ತಾರೆ. ಲಾಭ-ನಷ್ಟಗಳ ಲೆಕ್ಕಾಚಾರಕ್ಕಿಂತ ಪುಸ್ತಕಗಳು ಸಾಮಾನ್ಯ ಜನರನ್ನೂ ತಲುಪಬೇಕು, ಮತ್ತೆ ಜನರಲ್ಲಿ ಓದುವ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಬೇಕು. ಪುಸ್ತಕಗಳ ಕಂತೆ ಹಳ್ಳಿಹಳ್ಳಿಯ ಮನೆಗಳ ಜಗಲಿ ಏರಬೇಕು.

ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿಯೇ ಯಾವುದೇ ರಾಜಕೀಯ ಹಸ್ತಕ್ಷೇಪ ಇಲ್ಲದೆ ಎಲ್ಲಾ ಪ್ರಕಾರದ ಸಾಹಿತ್ಯ ಕೃತಿಗಳ ಪ್ರಾತಿನಿಧಿಕ ಸಂಪುಟ ಸಿದ್ಧಪಡಿಸಬೇಕು. ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆಂದೇ ಇವನ್ನು ಆಯಾ ಹಂತದ ವಿದ್ಯಾರ್ಥಿಗಳ ಕಲಿಕೆ, ಗ್ರಹಿಕಾ ಮಟ್ಟಕ್ಕನುಗುಣವಾಗಿ ಸಿದ್ಧಪಡಿಸಬೇಕು. ಶಿಕ್ಷಕರಲ್ಲೂ ಸಾಹಿತ್ಯ ಓದುವ ಅಭಿರುಚಿ ಬೆಳೆಸುವ ಕೆಲಸವಾಗಬೇಕು. ನವರಾತ್ರಿಯ ಸರಸ್ವತಿ ಪೂಜೆಯನ್ನು ಪುಸ್ತಕದ ಹಬ್ಬ ಎಂದು ದೊಡ್ಡ ಮಟ್ಟದಲ್ಲಿ ಶಾಲೆಗಳಲ್ಲಿ, ಗ್ರಾಮಗಳಲ್ಲಿ ಆಚರಿಸಿ ಪುಸ್ತಕಗಳ ಕೊಡುಕೊಳ್ಳುವಿಕೆಗೆ ಅವಕಾಶ ಒದಗಿಸಿ ಸಂಭ್ರಮಿಸುವಂತೆ ಮಾಡಬಹುದು. ಹಾಗೆಯೇ ಪರಿಷೆ, ಜಾತ್ರೆಗಳಲ್ಲೂ ಜೈಂಟ್‌ವೀಲ್, ಟೊರೊಟೊರೋ ಹಾಕುವಂತೆ ಸ್ಥಳೀಯರು ಪುಸ್ತಕ ಮಳಿಗೆಗಳನ್ನು ಹಾಕಿ ಪುಸ್ತಕ ಸಂತೆ ನಡೆಸಬಹುದು.

ಈಗಿನ ವಿದ್ಯಾರ್ಥಿಗಳ ಸಾಹಿತ್ಯ ತಿಳುವಳಿಕೆಯ ಸ್ಥಿತಿ ಯಾವ ಮಟ್ಟದಲ್ಲಿದೆಯೆಂದರೆ ಜ್ಞಾನಪೀಠ ಪ್ರಶಸ್ತಿ ವಿಜೇತರ ಹೆಸರು ಬಿಟ್ಟು ಮತ್ತೊಬ್ಬ ಸಾಹಿತಿಯ ಹೆಸರು ಹೇಳಿದರೆ ಕೇಳಿ? ಈ ದೊಡ್ಡ ವರ್ಗವನ್ನು ಪುಸ್ತಕ ಸಂತೆಗಳು ಮತ್ತೆ ಓದಿಗೆ ಹಚ್ಚಬೇಕಿವೆ. ಗ್ರಾಮೀಣ ಪ್ರದೇಶದ ಜನರು ಏಕಾಏಕಿ ಪ್ರಬುದ್ಧ ಸಾಹಿತ್ಯ ಕೃತಿಗಳನ್ನು ಕೊಳ್ಳುವವರೂ ಅಲ್ಲ, ಓದುವವರೂ ಅಲ್ಲ. ಅವರಿಗೆಂದೇ ಜಾನಪದ ಕೃತಿಗಳು, ಲಾವಣಿಗಳು, ಪೌರಾಣಿಕ, ಐತಿಹಾಸಿಕ ನಾಟಕಗಳು, ಕೃಷಿ ಕುರಿತ ಪುಸ್ತಕಗಳನ್ನು ಓದಿಸುವ ಪ್ರಯತ್ನ ಮಾಡಬೇಕು. ಮೊದಲು 'ಮನೆಗೊಂದು ಪುಸ್ತಕ, ಆಮೇಲೆ ಮನೆಯವರಿಗೆಲ್ಲಾ ಒಂದೊಂದು ಪುಸ್ತಕ'. ಹಿಂದೆ ಜನ ಮನೆಮದ್ದು, ಅಡುಗೆ ಪುಸ್ತಕ, ಜ್ಯೋತಿಷ್ಯ ಪುಸ್ತಕ, ಪಂಚಾಂಗಗಳನ್ನಾದರೂ ಕೊಳ್ಳುತ್ತಿದ್ದರು. ಹಾಗಾದರೂ ಒಂದು ಪುಸ್ತಕ ಎಂದು ಮನೆಯಲ್ಲಿರುತ್ತಿತ್ತು. ಈಗ ಟಿವಿ, ಯೂಟ್ಯೂಬ್ ಚಾನಲ್‌ಗಳಿಂದಾಗಿ ಆ ಪುಸ್ತಕಗಳಿಗೂ ಬೇಡಿಕೆಯಿಲ್ಲ ಎಂದು ಬೀದಿ ಬದಿಯ ಮಾರಾಟಗಾರರೇ ಬೇಸರ ವ್ಯಕ್ತಪಡಿಸುತ್ತಾರೆ.

ಗ್ರಾಮೀಣ ಭಾಗದ ಬಹುತೇಕ ಹೆಂಗಸರು ಗ್ರಂಥಾಲಯಗಳಿಗೆ ಹೋಗುವುದನ್ನು ಬಿಟ್ಟಿದ್ದಾರೆ. ಈ ಅಭಿರುಚಿಯನ್ನು ಬೆಳೆಸಬೇಕಾದ ನಮ್ಮ ಸರಕಾರಗಳು ಗ್ರಾಮೀಣ ಗ್ರಂಥಾಲಯಗಳಿಗೆ ಎಳ್ಳು-ನೀರು ಬಿಟ್ಟಿವೆ.

ನಗರ ಪ್ರದೇಶಗಳಲ್ಲಿರುವ ಗ್ರಂಥಾಲಯಗಳಲ್ಲೂ ಹೆಣ್ಣು ಮಕ್ಕಳ/ಹೆಂಗಸರ ಹಾಜರಾತಿ ಬೆರಳೆಣಿಕೆಯಷ್ಟು. ನಾನು ಮಾಡಿದ ಒಂದು ಸಮೀಕ್ಷೆ ಪ್ರಕಾರ ಈಗಲೂ ಈ ಭಾಗದ ಶೇ. 70ಕ್ಕೂ ಹೆಚ್ಚು ಹೆಂಗಸರು ಭಾವನಾತ್ಮಕ ಕಾದಂಬರಿಗಳನ್ನು ಓದುವುದನ್ನೇ ಇಷ್ಟ ಪಡುತ್ತಾರೆ. ಸಾಯಿಸುತೆ, ರಾಧಾದೇವಿ, ತ್ರಿವೇಣಿ,ಅನುಪಮಾ ಹೀಗೆ. ನಾವು ಹೆಸರಿಸಿದ ಹೊಸಬರ ಕೃತಿಗಳು ಇವರಿಗೆ ಗೊತ್ತೇ ಇರಲಿಲ್ಲ. ಧಾರಾವಾಹಿಗಳಿಗೇ ಮೀಸಲಾಗಿದ್ದ ಪ್ರಜಾಮತ, ಮಂಗಳ, ರಾಗಸಂಗಮದಂತಹ ಪತ್ರಿಕೆಗಳೂ ಈಗಿಲ್ಲ. ಹೊಸ ಭಾವನಾತ್ಮಕ ಕೃತಿಗಳ ಮೂಲಕವೇ ಮತ್ತೆ ಮಹಿಳೆಯರನ್ನು ಓದಿಗೆ ಹಚ್ಚಿ ನಂತರ ಪ್ರಬುದ್ಧ ಓದುಗರನ್ನಾಗಿ ಮಾಡುವ ಹೊಣೆ ನಮ್ಮ ಮೇಲಿದೆ.

ಗ್ರಂಥಾಲಯಗಳಲ್ಲೇ ನಿಯಮಿತ ಅವಧಿಗಳಲ್ಲಿ ವೀಡ್ ಔಟ್ ಹೆಸರಿನಲ್ಲಿ ಸಾವಿರಾರು ಪುಸ್ತಕಗಳನ್ನು ಚಿಂದಿ ಮಾಡಿ ಆಚೆ ಎಸೆಯಲಾಗುತ್ತದೆ. ಯಾರಾದರೂ ನಿಸ್ಪೃಹ ಸೇವಾ ಮನಸ್ಸಿನ ಪ್ರಕಾಶಕರು, ಸಂಘ ಸಂಸ್ಥೆಗಳು ಇವನ್ನು ಪಡೆದು ಗ್ರಾಮೀಣ ಪ್ರದೇಶದಲ್ಲಿ ಜನರಿಗೆ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಪುಕ್ಕಟೆಯಾಗಿ ಹಂಚಬಹುದು.

ಇವನ್ನೆಲ್ಲ ಕೃತಿಗಿಳಿಸಲು ಸಾಧ್ಯವೇ ಎನಿಸಬಹುದು. ಇವೆಲ್ಲಾ ನಾವು ಪ್ರಯತ್ನ ಮಾಡಿರುವ ಸಂಗತಿ. ತೊಂಬತ್ತು ಮತ್ತು ಎರಡು ಸಾವಿರದ ದಶಕದಲ್ಲಿ ತುರುವೇಕೆರೆ ಮತ್ತು ತಿಪಟೂರಿನ ಹಲವು ಗೆಳೆಯರು ಸೇರಿಕೊಂಡು ಬಾಳೆಕಾಯಿ ಗಾಡಿಯಲ್ಲಿ ಪುಸ್ತಕ ಹೇರಿಕೊಂಡು ಮನೆ ಮನೆಗೆ ಹೋಗಿ ಪುಸ್ತಕ ಮಾರಿದ್ದೆವು. 5-6 ವರ್ಷ ನಿರಂತರವಾಗಿ ನಡೆಸಿದೆವು. ನಾವು ಉದ್ಯೋಗಾರ್ಥ ಊರುಬಿಟ್ಟ ಮೇಲೆ ಈ ಪ್ರಯತ್ನ ನಿಂತು ಹೋಯಿತು. ಸಾಹಿತಿ ದಿ. ಹೊ.ಗ. ಮನೋಹರ್ ಮತ್ತು ನಾನು ಪ್ರಾಥಮಿಕ ಶಾಲೆಗಳಿಗೆಂದೇ ಸಾಹಿತ್ಯ ಕೃತಿಗಳ ಒಂದು ಸಂಪುಟ ಸಿದ್ಧಪಡಿಸಿ ಶಾಲೆಗಳಿಗೆ ನೀಡಿದ್ದೆವು. ಗೆಳೆಯ, ಕವಿ ಬಿಳಿಗೆರೆ ಕೃಷ್ಣಮೂರ್ತಿ ಯಂತೂ ವರ್ಷಕ್ಕೆ ಎರಡು ಬಾರಿ ನಮ್ಮೂರಿಗೆ ಬರುವಾಗ ಕಾರ್ ತುಂಬಾ ಕೃಷಿ, ಪರಿಸರಕ್ಕೆ ಸಂಬಂಧಿಸಿದ ಪುಸ್ತಕಗಳು, ವೈಚಾರಿಕ ಲೇಖನ ಸಂಗ್ರಹ ಗಳು, ಬಂಡಾಯ ಕವಿತೆಗಳ ಕೃತಿಗಳನ್ನು ತಂದು ರಸ್ತೆ ಬದಿ ಪುಸ್ತಕ ಹರಡಿಕೊಂಡು ಮೈಕ್ ಹಿಡಿದುಕೊಂಡು ನಿಲ್ಲುತ್ತಾರೆ. ರಾಜಕೀಯ ಮುಖಂಡರು, ವೈದ್ಯರು, ಕನ್ನಡ ಪರ ಸಂಘಟನೆಗಳ ಜನ ಅವರ ಜೊತೆ ಸರದಿ ಮೇಲೆ ನಿಲ್ಲುತ್ತಾರೆ. ಇಡೀ ದಿನ ಪುಸ್ತಕಗಳ ಕುರಿತು ಮಾತು, ಪರಿಚಯ, ಲಾವಣಿಗಳು ನಡೆಯುತ್ತವೆ. ದಾರಿಯಲ್ಲಿ ಹೋಗುವವರನ್ನು ಕೂಗಿ ಅವರ ಕೈಗೊಂದು ಪುಸ್ತಕ ವಿಟ್ಟು ಕಳಿಸುತ್ತಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಯಡಿಯೂರು ಸಂತೆ ಮೈದಾನದಲ್ಲಿ 'ಸಂತೆಯಲ್ಲಿ ಕನ್ನಡ ಸಾಹಿತ್ಯ' ಎಂಬ ನೂತನ ಕಾರ್ಯ ಕ್ರಮವನ್ನೇ ಪರಿಚಯಿಸಿದರು. ಹೀಗೆ ಗ್ರಾಂಡ್' ಸೆಲೆಬ್ರಿಟಿಗಳ ಬದಲು ಗ್ರಾಮೀಣ ಪ್ರದೇಶದ ಗ್ರೌಂಡ್ ಸಾಹಿತಿ ಗಳನ್ನು, ಸ್ಥಳೀಯ ಬರಹಗಾರರನ್ನು ಬಳಸಿ ಕೊಂಡು ನಡೆಸುವ ಪುಸ್ತಕ ಸಂತೆಗಳು ಜನರಲ್ಲಿ ನಿಜ ವಾಗಿಯೂ ಮತ್ತೆ ಓದುವ ಅಭಿರುಚಿಯನ್ನು ಬೆಳೆಸಬಲ್ಲದು.

ಆತ್ಮಾನಂದಕ್ಕಾಗಿ ಸಂನ್ಯಾಸದ ಪಯಣ

● ಲಕ್ಷ್ಮೀನಾರಾಯಣ, ಭುವನಕೋಟೆ

ನಾನವರನ್ನು ಮೊದಲ ಸಾರಿ ನೋಡಿದ್ದು ಪ್ರಾಯಶಃ 2009ನೇ ಇಸ್ವಿಯಲ್ಲಿ ಇರಬಹುದು. ಆಗ ಆಧುನಿಕ ಎನಿಸುವ ಕಾರಿನಲ್ಲಿ ಸೂಟು - ಬೂಟು ಧರಿಸಿ ಸಂಸ್ಕೃತ ಸಂಭಾಷಣ ಶಿಬಿರಕ್ಕೆ ವಿದ್ಯಾರ್ಥಿಯಾಗಿ ಬಂದರು. 10 ದಿನಗಳ ಶಿಬಿರದಲ್ಲಿ ಭಾಗವಹಿಸಿ ನನ್ನೊಂದಿಗೆ ಸಂಸ್ಕೃತದಲ್ಲಿಯೇ ವ್ಯವಹರಿಸಲು ಪ್ರಯತ್ನಿಸುತ್ತಿದ್ದವರು. ಸಂಭಾಷಣೆಯಿಂದ ಶಾಸ್ತ್ರದವರೆಗೆ ಹೋಗಬೇಕೆಂದು ಮನಸ್ಸಿನಲ್ಲಿ ಸಂಕಲ್ಪಿಸಿದ್ದರು. ಅದಕ್ಕಾಗಿ 'ಸಂಸ್ಕೃತ ಭಾರತಿ' ನಡೆಸುವ 'ಗೀತಾ ಶಿಕ್ಷಣ ಕೇಂದ್ರ'ಗಳಲ್ಲಿ ಭಾಗವಹಿಸಿ ಗೀತೆಯ ಉಚ್ಚಾರಣೆಯನ್ನು, ಅರ್ಥವನ್ನು ತಿಳಿಯಲೆತ್ನಿಸಿದರು.

ಇನ್ನೂ ಹೆಚ್ಚಿನ ಅಧ್ಯಯನಕ್ಕಾಗಿ 'ಗೀತಾ ಸೋಪಾನ' ತರಗತಿಗಳಲ್ಲಿ ಭಾಗವಹಿಸಿ ಗೀತಾಚಾರ್ಯನ ಆಂತರ್ಯವನ್ನು ತಿಳಿಯಲು ಗಂಭೀರವಾಗಿ ಪ್ರಯತ್ನಿಸಿದವರು ಅವರು. ಬೆಂಗಳೂರಿನ ದೊಡ್ಡ ಲಾಜಿಸ್ಟಿಕ್ ಕಂಪನಿಯ ಯಜಮಾನರು ಅವರು. ಸಂಸ್ಕೃತ ಮತ್ತು ಸಂಸ್ಕೃತ ಕಾರ್ಯದ ಬಗೆಗಿನ ಅವರ ನಿಷ್ಠೆಯಿಂದಾಗಿ ಸಂಸ್ಕೃತ ಭಾರತಿಯು ಅವರನ್ನು ಬೆಂಗಳೂರು ನಗರದ ಅಧ್ಯಕ್ಷರನ್ನಾಗಿ ನೇಮಿಸಿತ್ತು. ಪ್ರತಿಷ್ಠಿತ ವಿದ್ಯಾಲಯದಲ್ಲಿ ಓದುತ್ತಿರುವ ಇಬ್ಬರು ಸುಂದರ ಗಂಡು ಮಕ್ಕಳ ತಂದೆ. ಸದ್ಗೃಹಿಣಿಯ ಗಂಡ.

ಸುಮಾರು 2010ರ ಹೊತ್ತಿಗೆ ನನಗವರು ಕರೆ ಮಾಡಿ 'ಲಕ್ಷ್ಮೀನಾರಾಯಣ! ನಾನು ನನ್ನ ಕಂಪನಿಯನ್ನು ಬೇರೆಯವರಿಗೆ ವಹಿಸುತ್ತಿದ್ದೇನೆ' ಎಂದರು. 'ಹಾಗಿದ್ರೆ.. ಮುಂದೇನು?' ಅವರ ಉತ್ತರವೂ ಸಿದ್ಧವಾಗಿತ್ತು. 'ಮುಂದಿನ ವಾರ ತಿಳಿಸುತ್ತೇನೆ. ಒಮ್ಮೆ ಶೃಂಗೇರಿಗೆ ಹೋಗಿ ಬರೋಣ' ಅಂದರು ರಾಜಾರಾಮಮೂರ್ತಿ. ಮುಂದಿನ ವಾರ ಅವರೊಂದಿಗೆ ನನ್ನೂರಾದ ಶೃಂಗೇರಿಯ ಕಡೆ ಹೊರಟೆ. ಆಗಲೇ ಅವರು ತಮ್ಮ ಯೋಜನೆಯನ್ನು ಸ್ವಲ್ಪ ಸ್ವಲ್ಪ ನನಗೆ ತಿಳಿಸಿದ್ದು. 'ನಾನು ಒಂದು ಗುರುಕುಲ ತೆರೆಯಬೇಕೆಂದುಕೊಂಡಿದ್ದೇನೆ. ಅದಕ್ಕೆ ಒಳ್ಳೆಯ ಜಾಗ ಹುಡುಕುತ್ತಿದ್ದೇನೆ..'

ನಾನು ಶೃಂಗೇರಿಯ ನದಿ ತೀರದ ಕೆಲವು ಪ್ರದೇಶಗಳನ್ನು ತೋರಿಸಿದೆ. 'ಸಂಸ್ಕೃತ ಗ್ರಾಮ ಮತ್ತೂರಿಗೂ ಹೋಗೋಣ' ಎಂದರು ರಾಜಾರಾಮ ಮೂರ್ತಿ. ಮತ್ತೂರಿನ ಸಂಸ್ಕೃತ ಗ್ರಾಮದ ಶಾಸ್ತ್ರಸುಗಂಧ ಇಂದಿನಂತೆ ಅಂದೂ ಜನಜನಿತವಾಗಿತ್ತು. ಆ ಗ್ರಾಮವನ್ನು ನೋಡಿದ ರಾಜಾರಾಮ ಮೂರ್ತಿಯವರು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡರು 'ನನಗೆ ಇದೇ ಸೂಕ್ತ ಜಾಗ'ವೆಂದು. ಕೆಲವೇ ತಿಂಗಳುಗಳಲ್ಲಿ ಮತ್ತೂರು ಪ್ರವೇಶಿಸಿ ದೊಡ್ಡ ಮನೆಯೊಂದನ್ನು ಕಟ್ಟಿಸಿಕೊಂಡರು. ಅಲ್ಲೊಂದು ಗೋಶಾಲೆ. ಬೆಂಗಳೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿರುವ ಹಿರಿಯ ಮಗನನ್ನು ಕಾಲೇಜಿನಿಂದ ಬಿಡಿಸಿ ಗುರುಕುಲಕ್ಕೆ ಸೇರಿಸಿದರು. ಹೈದರಾಬಾದ್‌ನಲ್ಲಿ ಓದುತ್ತಿದ್ದ ಮತ್ತೊಬ್ಬ ಮಗನನ್ನು ಕೂಡ ಗುರುಕುಲಕ್ಕೆ ಸೇರಿಸಿದರು. ಇಬ್ಬರು ಮಕ್ಕಳು ಶಾಸ್ತ್ರಜ್ಞರಾಗಿ ಮತ್ತೂರಿಗೆ ಮರಳಿದರು.

ಮತ್ತೂರಿನಲ್ಲಿ ನಿತ್ಯ ಯಜ್ಞವನ್ನು ಆರಂಭಿಸಿದರು. ಹಸುಗಳ ಸಂಖ್ಯೆಯಲ್ಲೂ ವೃದ್ಧಿಯಾಯಿತು. ಅಲ್ಲಿಯೇ ಭೂಖಂಡವನ್ನು ಕೊಂಡುಕೊಂಡರು, ಹಸುಗಳ ಹುಲ್ಲಿಗಾಗಿ. ಹೀಗೆ ರಾಜಾರಾಮೂರ್ತಿಯವರ ಬದುಕು ನಗರ ಜೀವನಕ್ಕಿಂತ ಸಂಪೂರ್ಣ ಭಿನ್ನವಾಯ್ತು. ಬೆಳಗ್ಗೆ ನಾಲ್ಕು ಗಂಟೆಗೆ ತುಂಗಾ ನದಿಯಲ್ಲಿ ಸ್ನಾನ. ಅಲ್ಲಿಯೇ ಜಪ, ಧ್ಯಾನ, ಗೋ ಸೇವೆ, ಮನೆಯಲ್ಲಿ ಯಜ್ಞಗಳು. ನಿತ್ಯದ ಜೀವನಶೈಲಿ ಇಷ್ಟು ಕಠೋರವಾಗಿದ್ದರೂ ರಾಜಾರಾಮ ಮೂರ್ತಿಯವರ ಮನಸ್ಸು ಬೇರೇನನ್ನೋ ಹುಡುಕುತ್ತಿತ್ತು. ಒಮ್ಮೆ ತಮ್ಮ ಶ್ರೀಮತಿಯವರ ಸಮ್ಮುಖದಲ್ಲಿ 'ನಾನು ಸಂನ್ಯಾಸ ಸ್ವೀಕಾರ ಮಾಡಲಿರುವೆ' ಎಂದು ಹೇಳಿದ್ದೂ ಆಯ್ತು.

ಅವರ ಶ್ರೀಮತಿ ಜ್ಯೋತಿ ಸಹ ಅಷ್ಟೇ ನಿಷ್ಠಾವಂತರು. ಗಂಡನ ಜೊತೆ ಕುಳಿತು ಆಚಾರ್ಯರಿಂದ ವೇದಾಂತ ಪಾಠ ಕೇಳಿಸಿಕೊಂಡವರು. ಅದರಂತೆ ಜೀವನ ನಡೆಸಲು ಪ್ರಯತ್ನಿಸುತ್ತಿರುವವರು. ಪತಿಯ ಮನಸ್ಸಿನ ಇಂಗಿತ ಅರ್ಥ ಮಾಡಿಕೊಂಡ ಪತ್ನಿ, ಪತಿಯ ಮುಂದಿನ ಪ್ರಯಾಣಕ್ಕೆ ತಕ್ಕಂತೆ ಜೀವಿಸ ತೊಡಗಿದರು. ಈಗ 20 ದಿನಗಳ ಹಿಂದೆ ರಾಜಾರಾಮೂರ್ತಿಯವರಿಂದ ನನಗೆ ಮತ್ತೊಮ್ಮೆ ಕರೆ. 'ನಾನೊಂದು ಯಜ್ಞ ಮಾಡುತ್ತಿರುವೆ.. ನಿನಗೆ ಸಮಯವಿದ್ದರೆ ಬಾ...' ಆದರೆ ಹೋಗಲಾಗಲಿಲ್ಲ. ಒಂದು ವಾರದ ಹಿಂದೆ ಮತ್ತೊಮ್ಮೆ ಅವರ ದೂರವಾಣಿ. 'ಲಕ್ಷ್ಮೀನಾರಾಯಣ! ನಿನಗೊಂದು ವಿಷಯ ತಿಳಿಸಬೇಕು ಅಂತ ಕರೆ ಮಾಡಿದೆ. ನಾಡಿದ್ದು ನಾನು ಸಂನ್ಯಾಸಾಶ್ರಮ ಸ್ವೀಕರಿಸುತ್ತೇನೆ'.

ಬೆಂಗಳೂರಿನಲ್ಲಿ ಅವರ ದೊಡ್ಡ ಮನೆ, ಬೇಕಾದಷ್ಟು ವಾಹನಗಳು, ಆಳುಕಾಳುಗಳು, ಸುಂದರ ಸಂಸಾರ... ಒಮ್ಮೆಯೇ ರೀಲ್ಸ್‌ನಂತೆ ನನ್ನ ಮುಂದೆ ಹರಿದವು. ಅವರ ಆಧ್ಯಾತ್ಮಿಕ ಮಾರ್ಗವನ್ನು ಅಲ್ಪಸ್ವಲ್ಪ ಅರ್ಥ ಮಾಡಿಕೊಂಡಿದ್ದೇನೋ ಹೌದು. ಆದರೆ ಇಷ್ಟು ದೊಡ್ಡ ನಿರ್ಣಯ... ಈಗಷ್ಟೇ ಅರವತ್ತನ್ನು ದಾಟಿದ ರಾಜಾರಾಮೂರ್ತಿ ತೆಗೆದುಕೊಳ್ಳುತ್ತಾರೆಂದು ಭಾವಿಸಿರಲಿಲ್ಲ. ನನ್ನ ಹತ್ತಾರು ಪ್ರಶ್ನೆಗಳನ್ನು ಅವರ ಮುಂದೆ ಇಟ್ಟೆ. ಎಲ್ಲದಕ್ಕೂ ಅವರ ಉತ್ತರ ಸಿದ್ಧವಾಗಿತ್ತು.

'ಮುಂದೆ ನಿಮ್ಮ ಜೀವನ ಹೇಗೆ? ಮತ್ತೂರಿನಲ್ಲಿಯೇ ಇರುತ್ತೀರೋ?' ಎನ್ನುವ ಪ್ರಶ್ನೆಗೆ ಅವರ ಉತ್ತರ- 'ನಾನಿನ್ನು ಪರಿವ್ರಾಜಕ. ನನಗೆ ಇಲ್ಲಿಯ ಯಾವ ಬಂಧನವೂ ಇಲ್ಲ. ಪರಿವ್ರಾಜಕನಾಗಿ ಒಂದು ಊರಿನಲ್ಲಿ ಒಂದು ದಿನ ಮಾತ್ರ ವಾಸ. ದಿನಕ್ಕೆ 15- 20 ಕಿಲೋ ಮೀಟರ್ ನಡೆಯಬೇಕೆಂಬ ಸಂಕಲ್ಪ...' ಅವರು ಮಾತು ಮುಂದುವರಿಸಿದರು. ಅವರ ಒಂದೊಂದು ಮಾತೂ ನನ್ನಲ್ಲಿ ಸಣ್ಣ ಕಂಪನ ತರಿಸಿತ್ತು.

ಈ ಲೇಖನ ಬರೆಯುವ ಮೂರು ದಿನಗಳ ಹಿಂದೆ ರಾಜಾರಾಮಮೂರ್ತಿಯವರು ಶ್ರೀ ಆತ್ಮಾನಂದರಾಗಿ ಮತ್ತೂರನ್ನು ಬಿಟ್ಟಿದ್ದಾರೆ. ಅವರು ಮನೆಯ ಎಲ್ಲ ಸದಸ್ಯರನ್ನು ಕೂಡ ಮಾನಸಿಕವಾಗಿ ಸಿದ್ಧಗೊಳಿಸಿದ್ದರು. ನಾನು ಈ ಬಗೆಯ ಸಂನ್ಯಾಸಾಶ್ರಮದ ಬಗ್ಗೆ ಅಲ್ಪ ಸ್ವಲ್ಪ ಓದಿಕೊಂಡಿದ್ದೇನಾದರೂ, ನನ್ನ ಸಮೀಪಸ್ಥರೊಬ್ಬರು ಈ ಬಗೆಯಲ್ಲಿ ಸಂನ್ಯಾಸಾಶ್ರಮ ಸ್ವೀಕರಿಸುತ್ತಾರೆಂದು ಭಾವಿಸಿರಲಿಲ್ಲ. ಭಾರತೀಯರಾದ ನಾವು ಸಾಧಾರಣವಾಗಿ ಮೋಕ್ಷವನ್ನು ಇಚ್ಛಿಸುತ್ತೇವೆ. ಅದನ್ನು ಗಳಿಸಲು ಇಂತಹ ಕಠೋರ ನಿರ್ಣಯ ಸ್ವೀಕರಿಸಬೇಕೆ ಎಂಬುದು ನನಗಿನ್ನೂ ಪ್ರಶ್ನೆಯಾಗಿ ಉಳಿದಿದೆ.

ಹಲವು ಜೀವನಗಳ ಚೆಲುವು

ಕಾದಂಬರಿ ಬರೆಯುವವನು, ಓದುವವನು ಒಂದೇ ಬದುಕಿನಲ್ಲಿ ಹಲವು ಜೀವನಗಳನ್ನು ಕಾಣುತ್ತಿರುತ್ತಾರೆ. ಒಂದು ಕಾದಂಬರಿಯ ನೂರು ಪಾತ್ರಗಳಲ್ಲಿ ನೂರರಲ್ಲಿಯೂ ಅವನು ಜೀವಿಸಬಹುದು. ಈ ಬದುಕಿನ ಏಕತಾನತೆಯಿಂದ ಅದು ಅವನನ್ನು ಪಾರು ಮಾಡುತ್ತಿರುತ್ತದೆ. ಅವನು ಕೊಲೆ ಮಾಡಬಹುದು, ಜೈಲುವಾಸಿಯಾಗುವ ಭಯವಿಲ್ಲದೆ. ಪ್ರೀತಿಸಬಹುದು, ತಿರಸ್ಕೃತನಾಗುವ ಭಯವಿಲ್ಲದೆ. ಬದುಕಿನಲ್ಲಿ ಪ್ರಾಮಾಣಿಕತೆ ತೋರಿಸಲಾಗದೆ ಹೋದ ಸಂಗತಿಗಳಲ್ಲಿ ಲೇಖಕನೂ ಓದುಗನೂ ಪ್ರಾಮಾಣಿಕರಾಗುತ್ತ ಹೋಗುತ್ತಾರೆ. ಅದು ಅವರನ್ನು ಏಕಕಾಲಕ್ಕೆ ಎರಡು ಜಗತ್ತುಗಳಲ್ಲಿ ಜೀವಿಸುವಂತೆ ಅನುಗ್ರಹ ಮಾಡುತ್ತದೆ.

● ಚಿದಾನಂದ ಜೋಶಿ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	3	■	4		5
	■	6					■	
■	■		■		■		■	■
7			■	■	8			9
	■	■	10			■	■	
11		12		■	■	13		
■	■		■	14	■		■	■
15	■	16					■	17
18			■		■	19		

ಎಡದಿಂದ ಬಲಕ್ಕೆ

1. ತನಗೆ ತಾನೇ ಮಾತನಾಡಿಕೊಳ್ಳುವಿಕೆ (3)
4. ವಿನಯದಿಂದ ಮಾಡಿಕೊಂಡ ಅರಿಕೆ (3)
6. ಈ ಜಗದ ನಿಯಮವೇ ಬದಲಾವಣೆ (5)
7. ನಯವಾಗಿಯೇ ಇದ್ದಾನೆ ಮಗ (3)
8. ಮನದಲ್ಲಿಯೇ ಜನಿಸಿದ ಮನ್ಮಥ (4)
10. ಪರರಿಗೂ ಸಿಗುವುದು ಸಂಬಳ (3)
11. ಗಣಗಳ ಒಡೆಯ ವಿನಾಯಕ (4)
13. ರಾಜ ಅಥವಾ ಗುರು ಹಿರಿಯರಿಂದ ತರುವ ಪತ್ರ (3)
16. ದಿನಪತ್ರಿಕೆ, ನಿಯತಕಾಲಿಕೆಗಳನ್ನು ಓದಲು ಅನುಕೂಲ ಮಾಡಿಕೊಡುವ ಸ್ಥಳ (5)
18. ಈಗ ದೇಶದಿಂದ ನಿರ್ಮೂಲನೆಯಾಗಿರುವ ಸಿಡುಬು ರೋಗ (3)
19. ಸಾವು ಇಲ್ಲಿ ದಿಕ್ಕುತಪ್ಪಿಸಿ ಬಂದಿದೆ (3)

ಮೇಲಿಂದ ಕೆಳಕ್ಕೆ

1. ಎರಡಕ್ಷರದ ಕನಸು (2)
2. ವಿಶೇಷವಾಗಿ ಹೆಂಗಳೆಯರನ್ನು ಸೆಳೆಯುವ ಚಿನ್ನ (4)
3. ಹೊಸದಾಗಿ ಕಂಡ ಧಾನ್ಯ (3)
4. ಗೃಹದೊಂದಿಗೆ ಬಂದಿರುವ ಕುಲ (4)
5. ಬ್ರಹ್ಮನೂ ಆಗಬಲ್ಲ ನಿಯಮ (2)
7. ನೀರಿಗೆ ಕಲ್ಲೆಸೆದಾಗ ಉಂಟಾದ ಅಲೆ (3)
8. ರಮಾಳಿಗೆ ಕಂಡ ವೃಕ್ಷ (2)
9. ನೈಜವಾದ ಎಂಬುದು ಇಲ್ಲಿ ತಲೆಕೆಳಗಾಗಿ ಬಂದಿದೆ (3)
10. ಸತಿಯೊಂದಿಗೆ ಬಂದಿರುವ ಗಂಡ (2)
12. ನಮ್ಮ ಸುತ್ತಲಿನ ಜನರನ್ನೆಲ್ಲ ಒಟ್ಟಾಗಿ ಹೀಗೆನ್ನಬಹುದು (4)
13. ದಶರಥ ನಂದನನ ಜೀವನ ವೃತ್ತಾಂತ (4)
14. ಶಿವನ ಧನುಸ್ಸಿನ ಹೆಸರು (3)
15. ಸೊಕ್ಕು ಎನ್ನುವ ಮತ್ತೊಂದು ಪದ (2)
17. ಕತ್ತಲೆಯೂ ಆಗಬಲ್ಲ ಅಜ್ಞಾನ (2)

ಸರಿಯುತ್ತರಗಳು

ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ದೇವರಿಲ್ಲ

● ರೂಪಾ ಗುರುರಾಜ್

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ನಮ್ಮ ಹೆತ್ತ ತಾಯಿಯ ಕಣ್ಣಲ್ಲಿ ಒಂದು ಪುಟ್ಟ ಸಂತೋಷವನ್ನು ನೋಡಲು ನಾವು ಏನೆಲ್ಲ ಮಾಡಬಲ್ಲೆವು? ಅವಳ ಜೀವಮಾನದ ಕೊನೆಯ ಆಸೆಯನ್ನು ಈಡೇರಿಸಲು ನಮ್ಮ ಶಕ್ತಿಯನ್ನೆಲ್ಲ ಧಾರೆ ಎರೆಯಲು ಸಾಧ್ಯವೇ?

ಇಂಥದ್ದೇ ಒಂದು ಘಟನೆಯನ್ನು ನಿಮಗೆ ಹೇಳಬೇಕಿದೆ. ಇದು 2022ರ ಮಾತು. ಕೇರಳದ ಕೊಟ್ಟಾಯಂ ಮೂಲದ 87 ವರ್ಷದ ವೃದ್ಧೆ, ಎಲಿಕ್ಕುಟ್ಟಿ ಪೌಲ್ ಅವರ ಕಣ್ಣುಗಳಲ್ಲಿ ಒಂದು ಅಪರೂಪದ ಕನಸಿತ್ತು. ಪಶ್ಚಿಮ ಘಟ್ಟಗಳ ಮಡಿಲಲ್ಲಿ, ಪ್ರತಿ 12 ವರ್ಷಗಳಿಗೊಮ್ಮೆ ಮಾತ್ರ ಭೂಮಿಗೆ ನಡುಹಗಲಿನ ನಕ್ಷತ್ರಗಳಂತೆ ಅರಳುವ 'ನೀಲಕುರುಂಜಿ' ಹೂವುಗಳ ನೇರಳೆ ಸಾಗರವನ್ನು ಒಮ್ಮೆಯಾದರೂ ಕಣ್ತುಂಬಿಕೊಳ್ಳಬೇಕು ಎನ್ನುವುದು ಆಕೆಯ ಆಸೆಯಾಗಿತ್ತು. ಆದರೆ, ಸಂಸಾರದ ಜಂಜಾಟ ಅದೆಲ್ಲ ಮುಗಿಯುವ ಹೊತ್ತಿಗೆ ಮುಪ್ಪು ಆವರಿಸಿಯಾಗಿತ್ತು. ಈಗಂತೂ ಆಕೆ ಸಂಪೂರ್ಣ ಮೆತ್ತಗಾಗಿದ್ದಳು. ಮುಪ್ಪಿನ ಕಾಯ, ಜಿಟಿಜಿಟಿ ಜೀವ, ನಡೆಯಲಾಗದ ಅಸಹಾಯಕತೆ... ಇನ್ನೊಂದು ಜನ್ಮವಿದ್ದರೆ ನೋಡಿದರಾಯಿತು ಎಂದುಕೊಂಡು ಆ ಮುಗ್ಧ ಜೀವ ಸುಮ್ಮನಾಗಿತ್ತು.

ಆದರೆ, ತಾಯಿಯ ಮನಸಿನ ಮೂಕ ಆಸೆಯನ್ನು ಆಕೆಯ ಇಬ್ಬರು ಮಕ್ಕಳಾದ ರೋಜನ್ ಮತ್ತು ಸತ್ಯನ್ ಅರಿತಿದ್ದರು. ಹೆತ್ತ ಕರುಳಿನ ಹಂಬಲವನ್ನು ಹಾಗೇ ಬಿಡಲು ಆ ಮಕ್ಕಳಿಗೆ ಮನಸ್ಸಾಗಲಿಲ್ಲ. ತಾಯಿಯ ಕೊನೆಯ ದಿನಗಳ ಆಸೆಯನ್ನು ನನಸಾಗಿಸಲೇಬೇಕೆಂದು ಪಣತೊಟ್ಟ ಅವರು, ಅವಳನ್ನು ಕರೆದುಕೊಂಡು ಇಡುಕ್ಕಿಯ ಕಲ್ಲಿಪ್ಪಾರ ಬೆಟ್ಟಗಳ ಕಡೆಗೆ ಸುಮಾರು 100 ಕಿಲೋಮೀಟರ್ ದೂರ ಪ್ರಯಾಣ ಬೆಳೆಸಿದರು. ಆದರೆ, ಬೆಟ್ಟದ ತಪ್ಪಲು ತಲುಪಿದಾಗ ವಿಧಿಯ ಆಟ ಬೇರೆಯೇ ಇತ್ತು. ಹೂವುಗಳು ಅರಳಿದ ಸ್ವರ್ಗವನ್ನು ತಲುಪಲು ಅಲ್ಲಿ ಯಾವುದೇ ರಸ್ತೆ ಇರಲಿಲ್ಲ. ಯಾರಾದರೂ ಆಗಿದ್ದರೆ ಅಲ್ಲಿಗೇ ಭರವಸೆ ಕಳೆದುಕೊಂಡು ಮರಳಿ ಹೋಗುತ್ತಿದ್ದರೇನೋ. ಆದರೆ ಆ ಮಕ್ಕಳಿಗೆ ತಾಯಿಯನ್ನು ಅಲ್ಲಿಯವರೆಗೆ ಕರೆತಂದು, ಆಕೆಯ ಕಣ್ಣಲ್ಲಿ ನಿರಾಶೆ ನೋಡಲು ಸಾಧ್ಯವಿರಲಿಲ್ಲ. ಅಮ್ಮನನ್ನು ಮಗುವಿನಂತೆ ತಮ್ಮ ಕೈಗಳಲ್ಲಿ ಎತ್ತಿಕೊಂಡರು. ಒಬ್ಬರಾದ ನಂತರ ಮತ್ತೊಬ್ಬರು ಆ 87 ವರ್ಷದ ಹೆತ್ತಮ್ಮನನ್ನು ಹೆಗಲ ಮೇಲೆ ಹೊತ್ತುಕೊಂಡು ನಡೆದೇ ಬಿಟ್ಟರು. ಕಡಿದಾದ, ಕಲ್ಲು-ಮುಳ್ಳುಗಳಿಂದ ತುಂಬಿದ್ದ ಆ ಗುಡ್ಡಗಾಡು ಹಾದಿಯಲ್ಲಿ, ಒಣಗುತ್ತಿದ್ದ ಗಂಟಲು, ಸುರಿಯುತ್ತಿದ್ದ ಬೆವರಿನ

ನಡುವೆಯೂ ಸುಮಾರು 1.5 ಕಿಲೋಮೀಟರ್ ಬೆಟ್ಟವನ್ನು ಜೀವ ಪಣಕ್ಕಿಟ್ಟು ಹತ್ತಿದರು. ಪ್ರೀತಿಯ ಶಕ್ತಿ ಅದೆಷ್ಟು ದೊಡ್ಡದೆಂದರೆ, ಆ ಕಲ್ಲುಗಳೂ ಅವರ ಪಾದಗಳಿಗೆ ನೋವುಂಟು ಮಾಡಲಿಲ್ಲ.

ಕೊನೆಗೂ ಬೆಟ್ಟದ ತುತ್ತತುದಿ ತಲುಪಿದಾಗ... ಅಲ್ಲಿ ಸೃಷ್ಟಿಯ ಪವಾಡವೇ ಕಾಯುತ್ತಿತ್ತು! ಎಲಿಕ್ಕುಟ್ಟಿ ಅವರ ಕಣ್ಣೆದುರು ಕೋಟಿ ಕೋಟಿ ನೇರಳೆ ಹೂವುಗಳ ಸಾಗರವೇ ಅನಾವರಣಗೊಂಡಿತ್ತು. ಆ ಹೂವುಗಳ ಸೌಂದರ್ಯವನ್ನು ನೋಡಿದ ಆ ವೃದ್ಧ ತಾಯಿಯ ಕಣ್ಣುಗಳಿಂದ ಆನಂದಭಾಷ್ಪ ಧಾರೆಧಾರೆಯಾಗಿ ಹರಿಯಿತು. ತನ್ನ ಎರಡು ಮಕ್ಕಳ ಹೆಗಲ ಮೇಲೆ ಕುಳಿತು ಆ ಸ್ವರ್ಗವನ್ನು ನೋಡಿದಾಗ, ಆಕೆಯ ಮುಖದಲ್ಲಿದ್ದ ನೆಮ್ಮದಿ ಮತ್ತು ಧನ್ಯತೆಯ ಭಾವ ಜಗತ್ತಿನ ಯಾವುದೇ ಸಂಪತ್ತಿಗೂ ಸಾಟಿಯಿರಲಿಲ್ಲ. ಈ ಭಾವುಕ ಕ್ಷಣದ ಚಿತ್ರಗಳು ಇಡೀ ದೇಶದ ಕಣ್ಣಾಲಿಗಳನ್ನು ಒದ್ದೆ ಮಾಡಿದವು. ಪ್ರೀತಿ ಎಂದರೆ ಕೇವಲ ಒಣ ಮಾತುಗಳಲ್ಲ, ಅದು ಹೆತ್ತವರಿಗಾಗಿ ಕರಗುವ ಕರುಳು ಮತ್ತು ಅವರಿಗಾಗಿ ಮಿಡಿಯುವ ಹೃದಯ ಎಂಬುದನ್ನು ಈ ಇಬ್ಬರು ಶ್ರವಣಕುಮಾರರು ಜಗತ್ತಿಗೆ ತೋರಿಸಿಕೊಟ್ಟರು.

ವಯಸ್ಸಾದ ಹಾಗೆ ತಂದೆ ತಾಯಿಗಳಿಂದ ನಾವು ದೈಹಿಕವಾಗಿ ಮಾತ್ರ ಅಲ್ಲ ಮಾನಸಿಕವಾಗಿ ಕೂಡ ದೂರವಾಗುತ್ತಾ ಹೋಗುತ್ತೇವೆ. ನಮಗಾಗಿ ಸರ್ವಸ್ವವನ್ನು ತ್ಯಾಗ ಮಾಡಿ ಬೆಳೆಸಿದ ತಂದೆ ತಾಯಿಗಳಿಗೆ ಕನಿಷ್ಠ ಸಮಯ ಕೊಡುವ ವಿವೇಚನೆ ಕೂಡ ನಮಗಿರುವುದಿಲ್ಲ. ಅವರಿಗೊಂದು ಕರೆ ಮಾಡಿ ಮಾತನಾಡುವ ವ್ಯವಧಾನವನ್ನೂ ಕಳೆದುಕೊಂಡು ಬಿಟ್ಟಿರುತ್ತೇವೆ. ನಮ್ಮನ್ನೇ ಪ್ರಪಂಚ ಎಂದು ಭಾವಿಸಿ ಬದುಕಿದ ಆ ಜೀವಗಳಿಗೆ ನೋವುಂಟು ಮಾಡುವ ಮುನ್ನ ನಾವು ಕೂಡ ಅವರಂತೆ ಮುಂದೆ ಇಂಥದ್ದೇ ದಿನಗಳನ್ನು ನೋಡಬೇಕಾಗಬಹುದು ಎನ್ನುವ ಕಾಳಜಿ ಇದ್ದರೆ ಸಾಕು. ತಂದೆ ತಾಯಿಗಳ ಜೊತೆ ಸಮಯ ಕಳೆಯುವುದು ಪ್ರೀತಿ ತೋರುವುದು ಜವಾಬ್ದಾರಿಯಲ್ಲ, ಅದು ಬದುಕುವ ರೀತಿ ಅದನ್ನು ಕಳೆದುಕೊಂಡವರು ಏನನ್ನು ಗಳಿಸಿದರೂ ನಿರರ್ಥಕ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಅಭಿಷೇಕ್ ಶರ್ಮಾ 100 ಸಿಕ್ಸರ್ ದಾಖಲೆ

ಲಾರ್ಡ್ಸ್: ಭಾರತ ಹಾಗೂ ಇಂಗ್ಲೆಂಡ್ ನಡುವೆ ಬುಧವಾರ ರಾತ್ರಿ ನಡೆದ ಟಿ20 ಸರಣಿಯ ಮೊದಲನೇ ಪಂದ್ಯ ಮಳೆಯ ಕಾರಣದಿಂದ ರದ್ದಾದರೂ ಆ ಪಂದ್ಯದಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ಅಭಿಷೇಕ್ ಶರ್ಮಾ ಟಿ20 ಕ್ರಿಕೆಟ್ ವೃತ್ತಿಜೀವನದಲ್ಲಿ ವಿಶೇಷ ದಾಖಲೆಯೊಂದನ್ನು ಬರೆದಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ವೇಗವಾಗಿ 100 ಸಿಕ್ಸರ್‌ಗಳನ್ನು ಪೂರ್ಣಗೊಳಿಸಿದ ವಿಶ್ವದ ಮೊದಲ ಬ್ಯಾಟ್ಸ್‌ಮನ್ ಎಂಬ ನೂತನ ಮೈಲುಗಲ್ಲನ್ನು ತಲುಪಿದ್ದಾರೆ. ಟಿ20 ವೃತ್ತಿ ಜೀವನದಲ್ಲಿ 100 ಸಿಕ್ಸರ್‌ಗಳನ್ನು ಪೂರ್ಣಗೊಳಿಸಲು ಎಡಗೈ ಬ್ಯಾಟ್ಸ್‌ಮನ್ 785 ಎಸೆತಗಳನ್ನು ತೆಗೆದುಕೊಂಡಿದ್ದಾರೆ. ವೆಸ್ಟ್ ಇಂಡೀಸ್ ಮಾಜಿ ಬ್ಯಾಟ್ಸ್‌ಮನ್ ಎವಿನ್ ಲೆವಿಸ್ ಅವರನ್ನು ಅಭಿಷೇಕ್ ಇದೀಗ ಹಿಂದಿಕ್ಕಿದ್ದಾರೆ. ವಿಂಡೀಸ್ ಬ್ಯಾಟರ್ ತಮ್ಮ ವೃತ್ತಿ ಬದುಕಿನಲ್ಲಿ 789 ಎಸೆತಗಳಲ್ಲಿ 100 ಸಿಕ್ಸರ್‌ಗಳನ್ನು ಪೂರ್ಣಗೊಳಿಸಿದ್ದರು, ಇದೀಗ ಅಭಿಷೇಕ್ ಈ ದಾಖಲೆಯನ್ನು ಬರೆಯಲು 4 ಎಸೆತಗಳನ್ನು ಕಡಿಮೆ ತೆಗೆದುಕೊಂಡಿದ್ದಾರೆ. ನ್ಯೂಜಿಲೆಂಡ್ ತಂಡದ ಫಿನ್ ಆಲೆನ್ ಅವರು ಈ ಪಟ್ಟಿಯಲ್ಲಿ ಮೂರನೇ ಸ್ಥಾನವನ್ನು ಅಲಂಕರಿಸಿದ್ದಾರೆ. 2024ರಲ್ಲಿ ಭಾರತದ ಪರ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಅಭಿಷೇಕ್ ಶರ್ಮಾ, ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ವಿಶ್ವದ ಶ್ರೇಷ್ಠ ಆಟಗಾರರ ಸಾಲಿನಲ್ಲಿ ಒಬ್ಬರಾಗಿದ್ದಾರೆ.

ಅತಿಥೇಯ ತಂಡಕ್ಕೆ ಭರ್ಜರಿ ಗೆಲುವು | ಬೋಸ್ನಿಯಾಗೆ 2-0 ಸೋಲು

16ನೇ ಸುತ್ತಿಗೆ ಅಮೆರಿಕ ಲಗ್ಗೆ

ಸ್ಯಾನ್ ಫ್ರಾನ್ಸಿಸ್ಕೋ: ಇಲ್ಲಿನ ಬೇ ಏರಿಯಾ ಕ್ರೀಡಾಂಗಣದಲ್ಲಿ ಗುರುವಾರ ಬೆಳಿಗ್ಗೆ ನಡೆದಿದ್ದ ಪಂದ್ಯದಲ್ಲಿ ಬೋಸ್ನಿಯಾ ಮತ್ತು ಹರ್ಜೆಗೋವಿನಾವನ್ನು 2-0 ಅಂತರದಿಂದ ಸೋಲಿಸುವ ಮೂಲಕ ಫಿಫಾ ವಿಶ್ವಕಪ್‌ನ ಸಹ-ಆತಿಥೇಯ ತಂಡವಾದ ಅಮೆರಿಕ 16ನೇ ಸುತ್ತಿಗೆ ಮುನ್ನಡೆದಿದೆ. ಇದು 24 ವರ್ಷಗಳ ನಂತರ ಅಮೆರಿಕದ ನಾಕೌಟ್ ಹಂತದ ಗೆಲುವಾಗಿದ್ದು, ವಿಶ್ವಕಪ್ ಇತಿಹಾಸದಲ್ಲಿ ಇದು ಎರಡನೇ ನಾಕೌಟ್ ಜಯವಾಗಿದೆ.

ಅಮೆರಿಕ ಪರ ಫೋಲಾರಿನ್ ಬಲೋಗನ್ ಮತ್ತು ಮಲಿಕ್ ಟಿಲ್ಮನ್ ಗೋಲು ಗಳಿಸಿದರು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ದ್ವಿತೀಯಾರ್ಧದಲ್ಲಿ ಬಲೋಗನ್ ರೆಡ್ ಕಾರ್ಡ್ ಪಡೆದರೂ, ಅಮೆರಿಕ 10 ಆಟಗಾರರೊಂದಿಗೆ ಅದ್ಭುತ ಪ್ರದರ್ಶನ ನೀಡಿ ಗೆಲುವು ಸಾಧಿಸಿದೆ.

ಪಂದ್ಯದ ಆರಂಭದಿಂದಲೂ ಅಮೆರಿಕ ತಂಡವು ಆಕ್ರಮಣಕಾರಿಯಾಗಿ ಆಡಿ, ಚೆಂಡಿನ ಮೇಲೆ ನಿಯಂತ್ರಣ ಸಾಧಿಸಿತು. ಫೋಲಾರಿನ್ ಬಾಲೊಗುನ್ ತಂಡಕ್ಕಾಗಿ ಅದ್ಭುತ ಗೋಲು ಗಳಿಸಿದರೂ, ಆಫ್‌ಸೈಡ್ ಕಾರಣದಿಂದಾಗಿ ಅವರ ಗೋಲು ನಿರಾಕರಿಸಲ್ಪಟ್ಟಿತು. ಮೊದಲಾರ್ಧದ ಸಮಯದಲ್ಲಿ ಬಾಲೊಗುನ್ ಮತ್ತೊಂದು ಅವಕಾಶವನ್ನು ಸೃಷ್ಟಿಸಿ 45ನೇ ನಿಮಿಷದಲ್ಲಿ ಚೆಂಡನ್ನು ನೆಟ್‌ಗೆ ಸ್ಲಾಟ್ ಮಾಡಿ, ಯುನೈಟೆಡ್ ಸ್ಟೇಟ್ಸ್‌ಗೆ 1-0 ಮುನ್ನಡೆ ತಂದುಕೊಟ್ಟರು.

ಮೊದಲಾರ್ಧದ ನಂತರ ಹೆಚ್ಚುವರಿ ಸಮಯದಲ್ಲಿ ಬಾಲೊಗುನ್ ಎರಡನೇ ಗೋಲು ಗಳಿಸುವ ಸಮೀಪ ಬಂದರು, ಆದರೆ ಅವರು ಹೊಡೆದ ಚೆಂಡು ಕ್ರಾಸ್‌ಬಾರ್‌ಗೆ ಬಡಿಯಿತು. ಬೋಸ್ನಿಯಾ ದ್ವಿತೀಯಾರ್ಧದಲ್ಲಿ ಮತ್ತೆ

ಗೋಲು ಗಳಿಸಲು ಪ್ರಯತ್ನಿಸಿತು. ಆದರೆ 64ನೇ ನಿಮಿಷದಲ್ಲಿ ಫೋಲಾರಿನ್ ಕೆಂಪು ಕಾರ್ಡ್ ಪಡೆದ ನಂತರ ಅಮೆರಿಕ ತಂಡ ಬಹುದೊಡ್ಡ ಹಿನ್ನಡೆ ಅನುಭವಿಸಿತು, ಇದರಿಂದಾಗಿ ಉಳಿದ ಭಾಗಕ್ಕೆ ಹತ್ತು ಆಟಗಾರರೊಂದಿಗೆ ಆಡಬೇಕಾಯಿತು. ಆದರೂ ದೊರೆತ ಅವಕಾಶವನ್ನು ಬಳಸಿಕೊಳ್ಳುವಲ್ಲಿ ಬೋಸ್ನಿಯಾ ವಿಫಲವಾಯಿತು.

ಒಬ್ಬ ಆಟಗಾರನ ಕೊರತೆಯಿದ್ದರೂ, ಅಮೆರಿಕನ್ ಆಟಗಾರರು ಗಮನಾರ್ಹ ಪ್ರದರ್ಶನ ನೀಡಿ ಎದುರಾಳಿ ತಂಡಕ್ಕೆ ಸಮಬಲ ಸಾಧಿಸುವ ಯಾವುದೇ ಅವಕಾಶವನ್ನು ನೀಡಲಿಲ್ಲ. ಪಂದ್ಯದ ಕೊನೆಯಲ್ಲಿ ಮಲಿಕ್ ಟಿಲ್ಮನ್ ಅದ್ಭುತ ಫ್ರೀ-ಕಿಕ್ ಗಳಿಸಿ ತಮ್ಮ ಮುನ್ನಡೆಯನ್ನು 2-0ಕ್ಕೆ ವಿಸ್ತರಿಸಿದರು.

ಫಿಫಾ ವಿಶ್ವಕಪ್‌ನ ನಾಕೌಟ್ ಹಂತಗಳಲ್ಲಿ ಯುರೋಪಿಯನ್ ತಂಡದ ವಿರುದ್ಧ ಅಮೆರಿಕ ಸಾಧಿಸಿದ ಎರಡನೇ ಗೆಲುವು ಇದಾಗಿದೆ. ಯುರೋಪಿಯನ್ ರಾಷ್ಟ್ರಗಳ ವಿರುದ್ಧ ಸತತ 12 ಪಂದ್ಯಗಳ ಸೋಲಿನ ಸರಣಿಯನ್ನು ಈ ಮೂಲಕ ಅದು ಕೊನೆಗೊಳಿಸಿದೆ. ಅಮೆರಿಕ ತಂಡವು ಜುಲೈ 7ರಂದು ಸಿಯಾಟಲ್ ಕ್ರೀಡಾಂಗಣದಲ್ಲಿ 16ರ ಸುತ್ತಿನಲ್ಲಿ ಬೆಲ್ಜಿಯಂ ಅನ್ನು ಎದುರಿಸಲಿದೆ.

ಹ್ಯಾರಿ ಕೇನ್ ಡಬಲ್ ಗೋಲು | ಕಾಂಗೋಗೆ ಸೋಲು

ಪ್ರೀ ಕ್ವಾರ್ಟರ್‌ಗೆ ಇಂಗ್ಲೆಂಡ್

ಜಾರ್ಜಿಯಾ: 32ನೇ ಸುತ್ತಿನ ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಡಿಆರ್ ಕಾಂಗೋವನ್ನು 2-1 ಅಂತರದಿಂದ ಸೋಲಿಸಿ, 16ರ ಸುತ್ತಿಗೆ ಮುನ್ನಡೆದಿದೆ.

ಇಲ್ಲಿನ ಅಟ್ಲಾಂಟಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಮೊದಲಾರ್ಧದಲ್ಲಿ ಇಂಗ್ಲೆಂಡ್ ತಂಡ ಹಿನ್ನಡೆ ಅನುಭವಿಸಿದರೂ, ದ್ವಿತೀಯಾರ್ಧದಲ್ಲಿ ನಾಯಕ ಹ್ಯಾರಿ ಕೇನ್ ಎರಡು ಗೋಲುಗಳನ್ನು ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು.

ತಮ್ಮ ಮೊದಲ ವಿಶ್ವಕಪ್ ನಾಕೌಟ್ ಪಂದ್ಯವನ್ನು ಆಡುತ್ತಿರುವ ಡಿಆರ್ ಕಾಂಗೋ, ಆರಂಭಿಕ ಗೋಲ್ ಗಳಿಸುವ ಮೂಲಕ ಎಲ್ಲರನ್ನೂ ಅಚ್ಚರಿಗೊಳಿಸಿತು. 7ನೇ ನಿಮಿಷದಲ್ಲಿ ಚಾನ್ಸೆಲ್ ಎಂಬೆಂಬಾ ನೀಡಿದ ಪಾಸ್‌ನಿಂದ ಬ್ರಿಯಾನ್ ಸಿಪೆಂಗಾ ಚೆಂಡನ್ನು ಇಂಗ್ಲೆಂಡ್ ಗೋಲು ಪೆಟ್ಟಿಗೆಗೆ ತಲುಪಿತು, ಇದು ಬ್ರಿಯಾನ್ ಅವರ ಮೊದಲ ಅಂತಾರಾಷ್ಟ್ರೀಯ ಗೋಲಾಗಿದೆ. ನಂತರ ಕಾಂಗೋ ತಂಡದ ರಕ್ಷಣಾ ಪಡೆ ಮತ್ತು ಗೋಲ್‌ಕೀಪರ್ ಲಿಯೋನೆಲ್ ಎಂಪಾಸಿ ಅದ್ಭುತ ಪ್ರದರ್ಶನ ನೀಡಿದರು. ಮೊದಲಾರ್ಧದಲ್ಲಿ ಎಂಪಾಸಿ ಹಲವಾರು ಅತ್ಯುತ್ತಮ ಸೇವ್‌ಗಳನ್ನು ಮಾಡಿ ಇಂಗ್ಲೆಂಡ್‌ನ ದಾಳಿಯನ್ನು ತಡೆದರು ಇದರಿಂದಾಗಿ ಅರ್ಧಾವಧಿಯಲ್ಲಿ ಕಾಂಗೋ 1-0 ಮುನ್ನಡೆ ಸಾಧಿಸಿತು.

75ನೇ ನಿಮಿಷದಲ್ಲಿ ಇಂಗ್ಲೆಂಡ್ ತಂಡ ಮೊದಲ ಗೋಲು ಕಲೆ ಹಾಕಿ ಸಮಬಲ ಸಾಧಿಸಿತು. ಸ್ಟಾರ್ ಫಾರ್ವರ್ಡ್ ಹ್ಯಾರಿ ಕೇನ್ ಗೋಲು ಗಳಿಸಿದರು. ಆಂಥೋನಿ ಗಾರ್ಡನ್ ಅವರ ಅದ್ಭುತ ಪಾಸ್

ಅನ್ನು ಕೇನ್ ಹೆಡರ್ ಮೂಲಕ ಗೋಲ್‌ಗೆ ಕಳುಹಿಸಿದರು. ಕೇವಲ 11 ನಿಮಿಷಗಳ ನಂತರ 86ನೇ ನಿಮಿಷದಲ್ಲಿ ಕೇನ್ ಮತ್ತೊಂದು ಗೋಲು ಗಳಿಸಿ ಇಂಗ್ಲೆಂಡ್‌ಗೆ 2-1 ಮುನ್ನಡೆ ಒದಗಿಸಿದರು.

ಇಂಗ್ಲೆಂಡ್ ತಂಡವು ತನ್ನ ಮುಂದಿನ ಪಂದ್ಯದಲ್ಲಿ ಮೆಕ್ಸಿಕೊ ತಂಡವನ್ನು ಎದುರಿಸಲಿದೆ.

ಮಾಜಿ ಕೋಚ್ ಬಳಿ ಬ್ಯಾಟಿಂಗ್ ತರಬೇತಿ ಪಡೆದ ವಿರಾಟ್

ಕೊಹ್ಲಿ ಬ್ಯಾಟಿಂಗ್ ಅಭ್ಯಾಸ ಪುನರಾರಂಭ

ದೆಹಲಿ: ಜುಲೈ 14ರಿಂದ ಪ್ರಾರಂಭವಾಗುವ ಇಂಗ್ಲೆಂಡ್ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಗೆ ಮುಂಚಿತವಾಗಿ ಭಾರತದ ಸ್ಟಾರ್ ಬ್ಯಾಟ್ಸ್‌ಮನ್ ವಿರಾಟ್ ಕೊಹ್ಲಿ ಬ್ಯಾಟಿಂಗ್ ಅಭ್ಯಾಸವನ್ನು ಪುನ ರಾರಂಭಿಸಿದ್ದಾರೆ. ತವರಿನಲ್ಲಿ ಅಫ್ಘಾನಿಸ್ತಾನ ವಿರುದ್ಧದ ಸರಣಿಯನ್ನು ತಪ್ಪಿಸಿಕೊಂಡ ನಂತರ ಸರಣಿಗೆ ಅವರ ಲಭ್ಯತೆಯು ಫಿಟ್ನೆಸ್ ಕ್ಲಿಯರೆನ್ಸ್‌ಗೆ ಒಳಪಟ್ಟಿರುತ್ತದೆ.

ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿರುವ ವಿಡಿಯೊವೊಂದರಲ್ಲಿ ಕೊಹ್ಲಿ ತಮ್ಮ ಕಿಟ್ ಬ್ಯಾಗ್ ಹಿಡಿದುಕೊಂಡು ತರಬೇತಿ ಸ್ಥಳಕ್ಕೆ ಆಗಮಿಸಿ, ಭಾರತದ ಮಾಜಿ ಬ್ಯಾಟಿಂಗ್ ಕೋಚ್ ಸಂಜಯ್ ಬಂಗಾರ್ ಅವರನ್ನು ಭೇಟಿಯಾಗಿ ಸಲಹೆ ಪಡೆದಿದ್ದಾರೆ. ಇಬ್ಬರೂ ಮೈದಾನದ ಮಧ್ಯಭಾಗದಲ್ಲಿ ಸೆಷನ್‌ಗಳ ಬಗ್ಗೆ ಚರ್ಚಿಸಿ ನಂತರ ಕೊಹ್ಲಿ, ಬಂಗಾರ್ ಮಾರ್ಗದರ್ಶನದಲ್ಲಿ ವಿಸ್ತೃತ ಬ್ಯಾಟಿಂಗ್ ಅಭ್ಯಾಸ ನಡೆಸಿದರು. ಕೊಹ್ಲಿಗೆ ಫಿಟ್‌ನೆಸ್ ಕ್ಲಿಯರೆನ್ಸ್ ಸಿಕ್ಕರೆ, ಅವರು ತಕ್ಷಣವೇ ಭಾರತ ತಂಡ ಸೇರಿ ಇಂಗ್ಲೆಂಡ್ ಸರಣಿಯಲ್ಲಿ ಆಡಲಿದ್ದಾರೆ. ಆ ಅವಕಾಶ ಸಿಕ್ಕಿದರೆ ಭಾರತದ ಚಾಂಪಿಯನ್ಸ್ ಟ್ರೋಫಿ ಅಭಿಯಾನದ ನಂತರ ಅವರು ಆಡುವ ಮೊದಲ ಅಂತಾರಾಷ್ಟ್ರೀಯ ಸರಣಿ ಇದಾಗಲಿದೆ.

ಮಾಧ್ಯಮ ವರದಿಗಳ ಪ್ರಕಾರ, ಕೊಹ್ಲಿ ಮುಂಬೈನಲ್ಲಿ ಬಂಗಾರ್ ಅವರೊಂದಿಗೆ ತರಬೇತಿ ಅವಧಿಯನ್ನು ಪೂರ್ಣಗೊಳಿಸಿದ್ದಾರೆ. ಇಂಗ್ಲೆಂಡ್ ಪ್ರವಾಸಕ್ಕೂ ಮುನ್ನ ತಮ್ಮ ಬ್ಯಾಟಿಂಗ್‌ನ ತಾಂತ್ರಿಕ ಅಂಶಗಳತ್ತ ಗಮನಹರಿಸಿದ್ದಾರೆ. 2014ರಿಂದ 2019ರ ವರೆಗೆ ಬಂಗಾರ್ ಭಾರತದ ಬ್ಯಾಟಿಂಗ್ ಕೋಚ್ ಆಗಿ ಸೇವೆ ಸಲ್ಲಿಸಿದಾಗ ಕೊಹ್ಲಿಗೆ ಬಂಗಾರ್ ಜತೆ ಬಲವಾದ ಸಂಬಂಧವಿತ್ತು. ಅದೇ ಸಮಯದಲ್ಲಿ ಕೊಹ್ಲಿ ತಮ್ಮ ಶ್ರೇಷ್ಠತೆಯನ್ನು ಸಾಬೀತುಪಡಿಸಿ ಆಧುನಿಕ ಯುಗದ ಶ್ರೇಷ್ಠ ಆಟಗಾರರಲ್ಲಿ ಒಬ್ಬರೆನಿಸಿದರು.

ಟೆಸ್ಟ್ ಸರಣಿಯ ವೇಳಾಪಟ್ಟಿ ಪ್ರಕಟಿಸಿದ ಶ್ರೀಲಂಕಾ ಕ್ರಿಕೆಟ್ ಮಂಡಳಿ

ಆ.15ರಿಂದ ಭಾರತ-ಲಂಕಾ ಟೆಸ್ಟ್ ಸರಣಿ

ಕೊಲಂಬೊ: ಶ್ರೀಲಂಕಾ ಕ್ರಿಕೆಟ್ ಮಂಡಳಿಯು ಭಾರತ ವಿರುದ್ಧದ ಟೆಸ್ಟ್ ಪ್ರವಾಸದ ವೇಳಾಪಟ್ಟಿಯನ್ನು ಪ್ರಕಟಿಸಿದೆ.

ಎರಡು ಪಂದ್ಯಗಳ ಈ ಸರಣಿಯು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಭಾಗವಾಗ ಲಿದೆ. ಪಂದ್ಯಗಳು ಗಾಲೆ ಮತ್ತು ಕೊಲಂಬೊದಲ್ಲಿ ನಡೆಯಲಿದೆ.

ಭಾರತ ಮತ್ತು ಶ್ರೀಲಂಕಾ ತಂಡಗಳು ಆಗಸ್ಟ್ 15ರಿಂದ 19ರ ವರೆಗೆ ಗಾಲೆ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುವ ಮೊದಲ ಟೆಸ್ಟ್ ಪಂದ್ಯದೊಂದಿಗೆ ಸರಣಿಯನ್ನು ಆರಂಭಿಸಲಿದ್ದು, ಆಗಸ್ಟ್ 23ರಿಂದ 27ರ ವರೆಗೆ ಕೊಲಂಬೊದಲ್ಲಿ ಎರಡನೇ ಪಂದ್ಯವನ್ನು ಆಯೋಜಿಸಲಿದೆ ಎಂದು ಲಂಕಾ ಕ್ರಿಕೆಟ್ ಮಂಡಳಿ ದೃಢಪಡಿಸಿದೆ.

ಕಳೆದ ವರ್ಷಾಂತ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ತವರು ಸರಣಿಯಲ್ಲಿ 2-0 ಅಂತರದಲ್ಲಿ ಸೋತ ನಂತರ ಈ ವರ್ಷ ಡಬ್ಲ್ಯುಟಿಸಿಯಲ್ಲಿ ಭಾರತ ಆಡುತ್ತಿರುವ ಮೊದಲ ಟೆಸ್ಟ್ ಸರಣಿ ಇದಾಗಿದೆ. ವಿರಾಟ್ ಕೊಹ್ಲಿ ನೇತೃತ್ವದಲ್ಲಿ ಶ್ರೀಲಂಕಾವನ್ನು 2-0 ಅಂತರದಿಂದ ಸೋಲಿಸಿದ 2017ರ ನಂತರ ಭಾರತದ ಮೊದಲ ಟೆಸ್ಟ್ ಪ್ರವಾಸವೂ ಇದಾಗಿದೆ. ಆ ಪ್ರವಾಸದ ಹೆಚ್ಚಿನ ಆಟಗಾರರು ನಿವೃತ್ತರಾಗಿದ್ದು, ಕುಲದೀಪ್ ಯಾದವ್, ಅಕ್ಷರ್ ಪಟೇಲ್ ಮತ್ತು ಕೆಎಲ್ ರಾಹುಲ್ ಮಾತ್ರ ಸರಣಿಯಲ್ಲಿದ್ದ ಆಟಗಾರರಾಗಿದ್ದಾರೆ. ಶುಭ್‌ಮನ್ ಗಿಲ್ ತಂಡವನ್ನು ಮುನ್ನಡೆಸಲಿದ್ದಾರೆ.

ಟೆಸ್ಟ್‌ಗೂ ಮೊದಲು ಎರಡೂ ತಂಡಗಳು ಮೂರು ಪಂದ್ಯಗಳ ಟಿ20 ಸರಣಿಯನ್ನು ಆಡಬಹುದು ಎಂದು ವರದಿಗಳು ಹೇಳಿದ್ದವು. ಆದರೆ ಲಂಕಾ ಕ್ರಿಕೆಟ್ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯಲ್ಲಿ ಯಾವುದೇ ಟಿ20 ಪಂದ್ಯಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಅವರು ಮೂರು ಪಂದ್ಯಗಳಿಗೆ ವಿನಂತಿ ಬಂದಿರುವುದನ್ನು ದೃಢಪಡಿಸಿದರಲ್ಲದೆ, ವೇಳಾಪಟ್ಟಿಯನ್ನು ಶೀಘ್ರದಲ್ಲೇ ಅಂತಿಮಗೊಳಿಸಲಾಗುವುದು ಎಂದು ಹೇಳಿದ್ದಾರೆ.

ಎಲ್‌ಎ ನೈಟ್ ರೈಡರ್ಸ್ ಮೈದಾನ ಉದ್ಘಾಟನೆ | ಮಾಲೀಕ ಶಾರೂಖ್ ಭಾಗಿ

ಅಮೆರಿಕದಲ್ಲಿ ಕೆಕೆಆರ್ ಕ್ರಿಕೆಟ್ ಮೈದಾನ

ಕ್ಯಾಲಿಫೋರ್ನಿಯಾ: ಬಾಲಿವುಡ್ ಸೂಪರ್‌ಸ್ಟಾರ್ ಶಾರುಖ್ ಖಾನ್ ಅವರ ಐಪಿಎಲ್ ಫ್ರಾಂಚೈಸಿಯಾದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಕ್ರಿಕೆಟ್ ಜಗತ್ತಿನಲ್ಲಿ ಇತಿಹಾಸ ಸೃಷ್ಟಿಸಿದೆ. ಅದು ಕ್ಯಾಲಿಫೋರ್ನಿಯಾದ ಪೊಮೊನಾದಲ್ಲಿ 'ಲಾಸ್ ಏಂಜಲೀಸ್ ನೈಟ್ ರೈಡರ್ಸ್' ಕ್ರಿಕೆಟ್ ಮೈದಾನದ ಅದ್ಧೂರಿ ಉದ್ಘಾಟನೆ ಮಾಡಿತು. ಇದರೊಂದಿಗೆ ಕೆಕೆಆರ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣವನ್ನು ನಿರ್ಮಿಸಿದ ವಿಶ್ವದ ಮೊದಲ ಫ್ರಾಂಚೈಸಿಯಾಗಿದೆ.

ಈ ಮೈದಾನವು ಲಾಸ್ ಏಂಜಲೀಸ್ ನೈಟ್ ರೈಡರ್ಸ್ ತಂಡದ ಶಾಶ್ವತ ನೆಲೆಯಾಗಲಿದ್ದು, 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಟೂರ್ನಿಯ ಪ್ರಮುಖ ಕೇಂದ್ರವಾಗಲಿದೆ. ಸಾಂಪ್ರದಾಯಿಕ ಪೂಜೆಯೊಂದಿಗೆ ಕ್ರೀಡಾಂಗಣವನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಶಾರುಖ್ ಖಾನ್ ಕಾಣಿಸಿಕೊಂಡು, ಐಸಿಸಿ ಅಧ್ಯಕ್ಷ ಜಯ್ ಶಾ ಅವರಿಗೆ ಧನ್ಯವಾದ

ಅರ್ಪಿಸಿ ಸೋಶಿಯಲ್ ಮೀಡಿಯಾದಲ್ಲಿ ಕೃತಜ್ಞತಾ ಪೋಸ್ಟ್ ಹಾಕಿದ್ದಾರೆ. 'ಒಂದು ಕಾಲದ ಕನಸು ನನಸಾಗಿದೆ' ಎಂದು ಭಾವನಾತ್ಮಕ ಸಂದೇಶವನ್ನು ಶಾರೂಖ್ ಖಾನ್ ಹಂಚಿಕೊಂಡಿದ್ದಾರೆ. ಎಲ್‌ಎ ನೈಟ್ ರೈಡರ್ಸ್ ಕ್ರಿಕೆಟ್ ಮೈದಾನದ ನಿರ್ಮಾಣದ ಹಿಂದೆ ಐಸಿಸಿ ಅಧ್ಯಕ್ಷ ಜಯ್ ಶಾ ಪ್ರಮುಖ ಪಾತ್ರವಹಿಸಿದ್ದಾರೆ, ಇದಕ್ಕಾಗಿ ಅವರಿಗೆ ಧನ್ಯವಾದ ಎಂದೂ ಹೇಳಿದ್ದಾರೆ.



ಕನ್ನಡ ಚಿತ್ರರಂಗದಲ್ಲಿ ನಟರಾಗಿ ಎರಡು ದಶಕಗಳನ್ನು ಪೂರೈಸಿರುವ ನಟ ಗಣೇಶ್ ಹುಟ್ಟುಹಬ್ಬದ ಸಂಭ್ರಮದ ಲ್ಲಿದ್ದಾರೆ. ತಮ್ಮ ನೆಚ್ಚಿನ ನಟನಿಗೆ ಅಭಿಮಾನಿಗಳು ಶುಭಕೋರಿದ್ದಾರೆ. ಗಣಿ ತಮ್ಮ ಹುಟ್ಟುಹಬ್ಬಕ್ಕೆ ಅಭಿಮಾನಿಗಳಿಗೆ ಉಡುಗೊರೆ ನಿಡಿದ್ದಾರೆ. ಹೌದು, ಗಣೇಶ್ ನಾಯಕನಾಗಿ ನಟಿಸಿರುವ, ಬೃಂದಾವಿಹಾರಿ ಚಿತ್ರದ ಬಿಡುಗೆಯ ದಿನಾಂಕ ಘೋಷಣೆಯಾ ಗಿದೆ. ಅಕ್ಟೋಬರ್ 16ರಂದು ಗಣಿ ಬೃಂದಾವಿಹಾರಿಯಾಗಿ ದರ್ಶನ ಕೊಡಲಿದ್ದಾರೆ. ಶ್ರೀನಿವಾಸರಾಜು ನಿರ್ದೇಶನದ ಈ ಚಿತ್ರವನ್ನು ಸಮೃದ್ಧಿ.ವಿ.ಮಂಜುನಾಥ್ ನಿರ್ಮಾಣ ಮಾಡಿದ್ದಾರೆ. ಗಣೇಶ್ ಅವರಿಗೆ ನಾಯಕಿಯರಾಗಿ ದೇವಿಕಾ ಭಟ್ ಹಾಗೂ ಮಾಳವಿಕಾ ಶರ್ಮ ಅಭಿನಯಿಸಿದ್ದಾರೆ. ಚಂದನವನದ ಹಿರಿಯ ಕಲಾವಿದರ ತಾರಾಬಳಗವೇ ಈ ಚಿತ್ರದಲ್ಲಿದೆ. ಕೃಷ್ಣಂ ಪ್ರಣಯ ಸಖಿ ಬಳಿಕ ನಿರ್ದೇಶಕ ಶ್ರೀನಿವಾಸ್ ರಾಜು ಹಾಗೂ ಗಣೇಶ್ ಈ ಚಿತ್ರದ ಮೂಲಕ ಮತ್ತೆ ಒಂದಾಗಿದ್ದು ಸಿನಿಮಾದ ಬಗ್ಗೆ ಕುತೂಹಲ ಹೆಚ್ಚುವಂತೆ ಮಾಡಿದೆ. ಲವ್, ಎಮೋಷನ್ ಜತೆಗೆ

ಅಕ್ಟೋಬರ್‌ನಲ್ಲಿ ಬೃಂದಾವಿಹಾರಿ

ಕೌಟುಂಬಿಕ ಕಥೆಯನ್ನು ಒಳಗೊಂಡಿರುವ ಬೃಂದಾವಿಹಾರಿ ಹಾಡುಗಳ ಮೂಲಕವೇ ಸಖತ್ ಸದ್ದು ಮಾಡುತ್ತಿದ್ದು, ಸಿನಿಮಾದ ಹಾಡುಗಳು ನಿರೀಕ್ಷೆಗೂ ಮೀರಿ ಯಶಸ್ವಿಯಾಗಿವೆ.

ಪಿನಾಕನಾದ ಗಣಿ

ಗಣೇಶ್, ಪಿನಾಕ ಚಿತ್ರದಲ್ಲಿಯೂ ಅಭಿನಯಿಸುತ್ತಿದ್ದಾರೆ. ಪೀಪಲ್ ಮೀಡಿಯಾ ಫ್ಯಾಕ್ಟರಿ ಲಾಂಛನದಲ್ಲಿ ವಿಶ್ವಪ್ರಸಾದ್ ಅದ್ದೂರಿಯಾಗಿ ನಿರ್ಮಿಸುತ್ತಿರುವ ಈ ಚಿತ್ರವನ್ನು ಧನಂಜಯ್ ನಿರ್ದೇಶನ ಮಾಡುತ್ತಿದ್ದಾರೆ. ಪಿನಾಕ ಅಕ್ಟೋಬರ್ 2ರಂದು ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಗಣೇಶ್ ಅವರ ಹುಟ್ಟುಹಬ್ಬದ ಪ್ರಯುಕ್ತ ವಿಶೇಷ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಿತ್ರತಂಡ ಪಿನಾಕ ಚಿತ್ರದ ಬಿಡುಗಡೆ ದಿನಾಂಕ ಘೋಷಣೆ ಮಾಡಿದೆ. ಇದೊಂದು ಕಾವಲುಗಾರ ಪರಂಪರೆಯ ಕುರಿತಾದ ಚಿತ್ರ, ಎರಡು ಕಾಲಘಟ್ಟದಲ್ಲಿ ನಡೆಯುವ ಕಥೆ ತೆರೆಯಲ್ಲಿ ಸಾಗಲಿದೆ. ಗಣೇಶ್ ಅವರ ವೃತ್ತಿ ಜೀವನದಲ್ಲಿಯೇ ಇದೊಂದು ಅದ್ಭುತ ಚಿತ್ರವಾಗಲಿದೆ. ಗಣೇಶ್ ಅವರ ಹೊಸ ಲುಕ್ ಅಭಿಮಾನಿಗಳ ಮನಗೆಲ್ಲಲಿದೆ ಎನ್ನುತ್ತಾರೆ ನಿರ್ದೇಶಕರು.

ಮೂರು ದಶಕಗಳ ಬಳಿಕ ಅಮೇರಿಕಾ ಅಮೇರಿಕಾ

ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ ಅಮೇರಿಕಾ ಅಮೇರಿಕಾ ಭರ್ಜರಿ ಯಶಸ್ಸು ಪಡೆಯಿತು. ಮೂರು ದಶಕಗಳ ಹಿಂದೆಯೇ ತೆರೆಗೆ ಬಂದ ಈ ಚಿತ್ರ ಇಂದಿಗೂ ಹಿಟ್ ಸಿನಿಮಾಗಳ ಸಾಲಿನಲ್ಲಿದೆ. ಈಗ ಅಮೇರಿಕಾ ಅಮೇರಿಕಾ 2 ಚಿತ್ರ ನಿರ್ಮಾಣವಾಗಿದೆ. ನಾಗತಿಹಳ್ಳಿ ಚಂದ್ರಶೇಖರ ಅವರೇ ಈ ಚಿತ್ರವನ್ನೂ ನಿರ್ದೇಶಿಸಿದ್ದಾರೆ. ಆದರೆ ಮೊದಲ ಭಾಗಕ್ಕೂ ಈ ಚಿತ್ರದ ಕಥೆಗೂ ಸಂಬಂಧವಿಲ್ಲ, ಹೊಸತನದ ಕಥೆ ತೆರೆಯಲ್ಲಿ ಸಾಗಲಿದೆ. ನಿರೂಪ್ ಭಂಡಾರಿ, ಪೃಥ್ವಿ ಅಂಬರ್ ಹಾಗೂ ಸಾನ್ವಿ ಶ್ರೀವಾಸ್ತವ್ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಹಳೇ ಕಥೆಗಳಿಂದ್ಲೇ ಹೊಸ ಕಥೆಗಳು ಹುಟ್ಟೋದು ಇದು ನಿಜ. ಎಲ್ಲಾ ಹೊಸಕಥೆಗಳು ಹಳೆ ಕಥೆಗಳೇ ಆಗಿರುತ್ತವೆ. ಹಾಗಾಗಿ ಹೊಸತು ಎನ್ನುವುದರ ಹುಡುಕಾಟದಲ್ಲಿ ಎಲ್ಲರೂ ಇದ್ದೇವೆ. ನಾನು ನಿರ್ದೇಶಿಸಿದ ಅಮೇರಿಕಾ ಅಮೇರಿಕಾ ತೊಂಬತ್ತರ ದಶಕದಲ್ಲಿ ಅದ್ಭುತ ಯಶಸ್ಸು ಕಂಡಿತು. ಈಗ ಅಮೇರಿಕಾ ಅಮೇರಿಕಾ 2 ಶೀರ್ಷಿಕೆಯಲ್ಲಿ ಸಿನಿಮಾ ನಿರ್ಮಾಣವಾಗಿದೆ. ಆದರೆ, ಇದು ಆ ಚಿತ್ರದ ಮುಂದುವರಿದ ಭಾಗವಲ್ಲ. ಇಲ್ಲೂ ಮೂರು ಮುಖ್ಯಪಾತ್ರಗಳಿವೆ. ಆದರೆ ಸೂರ್ಯ, ಭೂಮಿ, ಶಶಾಂಕ್ ಪಾತ್ರಗಳಿಲ್ಲ. ಬೇರೆ ಪಾತ್ರಗಳು ತೆರೆಯಲ್ಲಿ ಸಾಗುತ್ತವೆ. ಇದು ಸಹನಾ ವಿಜಯಕುಮಾರ್ ಅವರ ಕಾದಂಬರಿ ಆಧಾರಿತ ಸಿನಿಮಾವಾಗಿದ್ದು, ಇದೊಂದು ಸ್ತ್ರೀ ಪ್ರಧಾನ ಚಿತ್ರವಾಗಿದೆ. ಚಿತ್ರದಲ್ಲಿ ನಾಲ್ಕು ಸುಮಧುರ ಹಾಡುಗಳಿದ್ದು, ಮನೋಮೂರ್ತಿ ಸಂಗೀತ ಸಂಯೋಜಿಸಿದ್ದಾರೆ. ಈ ಚಿತ್ರವನ್ನೂ ಅಮೇರಿಕಾದಲ್ಲಿಯೇ ಚಿತ್ರೀಕರಣ ನಡೆಸಲಾಗಿದೆ ಎಂದು ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಅಮೇರಿಕಾ ಅಮೇರಿಕಾ ನನ್ನ ನೆಚ್ಚಿನ ಸಿನಿಮಾಗಳಲ್ಲಿ ಒಂದು. ಆ ಸಿನಿಮಾ ಇಂದಿಗೂ ಮನದಲ್ಲಿ ಉಳಿದಿದೆ. ನಾಗತಿಹಳ್ಳಿ ಚಂದ್ರಶೇಖರ್ ಅವರ ನಿರ್ದೇಶನದ ಸಿನಿಮಾಗಳಲ್ಲಿ

ಅಭಿನಯಿಸಬೇಕು ಎಂದುಕೊಂಡಿದ್ದೆ. ಹೀಗಿರುವಾಗಲೇ ನಾಗತಿಹಳ್ಳಿ ಚಂದ್ರಶೇಖರ್ ಅವರು ನನಗೆ ಈ ಚಿತ್ರದ ಕಥೆ ಹೇಳಿದರು. ಕಥೆ, ಶೀರ್ಷಿಕೆ ಕೇಳಿಯೇ ನಟಿಸಬೇಕೆಂದು ನಿರ್ಧರಿಸಿದೆ. ಇದು ಅಮೇರಿಕಾ ಅಮೇರಿಕಾ ಚಿತ್ರದ ಮುಂದುವರಿದ ಭಾಗ ಅಲ್ಲದಿದ್ದರೂ, ಈ ಚಿತ್ರದ ಕಥೆ ಹಾಗೂ ಪಾತ್ರಗಳು ಎಲ್ಲರ ನೆನಪಿನಲ್ಲಿ ಉಳಿಯುತ್ತವೆ. ನನ್ನ ಪಾತ್ರ ಕೂಡ ಚೆನ್ನಾಗಿದೆ ಎಂದು ನಟ ನಿರೂಪ್ ಭಂಡಾರಿ ಸಂತಸದಿಂದ ನುಡಿದರು.

ಈ ಚಿತ್ರದಲ್ಲಿ ನನಗೆ ಮನಸಿಗೆ ಹಿಡಿಸುವ ಪಾತ್ರ ಸಿಕ್ಕಿದೆ. ನನ್ನ ಹದಿಮೂರು ವರ್ಷಗಳ ಸಿನಿಪಯಣದಲ್ಲೇ ಇಂತಹ ಪಾತ್ರ ಮಾಡಿಲ್ಲ. ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ ಎಂದು ಶಾನ್ವಿ ಸಂತಸ ಹಂಚಿಕೊಂಡರು. ನಾಗತಿಹಳ್ಳಿ ಸಿನಿ ಕ್ರಿಯೇಷನ್ಸ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ. ಎಸ್.ಕೆ.ರಾವ್ ಛಾಯಾಗ್ರಹಣ, ಕ್ರೇಜಿ ಮೈಂಡ್ಸ್ ಸಂಕಲನ ಈ ಚಿತ್ರಕ್ಕಿದೆ.